ಭಾನುವಾರ, ಆಗಸ್ಟ್ 31, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 241 | ಪುಟ 16
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕೋಚ್ ಸ್ಥಾನ ತೊರೆದ ದ್ರಾವಿಡ್
ರಾಹುಲ್ ದ್ರಾವಿಡ್ ಅವರು ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಸ್ಥಾನ ತೊರೆಯಲಿದ್ದಾರೆ ಎಂದು ಫ್ರ್ಯಾಂಚೈಸಿಯು ಶನಿವಾರ ಪ್ರಕಟಿಸಿದೆ

ಸಂಘ ರಚನೆಗೆ ಏಜೆನ್ಸಿಗಳು ಅಡ್ಡಿ 5
ಕೇಂದ್ರಕ್ಕೆ ಹೈಕೋರ್ಟ್ ನೋಟಿಸ್ 7

ಪ್ರತಿಭಟನೆ
ಭಾರತದ ಸರಕುಗಳ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿರುವುದನ್ನು ಖಂಡಿಸಿ ವರ್ತಕರು ನವದೆಹಲಿಯಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು

ಆನೆ ದಾಳಿ ಸಂತ್ರಸ್ತರ ಅರಣ್ಯ ರೋದನ

ನಿತ್ಯ ಕಾಡುತ್ತಿದೆ ನೋವು; ಎಲ್ಲದಕ್ಕೂ ಬೇರೆಯವರನ್ನೇ ಅವಲಂಬಿಸಿ ಬದುಕು

217 ಕಳೆದ ಐದು ವರ್ಷದಲ್ಲಿ ವನ್ಯಜೀವಿ ದಾಳಿಯಲ್ಲಿ ಸತ್ತವರು

₹19.74 ಕೋಟಿ ಮೃತರ ಕುಟುಂಬಕ್ಕೆ ಪಾವತಿಸಿರುವ ಪರಿಹಾರ

919 ಮಾಸಾಶನ ಪಡೆಯುತ್ತಿರುವ ಮೃತರ ಒಟ್ಟು ಕುಟುಂಬದವರು

₹2.70 ಕೋಟಿ ಇದುವರೆಗೆ ಪಾವತಿಸಿರುವ ಮಾಸಾಶನ



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹಂಪಾಪುರ ಗ್ರಾಮದ ಸಮೀಪ ಆನೆಗಳ ಹಿಂಡು ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿದ ದೃಶ್ಯ ಪ್ರಜಾವಾಣಿ ಸಂಗ್ರಹ ಚಿತ್ರ: ಅನೂಪ್ ರಾಘ.ಟಿ.

• ಓದೇಶ ಸಕಲೇಶಪುರ

ರಾಮನಗರ: 'ಬೆಳಗ್ಗೆ 6 ಗಂಟೆಗೆ ತೋಟದ ಕಡೆಗೆ ವಾಕಿಂಗ್ ಹೋಗಿದ್ದೆ. ಸೇತುವೆ ಪಕ್ಕ ಏನೋ ಜೋರಾಗಿ ಕೂಗಿದಂತಾಯಿತು. ನಾಲ್ಕೈದು ಹೆಜ್ಜೆ ಮುಂದಿಡುತ್ತಿದ್ದಂತೆ ದೊಡ್ಡ ಕಾಡಾನೆ ಎದುರಾಯಿತು. ಕಣ್ಮುಚ್ಚಿ ಬಿಡುವಷ್ಟರಲ್ಲಿ ನನ್ನನ್ನು ಸೊಂಡಿಲಿನಿಂದ ಎತ್ತಿ ನೆಲಕ್ಕೆ ಅಪ್ಪಳಿಸಿತು. ಅರೆಕ್ಷಣ ಪ್ರಜ್ಞೆ ತಪ್ಪಿ ಸೇತುವೆ ಪಕ್ಕ ಬಿದ್ದ ನನ್ನ ದೇಹವನ್ನು ಸೊಂಡಿಲಿನಿಂದ ಮೂಸಿತು. ನಾನು ಕಣ್ಣು ಬಿಡುತ್ತಿದ್ದಂತೆ ತಲೆ ಮೇಲೆ ಪಾದ ಇಡಲು ಕಾಲು ಎತ್ತಿತು. ನನ್ನ ಕಥೆ ಮುಗಿಯಿತೆಂದು ಜೋರಾಗಿ ಕಿರುಚಿಕೊಂಡೆ. ಆಗ ವಿಚಲಿತಗೊಂಡ ಆನೆ ನನ್ನ ಕಾಲಿನ ಮೇಲೆ ಪಾದ ಇಟ್ಟಿತು. ನೋವಿನಿಂದ ಜೋರಾಗಿ ಕೂಗಿಕೊಂಡು, ಪಕ್ಕಕ್ಕೆ ಹೊರಳಿದಾಗ ರಸ್ತೆ ಇಳಿಜಾರಿನಲ್ಲಿ ಕೆಳಕ್ಕೆ ಬಿದ್ದೆ. ಅಲ್ಲಿಗೆ ಬರಲಾಗದ ಆನೆ ಮೇಲಿಂದಲೇ ಕೆಲ ಹೊತ್ತು ದಿಟ್ಟಿಸಿ ಹೊರಟು ಹೋಯ್ತು...'

ಕಾಡಾನೆ ಕೈಗೆ ಸಿಲುಕಿ ಸಾವಿನ ಕದ ತಟ್ಟಿ ಬಂದ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಿಪುರ ಗ್ರಾಮದ 51 ವರ್ಷದ ಲಕ್ಷ್ಮಮ್ಮ ಮೂರು ವರ್ಷದ ಹಿಂದಿನ ಅನುಭವ ಹಂಚಿಕೊಳ್ಳುವಾಗ ಅವರ ಮೈ ನಡುಗುತ್ತಿತ್ತು. ಆ ಆಘಾತದಿಂದ ಹೊರಬರಲು ಅವರಿಗೆ ಇಂದಿಗೂ ಸಾಧ್ಯವಾಗಿಲ್ಲ. ಆ ಘಟನೆ ನೆನಪಿಸಿಕೊಂಡರೆ ಈಗಲೂ ಅವರ ಮೈ ಬೆವರುತ್ತದೆ.

'ಪಾದದಿಂದ ಮಂಡಿವರೆಗೆ ಮೂಳೆ ಮುರಿದಿದೆ. ಮೇಲ್ನೋಟಕ್ಕೆ ಏನು ಆಗಿಲ್ಲವೆಂಬಂತೆ ಕಂಡರೂ ಕಾಲು ಮತ್ತು ಕೈಗಳು ಅಷ್ಟಾಗಿ ಸ್ವಾಧೀನವಿಲ್ಲ. ಶೌಚಾಲಯದಲ್ಲಿ ಕೂರಲಾಗದ, ಚೊಂಬಿನಲ್ಲಿ ನೀರು ಕುಡಿಯಲಾಗದ ಅಸಹಾಯಕ ಸ್ಥಿತಿ ಇದೆ. ವೈಯಕ್ತಿಕ ಕೆಲಸಗಳಿಂದ ಹಿಡಿದು ಪ್ರತಿಯೊಂದಕ್ಕೂ ಮನೆಯವರನ್ನೇ ಅವಲಂಬಿಸಿದ್ದೇನೆ. ಕೂತರೂ, ನಿಂತರೂ, ಮಲಗಿದರೂ ಒಂದಲ್ಲ ಒಂದು ಕಡೆ ನೋವು. ಈ ರೀತಿ ಬದುಕಿಸುವ ಬದಲು ಆ ದೇವರು ನನ್ನನ್ನು ಒಮ್ಮೆಲೆ ಕರೆದುಕೊಂಡಿದ್ದರೆ ಚೆನ್ನಾಗಿರು ತ್ತಿತ್ತು' ಎಂದು ಲಕ್ಷ್ಮಮ್ಮ ಕಣ್ಣೀರಿಟ್ಟರು.

ಬೆಳಗ್ಗೆ ಕಾಫಿ ತೋಟಕ್ಕೆ ಹೋದ ಕೂಲಿ ಕೆಲಸ ಮಾಡುವ ಮಹಿಳೆಯನ್ನು ಅಡ್ಡಗಟ್ಟಿದ ಒಂಟಿ ಸಲಗ ದಂತದಿಂದ ಚುಚ್ಚಿ ಕೊಲ್ಲಲು ಮುಂದಾಯಿತು. ಅದೃಷ್ಟವಶಾತ್ ದಂತ ತೊಡೆ ಮತ್ತು ಕೈಗೆ ಚುಚ್ಚಿಕೊಂಡಿತು. ಪ್ರಜ್ಞೆ ತಪ್ಪಿ ಬಿದ್ದ ಮಹಿಳೆ ಸತ್ತಿರಬಹುದು ಎಂದುಕೊಂಡ ಆನೆ ತೋಟದೊಳಗೆ ಮಾಯವಾಯಿತು. ದಂತದಿಂದ ಚುಚ್ಚಿದ ನೋವು ಇಂದಿಗೂ ವಾಸಿಯಾಗಿಲ್ಲ. ಓಡಾಡಲಾಗದೆ ಮನೆಯಲ್ಲೇ ಕುಳಿತುಕೊಳ್ಳಬೇಕಾದ ಸ್ಥಿತಿ. ಆ ಮಹಿಳೆಗೆ ಅನಾರೋಗ್ಯದಿಂದ ಬಳಲುತ್ತಿರುವ ಪತಿ ಜೊತೆಗೆ ಮೂವರು ಹೆಣ್ಣು ಮಕ್ಕಳು. ತಾಯಿಯ ಕೂಲಿ ಹಣದಲ್ಲೇ ಬದುಕುತ್ತಿದ್ದ ಕುಟುಂಬವೀಗ ಅತಂತ್ರವಾಗಿದೆ. ವಿಧಿ ಇಲ್ಲದೆ ಮಕ್ಕಳು ಕೂಲಿ ಮತ್ತು ಮನೆಗೆಲಸ ಮಾಡಿ ಕುಟುಂಬ ಸಲಹುತ್ತಿದ್ದಾರೆ.

ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿ ಸುಂಟಿಕೊಪ್ಪ ಸಮೀಪದ ಕಂಬಿಬಾಣೆ ಗ್ರಾಮದಲ್ಲಿ ಮೂರು ವರ್ಷದ ಹಿಂದೆ ಕಾಡಾನೆ ದಾಳಿಗೊಳಗಾದ ಫಾತಿಮಾ ಅವರ ಕರುಣಾಜನಕ ಸ್ಥಿತಿ ಇದು. 'ಆ ಕಾಡಾನೆ ನನ್ನನ್ನು ಈ ಸ್ಥಿತಿಯಲ್ಲಿ ಬಿಡುವ ಬದಲು ಸಾಯಿಸಬೇಕಿತ್ತು. ಆಗ ನನಗೆ ಈ ನರಕದಿಂದ ಮುಕ್ತಿ ಸಿಗುತ್ತಿತ್ತು. ಆನೆ ದಾಳಿಯಿಂದ ಸತ್ತರೆ ಸಿಗುವ ಪರಿಹಾರದ ಮೊತ್ತದಿಂದ ಮಕ್ಕಳ ಭವಿಷ್ಯಕ್ಕಾದರೂ ಅನುಕೂಲ ವಾಗುತ್ತಿತ್ತು' ಎಂದು ಫಾತಿಮಾ ನಿಟ್ಟುಸಿರು ಬಿಟ್ಟರು.

▶6

ಒಳನೋಟ

> **ಆನೆ ಹಾವಳಿ ನಿಯಂತ್ರಣಕ್ಕೆ ಸರ್ಕಾರ ಎರಡು ವರ್ಷದಿಂದ ವೇಗವಾಗಿ ರೈಲ್ವೆ ಬ್ಯಾರಿಕೇಡ್ ನಿರ್ಮಿಸುತ್ತಿದೆ. ಆನೆಧಾಮ ಸ್ಥಾಪನೆಗೆ ಕ್ರಮದ ಜೊತೆಗೆ ಆನೆ ಕಾರಿಡಾರ್ ಪುನಶ್ಚೇತನಕ್ಕೆ ಒತ್ತು ನೀಡಲಾಗಿದೆ**
> **ಈಶ್ವರ ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ

7 ವರ್ಷ ಬಳಿಕ ಮೋದಿ ಚೀನಾಕ್ಕೆ

ತಿಯಾನ್‌ಜಿನ್: ಇಂದಿನಿಂದ ಎರಡು ದಿನ 'ಎಸ್‌ಸಿಒ' ಶೃಂಗಸಭೆ

ತಿಯಾನ್‌ಜಿನ್ (ಪಿಟಿಐ): ಎರಡು ದಿನಗಳ ಜಪಾನ್ ಪ್ರವಾಸದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯಲ್ಲಿ ಭಾಗವಹಿಸಲು ಶನಿವಾರ ಚೀನಾದ ತಿಯಾನ್‌ಜಿನ್‌ಗೆ ಬಂದಿಳಿದರು.

ತಿಯಾನ್‌ಜಿನ್ ನಗರದಲ್ಲಿ ಭಾನುವಾರ ಮತ್ತು ಸೋಮವಾರ 'ಎಸ್‌ಸಿಒ' ಶೃಂಗಸಭೆ ನಡೆಯಲಿದೆ.

ಸುಮಾರು ಏಳು ವರ್ಷಗಳ ಬಳಿಕ ಮೋದಿ ಅವರು ಚೀನಾಕ್ಕೆ ತೆರಳಿದ್ದಾರೆ. ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿನ ಸಂಘರ್ಷದ ಬಳಿಕ ಭಾರತ–ಚೀನಾ ನಡುವಿನ ಸಂಬಂಧ ಹಳಸಿತ್ತು. ಸಂಬಂಧ ಸುಧಾರಣೆ ನಿಟ್ಟಿನಲ್ಲೂ ಮೋದಿ ಅವರ ಭೇಟಿ ಪ್ರಾಮುಖ್ಯ ಪಡೆದಿದೆ.

▶8

> **ಚೀನಾದ ತಿಯಾನ್‌ಜಿನ್‌ನಲ್ಲಿ ಬಂದಿಳಿದಿದ್ದೇನೆ. 'ಎಸ್‌ಸಿಒ' ಶೃಂಗಸಭೆ ಮತ್ತು ವಿಶ್ವ ಮುಖಂಡರನ್ನು ಭೇಟಿಯಾಗಿ, ಚರ್ಚೆ ನಡೆಸುವುದನ್ನು ಎದುರು ನೋಡುತ್ತಿದ್ದೇನೆ**
> **ನರೇಂದ್ರ ಮೋದಿ,** ಪ್ರಧಾನಿ, ('ಎಕ್ಸ್' ಪೋಸ್ಟ್‌ನಲ್ಲಿ)

ಚೀನಾದ ತಿಯಾನ್‌ಜಿನ್ ವಿಮಾನ ನಿಲ್ದಾಣಕ್ಕೆ ಬಂದಿಳಿದ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಲಾವಿದರು ನೃತ್ಯ ಪ್ರದರ್ಶನದ ಮೂಲಕ ಸ್ವಾಗತಿಸಿದರು – ಪಿಟಿಐ ಚಿತ್ರ

ಜಿನ್‌ಪಿಂಗ್ ಜತೆ ಚರ್ಚೆ ಇಂದು

ಶೃಂಗಸಭೆ ಸಂದರ್ಭದಲ್ಲಿ ಮೋದಿ ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಜಗತ್ತಿನಾದ್ಯಂತ ಬಹುತೇಕ ಎಲ್ಲ ಪ್ರಮುಖ ದೇಶಗಳ ಆರ್ಥಿಕತೆ ಮೇಲೆ ಅಮೆರಿಕದ ಸುಂಕ ಹೇರಿಕೆಯು ನಕಾರಾತ್ಮಕ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ಮೋದಿ ಅವರು ಚೀನಾ ಅಧ್ಯಕ್ಷರೊಂದಿಗೆ ನಡೆಸಲಿರುವ ಮಾತುಕತೆ ಮಹತ್ವ ಪಡೆದುಕೊಂಡಿದೆ. ಭಾರತ– ಚೀನಾ ಆರ್ಥಿಕ ಸಹಕಾರ ವಿಸ್ತರಣೆ ಮತ್ತು ಗಡಿ ವಿಚಾರವೂ ಉಭಯ ಮುಖಂಡರ ನಡುವಿನ ಸಭೆಯಲ್ಲಿ ಚರ್ಚೆಗೆ ಬರಲಿದೆ.

'ಜಾಗತಿಕವಾಗಿ ಆರ್ಥಿಕ ಸ್ಥಿರತೆ ತರುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುವುದು ಭಾರತ ಮತ್ತು ಚೀನಾ ಎರಡೂ ದೇಶಗಳಿಗೆ ಮಹತ್ವದ್ದು, ಭಾರತ–ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧವು, ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ, ಸಮೃದ್ಧಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ' ಎಂದು ಮೋದಿ ಹೇಳಿದ್ದಾರೆ.

ಕಾಮಗಾರಿಗಳ ತನಿಖಾ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019-20ರಿಂದ 2022-23ರ ಅವಧಿಯಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳ ಪೈಕಿ, ಪೂರ್ಣಗೊಂಡಿರುವ 761 ಕಾಮಗಾರಿಗಳ ತನಿಖೆ ನಡೆಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗ ಹಲವು ನ್ಯೂನತೆಗಳನ್ನು ಪತ್ತೆ ಮಾಡಿದೆ.

ಆಯೋಗವು ಅನುಬಂಧಗಳ ಸಹಿತ ಒಟ್ಟು 8,900 ಪುಟಗಳ ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ಸಲ್ಲಿಸಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನಿನಂತೆ ಕ್ರಮಕೈಗೊಳ್ಳಬೇಕು ಮತ್ತು ಸುಧಾರಣಾ ಕ್ರಮಕೈಗೊಳ್ಳಬೇಕು ಎಂದೂ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಆಯೋಗವು ರ್‍ಯಾಂಡಮ್ ಆಗಿ ಆಯ್ಕೆ ಮಾಡಿದ್ದ 528 ಮತ್ತು ಇತರೆ 233 ಸೇರಿ ಒಟ್ಟು 761 ಪೂರ್ಣಗೊಂಡ ಕಾಮಗಾರಿಗಳ ತನಿಖೆ ನಡೆಸಿ ವರದಿ ನೀಡಿದೆ. ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಡತ, ಸ್ಥಳ ಮತ್ತು ಲೆಕ್ಕವನ್ನು ಪರಿಶೀಲಿಸಿ ಆಯೋಗವು ವರದಿ ಸಲ್ಲಿಸಿದೆ.

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಈ ಅವಧಿಯಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ವ್ಯಾಪಕ ಭ್ರಷ್ಟಾಚಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ವರದಿ ನೀಡಲು ಸರ್ಕಾರ 2023ರ ಡಿ. 15ರಂದು ಈ ಆಯೋಗವನ್ನು ರಚಿಸಿತ್ತು.

ಬಿಬಿಎಂಪಿ ವ್ಯಾಪ್ತಿಯಲ್ಲಿ 2019-20ರಿಂದ 2022-23ರ ಅವಧಿಯಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗ್ಗೆ ತನಿಖೆ ನಡೆಸಬೇಕೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 2023ರ ಜುಲೈ 13ರಂದು ಟಿಪ್ಪಣಿ ಮೂಲಕ ಮುಖ್ಯಮಂತ್ರಿಗೆ ಮನವಿ ಮಾಡಿದ್ದರು.

▶4

ಸ್ಥಿರಾಸ್ತಿ ನೋಂದಣಿ ಶುಲ್ಕ ಶೇ 2ಕ್ಕೆ ಏರಿಕೆ

ಒಟ್ಟಾರೆ ನೋಂದಣಿ ವೆಚ್ಚ ಶೇ 6.6ರಿಂದ ಶೇ 7.6ಕ್ಕೆ ಹೆಚ್ಚಳ • ಇಂದಿನಿಂದಲೇ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಗಳ ಮೇಲಿನ ವ್ಯವಹಾರಗಳ ದಸ್ತಾವೇಜುಗಳ ನೋಂದಣಿ ಶುಲ್ಕವನ್ನು ಶೇ 1ರಿಂದ ಶೇ 2ಕ್ಕೆ ಏರಿಸಿ ರಾಜ್ಯ ಸರ್ಕಾರವು ಆದೇಶಿಸಿದೆ. ಭಾನುವಾರದಿಂದಲೇ (ಆಗಸ್ಟ್ 31) ಇದು ಜಾರಿಯಾಗಲಿದ್ದು, ಸಾರ್ವಜನಿಕರು ಆಸ್ತಿ ನೋಂದಣಿಗೆ ಹೆಚ್ಚು ಶುಲ್ಕ ತೆರಬೇಕಾಗುತ್ತದೆ.

ಈ ಮೊದಲು ಸ್ಥಿರಾಸ್ತಿ ನೋಂದಣಿ ವೇಳೆ ಆಸ್ತಿಯ ಮಾರ್ಗಸೂಚಿ ಮೌಲ್ಯದ ಶೇ 5ರಷ್ಟು ಮುದ್ರಾಂಕ ಶುಲ್ಕ, ಶೇ 0.5ರಷ್ಟು ಸೆಸ್, ಶೇ 0.1ರಷ್ಟು ಸರ್ಚಾರ್ಜ್ ಮತ್ತು ಶೇ1ರಷ್ಟು ನೋಂದಣಿ ಶುಲ್ಕ ವಿಧಿಸಲಾಗುತ್ತಿತ್ತು. ಒಟ್ಟಾರೆ ಆಸ್ತಿ ನೋಂದಣಿ ವೇಳೆ, ಅದರ ಮಾರ್ಗಸೂಚಿ ಮೌಲ್ಯದ ಶೇ 6.6ರಷ್ಟು ವೆಚ್ಚವನ್ನು ಭರಿಸಬೇಕಾಗುತ್ತಿತ್ತು.

ಈಗ ನೋಂದಣಿ ಶುಲ್ಕವನ್ನು ಶೇ 2ರಷ್ಟಕ್ಕೆ ಹೆಚ್ಚಿಸಿರುವ ಕಾರಣ ಮುದ್ರಾಂಕ ಶುಲ್ಕ (ಶೇ 5), ಸೆಸ್ (ಶೇ 0.5) ಮತ್ತು ಸರ್ಚಾರ್ಜ್ (ಶೇ 0.1) ಸೇರಿ ಆಸ್ತಿಯ ಮಾರ್ಗಸೂಚಿ ಮೌಲ್ಯದ ಶೇ 7.6ರಷ್ಟನ್ನು ನೋಂದಣಿ ವೇಳೆ ಭರಿಸಬೇಕಾಗುತ್ತದೆ.

'ಹಿಂದಿನ ನೋಂದಣಿ ಶುಲ್ಕವನ್ನು ಪಾವತಿಸಿ ಈಗಾಗಲೇ ದಸ್ತಾವೇಜುಗಳ ನೋಂದಣಿಗೆ ದಿನಾಂಕ ಪಡೆದಿರುವವರು ಮತ್ತು ಶುಲ್ಕ ಪಾವತಿಸಿದ್ದು, ದಿನಾಂಕ ಪಡೆಯದವರು ಪರಿಷ್ಕೃತ ಶುಲ್ಕದ ವ್ಯತ್ಯಾಸವನ್ನು ಪಾವತಿಸಲೇಬೇಕು' ಎಂದು ನೋಂದಣಿ ಮತ್ತು ಮುದ್ರಾಂಕ ಆಯುಕ್ತ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ.

'ಮೊದಲು ಬಳಸಿದ ಲಾಗಿನ್ ಬಳಸಿಕೊಂಡೇ ಪರಿಷ್ಕೃತ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಪಾವತಿಸಬೇಕು. ಅರ್ಜಿದಾರರಿಗೆ ನೆರವಾಗುವ ದೃಷ್ಟಿಯಿಂದ ಪರಿಷ್ಕೃತ ಶುಲ್ಕ, ಮತ್ತಿತರ ವಿವರಗಳನ್ನು ಅವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

'ಈಗಾಗಲೇ ನೋಂದಣಿಗೆ ಸಲ್ಲಿಸಲಾಗಿರುವ ದಸ್ತಾವೇಜುಗಳಿಗೆ ಮತ್ತು ಪರಿಶೀಲನೆಯಲ್ಲಿರುವ ದಸ್ತಾವೇಜುಗಳಿಗೆ ನೋಂದಣಿ ಶುಲ್ಕವನ್ನು ಮರು ಲೆಕ್ಕಹಾಕಲಾಗುವುದು. ಇಂತಹ ಅರ್ಜಿದಾರರಿಗೆ ಪಾವತಿಗೆ ಮುನ್ನವೇ, ಪರಿಷ್ಕೃತ ನೋಂದಣಿ ಶುಲ್ಕದ ವಿವರವನ್ನು ತಿಳಿಸಲಾಗುವುದು' ಎಂದು ವಿವರಿಸಿದ್ದಾರೆ.

'ನೆರೆ ರಾಜ್ಯಗಳೊಂದಿಗೆ ಸಮೀಕರಿಸಲಾಗಿದೆ'

'ನೆರೆ ರಾಜ್ಯಗಳಲ್ಲಿ ನೋಂದಣಿ ಶುಲ್ಕವು ಹೆಚ್ಚು ಇದ್ದು, ರಾಜ್ಯದಲ್ಲಿ ಕಡಿಮೆ ಇತ್ತು. ಆ ರಾಜ್ಯಗಳಲ್ಲಿನ ಶುಲ್ಕದ ಮಟ್ಟದೊಂದಿಗೆ ಸಮೀಕರಿಸಿ, ಈ ಪರಿಷ್ಕರಣೆ ಮಾಡಲಾಗಿದೆ' ಎಂದು ನೋಂದಣಿ ಮತ್ತು ಮುದ್ರಾಂಕ ಆಯುಕ್ತ ಮುಲ್ಲೈ ಮುಗಿಲನ್ ಹೇಳಿದ್ದಾರೆ. ನೋಂದಣಿ ಶುಲ್ಕ ಹೆಚ್ಚಳದ ಬಗ್ಗೆ ವಿರೋಧ ಪಕ್ಷಗಳ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ ಆಯುಕ್ತರು ಈ ಸಂಬಂಧ ಪ್ರಕಟಣೆ ನೀಡಿದ್ದಾರೆ.

'ತಮಿಳುನಾಡಿನಲ್ಲಿ ಶೇ 9ರಷ್ಟು, ಕೇರಳದಲ್ಲಿ ಶೇ 10ರಷ್ಟು, ಆಂಧ್ರಪ್ರದೇಶದಲ್ಲಿ ಶೇ 7.5ರಷ್ಟು, ತೆಲಂಗಾಣದಲ್ಲಿ ಶೇ 7.5ರಷ್ಟು ಶುಲ್ಕ ವಿಧಿಸಲಾಗುತ್ತಿದೆ. ರಾಜ್ಯದಲ್ಲಿ ಶೇ 6.6ರಷ್ಟು ವಿಧಿಸಲಾಗುತ್ತಿತ್ತು. ಪರಿಷ್ಕರಣೆಯ ನಂತರ ಅದು ಶೇ 7.6ರಷ್ಟಾಗಿದೆ' ಎಂದು ವಿವರಿಸಿದ್ದಾರೆ.

'ಸುಂಕ ವಿಧಿಸುವುದು ಕಾನೂನುಬಾಹಿರ'

ವಾಷಿಂಗ್ಟನ್/ನ್ಯೂಯಾರ್ಕ್ (ನ್ಯೂಯಾರ್ಕ್ ಟೈಮ್ಸ್/ಪಿಟಿಐ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತರ ದೇಶಗಳ ಮೇಲೆ ಹೆಚ್ಚಿನ ಸುಂಕ ವಿಧಿಸುತ್ತಿರುವುದು ಕಾನೂನು ಬಾಹಿರ' ಎಂದು ಫೆಡರಲ್ ಮೇಲ್ಮನವಿ ನ್ಯಾಯಾಲಯವೊಂದು ಹೇಳಿದೆ.

ವಿವರ ▶8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಡಿಜಿಪಿಯಾಗಿ ಸಲೀಂ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿ-ಐಜಿಪಿ) ಐಪಿಎಸ್ ಅಧಿಕಾರಿ ಎಂ.ಎ. ಸಲೀಂ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಶನಿವಾರ ಅಧಿಸೂಚನೆ ಹೊರಡಿಸಿದೆ.

ಎಂ.ಎ. ಸಲೀಂ

ಸಿಐಡಿಯ ಆರ್ಥಿಕ ಅಪರಾಧಗಳು ಹಾಗೂ ವಿಶೇಷ ಘಟಕ ವಿಭಾಗದ ಪೊಲೀಸ್ ನಿರ್ದೇಶಕರಾಗಿದ್ದ ಸಲೀಂ ಅವರನ್ನು ಸರ್ಕಾರ ಮೇ 21ರಂದು ಪ್ರಭಾರ ಡಿಜಿ-ಐಜಿಪಿ ಆಗಿ ನೇಮಕ ಮಾಡಿತ್ತು. ನಿವೃತ್ತ ಡಿಜಿ–ಐಜಿಪಿ ಅಲೋಕ್ ಮೋಹನ್ ಅವರಿಂದ 43ನೇ ಡಿಜಿಪಿಯಾಗಿ ಸಲೀಂ ಅವರು ಅಧಿಕಾರ ಸ್ವೀಕರಿಸಿದ್ದರು.

ಸಲೀಂ ಅವರನ್ನು ಪ್ರಭಾರ ಡಿಜಿ-ಐಜಿಪಿ ಆಗಿ ನೇಮಕ ಮಾಡಿ ಹೊರಡಿಸಿದ್ದ ಆದೇಶ ರದ್ದುಪಡಿಸಬೇಕು ಎಂದು ಕೋರಿ ವಕೀಲೆ ಸುಧಾ ಕಾಟ್ವ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆಗಸ್ಟ್ 28ರಂದು ಈ ಅರ್ಜಿಯ ವಿಚಾರಣೆಯ ವೇಳೆ, 'ಯುಪಿಎಸ್‌ಸಿಯ ಉನ್ನತ ಮಟ್ಟದ ಸಮಿತಿಗೆ ಡಿಜಿ-ಐಜಿಪಿ ನೇಮಕ ಮಾಡುವ ಸಂಬಂಧ ನಿರ್ದಿಷ್ಟ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಅಲ್ಲಿಂದ ವರದಿ ಬಂದ ಬಳಿಕ ಕ್ರಮ ವಹಿಸಲಾಗುವುದು' ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿತ್ತು.

ಮೀಸಲು ನಿಗದಿ ವಿಳಂಬ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸೀಟುಗಳ ಮೀಸಲಾತಿಯನ್ನು ರಾಜ್ಯ ಸರ್ಕಾರ ನಿರ್ದಿಷ್ಟ ದಿನದಲ್ಲಿ ಪ್ರಕಟಿಸದೇ ಹೋದರೆ ಹಾಲಿ ರೋಸ್ಟರ್ ಪ್ರಕಾರವೇ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶಿಸಲಾಗುವುದು' ಎಂದು ಹೈಕೋರ್ಟ್ ಮೌಖಿಕವಾಗಿ ಎಚ್ಚರಿಸಿದೆ.

'ಸಕಾಲದಲ್ಲಿ ಚುನಾವಣೆ ನಡೆಸದೆ ವಿಳಂಬ ಧೋರಣೆ ಅನುಸರಿಸಿದರೆ ಅದು ಸಾಂವಿಧಾನಿಕ ಆಡಳಿತ ಮುರಿದು ಬಿದ್ದಿರುವುದರ ದ್ಯೋತಕ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಆರ್ಥಿಕ ಸಂಕಷ್ಟ: ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿದ್ದ ಶುಭಂ

ವಲಸೆ ಕಾರ್ಮಿಕನಿಗೆ ಎಂಬಿಬಿಎಸ್ ಸೀಟು

ಬೆರ್ಹಾಂಪುರ (ಒಡಿಶಾ), (ಪಿಟಿಐ): ಆ ಯುವಕ ವೈದ್ಯನಾಗುವ ಕನಸು ಕಾಣುತ್ತಿದ್ದ. ಆದರೆ, ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ಕುಟುಂಬದ ನೆರವಿಗಾಗಿ ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿದ್ದ. ನೀಟ್‌ನಲ್ಲಿ ಉತ್ತಮ ಸಾಧನೆ ಮಾಡಿರುವ ಆ ಯುವಕನಿಗೆ ಈಗ ಒಡಿಶಾದ ವೈದ್ಯಕೀಯ ಕಾಲೇಜಿನ ಸೀಟು ಒಲಿದು ಬಂದಿದೆ.

ಹೌದು, ಖುರ್ದಾ ಜಿಲ್ಲೆಯ ಬಾನ್ಪುರ ತಾಲ್ಲೂಕಿನ ಮುದುಲಿಧಿಯಾ ಗ್ರಾಮದ ಸಹದೇವ ಮತ್ತು ರಂಗಿ ದಂಪತಿಯ ಪುತ್ರ ಶುಭಂ ಸಬರ್ ಈ ಸಾಧನೆ ಮಾಡಿದ್ದು, ಇಲ್ಲಿನ ಎಂ.ಕೆ.ಸಿ.ಜಿ ವೈದ್ಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಪ್ರವೇಶ ಪಡೆದಿದ್ದಾರೆ.ಅವರು ಪರಿಶಿಷ್ಟ ಪಂಗಡ ವರ್ಗದಲ್ಲಿ 18,212ನೇ ರ್‍ಯಾಂಕ್ ಗಳಿಸಿದ್ದಾರೆ.

'ಬೆಂಗಳೂರಿನಲ್ಲಿ ಕಟ್ಟಡವೊಂದರ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಇತ್ತೀಚೆಗೆ ನಾನು ಕೆಲಸದಲ್ಲಿ ಮಗ್ನನಾಗಿದ್ದೆ. ನನ್ನ ಶಿಕ್ಷಕ ವಾಸುದೇವ ಮೊಹರಾನಾ ಅವರು ಕರೆ ಮಾಡಿ, ಎಲ್ಲರಿಗೂ ಸಿಹಿ ಹಂಚುವಂತೆ ಹೇಳಿದರು. ಇದು ನನಗೆ ಅಚ್ಚರಿ ಮೂಡಿಸಿತ್ತು' ಎಂದು ಶುಭಂ ಹೇಳಿದ್ದಾರೆ.

'ಯಾಕೆ ಸಿಹಿ ಹಂಚಬೇಕು? ಏನು ಕಾರಣ ಎಂದು ನಾನು ಅವರನ್ನು ಪ್ರಶ್ನಿಸಿದೆ. ನಸುನಕ್ಕ ಅವರು, ನೀಟ್‌ನಲ್ಲಿ ತೇರ್ಗಡೆಯಾಗಿ, ಎಂಬಿಬಿಎಸ್‌ಗೆ ಪ್ರವೇಶ ಪಡೆಯಲು ಅರ್ಹನಾಗಿದ್ದೀಯಾ ಎಂದು ತಿಳಿಸಿದಾಗ ನನ್ನ ಸಂತಸಕ್ಕೆ ಪಾರವೇ ಇರಲಿಲ್ಲ' ಎಂದಿದ್ದಾರೆ.

'ಕನಸು ನನಸಾದ ಕ್ಷಣವದು. ಆನಂದಬಾಷ್ಪ ತಡೆಯಲು ನನ್ನಿಂದ ಆಗಲಿಲ್ಲ. ಮನೆಗೆ ಬಂದೆ. ನಾನು ದುಡಿಯುತ್ತಿದ್ದ ಕಟ್ಟಡದ ಗುತ್ತಿಗೆದಾರನ ಅನುಮತಿ ಪಡೆದು, ಊರಿಗೆ ಮರಳಿದೆ' ಎಂದಿದ್ದಾರೆ.

ಬೆಂಗಳೂರಿನಲ್ಲಿ ಮೂರು ತಿಂಗಳು ಕೆಲಸ ಮಾಡಿರುವ ಅವರು, ₹45 ಸಾವಿರ ಗಳಿಸಿದ್ದಾರೆ. ಈ ಪೈಕಿ ₹25 ಸಾವಿರ ಉಳಿತಾಯ ಮಾಡಿದ್ದಾರೆ.

'ಬೆಂಗಳೂರಿಗೆ ವಲಸೆ ಹೋಗಲು ಕಾರಣವೇನು' ಎಂಬ ಪ್ರಶ್ನೆಗೆ, 'ನನ್ನ ಕುಟುಂಬಕ್ಕೆ ನೆರವು ನೀಡಬೇಕಿತ್ತು. ಅಲ್ಲಿಗೆ ಹೋಗಿ ದುಡಿಯದೇ ಬೇರೆ ದಾರಿಯೇ ಇರಲಿಲ್ಲ' ಎಂದು ಶುಭಂ ಉತ್ತರಿಸಿದ್ದಾರೆ.

'ನಮ್ಮದು ಐದು ಜನರಿರುವ ಬಡ ಕುಟುಂಬ. ನೀಟ್ ಮುಗಿದ ನಂತರ, ಕುಟುಂಬಕ್ಕೆ ನೆರವು ನೀಡುವುದಕ್ಕಾಗಿ ಹಣ ಗಳಿಸಬೇಕು ಎಂದು ನಿರ್ಧರಿಸಿದೆ. ಸ್ಥಳೀಯ ಗುತ್ತಿಗೆದಾರರೊಬ್ಬರನ್ನು ಸಂಪರ್ಕಿಸಿದಾಗ ಅವರು ನನ್ನನ್ನು ಬೆಂಗಳೂರಿಗೆ ಕಳುಹಿಸಿದರು. ನಾನು ಉಳಿತಾಯ ಮಾಡಿರುವ ಹಣವು ಎಂಬಿಬಿಎಸ್‌ಗೆ ಪ್ರವೇಶ ಪಡೆಯಲು ನೆರವಾಯಿತು' ಎಂದಿದ್ದಾರೆ.

'ಹಣಕಾಸು ನೆರವು ನೀಡುವ ಮೂಲಕ, ನನ್ನ ಮಗ ಎಂಬಿಬಿಎಸ್ ಪೂರ್ಣಗೊಳಿಸುವುದಕ್ಕೆ ಸರ್ಕಾರ ನೆರವು ನೀಡಲಿದೆ ಎಂಬ ಭರವಸೆ ಹೊಂದಿದ್ದೇವೆ' ಎಂದು ಶುಭಂ ಪಾಲಕರಾದ ಸಹದೇವ ಮತ್ತು ರಂಗಿ ಹೇಳಿದ್ದಾರೆ.

ಮುಖ್ಯಾಂಶಗಳು

- ಪರಿಶಿಷ್ಟ ಪಂಗಡ ವರ್ಗದಲ್ಲಿ 18,212ನೇ ರ್‍ಯಾಂಕ್
- ಒಡಿಶಾದ ಎಂ.ಕೆ.ಸಿ.ಜಿ ವೈದ್ಯ ಕಾಲೇಜಿಗೆ ಸೇರ್ಪಡೆ

> **ಶುಭಂ ಪ್ರತಿಭಾವಂತ. ಚಿಕ್ಕಂದಿನಿಂದಲೂ ಶ್ರಮವಹಿಸಿ ಓದುತ್ತಿದ್ದ ಆತ ವೈದ್ಯನಾಗಬೇಕು ಎಂಬ ಕನಸು ಕಂಡಿದ್ದ. ಆತನ ಪರಿಶ್ರಮಕ್ಕೆ ತಕ್ಕ ಫಲ ಸಿಕ್ಕಂತಾಗಿದೆ**
> **ರಂಗಿ,** ಶುಭಂ ತಾಯಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

35 ಸಾವಿರ ಗ್ರಾಮಗಳಲ್ಲಿ 'ಈಶಾ ಗ್ರಾಮೋತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾ ಫೌಂಡೇಷನ್ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ತೆಲಂಗಾಣ, ಪುದುಚೇರಿ, ಒಡಿಶಾ ಸೇರಿ ಆರು ರಾಜ್ಯಗಳ 35 ಸಾವಿರ ಗ್ರಾಮಗಳಲ್ಲಿ 'ಈಶಾ ಗ್ರಾಮೋತ್ಸವ' ಆಯೋಜಿಸಿದೆ.

ಸದ್ಗುರು ಜಗ್ಗಿ ವಾಸುದೇವ್ ಮಾತನಾಡಿ, ಈಶಾ ಗ್ರಾಮೋತ್ಸವವು ಕ್ರೀಡೆಯ ಮೂಲಕ ಜೀವನದ ಸಂಭ್ರಮಾಚರಣೆ. ಕ್ರೀಡೆಯು ಸಾಮಾಜಿಕ ವಿಭಜನೆಗಳನ್ನು ಮೀರಿ ಜನರನ್ನು ಒಗ್ಗೂಡಿಸುವ ಶಕ್ತಿ ಹೊಂದಿದೆ. ಇದು ಆಟದ ಆನಂದದ ಮೂಲಕ ಜಾತಿ, ಮತ ಮತ್ತು ಇತರ ಗುರುತುಗಳ ಗಡಿಗಳನ್ನು ಅಳಿಸಬಲ್ಲದು. ಜನರು ಉತ್ಸಾಹದಿಂದ ಚೆಂಡನ್ನು ಎಸೆಯಲು ಸಾಧ್ಯವಾದರೆ, ಆ ಚೆಂಡು ಜಗತ್ತನ್ನೇ ಬದಲಾಯಿಸಬಲ್ಲದು ಎಂದಿದ್ದಾರೆ.

ಈಶಾ ಔಟ್‌ರೀಚ್ ನೇತೃತ್ವದ ಕ್ರೀಡಾ ಉತ್ಸವದಲ್ಲಿ 5,000ಕ್ಕೂ ಹೆಚ್ಚು ಮಹಿಳೆಯರು ಸೇರಿ 50,000ಕ್ಕೂ ಹೆಚ್ಚು ಗ್ರಾಮೀಣ ಆಟಗಾರರು ಸ್ಪರ್ಧಿಸುತ್ತಿದ್ದಾರೆ. 5,000 ತಂಡಗಳನ್ನು ರಚಿಸಲಾಗಿದೆ. ರೈತರು, ಮೀನುಗಾರರು, ದಿನಗೂಲಿ ಕಾರ್ಮಿಕರು ಮತ್ತು ಗೃಹಿಣಿಯರು ಭಾಗವಹಿಸುತ್ತಿದ್ದಾರೆ. ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್‌ನಲ್ಲಿ ಸ್ಪರ್ಧೆಗಳನ್ನು ಮೂರು–ಹಂತದಲ್ಲಿ ನಡೆಸಲಾಗುತ್ತದೆ. ಕ್ಲಸ್ಟರ್, ವಿಭಾಗೀಯ ಪಂದ್ಯಗಳ ನಂತರ ಕೊಯಂಬತ್ತೂರಿನ ಈಶಾ ಯೋಗ ಕೇಂದ್ರದ ಆದಿಯೋಗಿಯ ಆವರಣದಲ್ಲಿ ಸೆ.21ರಂದು ಗ್ರಾಂಡ್ ಫೈನಲ್ ಪಂದ್ಯ ನಡೆಯಲಿದೆ.

R.V. TOURS AND TRAVELS PVT. LTD.
Plot No. 313, Varsha Arcade, Near Sub-registrar office, Balari Road, Bengaluru, Karnataka - 562157
ದಸರಾ ಮತ್ತು ದೀಪಾವಳಿ ಧಮಾಕಾ
ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರವಾಸ ಪ್ಯಾಕೇಜ್‌ಗಳಲ್ಲಿ ಕೊಡುಗೆಗಳು
ALL OFFERS VALID TILL SEPTEMBER 31st

International Tour Packages
ದುಬೈ 3N/4D (ಸ್ಪೆಷಲ್ ಪ್ಯಾಕೇಜ್) 45,999/- +5% GST + 5% TCS Per Person
ಬ್ಯಾಂಕಾಕ್ ಪಟ್ಟಾಯ 3N/4D (ಸ್ಪೆಷಲ್ ಪ್ಯಾಕೇಜ್) 20,999/- +5% GST + 5% TCS Per Person
ಫುಕೆಟ್–ಕ್ರಾಬಿ 3N/4D (ಸ್ಪೆಷಲ್ ಪ್ಯಾಕೇಜ್) 19,999/- +5% GST + 5% TCS Per Person
ಬಾಲಿ 3N/4D (ಸ್ಪೆಷಲ್ ಪ್ಯಾಕೇಜ್) 24,999/- +5% GST + 5% TCS Per Person
ಶ್ರೀಲಂಕಾ 5N/6D (ಸ್ಪೆಷಲ್ ಪ್ಯಾಕೇಜ್) 30,999/- +5% GST + 5% TCS Per Person
ವಿಯೆಟ್ನಾಂ 3N/4D (ಸ್ಪೆಷಲ್ ಪ್ಯಾಕೇಜ್) 29,999/- +5% GST + 5% TCS Per Person
ಸಿಂಗಾಪುರ್–ಮಲೇಷಿಯಾ 3N/4D (ಸ್ಪೆಷಲ್ ಪ್ಯಾಕೇಜ್) 38,999/- +5% GST + 5% TCS Per Person
ಮಾಲ್ಡೀವ್ಸ್ 3N/4D (ಸ್ಪೆಷಲ್ ಪ್ಯಾಕೇಜ್) 65,999/- +5% GST + 5% TCS Per Person
ಸ್ವಿಟ್ಜರ್ಲೆಂಡ್ 4N/5D (ಸ್ಪೆಷಲ್ ಪ್ಯಾಕೇಜ್) 1,65,000/- +5% GST + 5% TCS Per Person
ಇಟಲಿ 4N/5D (ಸ್ಪೆಷಲ್ ಪ್ಯಾಕೇಜ್) 1,75,000/- +5% GST + 5% TCS Per Person

Domestic Tour Packages
ಕೋಲ್ಕತ್ತಾ 2N/3D 9999/- +5% GST Per Person
ಗ್ಯಾಂಗ್ಟಾಕ್–ಡಾರ್ಜಿಲಿಂಗ್ 4N/5D 22,999/- +5% GST Per Person
ಗುವಾಹಟಿ 1N/2D 12,999/- +5% GST Per Person
ರಾಜಸ್ಥಾನ 3N/4D 20,999/- +5% GST Per Person
ಮಧ್ಯ ಪ್ರದೇಶ 3N/4D 20,999/- +5% GST Per Person
ಮಹಾರಾಷ್ಟ್ರ 2N/3D 15,999/- +5% GST Per Person
ಅಂಡಮಾನ್ 4N/5D 23,999/- +5% GST Per Person
ವಾರಣಾಸಿ 1N/2D 7999/- +5% GST Per Person
ಒಡಿಶಾ 2N/3D 9999/- +5% GST Per Person
ಕರ್ನಾಟಕ 3N/4D 15,999/- +5% GST Per Person
ಶಿಮ್ಲಾ – ಮನಾಲಿ 4N/5D 17,999/- +5% GST Per Person
ಶ್ರೀನಗರ – ಕಾಶ್ಮೀರ 3N/4D 15,999/- +5% GST Per Person
ತಮಿಳುನಾಡು 2N/3D 16,999/- +5% GST Per Person
ಕೇರಳ 3N/4D 15,999/- +5% GST Per Person
ಗುಜರಾತ್ 3N/4D 15,999/- +5% GST Per Person
ಗೋವಾ 2N/3D 12,999/- +5% GST Per Person
ನೇಪಾಳ 3N/4D 20,999/- +5% GST Per Person

RECRUITMENT
Marketing | Sales Executives
Qualification: Any Degree | Languages: Kannada, English & Hindi | Age: 23 to 30 yrs.
Contact: 91542 25675
E-Mail: operations.blr@rvtoursandtravels.com
R.V. Ramana CMD
T&C Apply
For All Tour Enquiries, Reach Us :
9154225655, 9154225673

ಹಳದಿ ಮಾರ್ಗ: 4ನೇ ರೈಲು ಪರೀಕ್ಷೆ

ಸೆಪ್ಟೆಂಬರ್ ಮೊದಲ ವಾರದಲ್ಲಿ ವಾಣಿಜ್ಯ ಸಂಚಾರಕ್ಕೆ ಲಭ್ಯವಾಗುವ ನಿರೀಕ್ಷೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸೆಪ್ಟೆಂಬರ್ ಮೊದಲ ವಾರದಲ್ಲಿ ನಾಲ್ಕನೇ ರೈಲು ಸಂಚರಿಸಲಿದೆ. ಆಗ ಪ್ರತಿ ಟ್ರಿಪ್‌ನ ಅಂತರವು 25 ನಿಮಿಷದ ಬದಲು 20 ನಿಮಿಷಕ್ಕೆ ಇಳಿಯಲಿದೆ.

ಆಗಸ್ಟ್ 15ಕ್ಕೆ ನಾಲ್ಕನೇ ರೈಲಿನ ಎಲ್ಲ ಆರು ಕೋಚ್‌ಗಳು ಹೆಬ್ಬಗೋಡಿ ಡಿಪೊಗೆ ಬಂದು ಸೇರಿದ್ದು, ಪರೀಕ್ಷೆಗಳು ನಡೆಯುತ್ತಿವೆ. ಪರೀಕ್ಷೆ ಮುಗಿದ ಕೂಡಲೇ ಸಂಚಾರಕ್ಕೆ ಲಭ್ಯವಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ ವಾಣಿಜ್ಯ ಸಂಚಾರಕ್ಕೆ ಆ.10ರಂದು ಚಾಲನೆ ನೀಡಲಾಗಿತ್ತು. ಆ.11ರಿಂದ ಸಂಚಾರ ಆರಂಭವಾಗಿತ್ತು. ಮೂರೇ ರೈಲು ಇದ್ದಿದ್ದರಿಂದ 25 ನಿಮಿಷಕ್ಕೊಂದು ಟ್ರಿಪ್‌ನಂತೆ ಮೆಟ್ರೊ ಸಂಚಾರ ನಿಗದಿ ಮಾಡಲಾಗಿತ್ತು. ಅಂತರ 25 ನಿಮಿಷ ಇರುವುದರಿಂದ ಪ್ರಯಾಣಿಕರ ಸಂಖ್ಯೆ 25 ಸಾವಿರದಿಂದ ಗರಿಷ್ಠ 50 ಸಾವಿರದವರೆಗೆ ಇರಬಹುದು ಎಂದು ನಿರೀಕ್ಷಿಸಲಾಗಿತ್ತು.

ಆದರೆ ಐಟಿ ಹಬ್ ಸಂಪರ್ಕಿಸುವುದರಿಂದ ನಿರೀಕ್ಷೆ ಮೀರಿ ಜನಸಂಚಾರ ಆರಂಭವಾಗಿತ್ತು. ರೈಲುಗಳ ಸಂಚಾರದ ನಡುವಿನ ಅವಧಿ ಕಡಿಮೆ ಮಾಡಬೇಕು ಎಂದು ಪ್ರಯಾಣಿಕರು ಬೇಡಿಕೆಯಿಡುತ್ತಲೇ 25 ನಿಮಿಷ ಕಾದು ಮೆಟ್ರೊದಲ್ಲಿ ಸಂಚರಿಸತೊಡಗಿದರು. ಅಲ್ಲಿಯವರೆಗೆ 'ನಮ್ಮ ಮೆಟ್ರೊ'ದಲ್ಲಿ 8 ಲಕ್ಷ ಇದ್ದ ಪ್ರಯಾಣಿಕರ ಸರಾಸರಿ ಪ್ರಮಾಣ 9.5 ಲಕ್ಷಕ್ಕೆ ಏರಿತ್ತು. ಮೊದಲ 15 ದಿನಗಳಲ್ಲಿ ಮೂರು ಬಾರಿ 10 ಲಕ್ಷದ ಗಡಿ ದಾಟಿತ್ತು.

'ವಾಹನ ದಟ್ಟಣೆ ಅಧಿಕ ಇರುವುದರಿಂದ ಜನರು ರಸ್ತೆಯಲ್ಲಿ ಸಮಯ ವ್ಯರ್ಥ ಮಾಡಲು ಬಯಸದೇ ನಮ್ಮ ಮೆಟ್ರೊದಲ್ಲಿ ಸಂಚರಿಸಲು ಬಯಸಿದ್ದರಿಂದ ನಮ್ಮ ನಿರೀಕ್ಷೆ ಮೀರಿ ಪ್ರಯಾಣಿಕರ ಸಂಖ್ಯೆ ಏರಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿ ರಮಾನಂದ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಹಳದಿ ಮಾರ್ಗದಲ್ಲಿ ರೈಲು ಸಂಚಾರ ಇರುವುದರಿಂದ ಈ ಸಮಯದಲ್ಲಿ ಹೊಸ ರೈಲಿನ ಪರೀಕ್ಷೆ ನಡೆಸಲು ಸಾಧ್ಯವಿಲ್ಲದಂತಾಗಿದೆ. ದಿನದ ಸಂಚಾರ ಮುಕ್ತಾಯಗೊಂಡ ಬಳಿಕ ರಾತ್ರಿ ಪರೀಕ್ಷೆ ನಡೆಸಲಾಗುತ್ತಿದೆ. ಇದರಿಂದಾಗಿ ಪರೀಕ್ಷೆ ನಿಧಾನವಾಗಿದೆ. ಯಾವುದೇ ತಾಂತ್ರಿಕ ದೋಷ ಕಂಡುಬರದೇ ಇದ್ದರೆ ಸೆಪ್ಟೆಂಬರ್ ಮೊದಲ ವಾರದಲ್ಲಿಯೇ ನಾಲ್ಕನೇ ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗದ ಮೆಟ್ರೊ ರೈಲು

ಒಂದೆರಡು ವಾರದಲ್ಲಿ ನಾಲ್ಕನೇ ರೈಲು ಸಂಚರಿಸಲಿದೆ. ಬಳಿಕ ತಿಂಗಳಿಗೊಂದರಂತೆ ಮೆಟ್ರೊ ಕೋಚ್ ಸೆಟ್‌ಗಳು ನಮ್ಮ ಡಿಪೊಗೆ ಸೇರ್ಪಡೆಗೊಳ್ಳುವ ನಿರೀಕ್ಷೆ ಇದೆ

ಬಿ.ಎಲ್. ಯಶವಂತ್ ಚವಾಣ್, ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ

ಗಣೇಶನ ಹಬ್ಬ: ಕಡಿಮೆಯಾದ ಸಂಚಾರ

ಆಗಸ್ಟ್ 11ರಿಂದ 26ರವರೆಗೆ ಮೆಟ್ರೊದಲ್ಲಿ ಸಂಚರಿಸುವವರ ಪ್ರಮಾಣ 9.5 ಲಕ್ಷ ಇತ್ತು. ಆದರೆ, ಗಣೇಶ ಚತುರ್ಥಿ ಪ್ರಯುಕ್ತ ಜನರು ಊರಿಗೆ ಹೋಗಿರುವುದರಿಂದ ಮೆಟ್ರೊ ಪ್ರಯಾಣಿಕರ ಸಂಖ್ಯೆ ಅರ್ಧಕ್ಕರ್ಧ ಕಡಿಮೆಯಾಗಿದೆ. ಬುಧವಾರ ಕೇವಲ 4.38 ಲಕ್ಷ ಜನರು ಪ್ರಯಾಣಿಸಿದ್ದಾರೆ.

'ಹಬ್ಬ ಮುಗಿಸಿ ಜನರು ವಾಪಸ್ಸಾಗುತ್ತಿದ್ದಾರೆ. ಗುರುವಾರ 8.54 ಲಕ್ಷ ಜನರು ಸಂಚರಿಸಿದ್ದಾರೆ. ಹಿಂದಿನ ಸರಾಸರಿಗೆ ತಲುಪಲು ಮುಂದಿನ ಸೋಮವಾರದ ವರೆಗೆ (ಸೆ.1) ಕಾಯಬೇಕಾಗಬಹುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀಲಿ, ಗುಲಾಬಿ ಮಾರ್ಗ ಪರಿಶೀಲನೆ

ಬೆಂಗಳೂರು: ನಮ್ಮ ಮೆಟ್ರೊ ನೀಲಿ ಮಾರ್ಗವನ್ನು ಕೇಂದ್ರ ರೇಷ್ಮೆ ಮಂಡಳಿಯಿಂದ ಬೈಯಪ್ಪನಹಳ್ಳಿ ಡಿಪೊ ಪ್ರವೇಶ ಮಾರ್ಗದವರೆಗೆ (ಹಂತ 2ಎ) ಹಾಗೂ ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರದಿಂದ ಎಂ.ಜಿ. ರಸ್ತೆವರೆಗಿನ (ರೀಚ್–6) ಕಾಮಗಾರಿಗಳನ್ನು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್ ಜೆ. ಅವರು ಶನಿವಾರ ಪರಿಶೀಲಿಸಿದರು.

ಸಿವಿಲ್ ಕಾಮಗಾರಿ, ಫಿನಿಶಿಂಗ್ ಕಾರ್ಯಗಳು, ಹಳಿ ಅಳವಡಿಕೆ, ತಾಂತ್ರಿಕ ಅಂಶಗಳ ಬಗ್ಗೆ ಮಾಹಿತಿ ಪಡೆದರು. ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಮುಂದಿನ ವರ್ಷ ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ 66/11 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 31ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಲೆಕ್ಟ್ರಾನಿಕ್ ಸಿಟಿ ಫೇಸ್-2, ದೊಡ್ಡ ತೇಗೂರು, ಬೊಮ್ಮನಹಳ್ಳಿ, ಎನ್.ಜಿ.ಆರ್ ಲೇಔಟ್, ಚಿಕ್ಕ ತೋಗೂರು, ಹೊಂಗಸಂದ್ರ, ಕೋನಪ್ಪನ ಅಗ್ರಹಾರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿರುವ 'ಸೂಜಿ–ದಾರದೊಂದಿಗಿನ ಬದುಕು' ಬೆಂಗಳೂರಿನ ಗಾರ್ಮೆಂಟ್ ಕೆಲಸ ಮತ್ತು ಹೋರಾಟದ ನೆನಪುಗಳನ್ನು ಅನಾವರಣಗೊಳಿಸುವ ಕಲಾ ಪ್ರದರ್ಶನವನ್ನು ಸಾರ್ವಜನಿಕರು ಶನಿವಾರ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ
ನಂ. 172, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020
ದೂರವಾಣಿ : 080–23364376/23562609
ಇ–ಮೇಲ್ : info@nehrubank.com
ಪ್ರಕಟಣೆ
ಈ ಮೂಲಕ ನಮ್ಮ ಬ್ಯಾಂಕಿನ ಸದಸ್ಯರ ಗಮನಕ್ಕೆ ತರುವುದೇನೆಂದರೆ ದಿನಾಂಕ : 07.09.2025ರ ಭಾನುವಾರದಂದು ಬೆಳಗ್ಗೆ 10.00 ಗಂಟೆಗೆ ಸರಿಯಾಗಿ ಅಧ್ಯಕ್ಷರಾದ ಶ್ರೀ ಕೆ.ಪಿ.ನರಸಿಂಹಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ 60ನೇ ಸರ್ವ ಸದಸ್ಯರ ಸಭೆಯನ್ನು ಶ್ರೀ ಮಳವಳ್ಳಿ ಚಿಕ್ಕಣ್ಣ ಚಾರಿಟಬಲ್ ಟ್ರಸ್ಟ್ (ಕಲ್ಯಾಣ ಮಂಟಪ), ಸುಬೇದಾರ್ ಛತ್ರಂ ರಸ್ತೆ, (ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಹತ್ತಿರ), ಶೇಷಾದ್ರಿಪುರಂ, ಬೆಂಗಳೂರು – 560 020, ಇಲ್ಲಿ ನಡೆಸಲು ಕಾರ್ಯಕಾರಿ ಮಂಡಳಿ ನಿರ್ಧರಿಸಿದೆ. ಈ ಸಂಬಂಧವಾಗಿ ನಿಯತ ಸದಸ್ಯರಿಗೆ (regular members) ಈಗಾಗಲೆ ಸೂಚನಾ ಪತ್ರವನ್ನು ಅಂಚೆಯ ಮೂಲಕ ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಈ ಪ್ರಕಟಣೆಯನ್ನೇ ಸೂಚನಾ ಪತ್ರವೆಂದು ಪರಿಗಣಿಸಿ ಸಭೆಗೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಲಾಗಿದೆ.
ದಿನಾಂಕ : 11–08–2025
ಸ್ಥಳ : ಬೆಂಗಳೂರು
ಸಹಿ/–
ಶ್ರೀಮತಿ ಭಾರತಿ ಆರ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಸೂಚನೆ: ಬ್ಯಾಂಕಿನ ವ್ಯವಹಾರ ಸಮಯ ದಿನಾಂಕ 15.09.2025ರಿಂದ ಬೆಳಗ್ಗೆ 9.30 ಇಂದ ಸಂಜೆ 5.30 ವರೆಗೆ ಬದಲಾಯಿಸಲಾಗಿದೆ.
ರಜೆ ದಿನಗಳು : ಭಾನುವಾರ ಮತ್ತು 2ನೇ ಹಾಗೂ 4ನೇ ಶನಿವಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂಖ್ಯೆ: ಬೆಂಅಪ್ರಾ/ಕಾಅ/ಉತ್ತರ/ಟೆಂಡರ್/ಟಿ–17/2025–26 ದಿನಾಂಕ: 22.08.2025
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (2ನೇ ಕರೆ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)
ಆಯುಕ್ತರು, ಬಿಡಿಎ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬಿಡಿಎ, ಬೆಂಗಳೂರು, ಇವರು ಬೆಂಗಳೂರಿನ ಜಕ್ಕೂರು ಗ್ರಾಮ, 7ನೇ ಬ್ಲಾಕ್, ಅರ್ಕಾವತಿ ಬಡಾವಣೆಯ ಸರ್ವೆ ಸಂಖ್ಯೆ 76/2, 76/6, 76/7ಎ ಮತ್ತು 76/7ಎ1 ರಲ್ಲಿ ಲೇಔಟ್ ರಚನೆಗಾಗಿ (2ನೇ ಕರೆ) ಅರ್ಹ ಟೆಂಡರುದಾರರುಗಳಿಂದ ಟೆಂಡರುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿದ್ದಾರೆ. ಟೆಂಡರ್‌ನ ಅಂದಾಜು ಮೌಲ್ಯ ಜಿಎಸ್‌ಟಿ ಹೊರತುಪಡಿಸಿ: ರೂ. 57.26 ಲಕ್ಷ. ಇಎಂಡಿ: ರೂ. 86,000/-. ಪೂರ್ಣಗೊಳಿಸುವ ಅವಧಿ: 6 ತಿಂಗಳು. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.09.2025ರಂದು 16.00 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಗೆ ಲಾಗಾನ್ ಆಗಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–46010000/ 68948777 ಗೆ ಕರೆ ಮಾಡಿ
ಸಹಿ/- ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬೆಂಅಪ್ರಾ, ಬೆಂಗಳೂರು

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು–560022 ದೂರವಾಣಿ: 23472850/23371695
ಇ–ಮೇಲ್:apmcbangalore22@gmail.com
ಸಂಖ್ಯೆ: ಕೃಉಮಾಸ/ಬೆಂ/ಅಭಿವೃದ್ಧಿ/2195/2025–26 ದಿನಾಂಕ: 29.08.2025
ಮರು ಟೆಂಡರ್ ಪ್ರಕಟಣೆ (3ನೇ ಕರೆ)
ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ. ಬಿ. ಸಿ ಮತ್ತು ಇ–ಬ್ಲಾಕ್ ಗಳಲ್ಲಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗೆ ಕಾರ್ಮಿಕ ಇಲಾಖೆಯ ನೊಂದಾಯಿತ Standard Tender Document for Services ರಂತೆ ಅರ್ಹ ಗುತ್ತಿಗೆದಾರರಿಂದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ ರೂ.19,63,546/–ಗಳು (ಜಿ.ಎಸ್.ಟಿ. ಸೇರಿ) ಹಾಗೂ ಇ.ಎಂ.ಡಿ. ಮೊತ್ತ ರೂ.40,000/– ಗಳಾಗಿರುತ್ತದೆ. ಷರತ್ತು–ವ–ನಿಬಂಧನೆಗಳು ಮತ್ತು ಹಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯತಕ್ಕದ್ದು. (I No:APMC/2025-26/SE0732)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15–09–2025 ಸಂಜೆ 5.30 ಗಂಟೆವರೆಗೆ
ಸಹಿ/–
ಡಿಐಪಿಆರ್/ಸಿಪಿ/2558/ಸಿಸಿಎಲ್/2025–26 ಕಾರ್ಯದರ್ಶಿ, ಕೃಉಮಾಸ, ಬೆಂಗಳೂರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲೆ –562159
Phone: 080-27271104
ಸಂ.: ಡಿಓಎಂ/ರಾಜಿ/ಅಸ–2/ಹೊ.ಸಂ.ಟೆಂಡರ್/ಸಿಆರ್–7/2025–26 ದಿನಾಂಕ: 21.08.2025
ಟೆಂಡರ್ ಪ್ರಕಟಣೆ
ರಾಮನಗರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜು/ವಿದ್ಯಾರ್ಥಿ ನಿಲಯಗಳಿಗೆ ಆಹಾರ ಮತ್ತು ಇತರೆ ಪದಾರ್ಥಗಳ ಪೂರೈಕೆಗಾಗಿ ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್ ಅಂದಾಜು ಮೊತ್ತ	ಪಾವತಿಸಬೇಕಾದ ಇ.ಎಂ.ಡಿ. ಮೊತ್ತ	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ
ರೂ. 418.00 ಲಕ್ಷಗಳು	ರೂ.6,27,000/–	22–08–2025	22–09–2025ರ ಸಂಜೆ 5.00 ಗಂಟೆಗೆ

ಸಹಿ/– ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲೆ
DIPR/SAD/310/SA/2025-26

ಪುಣೆ ರೇಸ್

ಪೊಸಿಟಾನೊ ಗೆಲ್ಲುವ ನಿರೀಕ್ಷೆ

ಇದಾರ್ ಗೋಲ್ಡ್ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೊಸಿಟಾನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪರ್ಪಲ್ ಮಾರ್ಟಿನಿ 4, ಸ್ಯಾಮ್ಸನ್ 7, ಮೊಮೆಂಟ್ ಆಫ್ ಮ್ಯಾಡ್‌ನೆಸ್ 3
2ನೇ ರೇಸ್: ಜೇಡ್ 3, ಎಲ್ ಗ್ರಿಕೊ 4, ಗೋಲ್ಡನ್ ಕಿಂಗ್ಡಮ್ 1
3ನೇ ರೇಸ್: ಬ್ಲೂ ಬರ್ಡ್ 1, ನ್ಯೂಟ್ರಲಿಸ್ಟ್ 3, ಗಿಯಾಕೊಮೊ 4
4ನೇ ರೇಸ್: ದಿ ಮಿಲೇನ್ನಿಯಮ್ ಫೋರ್ಸ್ 1, ವಿಂಡ್ ಡ್ಯಾನ್ಸರ್ 6, ಫಿಂಚ್ 5
5ನೇ ರೇಸ್: ಚಾರ್ಲಿ ಬ್ರೌನ್ 1, ಎಕ್ಸೈಟಿಂಗ್ 9, ಮನಿ ಫೇರ್ 6
6ನೇ ರೇಸ್: ಪೊಸಿಟಾನೊ 3, ಡ್ಯೂಕ್ ಆಫ್ ಡೆಸ್ಟಿನಿ 2, ಪಿರ್ರೈಟ್ 6
7ನೇ ರೇಸ್: ಫಾಂಟಾನ 7, ಅಜ್ರಿನಾಯ್ಡ್ 3, ಫೈಟಾನ್ 1

ಉತ್ತಮ ಬೆಟ್: ಜೇಡ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: CAO/CN/BNC/137/2025
ದಿನಾಂಕ: 25.08.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು – ಹೊನ್ನಾವರ ಹೆದ್ದಾರಿ ಕಡೆಯಲ್ಲಿ ಕಿಮೀ. 75/300–400 ರಲ್ಲಿ ಎಲ್‌ಸಿ ಸಂ. 44ಕ್ಕೆ ಬದಲಾಗಿ 1x30 ಮೀ. ಕಾಂಪೋಸಿಟ್ ಗಿರ್ಡರ್ (ರೈಲ್ವೆ ಭಾಗ) +03x18.71 ಮೀ. ಪಿಎಸ್‌ಸಿ ಗಿರ್ಡರ್ ಮತ್ತು ಹೆಗ್ಗೆರೆ ಗ್ರಾಮದ ಕಡೆಗೆ 08x18.71 ಮೀ. ಪಿಎಸ್‌ಸಿ ಗಿರ್ಡರ್‌ನಿಂದ 1x4.0x2.50 ಮೀ. ಆರ್‌ಸಿಸಿ ಬಾಕ್ಸ್ (ಬಾಕ್ಸ್ ಪುಶಿಂಗ್ ಮಾದರಿ ಮೂಲಕ) ನಿಂದ ಎಲ್‌ಹೆಚ್‌ಎಸ್ ಸೇರಿದಂತೆ 2 ಲೇನ್ ಆರ್‌ಓಬಿ ಯ ನಿರ್ಮಾಣ ಹಾಗೂ ಹೆಗ್ಗೆರೆ ಹಾಲ್ಟ್ ಮತ್ತು ಮಲ್ಲಸಂದ್ರ ನಿಲ್ದಾಣಗಳ ನಡುವೆ ಆರ್‌ಓಬಿ ಯ ಮರ್ಜಿಂಗ್ ಲೆಂಗ್ತ್‌ಗಳ ಎರಡೂ ಕಡೆಗಳಲ್ಲಿ ರೀಟೇನಿಂಗ್ ಗೋಡೆಯ ನಿರ್ಮಾಣ ಹಾಗೂ ವಿದ್ಯುತ್ ಕಾಮಗಾರಿಗಳು. (ಟೆಂಡರು ಉಲ್ಲೇಖ ಸಂ.: ROB-LC-44-HEI-MLSA)	ರೂ. 21,32,27,983

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.09.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ/ಬೆಂಗಳೂರು ದಂಡು
PUB/412/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ
ಇ–(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 25 UBL 2025-26 ದಿನಾಂಕ: 25.08.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ಪಶ್ಚಿಮ/ಹುಬ್ಬಳ್ಳಿ ಉಪ ವಿಭಾಗದಲ್ಲಿ ಬರುವ ಸೇತುವೆಗಳ ಮೇಲಿನ ಅಭಿವೃದ್ಧಿ (ಒಟ್ಟು ಸೇತುವೆಗಳು – 29)	ರೂ. 1,97,85,237.00
2	ಹುಬ್ಬಳ್ಳಿ ವಿಭಾಗ: ಕ್ಯಾರಕೊಪ (ಕೆಆರ್‌ಕೆಪಿ) ಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ / ಸ್ನಾನದ ಕೊಠಡಿ ಹಾಗೂ ಸರಕು ಲೋಡಿಂಗ್ & ಅನ್ ಲೋಡಿಂಗ್ ಪ್ರದೇಶದ ಅಪ್ರೋಚ್ ರಸ್ತೆಯೊಂದಿಗೆ ಲೇಬರ್ ಕೊಠಡಿ, ಮಾರಾಟಗಾರರ ಕೊಠಡಿ ಮತ್ತು ಎಫ್‌ಓಐಎಸ್ ಸಂಪರ್ಕದೊಂದಿಗೆ ಸಿಜಿಎಸ್‌ಆರ್ ಕೊಠಡಿಗಳ ಪ್ರಸ್ತಾವಿತ ನಿರ್ಮಾಣ.	ರೂ. 1,51,66,395.00
3	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಪೂರ್ವ / ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಪಾಪಿನಾಯಕನಹಳ್ಳಿ ಡಿಪೋನಲ್ಲಿ ಬಾಲಾಸ್ಟ್‌ಗಳ ಪೂರೈಕೆ.	ರೂ. 6,85,57,125.00
4	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಗದಗ ವ್ಯಾಪ್ತಿಯಲ್ಲಿ ಗದಗ, ಕೊಪ್ಪಳ ಮತ್ತು ಕೊಟ್ಟೂರಿನಲ್ಲಿ ಲೀಕೇಜ್‌ಗಳನ್ನು ತಡೆಯುವ ಸಲುವಾಗಿ ಛಾವಣಿಯ ಮೇಲಿನ ಪ್ರಸ್ತಾವಿತ ಅಭಿವೃದ್ಧಿ ಕೆಲಸಗಳು.	ರೂ. 1,46,63,141.00
5	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಕೇಂದ್ರ / ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಇಂಡಿ ರೋಡ್ ಡಿಪೋನಲ್ಲಿ ಬಾಲಾಸ್ಟ್‌ಗಳ ಪೂರೈಕೆ.	ರೂ. 2,57,85,750.00
6	ಹುಬ್ಬಳ್ಳಿ ವಿಭಾಗ: ಹೊಸಪೇಟೆ – ವ್ಯಾಸ ಕಾಲೊನಿ (ಹೆಚ್‌ಪಿಟಿ–ವಿಸಿ) ವಿಭಾಗ: ಒಟ್ಟು 2.576 ಕಿಮೀ. ದೂರಕ್ಕೆ ಟಿಎಸ್‌ಆರ್(ಪಿ)	ರೂ. 1,16,13,879.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.09.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ
PUB/413/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ಸುಧಾಮ್ ನಡೆಗೆ ಬಿಜೆಪಿ ಖಂಡನೆ

ಬೆಂಗಳೂರು: ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಎಚ್.ಪಿ. ಸುಧಾಮ ದಾಸ್ ಅವರು ಒಳಮೀಸಲಾತಿಯ ವಿಷಯದಲ್ಲಿ ಪಕ್ಷ ರಾಜಕಾರಣ ಮಾಡಲು ಹೊರಟಿದ್ದಾರೆ ಎಂದು ಬಿಜೆಪಿ ಮುಖಂಡರಾದ ಬಿ.ಎಚ್ ಅನಿಲ್ ಕುಮಾರ್, ಎಂ. ಲಕ್ಷ್ಮೀನಾರಾಯಣ್, ವೆಂಕಟೇಶ್ ದೊಡ್ಡೇರಿ ಟೀಕಿಸಿದ್ದಾರೆ.

ಒಳಮೀಸಲಾತಿ ಜಾರಿ ಆದೇಶ ಗಟ್ಟಿಗೊಳ್ಳಬೇಕಾದ ನಿರ್ಣಾಯಕ ಸನ್ನಿವೇಶದಲ್ಲಿ ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಎ. ನಾರಾಯಣಸ್ವಾಮಿ ಅವರನ್ನು ಸುಧಾಮ್‌ದಾಸ್ ಅವಮಾನ ಮಾಡುತ್ತಿದ್ದಾರೆ. ಒಳಮೀಸಲಾತಿಯ 35 ವರ್ಷಗಳ ಹೋರಾಟದಲ್ಲಿ ಇದ್ದ ಸಮಾಜದ ಒಗ್ಗಟ್ಟನ್ನು ಮುರಿಯಲು ಹೊರಟಿದ್ದಾರೆ ಎಂದು ಅವರು ದೂರಿದ್ದಾರೆ.

ಹಂದಿ ಫಾರ್ಮ್ ಮಾಲೀಕ ವಿರುದ್ಧ ಎಫ್‌ಐಆರ್

ಚಿಂತಾಮಣಿ: ತಾಲ್ಲೂಕಿನ ಉಲವಾಡಿ ಗ್ರಾ.ಪಂ. ವ್ಯಾಪ್ತಿಯ ಹೆಬ್ಬರಿಯಲ್ಲಿ ಆಫ್ರಿಕನ್ ಹಂದಿ ಜ್ವರದಿಂದ ಸತ್ತ 100ಕ್ಕೂ ಹೆಚ್ಚು ಹಂದಿಗಳನ್ನು ಸಾರ್ವಜನಿಕ ಕೆರೆಗೆ ಬಿಸಾಡಿರುವ ಹಂದಿ ಫಾರ್ಮ್ ಮಾಲೀಕರ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎರಡು ದೂರುಗಳು ದಾಖಲಾಗಿವೆ.

ಪಿಡಿಒ ಮತ್ತು ಪಶುಪಾಲನೆ ಮತ್ತು ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕರು ತಲಾ ಒಂದೊಂದು ದೂರಗಳನ್ನು ಸಲ್ಲಿಸಿದ್ದಾರೆ.

ಹುಥಿ ಬಂಡುಕೋರರ ಪ್ರಧಾನಿ ಸಾವು

ಸನಾ (ಎಎಫ್‌ಪಿ): 'ಇಸ್ರೇಲ್ ಸೇನೆ ಇತ್ತೀಚೆಗೆ ನಡೆಸಿದ ವಾಯು ದಾಳಿಯಲ್ಲಿ ತಮ್ಮ ಪ್ರಧಾನಿ ಕೂಡ ಹತ್ಯೆ ಆಗಿದ್ದಾರೆ' ಎಂದು ಯೆಮೆನ್‌ನ ಹುಥಿ ಬಂಡುಕೋರರು ಶನಿವಾರ ತಿಳಿಸಿದ್ದಾರೆ.

'ಕಳೆದ ವರ್ಷ ನೇಮಕಗೊಂಡಿದ್ದ ಪ್ರಧಾನಿ ಅಹ್ಮದ್ ಗಾಲೆಬ್ ನಾಸೀರ್ ಅಲ್–ರಹವಿ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಗುರುವಾರದ ದಾಳಿಯಲ್ಲಿ ಮೃತಪಟ್ಟಿದ್ದಾರೆ' ಎಂದು ಬಂಡುಕೋರರು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಮಾರಮ್ಮನ ದೇವಸ್ಥಾನದ ಜೀರ್ಣೋದ್ಧಾರ

ಬೆಂಗಳೂರು: ದಕ್ಷಿಣ ತಾಲ್ಲೂಕಿನ ಚೋಳನಾಯಕನಹಳ್ಳಿಯ ಗ್ರಾಮದೇವತೆ ಮಾರಮ್ಮನ ದೇವಸ್ಥಾನದ ಜೀರ್ಣೋದ್ಧಾರ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಅಷ್ಟಬಂಧನ ಮಹಾಕುಂಭಾಭಿಷೇಕ ನೆರವೇರಿತು.

ನಿರ್ಮಲಾನಂದನಾಥ ಸ್ವಾಮೀಜಿ

ದೇವಸ್ಥಾನ ಉದ್ಘಾಟಿಸಿದ ಆದಿಚುಂಚನಗಿರಿ ಪೀಠದ ನಿರ್ಮಲಾನಂದನಾಥ ಸ್ವಾಮೀಜಿ. 'ದೇಹವನ್ನು ಶುದ್ಧಿಗೊಳಿಸಲು ಕೆರೆ, ನದಿ, ಕಾಲುವೆಗಳು ಇರುವಂತೆ ಮನಸ್ಸನ್ನು ಶುಚಿಗೊಳಿಸುವ ಜಾಗವೇ ದೇವಸ್ಥಾನ' ಎಂದರು.

ಸ್ಫಟಿಕಪುರಿ ಪೀಠದ ನಂಜಾವಧೂತ ಸ್ವಾಮೀಜಿ, ಸಿದ್ಧರಾಮೇಶ್ವರ ಮಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಬೆಳವಂಗಲ ಖಾನಿಮಠದ ಬಸವರಾಜ ಸ್ವಾಮೀಜಿ, ಜೇಡರಹಳ್ಳಿಯ ಎಚ್.ಎಂ. ಕೃಷ್ಣಪ್ಪ, ಬಂಡೆಮಠದ ಸಚ್ಚಿದಾನಂದ ಸ್ವಾಮೀಜಿ, ಜಡೇದೇವರ ಮಠದ ಇಮ್ಮಡಿ ಬಸವರಾಜ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ ಭಾಗವಹಿಸಿದ್ದರು.

ಚುಕ್ಕೆ ಜಿಂಕೆ ಹತ್ಯೆ: ಆರೋಪಿ ಸೆರೆ

ಬೆಂಗಳೂರು: ಕಗ್ಗಲೀಪುರ ಅರಣ್ಯ ವಲಯದಲ್ಲಿ ಚುಕ್ಕೆ ಜಿಂಕೆ ಹತ್ಯೆ ಪ್ರಕರಣದ ಆರೋಪಿಗಳ ಪೈಕಿ ತಲೆಮರೆಸಿಕೊಂಡಿದ್ದ ರಮೇಶ್ ಎಂಬಾತನನ್ನು ಅರಣ್ಯ ಇಲಾಖೆ ಬಂಧಿಸಿದೆ.

ಖಚಿತ ಮಾಹಿತಿ ಮೇರೆಗೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಬಂಟಹಳ್ಳಿ ತೋಟದ ಜಮೀನಿನ ಶೆಡ್‌ನಲ್ಲಿದ್ದ ಆರೋಪಿಯನ್ನು ಅಧಿಕಾರಿಗಳು ಬಂಧಿಸಿದ್ದಾರೆ. ನಾಪತ್ತೆಯಾಗಿರುವ ಮತ್ತೊಬ್ಬ ಆರೋಪಿ ಬಾಲರಾಜು ಪತ್ತೆ ಕಾರ್ಯ ನಡೆಯುತ್ತಿದೆ.

ಜಾಮೀನು ಕೋರಿ ರಮೇಶ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಅರಣ್ಯ ಇಲಾಖೆ ವಿರೋಧ ವ್ಯಕ್ತಪಡಿಸಿತ್ತು.

ಮಹಿಳೆಯ ಶವ ಕೊಲ್ಲೂರಿನಲ್ಲಿ ಪತ್ತೆ

ಕುಂದಾಪುರ: ಕೊಲ್ಲೂರಿನ ವಸತಿ ಗೃಹವೊಂದರ ಬಳಿ ಕಾರು ನಿಲ್ಲಿಸಿ ನಾಪತ್ತೆಯಾಗಿದ್ದ ಬೆಂಗಳೂರಿನ ವಸುಧಾ ಚಕ್ರವರ್ತಿ (45) ಅವರ ಮೃತದೇಹ ಕೊಲ್ಲೂರಿನ ಸೌಪರ್ಣಿಕಾ ನದಿಯಲ್ಲಿ ಶನಿವಾರ ಪತ್ತೆಯಾಗಿದೆ.

ವಸುಧಾ

ತ್ಯಾಗರಾಜ ನಗರದ ನಿವಾಸಿ ವಿಮಲಾ ಅವರ ಪುತ್ರಿ ವಸುಧಾ ಆ.27ರಂದು ಕಾರಿನಲ್ಲಿ ಕೊಲ್ಲೂರಿಗೆ ಬಂದು ನಾಪತ್ತೆಯಾಗಿದ್ದರು. ವಸತಿ ಗೃಹದ ಬಳಿ ಅವರ ಕಾರು ಪತ್ತೆಯಾಗಿತ್ತು. ಮಗಳ ಮೊಬೈಲ್ ಫೋನ್‌ಗೆ ಕರೆ ಮಾಡಿದಾಗ ಸಿಗದೇ ಇದ್ದ ಕಾರಣ ಅವರ ತಾಯಿ ಆ.29 ರಂದು ಕೊಲ್ಲೂರಿಗೆ ಬಂದು ವಿಚಾರಿಸಿದರು.

ಕೊಲ್ಲೂರು ಠಾಣೆಯಲ್ಲಿ ಮಹಿಳೆ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಸೌಪರ್ಣಿಕಾ ನದಿ ಪರಿಸರದಲ್ಲಿ ಪೊಲೀಸರು ಶೋಧ ನಡೆಸಿದರು.

ಕೃಷಿ ವಿ.ವಿ.ಯಿಂದ 'ಸಲಹೆಗೆ ಶುಲ್ಕ'

ಕೃಷಿ ಕ್ಷೇತ್ರಕ್ಕೆ ಬರುವ ಐ.ಟಿ ಉದ್ಯೋಗಸ್ಥರಿಗೆ, ಹೊಸಬರಿಗೆ ಅನುಕೂಲ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ಕೃಷಿಯನ್ನು ಗಂಭೀರವಾಗಿ ತೆಗೆದುಕೊಳ್ಳಲು ಶುಲ್ಕ ನಿಗದಿ
- ಜಮೀನಿನ ಗಾತ್ರ, ಸ್ವರೂಪದ ಆಧಾರದ ಮೇಲೆ ಯೋಜನೆ ಸಿದ್ಧಪಡಿಸುವುದು

ಬೆಂಗಳೂರು: ಕೃಷಿಯನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುವ ನಗರವಾಸಿಗಳಿಗೆ, ಹೊಸಬರಿಗೆ, ಐ.ಟಿ ಕ್ಷೇತ್ರದಲ್ಲಿ ಇರುವವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಶುಲ್ಕ ಸಹಿತ ಸಲಹೆಗಳನ್ನು (ಪೇಯ್ಡ್ ಕನ್ಸಲ್ಟೇಷನ ಸರ್ವೀಸ್) ನೀಡುವ ಯೋಜನೆ ಪರಿಚಯಿಸುತ್ತಿದೆ.

ಹೊಸದಾಗಿ ಕೃಷಿ ಮಾಡುವ ಆಸಕ್ತರ ಜಮೀನಿನ ಗಾತ್ರ, ಸ್ವರೂಪ ಹಾಗೂ ಅವರು ಹೂಡಿಕೆ ಮಾಡುವ ಸಾಮರ್ಥ್ಯದ ಮೇಲೆ ಯಾವ ಬೆಳೆಯನ್ನು ಬೆಳೆಯಬೇಕು ಎಂಬ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿ, ನೀಡಲಾಗುತ್ತದೆ. ಇದಕ್ಕೆ ಇಂತಿಷ್ಟು ಎಂದು ಶುಲ್ಕ ನಿಗದಿಪಡಿಸಲಾಗುತ್ತದೆ.

'ಎರಡು ಎಕರೆ ಜಮೀನಿನಲ್ಲಿ ₹5ಲಕ್ಷ ಹೂಡಿಕೆ ಮಾಡಿ ಕೃಷಿ ಪ್ರಾರಂಭಿಸಬೇಕಿದ್ದರೆ, ಯಾವ ಕೃಷಿ ಮಾಡಬಹುದು. ಅದಕ್ಕೆ ಬೇಕಾದ ರೂಪರೇಷಗಳ ಯೋಜನೆಯೊಂದನ್ನು ರೂಪಿಸಿ ನೀಡಲಾಗುತ್ತದೆ. ಯಾವ ಸಂದರ್ಭದಲ್ಲಿ ಏನು ಬೆಳೆಯಬೇಕು. ಯಾವ ಗೊಬ್ಬರ ಹಾಕಬೇಕು. ಬೆಳೆ ನಿರ್ವಹಣೆ ಹೇಗೆ ಮಾಡಬೇಕು ಎಂಬ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗುತ್ತದೆ. ನಿರಂತರವಾಗಿ ಆದಾಯ ಬರುವಂತಹ ವಾಣಿಜ್ಯ ಕೃಷಿಗೆ ಬೇಕಾದ ಯೋಜನೆಯನ್ನು ನೀಡಲಾಗುತ್ತದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಕುಲಪತಿ ಎಸ್.ವಿ. ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ಕೃಷಿ ವಿಶ್ವವಿದ್ಯಾಲಯ ಸಿದ್ಧಪಡಿಸಿ ನೀಡುವ ಯೋಜನೆಯ ಪ್ರಕಾರವೇ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಬೆಳೆ ನಿರ್ವಹಣೆಯ ಸಂದರ್ಭದಲ್ಲಿ ಏನಾದರೂ ಸಮಸ್ಯೆಗಳಾದರೆ, ಕೃಷಿ ವಿಜ್ಞಾನಿಗಳ ತಂಡ ಜಮೀನಿಗೆ ಭೇಟಿ ನೀಡಿ, ಸಲಹೆ ಸೂಚನೆಗಳನ್ನು ನೀಡಲಿದೆ. ಪ್ರತಿಯೊಂದಕ್ಕೂ ಶುಲ್ಕ ನಿಗದಿಪಡಿಸಲಾಗುತ್ತದೆ. ಕೃಷಿ ಕ್ಷೇತ್ರಕ್ಕೆ ಹೊಸದಾಗಿ ಬರುವ ಆಸಕ್ತರಿಗೆ ಹಾಗೂ ಬಂಡವಾಳ ಹೂಡಿಕೆ ಮಾಡುವವರಿಗೆ ಈ ಯೋಜನೆ ಸಹಾಯಕವಾಗಲಿದೆ' ಎಂದು ಮಾಹಿತಿ ನೀಡಿದರು.

'ನಾವು ಆದಾಯ ಗಳಿಸುವ ಉದ್ದೇಶದಿಂದ ಈ ಸೇವೆಯನ್ನು ಪ್ರಾರಂಭಿಸುತ್ತಿಲ್ಲ. ಹೊಸಬರು ಕೃಷಿಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಶುಲ್ಕ ನಿಗದಿಪಡಿಸುತ್ತಿದ್ದೇವೆ. ಈಗಾಗಲೇ ಬೇರೆ-ಬೇರೆ ಕ್ಷೇತ್ರಗಳಲ್ಲಿ ಶುಲ್ಕ ಸಹಿತ ಸಲಹೆಗಳನ್ನು ನೀಡಲಾಗುತ್ತಿದೆ. ಅದೇ ರೀತಿಯಲ್ಲಿ ಕೃಷಿ ಕ್ಷೇತ್ರದಲ್ಲಿಯೂ ಶುಲ್ಕ ಪಡೆದು ಸಲಹೆ ಸೂಚನೆಗಳನ್ನು ನೀಡುವ ಯೋಜನೆಯನ್ನು ರೂಪಿಸುತ್ತಿದ್ದೇವೆ' ಎಂದು ವಿವರಿಸಿದರು.

ಬೆಂಗಳೂರಿನಂತಹ ಮಹಾನಗರಗಳಲ್ಲಿ ವಾರಾಂತ್ಯದ ಕೃಷಿಕರು ಇದ್ದಾರೆ. ಇವರು ಶುಕ್ರವಾರ ರಾತ್ರಿ ಬೆಂಗಳೂರಿನಿಂದ ಹಳ್ಳಿಗಳಿಗೆ ತೆರಳುತ್ತಾರೆ. ಶನಿವಾರ ಹಾಗೂ ಭಾನುವಾರ ಎರಡು ದಿನ ಕೃಷಿ ಚಟುವಟಿಕೆಗಳನ್ನು ಮಾಡುತ್ತಾರೆ. ಭಾನುವಾರ ರಾತ್ರಿ ಮತ್ತೆ ಬೆಂಗಳೂರಿಗೆ ಬರುತ್ತಾರೆ. ಈ ರೀತಿ ಮಾಡುವುದರಿಂದ ಕೃಷಿ ಕ್ಷೇತ್ರದಿಂದ ಹೆಚ್ಚು ಆದಾಯ ಬರುವುದಿಲ್ಲ. ಕೃಷಿ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳಬೇಕು. ಆದ್ದರಿಂದ ನಾವು ಶುಲ್ಕ ಪಡೆದು ಕೃಷಿ ಸಲಹೆಗಳನ್ನು ನೀಡುತ್ತೇವೆ' ಎಂದರು.

'ಎರಡು ತಿಂಗಳಲ್ಲಿ ಜಾರಿ'

ಎಸ್.ವಿ. ಸುರೇಶ

ಎರಡು ತಿಂಗಳಲ್ಲಿ ಶುಲ್ಕ ಸಹಿತ ಕೃಷಿ ಸಲಹೆ ಯೋಜನೆ ಜಾರಿಯಾಗಲಿದೆ. ಜಿಕೆವಿಕೆ ವ್ಯಾಪ್ತಿಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸುವ ಉದ್ದೇಶವಿದೆ. ಇದಕ್ಕೆ ಕೃಷಿ ವಿಜ್ಞಾನ ಕೇಂದ್ರದ (ಕೆವಿಕೆ) ವಿಜ್ಞಾನಿಗಳನ್ನು ಬಳಸಿಕೊಳ್ಳಲಾಗುತ್ತದೆ' ಎಂದು ಎಸ್.ವಿ. ಸುರೇಶ ಹೇಳಿದರು.

'ಈ ಸೇವೆ ಆರಂಭಿಸಲು ತಜ್ಞರ ಸಮಿತಿಯೊಂದನ್ನು ರಚಿಸಿ, ರೈತರ ಅವಶ್ಯಕತೆಗಳಿಗೆ ಅನುಗುಣವಾಗಿ ಸೇವೆ ನೀಡಲು ತಜ್ಞರನ್ನು ನಿಯೋಜಿಸಬೇಕಾಗುತ್ತದೆ. ಶುಲ್ಕ ನಿಗದಿ, ಸೇವೆಗಳ ವಿವರ ಸೇರಿದಂತೆ ಹಲವು ವಿಷಯಗಳನ್ನು ಚರ್ಚಿಸಿ ಮಾರ್ಗಸೂಚಿಯನ್ನು ಸಿದ್ದಪಡಿಸಲಾಗುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ: 63604 66004, 94817 335592 ಸಂಪರ್ಕಿಸಬಹುದು' ಎಂದು ತಿಳಿಸಿದರು.

ಫ್ಲಾರಿಡಾದಲ್ಲಿ ನಂದಿನಿ ಬ್ರ್ಯಾಂಡ್

ಕೆಎಂಎಫ್‌ನ ನಂದಿನಿ ಬ್ರ್ಯಾಂಡ್‌ನ ಎಲ್ಲ ಉತ್ಪನ್ನಗಳನ್ನು ಅಮೆರಿಕ ದೇಶದ ಫ್ಲಾರಿಡಾದ ಲೇಕ್‌ಲ್ಯಾಂಡ್‌ನಲ್ಲಿ ನಡೆದ ನಾವಿಕ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಶಾಸಕರಾದ ರವಿ ಗಣಿಗ, ಅರವಿಂದ ಬೆಲ್ಲದ್, ನಟಿ ರಮ್ಯಾ, ನಟರಾದ ಶ್ರೀನಾಥ್, ರಕ್ಷಿತ್ ಶೆಟ್ಟಿ, ನಾವಿಕದ ಶಿವಕುಮಾರ್ ಮತ್ತು ಹರ್ಷಿತ್ ಗೌಡ ಉಪಸ್ಥಿತರಿದ್ದರು

ಅಂಗಾಂಗ ದಾನ ಸಿಬ್ಬಂದಿ ಪ್ರತಿಜ್ಞೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿಯ 336 ಸಿಬ್ಬಂದಿ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡರು.

ವಿ.ವಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತಿಂಗಳ ಅಂಗಾಗ ದಾನ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಕುಲಪತಿ ಡಾ.ಬಿ.ಸಿ.ಭಗವಾನ್, 'ವೈದ್ಯಕೀಯ ವೃತ್ತಿಯಲ್ಲಿರುವವರು ಇತರರಿಗಿಂತ ಮೊದಲು ಜೀವಗಳನ್ನು ಉಳಿಸಲು ಪಣ ತೊಡಬೇಕು ಎಂಬ ಕಾರಣಕ್ಕೆ ಅಂಗಾಗ ದಾನದ ಪ್ರತಿಜ್ಞೆ ಆರಂಭಿಸಲಾಗಿದೆ' ಎಂದರು.

एनएमडीसी
NMDC
NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad – 500 028
Corporate Identity Number (CIN) - L13100TG1958GOI001674

CONTRACTS DEPARTMENT

Pre - Tender Meeting Notice **Dated: 31.08.2025**

NMDC Limited, A "NAVARATNA" Public Sector Company under Ministry of Steel, Govt. of India, invites experienced, reputed and competent domestic bidders to participate in pre-tender meeting on 02.09.2025, 1100 Hours for the work of **Slope protection works from Substation-1 to Substation-1A (RL706) at SP-III, Kirandul, Chhattisgarh.**

Venue of pre-tender meeting: Tata Consulting Engineers, JC 30/A Salt Lake City, Sector III. Kolkata 700106, West Bengal, India.

For obtaining the details such as brief agenda of the meeting, preliminary scope of work, time schedule, project site etc., the bidders may visit NMDC website **http://www.nmdc.co.in**.

Further, for any queries, the bidders may also contact the following officials directly or through e-mail;

1. Shri Sowmen Bisai email: **sbisai@tataconsultingengineers.com**
2. Shri Arindam Chatterjee, AGM (Contracts); e-mail: **arindam210990@nmdc.co.in**

For and on behalf of NMDC Ltd.
Executive Director (Works)

'ವೃತ್ತಿ ಧರ್ಮಕ್ಕೆ ಅಪಚಾರ ಸಲ್ಲ'

ಗೃಹ ಸಚಿವಾಲಯದ ವಿರುದ್ಧ ಪತ್ರ ಬರೆದಿದ್ದಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೃತ್ತ ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರು ಸರ್ಕಾರದ ವಿರುದ್ಧ ಮತ್ತು ಗೃಹ ಸಚಿವಾಲಯದ ವಿರುದ್ಧ ಪತ್ರ ಬರೆದಿದ್ದು ವಕೀಲ ವೃತ್ತಿಧರ್ಮಕ್ಕೆ ಮಾಡಿದ ಅಪಚಾರ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯ ವಕೀಲರ ಸಂಘಗಳ ಪದಾಧಿಕಾರಿಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಈಚೆಗೆ ಕೆಲ ನಿವೃತ್ತ ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರು ಒಟ್ಟಿಗೆ ಸೇರಿ ಗೃಹ ಸಚಿವಾಲಯದ ವಿರುದ್ಧ ಪತ್ರ ಬರೆದರು. ಇದು ಸರಿಯಲ್ಲ. ವಕೀಲರು ನ್ಯಾಯಾಧೀಶರಾಗಿ ನಿವೃತ್ತರಾದ ನಂತರವೂ ರಾಜಕೀಯ ನಿಲುವುಗಳಿಂದ, ಸಂಕಥನಗಳಿಂದ ಅಂತರ ಕಾಯ್ದುಕೊಳ್ಳಬೇಕು. ನಿವೃತ್ತರು ಹೀಗೆ ಸರ್ಕಾರದ ವಿರುದ್ಧ ಪತ್ರ ಬರೆದಿದ್ದರಿಂದ, ಅವರು ವೃತ್ತಿಯಲ್ಲಿದ್ದಾಗಲೂ ಸರಿಯಾಗಿ ಕೆಲಸ ಮಾಡಿದ್ದರೇ ಎಂದು ಸಂದೇಹದಿಂದ ನೋಡುವಂತಾಗಿದೆ' ಎಂದು ಹೇಳಿದರು.

'ದೇಶದ ನ್ಯಾಯಾಂಗ ವ್ಯವಸ್ಥೆಯ ಅತ್ಯಂತ ದೊಡ್ಡ ಸಮಸ್ಯೆ ಬಾಕಿ ಪ್ರಕರಣಗಳು. ಹೆಚ್ಚು ಪ್ರಕರಣಗಳು ದಾಖಲಾಗುತ್ತಿರುವುದು ಈ ಸಮಸ್ಯೆಗೆ ಕಾರಣವಲ್ಲ. ಬದಲಿಗೆ ಪ್ರಕರಣಗಳನ್ನು ವಿಲೇವಾರಿ ಮಾಡುವಲ್ಲಿ ಸಮಸ್ಯೆ ಇದೆ. ಅಧೀನ ನ್ಯಾಯಾಲಯಗಳ ನ್ಯಾಯಾಧೀಶರು ದಿನವೊಂದರಲ್ಲಿ 50-60 ಪ್ರಕರಣಗಳನ್ನು ನಿರ್ವಹಿಸುತ್ತಾರೆ. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಒಂದೇ ಪ್ರಕರಣದ ವಿಚಾರಣೆಯನ್ನು ಹಲವು ದಿನ ನಡೆಸುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸುಪ್ರೀಂ ಕೋರ್ಟ್‌ನಲ್ಲಿ ಒಂದೇ ಪ್ರಕರಣ ಅಥವಾ ಅರ್ಜಿ ವಿಚಾರಣೆಗೆ ಹಲವು ನ್ಯಾಯಮೂರ್ತಿಗಳು ಪೀಠದಲ್ಲಿ ಕೂರುತ್ತಾರೆ. ಅಂತಹ ಹಲವು ಪೀಠಗಳು ಇರುತ್ತವೆ. ಅವರ ಮೇಲೆ ಒತ್ತಡ ಇರುತ್ತದೆ ಎಂಬುದು ನನಗೆ ಅರ್ಥವಾಗುತ್ತದೆ. ಅವರು ನೀಡುವ ತೀರ್ಪು ದೇಶದ ಕಾನೂನುಗಳಾಗುತ್ತವೆ. ಅದನ್ನು ಪಾಲಿಸಬೇಕಾಗುತ್ತದೆ' ಎಂದೂ ಹೇಳಿದರು.

ರಾಜ್ಯದ ವಕೀಲರ ಸಂಘಗಳು ನೀಡಿದ್ದ ಮನವಿಗಳನ್ನು ಒಳಗೊಂಡ ಕ್ರೋಡೀಕೃತ ಮನವಿಯನ್ನು ವಕೀಲರ ಪರಿಷತ್ತು ಸಚಿವ ಕಿರಣ್ ರಿಜಿಜು ಅವರಿಗೆ ಸಲ್ಲಿಸಿತು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯದ ಎಲ್ಲ ವಕೀಲರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಬಿ.ವೈ.ವಿಜಯೇಂದ್ರ, ಎಸ್.ಎಸ್.ಮಿಟ್ಟಲಕೋಡ ಚರ್ಚೆಯಲ್ಲಿ ತೊಡಗಿದ್ದರು. ಕೇಂದ್ರ ಸಚಿವ ಕಿರಣ್ ರಿಜಿಜು, ಭಾರತೀಯ ವಕೀಲರ ಪರಿಷತ್ತಿನ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಮತ್ತು ಸಂಸದ ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಮಹಾತ್ಮ ಗಾಂಧಿ ಉತ್ತಮ ನಾಯಕರು'

'ನಮ್ಮ ದೇಶದಲ್ಲಿ ಮಹಾತ್ಮ ಗಾಂಧಿ ಅವರಿಂದ ಆರಂಭವಾಗಿ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಮೋತಿಲಾಲ್ ನೆಹರೂ ಅವರು ಉತ್ತಮ ವಕೀಲರಾಗಿದ್ದರು. ಜತೆಗೆ ಅವರು ಉತ್ತಮ ನಾಯಕರೂ ಆಗಿದ್ದರು. ದೇಶವನ್ನು ರೂಪಿಸುವಂತಹ ನಾಯಕರನ್ನು, ವಕೀಲ ವೃತ್ತಿಯು ರೂಪಿಸುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹೇಳಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷ ಎಸ್.ಎಸ್. ಮಿಟ್ಟಲಕೋಡ ಅವರು, 'ಈ ಮೊದಲು ರಾಜಕೀಯ ಪ್ರವೇಶಿಸುತ್ತಿದ್ದವರಲ್ಲಿ ವಕೀಲರ ಸಂಖ್ಯೆಯೇ ಹೆಚ್ಚು ಇರುತ್ತಿತ್ತು. ಈಚಿನ ವರ್ಷಗಳಲ್ಲಿ ಸ್ಥಿತಿ ಬದಲಾಗಿದೆ. ಬೇರೆ ಕ್ಷೇತ್ರದವರು ರಾಜಕೀಯಕ್ಕೆ ಹೆಚ್ಚು ಬರುತ್ತಿದ್ದು, ವಕೀಲರು ರಾಜಕೀಯದಿಂದ ದೂರ ಉಳಿಯುತ್ತಿದ್ದಾರೆ. ವಕೀಲರು ಮತ್ತೆ ರಾಜಕಾರಣಕ್ಕೆ ಬರಬೇಕು' ಎಂದು ಹೇಳಿದರು.

ಅನಪೇಕ್ಷಿತ ಗದ್ದಲ–ಸರ್ಕಾರಕ್ಕೇನೂ ನಷ್ಟವಿಲ್ಲ: ರಿಜಿಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪಕ್ಷಗಳ ನಾಯಕರು ಸಂಸತ್ತಿನಲ್ಲಿ ಅನಪೇಕ್ಷಿತ ಗದ್ದಲ ಮತ್ತು ರಾಜಕೀಯ ಪ್ರಹಸನಗಳ ಮೂಲಕ ಪ್ರತಿಯೊಂದಕ್ಕೂ ವಿರೋಧ ವ್ಯಕ್ತಪಡಿಸಲು ಪ್ರಯತ್ನಿಸಿದರೆ ಅದರಿಂದ ಸದಸ್ಯರಿಗೆ ನಷ್ಟವೇ ಹೊರತು, ಸರ್ಕಾರಕ್ಕೆ ಅಲ್ಲ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಹೇಳಿದರು.

ಬೆಂಗಳೂರು ವಕೀಲರ ಸಂಘ ಶನಿವಾರ ಆಯೋಜಿಸಿದ್ದ 'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದಲ್ಲಿ ಸಂಸದೀಯ ವ್ಯವಸ್ಥೆ' ವಿಷಯದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಇತ್ತೀಚೆಗೆ ಮುಕ್ತಾಯಗೊಂಡ ಮುಂಗಾರು ಅಧಿವೇಶನದಲ್ಲಿ ವಿರೋಧ ಪಕ್ಷವು ತನ್ನ ನಾಯಕನ ಇರಾದೆಯ ಮೇರೆಗೆ ವರ್ತಿಸುತ್ತಿದ್ದ ಕಾರಣ ಸದನ ಕಲಾಪ ಸಮರ್ಪಕವಾಗಿ ನಡೆಯಲಿಲ್ಲ. ಸರ್ಕಾರದ ಬಳಿ ಬಹುಮತವಿದ್ದು ಅಗತ್ಯ ಬಿದ್ದಾಗ ಮಸೂದೆಗಳಿಗೆ ಒಪ್ಪಿಗೆ ಪಡೆದುಕೊಳ್ಳಲು ಸಮರ್ಥವಾಗಿದೆ' ಎಂದರು.

ಪದಾಂಕಿತ ಹಿರಿಯ ವಕೀಲ ಬಿ.ವಿ.ಆಚಾರ್ಯ ಮಾತನಾಡಿ, 'ಇಂದು ಸಂಸತ್ತಿನ ಚರ್ಚೆಗಳ ಗುಣಮಟ್ಟ ಕುಸಿದಿದೆ. ಸದಸ್ಯರು ಸಂಸತ್ತಿನ ಒಳಗೆ ಚರ್ಚೆ ಮಾಡುವುದನ್ನು ಬಿಟ್ಟು ರಸ್ತೆಗಿಳಿದು ಹೋರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಸಮರ್ಪಕ ಚರ್ಚೆಗಳೇ ನಡೆಯದೆ ಮಸೂದೆಗಳು ಅಂಗೀಕಾರ ಪಡೆಯುತ್ತಿವೆ' ಎಂದರು.

'ಸುಪ್ರೀಂ ಕೋರ್ಟ್‌ನಲ್ಲಿ ಮಹಿಳಾ ನ್ಯಾಯಮೂರ್ತಿಗಳ ನೇಮಕವೂ ಸರಿಯಾಗಿ ನಡೆಯುತ್ತಿಲ್ಲ. ಸದ್ಯ ಸುಪ್ರೀಂ ಕೋರ್ಟ್‌ನಲ್ಲಿ ಒಬ್ಬರು ಮಾತ್ರ ಮಹಿಳಾ ನ್ಯಾಯಮೂರ್ತಿ ಇದ್ದಾರೆ' ಎಂದು ಅವರು ಹೇಳಿದರು.

ಅತ್ಯಾಚಾರ: ಯುವಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಬುಕ್‌ನಲ್ಲಿ ಪರಿಚಯವಾದ ಯುವತಿ ಮೇಲೆ ಅತ್ಯಾಚಾರವೆಸಗಿ, ಆಕೆಯ ಖಾಸಗಿ ಕ್ಷಣಗಳ ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದ ಮೇಲೆ ಯುವಕನನ್ನು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುಬ್ರಹ್ಮಣ್ಯನಗರ ನಿವಾಸಿ 24 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಅತ್ಯಾಚಾರ ಆರೋಪದಡಿ ಬಸವೇಶ್ವರನಗರ ನಿವಾಸಿ ನಿರಂಜನ್ (30) ಎಂಬಾತನನ್ನು ಬಂಧಿಸಲಾಗಿದೆ. ಮತ್ತೊಂದೆಡೆ ನಿರಂಜನ್ ಅವರ ತಂದೆ ರಾಜಶೇಖರ್ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

'ಪುತ್ರ ನಿರಂಜನ್‌ನ ಮೊಬೈಲ್‌ನಲ್ಲಿದ್ದ ಸಂತ್ರಸ್ತೆಯ ಖಾಸಗಿ ವಿಡಿಯೊಗಳನ್ನು ಗಮನಿಸಿದ್ದ ಆತನ ತಂದೆ ರಾಜಶೇಖರ್, ಯುವತಿಗೆ ಕರೆ ಮಾಡಿ, ನಿನ್ನ ಅಶ್ಲೀಲ ವಿಡಿಯೊ ಮತ್ತು ಫೋಟೊಗಳು ತನ್ನ ಬಳಿಯಿದ್ದು, ತನ್ನ ಜತೆ ದೈಹಿಕ ಸಂಬಂಧ ಹೊಂದಬೇಕು. ಜತೆಗೆ ತಾನು ಹೇಳಿದವರ ಜತೆಯೂ ಲೈಂಗಿಕ ಕ್ರಿಯೆ ನಡೆಸಬೇಕು ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ' ಎಂದು ಸಂತ್ರಸ್ತೆ ಆರೋಪಿಸಿದ್ದಾಳೆ. ನಾಪತ್ತೆಯಾಗಿರುವ ರಾಜಶೇಖರ್ ಪತ್ತೆ ಕಾರ್ಯ ನಡೆಯುತ್ತಿದೆ. ರಾಜಶೇಖರ್ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಕೊಂಡಿದ್ದಾರೆ' ಪೊಲೀಸರು ಹೇಳಿದರು.

ಸಿ.ಎಂ ಬಗ್ಗೆ ಅಶ್ಲೀಲ ಮಾತು: ಬಂಧನ

ಬೆಂಗಳೂರು: ನಾಡಹಬ್ಬ ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತು ಅಶ್ಲೀಲ ಮಾತುಗಳನ್ನಾಡಿದ್ದ ಅರ್ಚಕ ಗುರುರಾಜ್ ಅವರನ್ನು ಕೆಂಗೇರಿ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕೆಂಗೇರಿ ಉಪನಗರದ ಶ್ರೀರಾಘವೇಂದ್ರ ಸ್ವಾಮಿ ಮಠದ ಪಕ್ಕದಲ್ಲಿರುವ ಗಣಪತಿ ದೇವಸ್ಥಾನದ ಸಹಾಯಕ ಅರ್ಚಕ ಗುರುರಾಜ್ ಅವರನ್ನು ಬಂಧಿಸಲಾಗಿದೆ.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ವಿಚಾರದ ಬಗ್ಗೆ ಯುಟ್ಯೂಬ್‌ವೊಂದರ ಜತೆ ಮಾತನಾಡಿದ್ದ ಗುರುರಾಜ್, ಮುಖ್ಯಮಂತ್ರಿ ಅವರನ್ನು ಉದ್ದೇಶಿಸಿ ಕೀಳು ಮಟ್ಟದ ಪದ ಪ್ರಯೋಗಿಸಿ ನಿಂದಿಸಿದ್ದರು. ಈ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

ಸಮಾಜದ ಶಾಂತಿ ಕದಡಲು ಯತ್ನ ಹಾಗೂ ಕೋಮು ಸಾಮರಸ್ಯಕ್ಕೆ ಧಕ್ಕೆ ತರುವ ಆರೋಪದಡಿ ಗುರುರಾಜ್ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದಾರೆ.

ಅರ್ಚಕ ಸ್ಥಾನದಿಂದ ಅಮಾನತು: ಗುರುರಾಜ್ ನೀಡಿರುವ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಶ್ರೀರಾಘವೇಂದ್ರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಅವರನ್ನು ಅರ್ಚಕ ಸ್ಥಾನದಿಂದ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದೆ.



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA SITE 20'X30' for sale in Anjanapura 5th 'G' Block, Immediate registration Only, 65Lakhs,Owner:9008716584

ANJANAPURA BDA Site for Sale at 5th G Block 30x40sft, North facing.Contact: 9686094278

Banashankari

SITE_FOR_SALE IN`BENGALURU, 2400Sft`BDA Site`for`Sale in`Banashankari 6th Stage,`4th 'B'Block (Further Extension) Bangalore By_Owner, Conveniently Located, Clear`Tittles. Call-9845726980 (WhatsApp)

"SALE SEMI-COMMERCIAL-SITES Banashankari 1st Stage 40x60, Banashankari 2nd Stage 40x60, Banashankari 3rd Stage 40x50 "Sri.Ganesh Estate" 9845286505"

BDA SITES Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

AVAILABLE BANASHANKARI 6TH STAGE 6TH BLOCK 20X30 #971 W/F 68 LAKHS CONTACT OWNER 8050908920/ 9986866661

"AVAILABLE" BANASHANKARI 6th Stage,2nd Block 30x40,E/F 40ft Road 6th Block 30x40,W/F Call Lingaraju 9663393533

BDA SITE 30x40, East facing, Banashankari 5th Stage, Near NPS, Rs. 18,500 square foot. Slightly negotiable. 9449820405.

BDA AUCTION_SITE SALE 3250 Sqft NORTH_WEST CORNER BANSASHANKARI 6th_STAGE 4th B Block Call 9008444779

BSK 3RD Stage near Big Bazaar BDA 40x60 South facing, Sale 27,000/-sft. Jagruthi Estates- 9972535002/ 9341280002

BTM Layout

BTM 6TH STAGE 3562 Sqft WF A-Katha 14000/- PSFt Negotiable Suitable: Apartment Brokers Excuse 9449655947

Bannerghatta Road

SALE: BDA SITE No.90, BTM 1st Stage, North facing 40x60, opp:-Income tax tribunal, Adjacent to JALABHAVAN, approx 100 mtr to Bannerghatta Main Road. Genuine Buyers Call: Muralidhar-9741929567

BANNERAGATTA: NISARGA LAYOUT 2100 SqFt EF 5000/-. Nandanavan 20x30, NEC 50x80 WF A-Katha 4000/- 9449655947

Jakkur

PRIME RESIDENTIAL Corner Plot for Sale, 4,400sqft north/ west, at Jakkur, Telecom Layout. Call: 9019144869.

Kengeri

SALE NAGADEVANAHALLI near Shirke Apartment 2500sqft Commercial property facing 90ft Ring road, clear titles. Owner 9900276199.

SUNCITY PROPERTY 40X60 West Rs.8500 Sft BALAJI LAYOUT:Vishweshwaraiah 1st BLOCK 55X40 East Rs.9500 sft Contact: 9448793428

Koramangala

SALE SITE 60x115 Kormangala 1st Block West Facing on 40feet Road Excellent Loction Ct: 9844134068 8073859758

Kanakapura Road

NARAYAN NAGAR 30x40, 40x60 and 1700 Sqft. Available For SALE with Clear Documents. Contact: 9740148870/ 9880606768.

Kempegowda Layout

30X40 NORTH_FACING Site`for`sale Kempegowda Layout, E-Katha Site`near Kengeri`and 2`Metro Station near`Kengeri and`ChallaGatta 1.1`km, Only Genuine`buyers. 7338050412

BDA SITE for SALE

50×80 Commercial Site 80 feet Road attached & 30×40 Residential Site 30 feet Road attached @ Nadaprabhu Kempegowda Layout in Kommagatta 9000/ sqft fixed. Call: 9900040218

NADAPRABHU KEMPEGOWDA Layout 2nd Block I Sector 30x40 NF Near 300ft Road Good Location: 6360050356

Nagarabhavi

SITE SALE 30X50 West South Corner BDA Nagarbhavi Rajajinagar Housing Co Operative Society, Near BDA Complex. Call: 8105688602.

NAGARBHAVI 40X61 Site for sale South facing NGEF Layout Nagarbhavi (BDA) Call 8660065216

30X29 KEMPEGOWDA Layout M' Sector East Facing. Nagarbhavi 30x40 BDA D' Group West Facing: 9980409820

Nelamangala

SITE FOR SALE 30x50 WEST FACING, NELMANGALA near RAILWAY STATION, "CMC" KATHA. Contact:9900265678

NELMANGALA BMRDA A Katha South West Corner Site 33.5.X50 (60ft, 30ft Road) Near NH-4: 8310681025

Outer Ring Road

ORR(MAGADI RD-TUMKUR Rd) facing corner commercial site 2,800 Sqft near Pipeline/Chowdeshwarinagar Rs. 22,000 call: 9980555558

Rajajinagar

RAJAJINAGAR 1ST Block Vidyavardhaka School Near Metro Station 25x45 North Facing Contact: 9980501366

Rajarajeshwari Nagar

RAJARAJESHWARINAGAR IDEAL Homes 73x97 BEML, 30x40, 40x60 Houses, Banashankari VI 30x40,40x60, 50x80, 20x30 Houses. Karishma Hills 80x120 North facing: 9448483699

Sarjapur Road

COMMERCIAL BDA Site For Sale on HARLUR Road, Sarjapur Road Price 15000/- Sft. Contact: 9980577227

Vijayanagar

SITE SALE 1600, 23.5x40, South Face, Magadi Road Chord Road, 23rd main, Vijayanagar. Contact: 9341666625.

Vishweshwariah Layout

"VISHVESWARAIAH LAYOUT 6th-Block KLE.College 40x60 Suoth, 40 feet Road, near Siddaganga Compound 10000/-P.Sqft Negotiable. 9448432633"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

"VISHVESWARAIAH LAYOUT 6th Block 40x60 South-Facing Site for sale Near Upcoming BDA Complex. Genuine`Buyers only Contact: 7892224597"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"50X80 EAST_FACING 60`FEET ROAD TOP LOCATION BDA SITE 6TH BLOCK VISHVESHWARAIH LAYOUT- 9845143579"

DIRECT OWNER Commercial 30x40, 40x60, 50x80 Vishweshwaraiah Layout, Kempegowda Layout Near Metro Station: 9620696913/9880781399

VISHWESHWARAIAH LAYOUT 9th 50X60 NW Site. 2145 Commercial 60ft RTO Road Rs. 24000/- Sqft: 9845793121

Mysore

SALE MUDA site measuring (1) 2400 sqft North Facing, (2) 2400 sqft East facing. Only serious buyers contact 8762018445

House

Banashankari

20X30 FURNISHED 3 BHK newly constructed triplex house ready to occupy for sale at BDA Banashankari 6th phase. 4th block, ground floor parking, three floor, terrace cost Rs.1.40 Cr. Contact owner Ramesh 9341250356

Basavanagudi

SALE 30X50 East Facing SITE, House with Rental income nearby N.R.colony Rs. 23000/= Sft. 9886044313

Basaweshwaranagar

3000 SQFT BUILDING SALE BBMP NEW EASTHI KHATHA VACANT POSITION READY REGISTRATION 2 CRORES 9035883017

J P Nagar

SALE 40X60 JPNagar 2nd Phase With 2unit House Ground Floor 3BHK and 1st Floor 3BHK Ct: 9844134068 8073859758

Padmanabha Nagar

SITE FOR SALE 1,666 sqft. R.K. Layout, Near Hillside Hospital, BDA 'A' Katha, 1 Lac Rental income G+2, 3 shops Rs. 20,000 /sqft. Facing: East, South, West Corner Site. JAGADISH 9513557466

NEAR KIDNEY foundation, 2 unit House, West, 1370 sft. (220 sft. Extra site) 3,50,00,000/- -9845144365

Shivajinagar And Around

800 SQFT DUPLEX HOUSE SALE VACANT POSITION LOCATED GANGENAHALLI WITH EASTHI KHATHA 56 LAKHS 9035883017

Vidyaranyapura

IMMEDIATE REGISTRATION: 60'x40' BEL 2nd Block 4 BHK Duplex House S/F Semi Furnished- 15500/- sq.ft: 9844264852

Malagala

MALAGALA, NAGARBHAVIBUILDING For Sale 15x40 - G+3 & Bachelor room on Terrace North facing East Entrance with Vasthu - 2 BHK in each floor 10 year old before Ring Road near Arwin School - BBMP "B" & E Khatha - Rs.1.15 Cr / Owner - M.N.Manjunatha Mobile No.9900058030

Agricultural Land

Chikkaballapura

1 ACER 8 GUNTA CORNER Land For Sale, 3km From Chikkaballapur District Manchenahalli Taluk. Contact: 9844603127

Davangere

HARIHARA, BANNIKODU Village 4-05 ACRES and 0-27 GUNTAS Agricultural Lands for Sale, Contact 7795494932

Commercial Land

Mysore

COMMERCIAL LAND FOR SALE
52,272 sqft / 1.08 Acres
Rs.1300/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property HD Kote Main Road Mysore.
Contact: GANISHKA PROPERTIES 97397 03467 Buy and sell

APARTMENT INVESTORS Required for Land Lord intending tobuild classy Apartments, Commercial Spaces and Star Hotel on Mysore Express Waynear to Mysore on a Joint Venture Basis. Very high Return on Investmentoffered. Contact Owner 9741019028

2 ACRES Commercial land available for JV. Suitable for Apartment and 4 Star Hotel plus Office Spaces. On Mysore Express Highway near Mysore Contact Owner 9741019028

Commerical

HSR Layout

HSR 1ST Sector Sale Semi-Commercial 40x60 North Facing 4Lakhs Rent Getting @ 10.5Cr Negotiable Shivu: 9880004149

Flat

Jakkur

SALE 3 BHK Semi Furnished 1536 Sft GF Flat NR WindGates Near BARATIYA CITY & MANYATA Tech Parks: 9008943416

Kanakapura Road

SALE OF_FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Residential/ Commercial

Devanahalli

NANDIHILLS BENGALURUNORTH 19602 Sqft converted eKhata gated 15furnished rooms rental income 6L Sale 10Cr Ph:9900106706

Villas/Bunglows

Devanahalli

DEVANAHALLI DODDABALLAPURA main road VILLAS FOR SALE in Gated Community with ISKON TEMPLE near TOTAL ENVIRONMENT 9600008771

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

OLD MADRAS Road, Opposite RMZ Infinity, 500 Mtr from Byapanahalli Metro-Station, 1700sft Office Space. Rent-9901255400

14000 K sq.ft. basement plus three floors commercial building is available for rent jayanagar 7 th block suitable for office tutorials software or diagnostic center contact 9845010485

Industrial And Factory

AVAILABLE FOR rent. Built to suit Warehouse in 2acres site in Aerospace Industrial park near Devanahalli Airport. Arun 9945699789.

REAL ESTATE BUYING

Industrial & Factory

General

REPUTED COMPANY seeking warehouse space in Bangalore:- Space: 20,000 to 2,00,000sqft- Location: in and around Bangalore If you're a property owner or broker with suitable warehouse space. Call: 9739990666, 7760635050

Sites

Banashankari

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Sattlement Immediately Contact: 98455-55666

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Nagarabhavi

WANTED HOUSE,SITE Flat Vishveshwaraiah, Kempegowda Layout Nagarbhavi, Mallathahallli 20x30,30x40,40x60. ABHILASHA CONSULTANT. 9480565758, 9448063270

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

JOB OPPORTUNITIES

Engg/ Production Technical

WANTED DIPLOMA/ B.E. Electrical Engineer Fresher or 3 Years Experience in Multistoried Building Electrification works.Contact- 9845016736 Mail: seemaele@gmail.com

Marketing & Sales

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

Multiple Vacancy

URGENT HIRING - Bangalore Engineers (Diploma/Degree) with 2-3 yrs exp in UBR (iWAN). Riggers with 1+ yrs exp (tower work). Attractive salary. Immediate joining. Email: hr@hrj.life Ph: 6238974312

WE ARE 100% GRANITE Export Oriented unit **HIRING**
Open Positions
- PRODUCT DESIGNERS - 2 Nos.
- CAD DESIGNERS - 2 Nos.
- ACCOUNTANT - 1 No.
- DIGITAL MARKETING EXECUTIVE - 1 No.
- OFFICE ASSISTANT - 1 No.

About us
We are a leading Granite mfg. & Export company, supplying monuments and slabs world-wide. Join a dynamic workplace where innovation meets tradition.

What We Offer
- Competitive Salary
- Growth Opportunities &
- Professional work environment.

Reach us at
Location: Bgl office / Remote. mail: info@sbstones.com
Call: 80157 55877

General

WANTED
EXPERIENCED COUNTER SALESMAN / SALES WOMEN
SUDARSHAN JEWELLERS
Chickpete, Bengaluru.
9986311133
9632312413

Teachers/ Professors

MATHS, SCIENCE TEACHERS with cbse experience for Top CBSE school in Bangalore. Further, looking for YOUNG ESTATE MANAGER with two wheeler for maintenance of Building & Identification of new sites. Good salary. 9535601743, 9449835744

WANTED A trained teacher for Pre-Primary School and Computer operator at Panchasheela group of institutions Rajarajeshwari Nagar Banglore apply mail dsveeraiahmlc@gmail.com 9448091814

MATRIMONIAL

Brides Wanted

Telugu

Wanted Bride
Telugu Boy 1995 Born / MBBS / MD/ Doctor / Residing in Bangalore is looking for a suitable match
(080-69129288)

Matrimonial Bureaus

USHODHAYA MATRIMONIAL (Estd: 1998)
For Elite Profiles Both India/Abroad/ First/ Second/ Late marriages (personalised services).
9611919477
9886884291
8904264291
9741143905

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

WEEKEND CORNER ಕ್ಲಾಸಿಫೈಡ್ಸ್

UWS
Ujjval World School
ADMISSIONS OPEN
080-28454466
Affiliated to CBSE, New Delhi
Affiliation No- 831190
WWW.UJJVALWORLDSCHOOL.ORG | CONTACTUS@UJJVALWORLDSCHOOL.ORG
UJJVAL WORLD SCHOOL NEAR KADUGODI BUS STAND, WHITEFIELD POST, BANGLORE - 560066

AVAILABLE FOR RENT
5000 sqft ground floor 68 feet Road facing Restaurant/Hotel Building with sufficient front side parking available for rent on Jigani Bommasandra Link Road at Bomsandra near to Metro Station
4000 sqft Industrial Shed 30 feet roof height crane provision shed 120 KVA Power at KIADB Bommasandra on Jigani Link Road
Contact Mob: 86601 16107 / 63634 64670
E-mail: harshaprecitech@gmail.com

PUBLIC NOTICE

PUBLIC NOTICE

This is to inform the general public that my client **Mr.Ravindra.J.G S/o Gulaiah** has intented to purchase the Property morefully described in the Schedule from its lawful owner **Smt.Susheela.M.B alias Parimala D/o S.B Patil and W/o Mallikarjun.B. Beedanal,** Residing at No.202, 6th cross, Vishweshwaraiah Layout, Kamagondanahalli Bengaluru-560015 who claims to be the absolute owner of the schedule property hereunder and same is acquired through gift deed. Any person having objection for sale of the said Schedule Property or any claim or interest in the Property may lodge the same with Documentary Proof with the undersigned within **15 DAYS** from the date of Publication of this Notice. Any objection received thereafter will not be entertained and my client will proceed to Purchase the Property in accordance with law.

SCHEDULE PROPERTY

All that Piece and parcel of the Vacant Site bearing No.748, in the layout formed by Sree Gruhalakshmi Co-Operative Housing Society Ltd situated at Nallakadirenahalli, Yeshwantapura Hobli, Bangalore North Taluk now comes under limits of BBMP, WARD No.41, Nagasandra, and measuring East to West: 60 feet, North to South: 40 feet, totally measuring 2400 Sq.ft bounded on: **East by:** Site No.742, **West by:** Road, **North by:** Site No.747, **South by:** Site No.749

DHANANJAYA, Advocate
#28, Corporation Market,
6th Block, Rajajinagar,
Bangalore - 560010
Mob 9645318972 Email
dhanidj9@gmail.com
Date: 30-08-2025 Bangalore

BUSINESS

Business to Business

Construction And Maintenance

INDUSTRIAL SHED 5000sft PEB Structure,125KVA Cummins Generator, Tube ICE Plant 5ton/day for sale call 9483215391

Finance

INSTANT LOAN Avail @ 3.5% per annum Personal, Business, Education, Takeover All Type Loan Sundaram Finance. Phone:: 7678360713

AUTOMOTIVE

Four Wheelers Selling

Tata

FOR SALE Two Tata Mega XL Commercial Vehicles with covered body model both 2018 on 'as is where is condition'. Interested parties may get in touch with Mobile 9845221501, 9035441931. before Sept 07, 2025 for inspection and submission of quote.

PERSONAL

Change of Name

I, B.N. PRIYA, R/a #.2220, 24th A Cross, 4th Main, K.R. Road, Banashankari 2nd stage, Bangalore -560070 Have Changed My Name From B.N. PRIYA To PRIYA DEEPAK vide Affidavit Dated 30/08/2025 before Notary Mohammed Hussain .K Bangalore.

I, PALLAVI CHETHAN D/o Virupakshiah B. C. Residing at R10, Resonance, Good Earth Malhar Doddabele Road, Kambipura, Kumbalagodu Bangalore 560060. Declare that I have Changed my Name from PALLAVI CHETHAN (Old Name) to PALLAVI VIRUPAKSH CHETHAN Vide affidavit dated 29/08/2025 Sworn before Notary K. S. Bammappanavar Bengaluru. Henceforth I shall be known as PALLAVI VIRUPAKSH CHETHAN in all my Future documents

CHANGE OF NAME
I, **NIHARIKA CHIKKANAYAKANAHALLI YOGEESHA**, Holder of Passport X4811107, do hereby change my name to Niharika (as given name), Yogeesha (as Surname), for all purposes. I will henceforth be known in the name Niharika Yogeesha, and I also undertake to carry out this name change in all my documents.

CHANGE OF NAME
I, **TOMCY JOSEPH**, resident of Flat No. 104, VBC Paradise, Neelasandra Main Road, Behind Embassy Golf Park, Challaghatta, Bengaluru - 560037, have changed my name to **TOMCY THOMAS** vide affidavit dated 22-08-2025 before notary Nijagunaradhya T C, Bengaluru. Henceforth I shall be called as **TOMCY THOMAS** only.

Change of Name
I, **Dalal Nishant Kiritkumar,** S/o Dalal Kiritkumar, R/at C/1205, MLR Pearl, Gopalkrishna Nagar, Maruthi Layout, Kadugodi, Bangalore-560067, have changed my minor daughter name from **Rishwa to Rishwa Nishant Dalal,** vide affidavit dt: 30.08.2025 Notary Rajanna S.M, B.lore.

Lost

LOST
I, Hemanth gowda TS, S/o Sadananda Murthy have lost my 2nd PUC Transfer certificate Roll no-943089 / 2023 2nd PUC TC State. Finders please contact - **72592 35243**

PUBLIC NOTICE

SALE OF PROPERTY IN CHIKMAGALUR

Notice is hereby given to public at large that the undersigned Advocates are investigating the title of the Schedule Property, owned and possessed by **Mr HarishKumar MG, Mr Gangadhar Sudhir Vernekar, Mr Gangadhar Raghavendra Vernekar And Mr Kosa Prasanna Kumar** (hereinafter known as Owners).

The Owners have represented that they are the absolute Owners of the Schedule Properties, having unrestricted rights of alienation over the same and that the Schedule Properties are free from all encumbrances, mortgages, charges, court cases, attachments, lien, litigation and/or any family dispute and/or third party rights/claims of any nature whatsoever.

Public is notified that if any person/s, entity, company, firm or institution has or asserts any rights, title or interest by way of sale, lease, license, tenancy, mortgage, charge, lien, easement, objection, agency, license, gift, family arrangement / settlement, allotment, pending litigation, claim, demand or of whatsoever nature in or upon the Schedule Properties, the same may be brought to the notice of the undersigned in writing together with all details and documents in support of such claim by 14.8.2025 from the date of this Notice, failing which it shall be deemed that the Owner has a clear and marketable title to the Schedule Property

SCHEDULE PROPERTIES

All that piece and parcel of immovable properties described herein below are situated in Joladalu VILLAGE, Vastare Hobli, CHIKAMAGALURU TALUK, CHIKAMAGALURU DISTRICT, KARNATAKA STATE, measuring 15 acres and 1 gunta.

Survey Number	Acres	Guntas
1/1A	4	39
1/1B	3	29
3/2		30
60	1	25
68		4
70	3	17
75		17
Total	11	161
Total	**15**	**1**

Advocate : Meiyappan Mohan
Email: meiyappanmohan.legal@gmail.com
Mobile: +91-9733135027 (Shyam)
+ 91- 9994504095 (Meiyappan)

Place: Chennai
Date: 28.08.2025

DH Classifieds More value, more impact ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-* FOR 15 WORDS

www.dhclassifieds.com BOOK NOW

*Conditions apply

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ದುರಂತ: ಆಯೋಜಕರ ವಿರುದ್ಧ ಪ್ರಕರಣ

ಗಣೇಶ ವಿಸರ್ಜನೆ ವೇಳೆ ಪಟಾಕಿ ಸ್ಫೋಟದಲ್ಲಿ ಬಾಲಕ ಸಾವು ಪ್ರಕರಣ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ದೊಡ್ಡಬಳ್ಳಾಪುರ: ಮುತ್ತೂರಿನಲ್ಲಿ ಶುಕ್ರವಾರ ಸಂಜೆ ಗಣೇಶ ವಿಸರ್ಜನೆ ವೇಳೆ ನಡೆದ ಪಟಾಕಿ ದುರಂತದಲ್ಲಿ ಬಾಲಕ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮೂರ್ತಿ ಪ್ರತಿಷ್ಠಾಪಿಸಿದ್ದ ಮಾರುತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಪಟಾಕಿ ಸ್ಫೋಟದಲ್ಲಿ ಗಂಭೀರ ಗಾಯಗೊಂಡಿದ್ದ ಪೊಲೀಸ್ ಕಾನ್‌ಸ್ಟೇಬಲ್ ಜಾಕಿರ್ ಹುಸೇನ್ ಅವರ ಕೈಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಪಟಾಕಿ ಸಿಡಿದು ಅವರ ರಟ್ಟೆಯ ಮಾಂಸಖಂಡಗಳು ಕಿತ್ತುಕೊಂಡು ಹೋಗಿ, ಬರೀ ಮೂಳೆ ಉಳಿದಿತ್ತು.

ಗಂಭೀರವಾಗಿ ಗಾಯಗೊಂಡಿರುವ ಯೋಗೇಶ್ ಎಂಬಾತನಿಗೆ ಚಿಕಿತ್ಸೆ ಮುಂದುವರೆದಿದೆ. ಈತನ ದೇಹದ ಬಹುಭಾಗ ಪಟಾಕಿ ಸ್ಫೋಟದಲ್ಲಿ ಸುಟ್ಟು ಹೋಗಿದೆ. ಉಳಿದ ಐದು ಜನರ ಆರೋಗ್ಯ ಸುಧಾರಿಸಿದೆ ಎಂದು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅಮರೇಶ್‌ಗೌಡ ತಿಳಿಸಿದ್ದಾರೆ.

ಸಚಿವ ಭೇಟಿ: ಮುತ್ತೂರಿನ ಪಟಾಕಿ ಸ್ಫೋಟದ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಶನಿವಾರ ಭೇಟಿ ನೀಡಿ ಮಾಹಿತಿ ಪಡೆದರು. ಸ್ಫೋಟದಲ್ಲಿ ಗಾಯಗೊಂಡು ನಗರದ ಆದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಜಿಲ್ಲೆಯಾದ್ಯಂತ ಗಣೇಶ ಕೂರಿಸಿರುವ ಸ್ಥಳಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು ಆಯೋಜಕರಿಗೆ ಪಟಾಕಿ ಸಿಡಿಸದಂತೆ ಸೂಚನೆ ನೀಡಿದರು. ಜೊತೆಗೆ ಗಣೇಶ ವಿಸರ್ಜನೆ, ಮೆರವಣಿಗೆ, ಸಂಭ್ರಮ ಸಂದರ್ಭದಲ್ಲಿ ಸೂಕ್ತ ಬಂದೋಬಸ್ತ್ ಕಲ್ಪಿಸುವಂತೆ ಪೊಲೀಸರಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಎ.ಬಿ ಬಸವರಾಜು, ಉಪವಿಭಾಗಾಧಿಕಾರಿ ಎನ್.ದುರ್ಗಾಶ್ರೀ, ಡಿವೈಎಸ್‌ಪಿ ರವಿ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ರಾಜಣ್ಣ ಇದ್ದರು.

ಮುಖ್ಯಾಂಶಗಳು

- ಮತ್ತೊಬ್ಬ ಗಾಯಾಳು ಸ್ಥಿತಿ ಗಂಭೀರ
- ಗಾಯಗೊಂಡಿದ್ದ ಕಾನ್‌ಸ್ಟೇಬಲ್‌ಗೆ ಶಸ್ತ್ರ ಚಿಕಿತ್ಸೆ
- ಐವರ ಆರೋಗ್ಯದಲ್ಲಿ ಸುಧಾರಣೆ

ದೊಡ್ಡಬಳ್ಳಾಪುರದ ಮೂತ್ತೂರಿನಲ್ಲಿ ಗಣೇಶ ವಿಸರ್ಜನೆ ವೇಳೆ ಗಾಯಗೊಂಡಿದ್ದ ವ್ಯಕ್ತಿ ಆರೋಗ್ಯ ವಿಚಾರಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ

ಪಟಾಕಿ ಸಂಪೂರ್ಣ ನಿಷೇಧ

ದೇವನಹಳ್ಳಿ: ದೊಡ್ಡಬಳ್ಳಾಪುರದ ಮುತ್ತೂರು ಪಟಾಕಿ ಘಟನೆ ನಂತರ ಜಿಲ್ಲೆಯಲ್ಲಿ ಗಣೇಶ ಉತ್ಸವ ಹಾಗೂ ಮೂರ್ತಿ ವಿಸರ್ಜನೆ ವೇಳೆ ಪಟಾಕಿ, ಸಿಡಿಮದ್ದು ಮತ್ತು ಇತರ ಸ್ಫೋಟಕ ವಸ್ತುಗಳನ್ನು ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಎ.ಬಿ. ಬಸವರಾಜು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯಾದ್ಯಂತ ಸುಮಾರು 1,800 ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಜಾಗಗಳಲ್ಲಿ ಹಾಗೂ ಮೂರ್ತಿ ವಿಸರ್ಜನೆ ವೇಳೆ ಸಾರ್ವಜನಿಕರ ಹಿತದೃಷ್ಟಿಯಿಂದ ಪಟಾಕಿ ಸಿಡಿಸುವಂತಿಲ್ಲ ಎಂದು ತಿಳಿಸಿದ್ದಾರೆ.

ತಲೆದಿಂಬು, ಬೆಡ್ ಶೀಟ್ ನೀಡಲು ನಟ ಮನವಿ

ದರ್ಶನ್ ಸ್ಥಳಾಂತರ: ಸೆ.2ಕ್ಕೆ ಆದೇಶ

ಪ್ರಜಾವಾಣಿ ವಾರ್ತೆ



ದರ್ಶನ್

ಪವಿತ್ರಾ ಗೌಡ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಹಾಗೂ ಇತರೆ ಐವರು ಆರೋಪಿಗಳನ್ನು ಇತರೆ ಜೈಲುಗಳಿಗೆ ಸ್ಥಳಾಂತರ ಮಾಡುವ ಸಂಬಂಧ ವಿಚಾರಣೆ ನಡೆಸಿದ ಸಿಸಿಎಚ್ 64ನೇ ನ್ಯಾಯಾಲಯ ಆದೇಶವನ್ನು ಸೆಪ್ಟೆಂಬರ್ 2ಕ್ಕೆ ಕಾಯ್ದಿರಿಸಿದೆ.

ಪರಪ್ಪನ ಅಗ್ರಹಾರದಲ್ಲಿ ವಿಶೇಷ ಆತಿಥ್ಯ ಪಡೆದಿದ್ದರಿಂದ ರಾಜ್ಯದ ಬೇರೆ ಬೇರೆ ಕಾರಾಗೃಹಕ್ಕೆ ಕೊಲೆ ಆರೋಪಿಗಳನ್ನು ಈ ಹಿಂದೆ ಸ್ಥಳಾಂತರಿಸಿ, ಜೈಲಿನ ಸಿಬ್ಬಂದಿಯನ್ನು ಅಮಾನತು ಮಾಡಲಾಗಿತ್ತು. ಇದೀಗ ಮತ್ತೆ ದರ್ಶನ್, ನಾಗರಾಜ್, ಪ್ರದುಷ್, ಜಗದೀಶ್ ಹಾಗೂ ಲಕ್ಷ್ಮಣ್ ಅವರನ್ನು ಬೇರೆ ಕಾರಾಗೃಹಗಳಿಗೆ ಸ್ಥಳಾಂತರ ಮಾಡಬೇಕೆಂದು ಸರ್ಕಾರದ ಪರ ವಕೀಲರು ವಾದ ಮಂಡಿಸಿದರು.

ಇದಕ್ಕೆ ದರ್ಶನ್ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದರು. 'ಪ್ರಕರಣದ ವಿಚಾರಣೆ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಪ್ರತಿ ಬಾರಿ ವಿಚಾರಣೆಗೆ ಹಾಜರುಪಡಿಸಲು ಕಷ್ಟವಾಗಲಿದೆ. ಅಲ್ಲದೇ ದರ್ಶನ್ ಅವರ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಬಳ್ಳಾರಿಗೆ ಹೋಗಿ ಮಗನನ್ನು ನೋಡಲು ಕಷ್ಟ. ಜೊತೆಗೆ ವಕೀಲರು ಕೂಡ ಅಲ್ಲಿಗೆ ಹೋಗಲು ಕಷ್ಟವಾಗುತ್ತದೆ' ಎಂದು ಪ್ರತಿವಾದ ಮಂಡಿಸಿದ್ದರು. ಇದರ ಜೊತೆಗೆ ಜೈಲಿನಲ್ಲಿರುವ ನಟ ದರ್ಶನ್‌ಗೆ ಬೆಡ್ ಶೀಟ್, ತಲೆದಿಂಬು ನೀಡಬೇಕೆಂದು ಮನವಿ ಮಾಡಿದರು.

ಜಾಮೀನಿಗೆ ಪವಿತ್ರಾಗೌಡ ಮನವಿ: ಕೊಲೆ ಪ್ರಕರಣದಲ್ಲಿ ಮೊದಲ ಆರೋಪಿ ಪವಿತ್ರಾಗೌಡ ಪರ ವಾದ ಮಂಡಿಸಿದ ಹಿರಿಯ ವಕೀಲ ಬಾಲನ್, 'ಪ್ರಾಸಿಕ್ಯೂಷನ್ ಸಿಆರ್ ಪಿಸಿ ಅಡಿ ಚಾರ್ಜ್ ಶೀಟ್ ಸಲ್ಲಿಕೆ ಮಾಡಿದೆ. ಭಾರತೀಯ ನಾಗರಿಕ ಸುರಕ್ಷ ಸಂಹಿತೆ (ಬಿಎನ್ ಎಸ್ ಎಸ್) ಅಡಿ ಚಾರ್ಜ್ ಶೀಟ್ ಸಲ್ಲಿಕೆ ಮಾಡಬೇಕಿತ್ತು. ಪ್ರಕರಣದ ಬಗ್ಗೆ ಕಳೆದ ವರ್ಷ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಐಪಿಸಿ ಅಡಿ ಸೆಕ್ಷನ್ ಗಳನ್ನು ದಾಖಲಿಸಿ ಚಾರ್ಜ್ ಶೀಟ್ ಅನ್ನು ಸಿಆರ್ ಪಿಸಿ ಅಡಿ ಸಲ್ಲಿಕೆ ಮಾಡಿದ್ದರು. ಸಿಆರ್ ಪಿಸಿ ಇದೀಗ ಅಮಾನ್ಯವಾಗಿದೆ' ಎಂದು ಹೇಳಿದರು.

ಬಿಎನ್‌ಎಸ್‌ಎಸ್ ಬಂದ ಬಳಿಕ ಹಳೆ ಸೆಕ್ಷನ್ ಗಳಿಲ್ಲ. ಪಂಜಾಬ್, ಹರಿಯಾಣ ಹೈಕೋರ್ಟ್ ನೀಡಿದ್ದ ತೀರ್ಪು ಉಲ್ಲೇಖಿಸಿ ವಾದ ಮಂಡಿಸಿದರು. 'ಜಾಮೀನು ಪಡೆಯಲು ನನ್ನ ಕಕ್ಷಿದಾರರು ಅರ್ಹರು. ಹಾಗಾಗಿ, ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು. ಎರಡು ಕಡೆ ವಾದ -ಪ್ರತಿ ವಾದ ಆಲಿಸಿದ ನ್ಯಾಯಾಲಯ ಸೆಪ್ಟೆಂಬರ್ 2ಕ್ಕೆ ಆದೇಶವನ್ನು ಕಾಯ್ದಿರಿಸಿದೆ.

'ಉತ್ತಮ ಬಾಂಧವ್ಯ ಹೊಂದಿದ್ದ ಗಾಂಧಿ, ನೇತಾಜಿ'

ಸುಭಾಷ್ ಚಂದ್ರ ಬೋಸ್ ಸಂಶೋಧನಾ ಕೇಂದ್ರದ ನಿರ್ದೇಶಕ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದು ಪ್ರಥಮ ಬಾರಿಗೆ ಸಂಬೋಧಿಸಿದ್ದೆ ಸುಭಾಷ್ ಚಂದ್ರ ಬೋಸ್. ಆದರೆ, ರಾಜಕೀಯ ದುರುದ್ದೇಶದಿಂದ ಅವರಿಬ್ಬರ ಸಮೀಕರಣದ ಬಗ್ಗೆ ತಪ್ಪಾಗಿ ಬಿಂಬಿಸಲಾಗುತ್ತಿದೆ' ಎಂದು ಕೋಲ್ಕತ್ತಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ. ಸುಮಂತ್ರ ಬೋಸ್ ಅಭಿಪ್ರಾಯಪಟ್ಟರು.

ನೇತಾಜಿ ಸುಭಾಷ್ ಚಂದ್ರ ಬೋಸ್ ಟ್ರಸ್ಟ್, ಸನ್‌ಸ್ಟಾರ್ ಪಬ್ಲಿಷರ್ಸ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೆ.ಇ. ರಾಧಾಕೃಷ್ಣ ಅವರು ಅನುವಾದಿಸಿರುವ ನೇತಾಜಿ ಸುಭಾಷ್ ಚಂದ್ರ ಬೋಸರ 'ಒಂದು ಅಪೂರ್ಣ ಆತ್ಮಕಥೆ', 'ಭಾರತೀಯ ಹೋರಾಟ', 'ಅಸಾಮಾನ್ಯ ದಿನಚರಿ' ಪುಸ್ತಕಗಳು ಜನಾರ್ಪಣೆಯಾದವು.

ಈ ವೇಳೆ ಮಾತನಾಡಿದ ಸುಭಾಷ್ ಚಂದ್ರ ಬೋಸ್ ಅವರ ಸಹೋದರ ಶರತ್‌ಚಂದ್ರ ಬೋಸ್ ಅವರ ಮೊಮ್ಮಗನೂ ಆಗಿರುವ ಸುಮಂತ್ರ ಬೋಸ್, 'ನೇತಾಜಿ ಸ್ವಾತಂತ್ರ್ಯ ಚಳವಳಿಯ ಅತ್ಯಂತ ದೂರದೃಷ್ಟಿಯ ನಾಯಕರಲ್ಲಿ ಒಬ್ಬರಾಗಿದ್ದರು. ಸ್ವತಂತ್ರ ಭಾರತ ಹೇಗಿರಬೇಕು ಎಂಬುದರ ಕುರಿತು ಅವರಿಗೆ ಸ್ಪಷ್ಟವಾದ ವಿಚಾರಗಳಿದ್ದವು. ಗಾಂಧೀಜಿ ಮತ್ತು ನೇತಾಜಿ ಅವರ ಹೋರಾಟದ ಮಾರ್ಗ ಭಿನ್ನವಾಗಿದ್ದರೂ ಪರಸ್ಪರ ಗೌರವ ಹೊಂದಿದ್ದರು' ಎಂದರು.

ಗೃಹ ಸಚಿವ ಜಿ. ಪರಮೇಶ್ವರ, 'ನೇತಾಜಿ ಮತ್ತು ಗಾಂಧೀಜಿ ಇಬ್ಬರದ್ದೂ ಒಂದೇ ಧ್ಯೇಯವಾಗಿತ್ತು. ಆದರೆ, ಮಾರ್ಗಗಳು ಬೇರೆಯಾಗಿದ್ದವು. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಅವರದ್ದು ಸಮಾಧಾನದ ಮಾರ್ಗವಾದರೆ, ನೇತಾಜಿ ಅವರದ್ದು ಅವಸರದ ದಾರಿಯಾಗಿತ್ತು. ಸ್ವಾತಂತ್ರ್ಯ ಹೋರಾಟವನ್ನು ಕೇವಲ ಚರಿತ್ರೆ ಎಂದು ನೋಡದೆ, ಸ್ವಾತಂತ್ರ್ಯವನ್ನು ಹೇಗೆ ಕಾಪಾಡಿಕೊಳ್ಳುತ್ತಿದ್ದೇವೆ ಎಂಬ ಬಗ್ಗೆಯೂ ಯೋಚಿಸುವ ಅಗತ್ಯವಿದೆ' ಎಂದು ಹೇಳಿದರು.

ಪುಸ್ತಕಗಳ ಬಗ್ಗೆ ಮಾತನಾಡಿದ ಲೇಖಕ ಕೆ.ಈ. ರಾಧಾಕೃಷ್ಣ, 'ಗಾಂಧೀಜಿ ಅವರನ್ನು ನೇತಾಜಿ ಅವರು ಸೂಕ್ತವಾಗಿ ಅರ್ಥ ಮಾಡಿಕೊಂಡಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಮತ್ತು ನೇತಾಜಿ ಅಗ್ರಗಣ್ಯರು' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಿ. ಪರಮೇಶ್ವರ ಅವರು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಸುಮಂತ್ರ ಬೋಸ್, ಕೆ.ಈ. ರಾಧಾಕೃಷ್ಣ, ಜಿ.ಆರ್. ಶಿವಶಂಕರ್ ಮತ್ತು ಪ್ರಕಾಶಕ ಡಿ.ಎನ್. ಶೇಖರ ರೆಡ್ಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ದೇಶಪ್ರೇಮ ದಿನವನ್ನಾಗಿ ಆಚರಿಸಿ'

'ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನವನ್ನು 'ದೇಶಪ್ರೇಮ ದಿನ' ಎಂದು ರಾಜ್ಯ ಸರ್ಕಾರ ಘೋಷಿಸಬೇಕು. ಶಾಲಾ-ಕಾಲೇಜು ಪಠ್ಯದಲ್ಲಿ ನೇತಾಜಿ ಕುರಿತು ಪಾಠಗಳನ್ನು ಅಳವಡಿಸಬೇಕು. ಇಂಗ್ಲಿಷ್‌ನಲ್ಲಿರುವ ನೇತಾಜಿ ಕುರಿತ 14 ಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸಬೇಕು. ಇದಕ್ಕೆ ಸರ್ಕಾರ ನೆರವಾಗಬೇಕು. ನೇತಾಜಿ ಸುಭಾಷ್ ಚಂದ್ರ ಬೋಸ್ ಟ್ರಸ್ಟ್ ಕಾರ್ಯ ಚಟುವಟಿಕೆಗಳಿಗೆ ರಾಜ್ಯ ಸರ್ಕಾರ ಬೆಂಬಲ ಮತ್ತು ಆರ್ಥಿಕ ಸಹಕಾರ ಒದಗಿಸಬೇಕು' ಎಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಟ್ರಸ್ಟ್ ಅಧ್ಯಕ್ಷ ಎಂ. ರಾಜ್‌ಕುಮಾರ್ ಅವರು ಜಿ.ಪರಮೇಶ್ವರ ಅವರಿಗೆ ಮನವಿ ಮಾಡಿದರು.

'ಬಿಎಲ್‌ಡಿಇ: ದಾಸ ಸಾಹಿತ್ಯದ 65 ಸಂಪುಟ ಶೀಘ್ರ ಪ್ರಕಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀಸಾಮಾನ್ಯರ ನುಡಿಗಟ್ಟಿನಲ್ಲಿ ಭಕ್ತಿ ಮತ್ತು ಭಗವಂತನ ಪಾರಮ್ಯವನ್ನು ಸಾರಿದ್ದು ದಾಸಸಾಹಿತ್ಯದ ಹಿರಿಮೆ. ಇಂತಹ ದಾಸಸಾಹಿತ್ಯದ 65 ಸಂಪುಟಗಳನ್ನು ಬಿಎಲ್‌ಡಿಇ ಶಿಕ್ಷಣ ಸಂಸ್ಥೆಯ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಮೂಲಕ ಪ್ರಕಟಿಸಲಾಗುತ್ತಿದೆ. ಈಗಾಗಲೇ ಅರವತ್ತಕ್ಕೂ ಹೆಚ್ಚು ಸಂಪುಟಗಳು ಬಿಡುಗಡೆಗೆ ಸಿದ್ಧವಾಗಿವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಕಾಗಿನೆಲೆ ಮಹಾಸಂಸ್ಥಾನ ಪೀಠವು ಕೇತೋಹಳ್ಳಿಯಲ್ಲಿ ಶನಿವಾರ ಏರ್ಪಡಿಸಿದ್ದ ಕನಕದಾಸ ಸಾಹಿತ್ಯದ ವೈಚಾರಿಕ ಅನುಸಂಧಾನದ 'ತಲ್ಲಣಿಸದಿರು ಮನವೇ' ವಿಚಾರ ಸಂಕಿರಣಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

'ಕನಕದಾಸರು ವೈಚಾರಿಕವಾಗಿ ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ, ವ್ಯಾಸರಾಯರ ಶಿಷ್ಯರಾಗಿ ಸಾಧನೆ ಮಾಡಿದವರು. ಭಾಷೆಯ ಬಳಕೆಯಲ್ಲಿ ದಾಸಸಾಹಿತ್ಯವು ಹನ್ನೆರಡನೇ ಶತಮಾನದ ವಚನ ಸಾಹಿತ್ಯವನ್ನು ಮೇಲ್ಪಂಕ್ತಿಯಾಗಿ ಇಟ್ಟುಕೊಂಡಿದೆ. ಇದರಿಂದಾಗಿ ಸಾಮಾಜಿಕ ಪರಿವರ್ತನೆ ಸಾಧ್ಯವಾಯಿತು' ಎಂದು ಅವರು ಬಣ್ಣಿಸಿದರು.

'ಉತ್ತರ ಕರ್ನಾಟಕವು ಮೂಲತಃ ಭಕ್ತಿಕವಿಗಳ, ಸಂತರ, ಯೋಗಿಗಳ ಮತ್ತು ಅವಧೂತರ ನೆಲ. ಪಂಪ, ರನ್ನ, ಬಸವಣ್ಣ, ಶಿಶುನಾಳ ಷರೀಫ, ಸಿದ್ಧೇಶ್ವರ ಸ್ವಾಮಿಗಳು, ಬೇಂದ್ರೆ, ಕಲಬುರ್ಗಿ, ಪುರಂದರದಾಸರು ಮತ್ತು ಕನಕದಾಸರು ಹೀಗೆ ಎಲ್ಲರೂ ಉತ್ತರ ಕರ್ನಾಟಕ ಪ್ರದೇಶದವರೇ ಆಗಿದ್ದಾರೆ' ಎಂದು ಹೇಳಿದರು.

ಕಾಗಿನೆಲೆ ಪೀಠದ ನಿರಂಜನಾಪುರಿ ಸ್ವಾಮೀಜಿ, ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಹೊಸದುರ್ಗದ ಈಶ್ವರಾನಂದಪುರಿ ಸ್ವಾಮೀಜಿ, ಸಾಹಿತಿ ಚಂದ್ರಶೇಖರ ಕಂಬಾರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಚ್.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಉಪಸ್ಥಿತರಿದ್ದರು.

ಕನಕದಾಸ ಸಾಹಿತ್ಯದ ವೈಚಾರಿಕ ಅನುಸಂಧಾನದ 'ತಲ್ಲಣಿಸದಿರು ಮನವೇ' ವಿಚಾರ ಸಂಕಿರಣಕ್ಕೆ ಶನಿವಾರ ಚಾಲನೆ ನೀಡಲಾಯಿತು

'ವಂಚನೆ ಪ್ರಕರಣ: ಸಿಸಿಬಿಗೆ ವರ್ಗಾಯಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಸಚಿವ ವರ್ತೂರು ಪ್ರಕಾಶ್ ಹೆಸರಿನಲ್ಲಿ ಚಿನ್ನಾಭರಣ ಮಳಿಗೆ ಮಾಲೀಕರಿಗೆ ಶ್ವೇತಾ ಗೌಡ ವಂಚಿಸಿದ ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಸಿಬಿಗೆ ವರ್ಗಾಯಿಸಬೇಕು' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ರಾಜ್ಯ ಹರಳು ಮತ್ತು ಆಭರಣ ದೇಶಿಯ ಪರಿಷತ್ ಮನವಿ ಸಲ್ಲಿಸಿದೆ.

'ಈ ಪ್ರಕರಣದಲ್ಲಿ ಸತ್ಯಾಂಶವಿದ್ದರೂ ಸ್ಥಳೀಯ ಪೊಲೀಸರು, ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸಮರ್ಪಕವಾಗಿ ತನಿಖೆ ನಡೆಸಿಲ್ಲ. ಆರೋಪಿ ಶ್ವೇತಾ ಗೌಡ ಹೊರ ರಾಜ್ಯದ ಚಿನ್ನದ ಮಾಲೀಕರಿಗೂ ವಂಚಿಸಿರುವ ಸಾಧ್ಯತೆಗಳಿವೆ. ಜೈಪುರದಲ್ಲಿ ಆಭರಣ ವ್ಯಾಪಾರಿ ಸೋಗಿನಲ್ಲಿ ತೆರಳಿದ್ದ ಶ್ವೇತಾ, ಅಲ್ಲಿನ ಹಲವು ಮಳಿಗೆಗಳ ಮಾಲೀಕರಿಗೂ ವಂಚಿಸಿರುವ ಬಗ್ಗೆ ದೂರುಗಳಿವೆ' ಎಂದು ತಿಳಿಸಿದ್ದಾರೆ.

'ಹಾಗಾಗಿ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಹೆಚ್ಚಿನ ತನಿಖೆಗಾಗಿ ಸಿಸಿಬಿಗೆ ವರ್ಗಾಯಿಸಿ, ನ್ಯಾಯ ದೊರಕಿಸಿಕೊಡಬೇಕು' ಎಂದು ಪರಿಷತ್ ಅಧ್ಯಕ್ಷ ಡಾ.ಬಿ.ರಾಮಾಚಾರಿ ನೇತೃತ್ವದ ನಿಯೋಗ ಕಮಿಷನರ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದೆ.

ಐದು ನಗರ ಪಾಲಿಕೆಗಳಲ್ಲಿ 450 ವಾರ್ಡ್

ಪ್ರತಿಯೊಂದು ವಾರ್ಡ್‌ಗೂ ಎಂಜಿನಿಯರ್, ಕಂದಾಯ ಸಿಬ್ಬಂದಿ

• ವಾರ್ಷಿಕ ₹137 ಕೋಟಿ ಹೆಚ್ಚುವರಿ ವೆಚ್ಚ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳಲ್ಲಿ ಒಟ್ಟು 450 ವಾರ್ಡ್‌ಗಳನ್ನು ರಚಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 23 ಸಾವಿರ ಸಿಬ್ಬಂದಿಯ ಅಗತ್ಯವಿದೆ. ಪ್ರಸ್ತುತವಿರುವ ಉದ್ಯೋಗಿಗಳಿಂತ ಹೆಚ್ಚುವರಿಯಾಗಿ 4,899 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬೇಕಾಗುತ್ತದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆಯಾಗಿ, ಐದು ನಗರ ಪಾಲಿಕೆಗಳ ಅಂತಿಮ ಅಧಿಸೂಚನೆ ದಿನ ಸನ್ನಿಹಿತವಾಗುತ್ತಿದ್ದಂತೆಯೇ, ಜಿಬಿಎ ಸೇರಿದಂತೆ ನಗರ ಪಾಲಿಕೆಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್), ಬೆಂಗಳೂರು ಮೆಟ್ರೊ ಪಾಲಿಟನ್ ಟಾಸ್ಕ್ ಫೋರ್ಸ್‌ಗೆ (ಬಿಎಂಟಿಎಫ್) ಅಗತ್ಯವಿರುವ ಹುದ್ದೆಗಳ ಮಂಜೂರಿಗೆ ಸರ್ಕಾರಕ್ಕೆ ಬಿಬಿಎಂಪಿ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದಾರೆ.

ಐದು ನಗರ ಪಾಲಿಕೆಗಳಲ್ಲಿ ತಲಾ 110 ವಾರ್ಡ್‌ಗಳಂತೆ ಒಟ್ಟಾರೆ 550 ವಾರ್ಡ್‌ಗಳನ್ನು ರಚಿಸಲು ಈ ಹಿಂದೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇದರಿಂದ ಆಡಳಿತಾತ್ಮಕವಾಗಿ ವಾರ್ಷಿಕ ₹298 ಕೋಟಿ ಹೆಚ್ಚುವರಿಯಾಗಿ ವೆಚ್ಚವಾಗುತ್ತಿತ್ತು. ಆದ್ದರಿಂದ, ಪುನರ್ ವಿಮರ್ಶಿತ ಪ್ರಸ್ತಾವವನ್ನು ಸಲ್ಲಿಸಲಾಗಿದ್ದು, ಒಟ್ಟಾರೆ 100 ವಾರ್ಡ್‌ಗಳನ್ನು ಕಡಿತಗೊಳಿಸಲಾಗಿದೆ. ಇದರಿಂದ ಆಡಳಿತಾತ್ಮಕವಾಗಿ ವಾರ್ಷಿಕ ₹137 ಕೋಟಿ ಹೆಚ್ಚುವರಿ ವೆಚ್ಚವಾಗಲಿದೆ. ₹161 ಕೋಟಿ ಉಳಿತಾಯವಾಗುತ್ತಿದೆ. 7ನೇ ವೇತನ ಆಯೋಗದಂತೆ ಸಿಬ್ಬಂದಿ ವೇತನವನ್ನು ಪರಿಗಣಿಸಲಾಗಿದೆ ಎಂದು ತಿಳಿಸಲಾಗಿದೆ.

ನೈರ್ಮಲ್ಯ ವಿಭಾಗದಲ್ಲಿ ಅತಿಹೆಚ್ಚು (16,807) ಸಿಬ್ಬಂದಿ ಅಗತ್ಯವಿದೆ. ವ್ಯವಸ್ಥಾಪಕರು, ಎಫ್‌ಡಿಎ, ಸ್ಟೆನೊಗ್ರಾಫರ್, ಎಸ್‌ಡಿಎ, ಗ್ರೂಪ್ ಡಿ, ಚಾಲಕ, ಟೈಪಿಸ್ಟ್, ದಫೇದಾರ್ ಹುದ್ದೆಗಳನ್ನು 'ಮಿನಿಸ್ಟೀರಿಯಲ್ ಸ್ಟಾಫ್' ಎಂದು ಗುರುತಿಸಲಾಗಿದ್ದು, 1,580 ಹುದ್ದೆಗಳನ್ನು ಸೃಜಿಸಲಾಗಿದೆ. ಕಂದಾಯ, ಸಾರ್ವಜನಿಕ ಆರೋಗ್ಯ, ಎಂಜಿನಿಯರ್ ಹುದ್ದೆಗಳು ನಂತರದ ಸ್ಥಾನದಲ್ಲಿವೆ.

ಜಿಬಿಎ, ಬಿಎಸ್‌ಡಬ್ಲ್ಯುಎಂಎಲ್ ಹಾಗೂ ಐದು ನಗರ ಪಾಲಿಕೆಗಳಲ್ಲಿ ತಲಾ ಎರಡು ಮುಖ್ಯ ಎಂಜಿನಿಯರ್ ಹುದ್ದೆ ಸೃಜಿಸಲಾಗಿದೆ. ಬಿ–ಸ್ಮೈಲ್‌ನಲ್ಲಿ ಐವರು ಮುಖ್ಯ ಎಂಜಿನಿಯರ್, ಐವರು ಅಧೀಕ್ಷಕ ಎಂಜಿನಿಯರ್‌ಗಳಿರಲಿದ್ದಾರೆ. ನಗರ ಪಾಲಿಕೆಗಳಲ್ಲಿ ತಲಾ ಇಬ್ಬರು ಅಧೀಕ್ಷಕ ಎಂಜಿನಿಯರ್, ತಲಾ ಹತ್ತು ಕಾರ್ಯಪಾಲಕ ಎಂಜಿನಿಯರ್, ತಲಾ 40 ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಲಾ 90 ಸಹಾಯಕ ಎಂಜಿನಿಯರ್, ತಲಾ 30 ಕಿರಿಯ ಎಂಜಿನಿಯರ್‌ಗಳ ಹುದ್ದೆಗಳಿದ್ದು, ಒಟ್ಟಾರೆ 979 ಎಂಜಿನಿಯರ್‌ಗಳ ಹುದ್ದೆಯನ್ನು ಪ್ರಸ್ತಾವದಲ್ಲಿ ಸೃಜಿಸಲಾಗಿದೆ. ಈಗ 540 ಎಂಜಿನಿಯರ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

23,689 ಒಟ್ಟು ಅಗತ್ಯವಿರುವ ಸಿಬ್ಬಂದಿ

22,411 ಪ್ರಸ್ತುತ ಮಂಜೂರು ಹುದ್ದೆಗಳು

18,790 ಪ್ರಸ್ತುತ ಕಾರ್ಯನಿರತ ಸಿಬ್ಬಂದಿ

1,278 ಕಡಿಮೆಯಾಗುವ ಹುದ್ದೆಗಳು



ಎಲ್ಲಿಗೆ ಎಷ್ಟು ಹುದ್ದೆಗಳು?

ಜಿಬಿಎ	314
ಬಿ–ಸ್ಮೈಲ್	107
ಉತ್ತರ ನಗರ ಪಾಲಿಕೆ	4,315
ದಕ್ಷಿಣ ನಗರ ಪಾಲಿಕೆ	4,215
ಪೂರ್ವ ನಗರ ಪಾಲಿಕೆ	2,163
ಪಶ್ಚಿಮ ನಗರ ಪಾಲಿಕೆ	6,024
ಕೇಂದ್ರ ನಗರ ಪಾಲಿಕೆ	3,678
ವಲಯ/ಫೀಲ್ಡ್ ಸಿಬ್ಬಂದಿ	2,784
ಬಿಎಸ್‌ಡಬ್ಲ್ಯುಎಂಎಲ್	89
ಮಿನಿಸ್ಟೀರಿಯಲ್ ಸ್ಟಾಫ್	1,851
ಬಿಎಂಟಿಎಫ್	27

450 ಒಟ್ಟು ವಾರ್ಡ್‌ಗಳು | **150** ಒಟ್ಟು ಉಪ ವಿಭಾಗಗಳು | **50** ಒಟ್ಟು ವಿಭಾಗಗಳು

450 ವಲಯ/ ಫೀಲ್ಡ್ ಮಟ್ಟದಲ್ಲಿ ಸಹಾಯಕ/ ಕಿರಿಯ ಎಂಜಿನಿಯರ್‌ಗಳು | **450** ಕಂದಾಯ ಪರಿವೀಕ್ಷಕರು, 900 ತೆರಿಗೆ ಸಹಾಯಕರು | **450** ನೈರ್ಮಲ್ಯ ವಿಭಾಗಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು

ಒಟ್ಟು 19 ವಿಭಾಗಗಳು: ಆಡಳಿತ, ಪಶು ಸಂಗೋಪನೆ, ಕ್ಲಿನಿಕಲ್ ಆರೋಗ್ಯ, ಕೌನ್ಸಿಲ್, ಶಿಕ್ಷಣ, ಎಂಜಿನಿಯರಿಂಗ್, ಹಣಕಾಸು ಮತ್ತು ಲೆಕ್ಕ, ಅರಣ್ಯ, ತೋಟಗಾರಿಕೆ, ಮಾಹಿತಿ ತಂತ್ರಜ್ಞಾನ, ಕಾನೂನು ಘಟಕ, ಸಾರ್ವಜನಿಕ ಸಂಪರ್ಕಾಧಿಕಾರಿ, ಸಾರ್ವಜನಿಕ ಆರೋಗ್ಯ, ಕಂದಾಯ– ಆಸ್ತಿ– ಜಾಹೀರಾತು– ಮಾರುಕಟ್ಟೆ; ನೈರ್ಮಲ್ಯ, ಟಿಡಿಆರ್, ನಗರ ಯೋಜನೆ, ಕಲ್ಯಾಣ.

ಸುದ್ದಿ 2 ನಿಮಿಷ

ಕಾಲ್ತುಳಿತ: ಆರೋಪಿಗಳ ಪ್ರವಾಸಕ್ಕೆ ಹೈಕೋರ್ಟ್ ಅನುಮತಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಯಲ್ಲಿ ಆರೋಪಿಗಳಾಗಿರುವ ರಾಯಲ್ ಚಾಲೆಂಜರ್ಸ್ ಫ್ರಾಂಚೈಸಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಮತ್ತು ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಸುನೀಲ್ ಮ್ಯಾಥ್ಯೂ ಮತ್ತಿತರರು, ಕೆಲಸದ ನಿಮಿತ್ತ ಪ್ರವಾಸ ಕೈಗೊಳ್ಳಲು ಹೈಕೋರ್ಟ್ ಅನುಮತಿ ನೀಡಿದೆ.

ಈ ಸಂಬಂಧ ನಿಖಿಲ್ ಸೋಸಲೆ ಮತ್ತು ಸುನಿಲ್ ಮ್ಯಾಥ್ಯೂ ಸಲ್ಲಿಸಿದ್ದ ಮಧ್ಯಂತರ ಅರ್ಜಿಗಳನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ಮನವಿ ಆಲಿಸಿದ ನ್ಯಾಯಪೀಠ, 'ಪ್ರವಾಸ ಕೈಗೊಳ್ಳುವುದಕ್ಕೂ ಮುನ್ನ ಮತ್ತು ವಾಪಸಾದ ಬಳಿಕ ತನಿಖಾಧಿಕಾರಿಗೆ ಮಾಹಿತಿ ಒದಗಿಸಬೇಕು' ಎಂದು ನಿರ್ದೇಶಿಸಿ ಪ್ರವಾಸಕ್ಕೆ ಅನುಮತಿ ನೀಡಿ ಆದೇಶಿಸಿತು.

'ಸೆಪ್ಟೆಂಬರ್ 5ರಿಂದ ಸೆ.9ರವರೆಗೆ ಮುಂಬೈಗೆ ತೆರಳಲು ಅನುಮತಿ ನೀಡಬೇಕು' ಎಂದು ನಿಖಿಲ್ ಸೋಸಲೆ ಕೋರಿದ್ದರು. ಈ ಹಿನ್ನೆಲೆಯಲ್ಲಿ ನ್ಯಾಯಪೀಠ ನಿಖಿಲ್ ಸೋಸಲೆ, ಸುನಿಲ್ ಮ್ಯಾಥ್ಯೂ, ಕಿರಣ್ ಕುಮಾರ್ ಮತ್ತು ಶಮಂತ್ ಮಾವಿನಕೆರೆ ಅವರಿಗೆ ತಾತ್ಕಾಲಿಕ ಪ್ರವಾಸಕ್ಕೆ ಅನುಮತಿ ಕಲ್ಪಿಸಿದೆ. ಆರೋಪಿಗಳ ಪರ ಹೈಕೋರ್ಟ್ ವಕೀಲರಾದ ರಘುರಾಮ್ ಕದಂಬಿ ಮತ್ತು ಸೂರಜ್ ಸಂಪತ್ ಹಾಗೂ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಟಿ.ವೆಂಕಟೇಶ್ ಹಾಜರಿದ್ದರು.

200 ಬಿಡಿಎ ಫ್ಲ್ಯಾಟ್ ಮಾರಾಟ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶನಿವಾರ ಕಣಿಮಿಣಿಕೆ ವಸತಿ ಸಮುಚ್ಚಯದಲ್ಲಿ ಆಯೋಜಿಸಿದ್ದ ಫ್ಲ್ಯಾಟ್ ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಮೇಳದಲ್ಲಿ ಸುಮಾರು 750ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು, 200 ಫ್ಲ್ಯಾಟ್ ಖರೀದಿಸಿದ್ದಾರೆ. ಪ್ರಾರಂಭಿಕ ಠೇವಣಿ ಪಾವತಿಸಿದ 115 ಮಂದಿಗೆ ಸ್ಥಳದಲ್ಲಿಯೇ ಹಂಚಿಕೆ ಪತ್ರ ವಿತರಿಸಲಾಯಿತು. ಕಣಿಮಿಣಿಕೆಯ ಎಂಬತ್ತು 2 ಬಿ.ಎಚ್.ಕೆ., ಒಂಬತ್ತು 3 ಬಿ.ಎಚ್.ಕೆ. ಹಾಗೂ ಕೊಮ್ಮಘಟ್ಟದಲ್ಲಿ ಹದಿನಾಲ್ಕು 3 ಬಿ.ಎಚ್.ಕೆ., 4 ಎರಡು ಬಿ.ಎಚ್.ಕೆ ಮತ್ತು ಹುಣ್ಣಿಗೆರೆಯಲ್ಲಿ 8 ವಿಲ್ಲಾಗಳು ಮಾರಾಟವಾಗಿವೆ. ಕಣಿಮಿಣಿಕೆಯಲ್ಲಿರುವ 672 ಎರಡು ಬಿ.ಎಚ್.ಕೆ ಫ್ಲ್ಯಾಟ್‌ಗಳೂ ಮಾರಾಟವಾಗಿರುವುದು ವಿಶೇಷ. ಅಲ್ಲದೇ 3 ಬಿ.ಎಚ್.ಕೆ 1,500 ಫ್ಲ್ಯಾಟ್‌ಗಳ ಪೈಕಿ 1,100 ಫ್ಲ್ಯಾಟ್‌ಗಳು ಮಾರಾಟವಾಗಿವೆ.

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ ಮತ್ತು ಎಚ್.ಡಿ.ಎಫ್.ಸಿ. ಬ್ಯಾಂಕ್‌ಗಳ ಪ್ರತಿನಿಧಿಗಳು ಸ್ಥಳದಲ್ಲಿ ಹಾಜರಿದ್ದು, ಸಾಲ ಸೌಲಭ್ಯ ಒದಗಿಸಿದರು.

ಪ್ರಾಧಿಕಾರದ ಆರ್ಥಿಕ ಸದಸ್ಯ ಎ. ಲೋಕೇಶ್, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಎಂ.ಎಸ್. ಜ್ಞಾನೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಇಂಬವಳ್ಳಿ, ಕುಮಾರ್, ಭುವನೇಶ್ವರ್ ಭಾಗವಹಿಸಿದ್ದರು.

ಚಪ್ಪಲಿಯಲ್ಲಿದ್ದ ಹಾವು ಕಚ್ಚಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟದಲ್ಲಿ ಶೂ ಮಾದರಿಯ ಚಪ್ಪಲಿಯಲ್ಲಿ ಸೇರಿಕೊಂಡಿದ್ದ ಹಾವು ಕಚ್ಚಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಮಂಜು

ಬನ್ನೇರುಘಟ್ಟದ ರಂಗನಾಥ ಬಡಾವಣೆ ನಿವಾಸಿ ಮಂಜು ಪ್ರಕಾಶ್ (41) ಮೃತರು.

ಮಂಜು ಪ್ರಕಾಶ್ ಅವರ ಕ್ರಾಕ್ಸ್ ಮಾದರಿಯ ಚಪ್ಪಲಿಯಲ್ಲಿ ಕೊಳಕು ಮಂಡಲ (ರಸೆಲ್ಸ್ ವೈಪರ್) ಹಾವು ಸೇರಿಕೊಂಡಿತ್ತು. ಇದನ್ನು ಗಮನಿಸದೆ ಚಪ್ಪಲಿ ಹಾಕಿಕೊಂಡ ಅವರ ಹೆಬ್ಬೆರಳನ್ನು ಹಾವು ಕಚ್ಚಿದೆ. ಇದು ಅವರ ಅನುಭವಕ್ಕೆ ಬಂದಿಲ್ಲ. ಮನೆಗೆ ಮರಳಿ ಮಲಗಿದಲ್ಲಿಯೇ ಅವರು ಮೃತಪಟ್ಟಿದ್ದಾರೆ. ಚಪ್ಪಲಿಯಲ್ಲಿದ್ದ ಹಾವು ಸಹ ಮೃತಪಟ್ಟಿದೆ.

'2016ರಲ್ಲಿ ನಡೆದ ಅಪಘಾತದಲ್ಲಿ ಗಾಯಗೊಂಡಿದ್ದ ಮಂಜು ಪ್ರಕಾಶ್ ಬಲಗಾಲು ಸ್ಪರ್ಶಜ್ಞಾನ ಕಳೆದುಕೊಂಡಿತ್ತು. ಇದೇ ಕಾಲಿಗೆ ಹಾವು ಕಚ್ಚಿದ್ದರಿಂದ ನೋವು ಅವರ ಗಮನಕ್ಕೆ ಬಂದಿರಲಿಲ್ಲ. ಆರೋಗ್ಯ ಸರಿ ಇಲ್ಲದ ಕಾರಣ ಅವರು ಜ್ಯೂಸ್ ತರಲು ಹೊರ ಹೋಗಿದ್ದರು. ಮನೆಗೆ ಬಂದು ಮಲಗಿದ ಅವರು ಮತ್ತೇ ಮೇಲೆ ಏಳಲಿಲ್ಲ' ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಆನೇಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಹಾವು ಕಡಿತದಿಂದ ಸಾವು ಸಂಭವಿಸಿದೆ ಎಂದು ವರದಿ ದೃಢಪಡಿಸಿದೆ. ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೇಂದ್ರ–ರಾಜ್ಯದ ಜಾತಿ ಸಮೀಕ್ಷೆ ಬೇರೆ ಬೇರೆ'

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ–2ರ ಬಗೆಗಿನ ವಿಚಾರ ಸಂಕಿರಣದಲ್ಲಿ ಎ. ನಾರಾಯಣ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಜನಗಣತಿಯೊಂದಿಗೆ ನಡೆಸಲಿರುವ ಜಾತಿಗಣತಿ ಮತ್ತು ಕರ್ನಾಟಕ ಸರ್ಕಾರ ನಡೆಸಲಿರುವ ಸಾಮಾಜಿಕ. ಶೈಕ್ಷಣಿಕ ಸಮೀಕ್ಷೆ ಎರಡೂ ಒಂದೇ ಅಲ್ಲ. ಇವುಗಳ ನಡುವೆ ಬಹಳಷ್ಟು ವ್ಯತ್ಯಾಸಗಳಿವೆ ಎಂದು ಅಂಕಣಕಾರ ಎ. ನಾರಾಯಣ ತಿಳಿಸಿದರು.

ದೇವರಾಜ ಅರಸು ಜನ್ಮ ದಿನಾಚರಣೆಯ ಪ್ರಯುಕ್ತ ಜಾಗೃತ ಕರ್ನಾಟಕ ಶನಿವಾರ ಹಮ್ಮಿಕೊಂಡಿದ್ದ 'ಕರ್ನಾಟಕ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2: ಈಡೇರಿತೇ ಸರ್ವ ಸಮುದಾಯಗಳ ನಿರೀಕ್ಷೆ?' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ನಡೆಯುವ ಸಮೀಕ್ಷೆ ಕೇವಲ ತಲೆ ಎಣಿಕೆಯಲ್ಲ. ಪ್ರತಿಯೊಬ್ಬರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಯನ್ನು ಅರಿಯುವ ಪ್ರಕ್ರಿಯೆ. ಜಾತಿ ಸಮುದಾಯಗಳ ಸ್ಥಿತಿಗತಿ ಅರಿಯವುದು ರಾಜ್ಯ ಸರ್ಕಾರದ ಜವಾಬ್ದಾರಿ. ಕೇಂದ್ರದ ಯೋಜನೆಗಳು ರಾಜ್ಯ ಸರ್ಕಾರ ಕಳುಹಿಸಿಕೊಡುವ ಜಾತಿ ವಿವರಗಳನ್ನೇ ಆಧರಿಸಿದೆ' ಎಂದು ಹೇಳಿದರು.

ದೇವರಾಜ ಅರಸು ಜನ್ಮ ದಿನಾಚರಣೆಯ ಪ್ರಯುಕ್ತ ಜಾಗೃತ ಕರ್ನಾಟಕ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಎ. ನಾರಾಯಣ, ಕೆ.ಎಂ. ರಾಮಚಂದ್ರಪ್ಪ, ಅಂಬಣ್ಣ ಆರೋಲಿಕರ, ಎಲ್.ಕೆ. ಅತೀಕ್ ಉಪಸ್ಥಿತರಿದ್ದರು

'ಮೊದಲ ಸಮೀಕ್ಷೆಗೆ ಸಂಬಂಧಿಸಿದಂತೆ ವಿವಾದ ಇರುವುದೇ ಸಂಖ್ಯೆ ಕಡಿಮೆ ತೋರಿಸಿದ್ದಾರೆ ಎಂಬುದು. ಸಮೀಕ್ಷೆ ವೈಜ್ಞಾನಿಕವಾಗಿ ನಡೆಯಬೇಕು. ಸಂಖ್ಯೆ ನಿಖರವಾಗಿರಬೇಕು. ಆದರೆ, ಸಂಖ್ಯೆಯಷ್ಟೇ ಸೌಲಭ್ಯ, ಪ್ರಾತಿನಿಧ್ಯ ಪಡೆಯುವ ಮಾನದಂಡವಲ್ಲ. ಸಾಮಾಜಿಕ ನ್ಯಾಯ ಎಂದರೆ, ಇಲ್ಲಿವರೆಗೆ ಯಾವ ಸಮುದಾಯ ಸೌಲಭ್ಯ ಪಡೆದಿದೆ, ಯಾವ ಸಮುದಾಯಕ್ಕೆ ದೊರೆತಿಲ್ಲ ಎಂದು ನೋಡಿ ಸೌಲಭ್ಯ ವಂಚಿತರಿಗೆ ಆದ್ಯತೆ ನೀಡುವುದು' ಎಂದು ತಿಳಿಸಿದರು.

'ಎಲ್ಲಿವರೆಗೆ ಸಾಮಾಜಿಕ ನ್ಯಾಯ ಜಾರಿ ಮಾಡಲು ಅದರ ವಿರುದ್ಧ ಇರುವವರ ಬೆಂಬಲ ಪಡೆಯುವ ಪರಿಸ್ಥಿತಿ ಇರುತ್ತದೆಯೋ ಅಲ್ಲಿವರೆಗೆ ಬದಲಾವಣೆ ಆಗುವುದಿಲ್ಲ. ಸಾಮಾಜಿಕ ನ್ಯಾಯದ ರಥವನ್ನು ಒಂದು ಅಂಗುಲ ಮುಂದಕ್ಕೆ ಒಯ್ದರೆ ವಿರೋಧಿಗಳು ಎರಡು ಅಂಗುಲ ಹಿಂದಕ್ಕೆ ಎಳೆಯುವುದು ಮುಂದುವರಿಯಲಿದೆ. ಸಾಮಾಜಿಕ ನ್ಯಾಯದ ಪರ ಇರುವ ಶಕ್ತಿಗಳೆಲ್ಲ ಒಂದಾಗಬೇಕು. ಕೇವಲ ಹಿಂದುಳಿದ ವರ್ಗಗಳು ಒಂದಾಗುವ ಬದಲು ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪಂಗಡಗಳೆಲ್ಲ ಒಟ್ಟಾಗಬೇಕು' ಎಂದು ಆಶಿಸಿದರು.

ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಮಾತನಾಡಿ, '1961ರಿಂದ ಇಲ್ಲಿವರೆಗೆ ದೇಶದಲ್ಲಿ ಮತ್ತು ರಾಜ್ಯದಲ್ಲಿ ಸಾಮಾಜಿಕ ನ್ಯಾಯದ ಪರವಾಗಿ ನಡೆದ ಎಲ್ಲ ಸಮೀಕ್ಷೆಗಳು, ವರದಿಗಳಿಗೆ ವಿರೋಧ ವ್ಯಕ್ತವಾಗಿದೆ. ಅಂಕಿ ಅಂಶ ಸರಿ ಇಲ್ಲ, ಇನ್ನಾವುದೋ ಸರಿ ಇಲ್ಲ ಎಂದು ಕಾಲಕಾಲಕ್ಕೆ ವರದಿಗಳು ದೂಳು ತಿನ್ನುವಂತೆ ಮಾಡಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸಾಮಾಜಿಕ ನ್ಯಾಯದಷ್ಟೇ ಸಾಮಾಜಿಕ ಜವಾಬ್ದಾರಿಯೂ ಮುಖ್ಯ. ಈ ಹಿಂದಿನ ವರದಿಗಳು ಅನುಷ್ಠಾನಗೊಂಡಿದ್ದರೆ ಹೊಸ ಸಮೀಕ್ಷೆ ಬೇಕಾಗಿರಲಿಲ್ಲ. ಅವಕಾಶವಾದಿ ರಾಜಕಾರಣಕ್ಕೆ, ಹೊಂದಾಣಿಕೆಯ ರಾಜಕಾರಣಕ್ಕೆ ವರದಿಗಳನ್ನು ಬಲಿ ಕೊಡುವ ವ್ಯವಸ್ಥೆ ಇರುವವರೆಗೆ ಯಾವುದೇ ವರದಿಗಳು ಪ್ರಯೋಜನವಾಗದು' ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಂಬಣ್ಣ ಅರೋಲಿಕರ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ಉಪಸ್ಥಿತರಿದ್ದರು.

ಎಚ್.ಎನ್. ನಾಗಮೋಹನದಾಸ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದರು

ಕಾಮಗಾರಿಗಳ ತನಿಖಾ ವರದಿ ಸಲ್ಲಿಕೆ

ಒಂದನೇ ಪುಟದಿಂದ...

ಅದರ ಅನ್ವಯ, ಸಮಗ್ರ ತನಿಖಾ ವರದಿ ಸಲ್ಲಿಸಲು ತಜ್ಞರನ್ನು ಒಳಗೊಂಡ ನಾಲ್ಕು ವಿಶೇಷ ತನಿಖಾ ಸಮಿತಿಗಳನ್ನು ರಚಿಸಿ ಸರ್ಕಾರವು ಆಗಸ್ಟ್ 5ರಂದು ಆದೇಶ ಹೊರಡಿಸಿತ್ತು. ಈ ಆದೇಶವನ್ನು ನಂತರ ಹಿಂಪಡೆದಿದ್ದ ಸರ್ಕಾರ, ತನಿಖೆಯ ಹೊಣೆಯನ್ನು ನಾಗಮೋಹನದಾಸ್ ನೇತೃತ್ವದ ಆಯೋಗಕ್ಕೆ ನೀಡಿತ್ತು.

216 ಗಂಟೆ ನಿರಂತರ ಭರತನಾಟ್ಯ: ದೀಕ್ಷಾ ದಾಖಲೆ

ದೀಕ್ಷಾ

ಪ್ರಜಾವಾಣಿ

ಉಡುಪಿ: ನಿರಂತರ 216 ಗಂಟೆ ಭರತನಾಟ್ಯ ಪ್ರದರ್ಶನ ನೀಡುವ ಮೂಲಕ ಬ್ರಹ್ಮಾವರ ತಾಲ್ಲೂಕಿನ ಆರೂರು ಗ್ರಾಮದ ಮುಂಡ್ಕಿನಜಡ್ಡುವಿನ ದೀಕ್ಷಾ ವಿ. ಅವರು 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್'ನಲ್ಲಿ ದಾಖಲೆ ಬರೆದರು.

170 ಗಂಟೆಗಳ ನಿರಂತರ ಭರತನಾಟ್ಯ ಪ್ರದರ್ಶನ ಪೂರೈಸಿ ಈ ಮೊದಲು 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ಸಾಧನೆ ಮಾಡಿದ್ದ ಮಂಗಳೂರಿನ ರೆಮೋನಾ ಇವೆಟ್ ಪಿರೇರಾ ಅವರ ದಾಖಲೆಯನ್ನು ದೀಕ್ಷಾ ಅವರು ಮುರಿದಿದ್ದಾರೆ.

ಉಡುಪಿಯ ಡಾ. ಜಿ. ಶಂಕರ್ ಮಹಿಳಾ ಸರ್ಕಾರಿ ಕಾಲೇಜಿನ ಸಭಾಂಗಣದಲ್ಲಿ ನಿರಂತರ ಭರತನಾಟ್ಯ ಪ್ರದರ್ಶನ ನೀಡಿದ ದೀಕ್ಷಾ ಅವರು ಪ್ರತಿ ಮೂರು ಗಂಟೆಗೆ ಹದಿನೈದು ನಿಮಿಷ ಬಿಡುವು ಪಡೆಯುವ ಮೂಲಕ 216 ಗಂಟೆಗಳನ್ನು ಪೂರೈಸಿದರು.

'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ಸಂಸ್ಥೆಯ ಏಷ್ಯಾ ಮುಖ್ಯಸ್ಥ ಮನೀಶ್ ವಿಷ್ಣೋಯಿ ಅವರು ಈ ದಾಖಲೆಗೆ ಸಾಕ್ಷಿಯಾಗಿದರು.

ದೀಕ್ಷಾ ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಶನಿವಾರ ಅಜ್ಜರಕಾಡಿನ ಮಹಾತ್ಮ ಗಾಂಧಿ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಲ್ಲಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ ಅಭಿನಂದಿಸಿದರು.

ಅಭಿನಂದನಾ ಸಮಾರಂಭದಲ್ಲಿ ದೀಕ್ಷಾ ಅವರ ನೃತ್ಯ ಗುರು ವಿದ್ವಾನ್ ಶ್ರೀಧರ ರಾವ್, ತಂದೆ ವಿಠಲ್ ಪೂಜಾರಿ, ತಾಯಿ ಶುಭ, ಪತಿ ರಾಹುಲ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಶಾಸಕ ರಘುಪತಿ ಭಟ್, ಉದ್ಯಮಿ ಜಿ. ಶಂಕರ್, ಮಹೇಶ್ ಠಾಕೂರ್ ಭಾಗವಹಿಸಿದ್ದರು.

ಹಿಂದೂಗಳು ಜಾತಿ, ಮತ ಮೀರಿ ಒಗ್ಗೂಡಲಿ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಪ್ರಸ್ತುತ ದಿನಗಳಲ್ಲಿ ಸನಾತನ ಧರ್ಮವು ಸಂಕಷ್ಟವನ್ನು ಎದುರಿಸುತ್ತಿದೆ. ಇಂಥ ಕಾಲಘಟ್ಟದಲ್ಲಿ ನಮ್ಮ ಪರಂಪರೆ, ಸಂಸ್ಕೃತಿಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಇಡೀ ಹಿಂದೂ ಸಮಾಜ ಜಾತಿ ಮತವನ್ನೂ ಮೀರಿ ಒಗ್ಗೂಡುವ ಅಗತ್ಯವಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಹೈದರಾಬಾದ್‌ನ ಉತ್ತರಾದಿಮಠದಲ್ಲಿ ಶನಿವಾರ ಉತ್ತರಾದಿಮಠದ ಸತ್ಯಾತ್ಮತೀರ್ಥ ಶ್ರೀಪಾದರ 30ನೇ ಚಾತುರ್ಮಾಸದ ಕಾರ್ಯಕ್ರಮದಲ್ಲಿ ಸತ್ಯಪ್ರಮೋದ ತೀರ್ಥರ 108ನೇ ಜನ್ಮದಿನದ ಅಂಗವಾಗಿ ಕೇಂದ್ರ ಸರ್ಕಾರ ಹೊರತಂದಿರುವ ಸತ್ಯಪ್ರಮೋದ ತೀರ್ಥರ ಬೆಳ್ಳಿಯ ನಾಣ್ಯವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದಿನೇಶ ಕುಮಾರ್ ಅವರು ಮಾತನಾಡಿ, 'ಸತ್ಯಪ್ರಮೋದತೀರ್ಥರು ದೇಶ ಸ್ವಾತಂತ್ರ್ಯವೇಳೆ ಉತ್ತರಾದಿಮಠದ ಪೀಠಾರೋಹಣಗೈದಿದ್ದರು. ದೇಶದ ವಿಭಜನೆಯ ದಿನಗಳಲ್ಲಿ ಹಿಂದೂ ಧರ್ಮದ ಸನಾತನ ಸಂಸ್ಕೃತಿ ಮತ್ತು ವೇದ ಪರಂಪರೆ ಉಳಿಸಿ ಬೆಳೆಸಿದ ಧೀಮಂತರು' ಎಂದರು.

ಕಾರ್ಯಕ್ರಮದಲ್ಲಿ ಬ್ರಹ್ಮೋಸ್ ಸಿಇಒ ಜಯತೀರ್ಥ ಜೋಶಿ, ಬೆಂಗಳೂರಿನ ಶ್ರೀಜಯತೀರ್ಥ ವಿದ್ಯಾಪೀಠದ ಕುಲಪತಿ ರಂಗಾಚಾರ್ಯ ಗುತ್ತಲ್, ಪ್ರಾಂಶುಪಾಲರಾದ ಸತ್ಯಧ್ಯಾನಾಚಾರ್ಯ ಕಟ್ಟಿ, ಉತ್ತರಾದಿಮಠದ ಕಾರ್ಯನಿರ್ವಾಹಕ ಅಧಿಕಾರಿ ವಿದ್ಯಾಧೀಶಾಚಾರ್ಯ ಗುತ್ತಲ್, ಉಪಸ್ಥಿತರಿದ್ದರು.

ಕೈಲಾಶ್ ಸತ್ಯಾರ್ಥಿ ಕಿವಿಮಾತು • ಆರ್‌ವಿ ವಿವಿ ಘಟಿಕೋತ್ಸವದಲ್ಲಿ 259 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

'ಜಗದ ಶ್ರೇಯೋಭಿವೃದ್ಧಿಗೆ ಶಿಕ್ಷಣ ಸಾಧನವಾಗಲಿ'

ಪ್ರಜಾವಾಣಿ ವಾರ್ತೆ

ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ವಿಶೇಷ ಪುರಸ್ಕಾರದೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶಿಕ್ಷಣವನ್ನು ಕೇವಲ ವೈಯಕ್ತಿಕ ಯಶಸ್ಸಿಗೆ ಬಳಸದೆ, ಜಗತ್ತಿನ ಶ್ರೇಯೋಭಿವೃದ್ಧಿಗೆ ಸಾಧನವಾಗಿ ಉಪಯೋಗಿಸಿಕೊಳ್ಳಬೇಕು' ಎಂದು ನೊಬೆಲ್ ಪುರಸ್ಕೃತ ಮಕ್ಕಳ ಹಕ್ಕು ಕಾರ್ಯಕರ್ತ ಕೈಲಾಶ್ ಸತ್ಯಾರ್ಥಿ ಹೇಳಿದರು.

ಆರ್.ವಿ ವಿಶ್ವವಿದ್ಯಾಲಯದ ಮೂರನೆ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ಯುವಜನರೇ ನವಭಾರತದ ನಿರ್ಮಾಣಕಾರರು. ಆದ್ದರಿಂದ ನೈತಿಕ ಹೊಣೆಗಾರಿಕೆ ಮತ್ತು ಜವಾಬ್ದಾರಿ ಯುವ ಸಮುದಾಯದ ಮೇಲಿದೆ. ಪದವೀಧರರಾದ ಬಳಿಕ ಕಲಿಕೆ ಪೂರ್ಣಗೊಳ್ಳುವುದಿಲ್ಲ. ಜೀವನ ಹೊಸ ಹೊಸ ಪಾಠಗಳನ್ನು ಕಲಿಸುತ್ತದೆ. ಜಗತ್ತಿನ ಭಾಗವಾಗಿರುವ ನಾವು, ಸಮಾಜದ ತಲ್ಲಣಗಳಿಗೆ ಸ್ಪಂದಿಸಬೇಕು. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುತ್ತಾ ಅಂದುಕೊಂಡ ಗುರಿ ಸಾಧಿಸಬೇಕು' ಎಂದು ಅಭಿಪ್ರಾಯಪಟ್ಟರು.

ತಮ್ಮ ಹೋರಾಟದ ದಿನಗಳನ್ನು ಸ್ಮರಿಸಿಕೊಂಡ ಅವರು, 'ಹೋರಾಟದ ಹಾದಿಯಲ್ಲಿ ಹಲವು ಸವಾಲುಗಳು, ಸಮಸ್ಯೆಗಳು ಎದುರಾಗುತ್ತವೆ. ಆದರೆ, ಅವುಗಳಿಗೆ ಎದೆಗುಂದದೆ ಗುರಿ ಮುಟ್ಟಬೇಕು. ಯಾವುದೇ ಕಾರ್ಯಕ್ಷೇತ್ರ ಆಯ್ಕೆ ಮಾಡಿಕೊಂಡರೂ ಮಾನವೀಯತೆ ಮತ್ತು ಕರುಣೆ ನಮ್ಮಲ್ಲಿರಬೇಕು. ಕರುಣೆ ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿಯಾದ ಶಕ್ತಿಯುತ ಸಾಧನ' ಎಂದು ಹೇಳಿದರು.

'ನನ್ನ ಹೋರಾಟದ ಜೀವನದಲ್ಲಿ ಹಲವು ಸವಾಲುಗಳು ಹಾಗೂ ಅಪಾಯಗಳನ್ನು ಎದುರಿಸಿದ್ದೇನೆ. ಮಕ್ಕಳ ಕಳ್ಳಸಾಗಣೆ ತಡೆವೇಳೆ ಹಲ್ಲೆಗಳೂ ನಡೆದಿದ್ದವು. ಈ ಹೋರಾಟದಲ್ಲಿ ಕೆಲವರನ್ನು ಕಳೆದುಕೊಂಡಿದ್ದೇನೆ. ಆದರೆ, ನನ್ನ ಹೋರಾಟದಿಂದ ಹಲವರಿಗೆ ಹೊಸ ಜೀವನ ಸಿಕ್ಕಿದೆ' ಎಂದು ಸ್ಮರಿಸಿಕೊಂಡರು.

ಆರ್.ವಿ. ವಿಶ್ವವಿದ್ಯಾಲಯದ ಕುಲಪತಿ ಎ.ವಿ.ಎಸ್. ಮೂರ್ತಿ, 'ಗುಣಮಟ್ಟದ ಶಿಕ್ಷಣ ನಮ್ಮ ಆದ್ಯತೆಯಾಗಿದೆ. ವಿದ್ಯಾರ್ಥಿಗಳ ಸಾಧನೆಯಿಂದ ವಿಶ್ವವಿದ್ಯಾಲಯಕ್ಕೂ ಉತ್ತಮ ಹೆಸರು ಬರಲಿದೆ. ಈಗಾಗಲೇ ನಮ್ಮ ವಿಶ್ವವಿದ್ಯಾಲಯವು ಜಾಗತಿಕ ಮಟ್ಟದಲ್ಲಿ ಉತ್ತಮ ಹೆಸರು ಗಳಿಸಿದೆ' ಎಂದು ಹೇಳಿದರು.

ಈ ಘಟಿಕೋತ್ಸವದಲ್ಲಿ ಆರು ವಿಭಾಗಗಳಿಂದ ಒಟ್ಟು 259 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅತ್ಯುತ್ತಮ ಶೈಕ್ಷಣಿಕ ಸಾಧನೆಗೆ ಒಂಬತ್ತು ವಿದ್ಯಾರ್ಥಿಗಳಿಗೆ ವಿಶೇಷ ಗೌರವ ಪುರಸ್ಕಾರ ವಿತರಿಸಲಾಯಿತು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಎಂ.ಪಿ.ಶ್ಯಾಮ್, ಕುಲಸಚಿವೆ ಪ್ರೊ. ಸಹನ ಡಿ. ಗೌಡ, ಉಪಕುಲಪತಿ ಪ್ರೊ. ದ್ವಾರಿಕ ಪ್ರಸಾದ್ ಉನಿಯಾಲ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಸಂಸ್ಕಾರೋತ್ಸವ' ಆಚಾರ–ವಿಚಾರ, ಆಹಾರ–ವಿಹಾರ, ಸಂಸ್ಕೃತಿ–ಸಂಸ್ಕಾರ: ಉದ್ಘಾಟನೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಅಧ್ಯಕ್ಷತೆ: ಗಿರಿಧರ ಕಜೆ, ಉಪಸ್ಥಿತಿ: ವಿನಾಯಕ ತೊರವಿ, ಹರಿಪ್ರಸಾದ ಪೆರಿಯಪ್ಪು, ಸಂಸ್ಕಾರ ದರ್ಶನ: ನಿರ್ಭಯಾನಂದ ಸ್ವಾಮೀಜಿ, ಶತಾವಧಾನಿ ಆರ್. ಗಣೇಶ್, ಚಕ್ರವರ್ತಿ ಸೂಲಿಬೆಲೆ, ದೇವೇಂದ್ರ ಬೆಳಿಯೂರು, ರಾಮಕೃಷ್ಣ ಭಟ್ ಕೂಟೇಲು, ಜಗದೀಶ ಶರ್ಮಾ ಸಂಪ, ಸಮಾರೋಪ ಸಮಾರಂಭ: ರವಿ ಹೆಗಡೆ, ಎಂ.ಕೆ. ಶ್ರೀಧರ್, ಎಸ್. ರಘುನಾಥ್, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಬೆಳಿಗ್ಗೆ 8ರಿಂದ

ರೋಟರಿ ತಿರಂಗಾ ರೋಡ್ ಶೋ: ಅತಿಥಿಗಳು: ಸೀಮಂತ್ ಕುಮಾರ್ ಸಿಂಗ್, ಶ್ರೀಧರ್ ಬಿ.ಆರ್. ಕನ್ವಲ್ ಕಮ್ರಾ ಎಸ್., ಆಯೋಜನೆ: ಮೊಟೊಫೆಡ್, ರೋಟರಿ ಡಿಸ್ಟ್ರಿಕ್ಟ್ 3191, ಸ್ಥಳ: ನೆಕ್ಸಸ್ ವೇಗಾ ಸಿಟಿಯಿಂದ ಮಿರಯ ಗ್ರೀನ್ಸ್, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 8

ಕುಚಿಪುಡಿ ನೃತ್ಯ ಪ್ರದರ್ಶನ: ಶ್ರೀವೀಣಾ ಮಣಿ ಮತ್ತು ತಂಡ, ಸ್ಥಳ: ಬ್ಯಾಂಡ್‌ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 8.30

'ಕರುನಾಡು ಸವಿಯೂಟ' ಸ್ಪರ್ಧೆ: ಆಯೋಜನೆ: 'ಪ್ರಜಾವಾಣಿ, 'ಡೆಕ್ಕನ್ ಹೆರಾಲ್ಡ್', 'ಫ್ರೀಡಂ ಕುಕ್ಕಿಂಗ್ ಆಯಿಲ್', ಸ್ಥಳ: ಲುಲು ಮಾಲ್, ರಾಜಾಜಿನಗರ, ಬೆಳಿಗ್ಗೆ 9.30

ದಿನೇಶ್ ಮನೀರ್ ಅವರ ಛಾಯಾಚಿತ್ರಗಳ ಪ್ರದರ್ಶನ: ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಳಿಗ್ಗೆ 10ರಿಂದ

'ಮಹಾಮಾನವ ಅಗೋಳಿ ಮಂಜಣ್ಣ ದತ್ತಿ, ಬೆ.ಸು.ನಾ ಮಲ್ಯ' ದತ್ತಿ ಪ್ರಶಸ್ತಿ ಪ್ರದಾನ: ಕೆ. ಮೋಹನ್‌ದೇವ್ ಆಳ್ವ, ಪ್ರಶಸ್ತಿ ಸ್ವೀಕರಿಸುವವರು: ರಮೇಶ ದೊಡ್ಡಪುರ, ಡಿ. ಚಂದ್ರಹಾಸ ರೈ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರ ಮಹಾ ಸಂಗಮ 'ಸುರಕ್ಷಿತ ಕೆಲಸದ ಸ್ಥಳಗಳು–ಸಮಾನ ಧ್ವನಿಗಳು': ಅತಿಥಿಗಳು: ಡಾ. ನಾಗಲಕ್ಷ್ಮೀ ಚೌಧರಿ, ಕೆ. ಗಾಯತ್ರಿ, ಬಿ. ಶಿವರಾಜೇಗೌಡ, ಸಬಿಹಾ ಭೂಮಿಗೌಡ, ಕೆ. ಷರೀಫಾ, ಎಂ.ಎಸ್. ಆಶಾದೇವಿ, ಪಿ.ಜಿ.ಆರ್. ಸಿಂಧ್ಯ, ಆರ್. ಅರುಣಾ ಕುಮಾರಿ, ಎಸ್. ಶಾಂತಿ, ಪಿ.ಎಚ್. ಯಶೋಧಾ, ಆಯೋಜನೆ: ಸಿವಿಡೆಪ್ ಇಂಡಿಯಾ, ಮುನ್ನಡೆ ಸಾಮಾಜಿಕ ಸಂಸ್ಥೆ, ಸಾಧನಾ ಟ್ರಸ್ಟ್, ಕರ್ನಾಟಕ ರಾಜ್ಯ ಗಾರ್ಮೆಂಟ್ ಮತ್ತು ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಒಳ ಮೀಸಲಾತಿ–ಮುಂದಿನ ಹೆಜ್ಜೆಗಳು: ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ಅತಿಥಿಗಳು: ಆರ್.ಬಿ. ತಿಮ್ಮಾಪೂರ, ರಮೇಶ್ ಜಿಗಜಿಣಗಿ, ಗೋವಿಂದ ಎಂ. ಕಾರಜೋಳ, ಎ. ನಾರಾಯಣಸ್ವಾಮಿ, ಎಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಎಲ್. ಹನುಮಂತಯ್ಯ, ಅಧ್ಯಕ್ಷತೆ: ಗೋನಾಳ ಭೀಮಪ್ಪ, ಆಯೋಜನೆ: ಕರ್ನಾಟಕ ಮಾದಿಗ ಅಧಿಕಾರಿ ಮತ್ತು ನೌಕರರ ಸಮನ್ವಯ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಜನಸಿರಿ ಸಾಹಿತ್ಯ ಸಮ್ಮೇಳನ–2025: ಸಾನ್ನಿಧ್ಯ: ವೀರೇಶಾನಂದ ಸರಸ್ವತಿ ಸ್ವಾಮೀಜಿ, ಬಸವ ಶಾಂತಲಿಂಗ ಸ್ವಾಮೀಜಿ, ಉದ್ಘಾಟನೆ: ಎಸ್. ಸುರೇಶ್ ಕುಮಾರ್, ಸರ್ವಾಧ್ಯಕ್ಷತೆ: ಸಿ. ಸೋಮಶೇಖರ್, ಪ್ರಾಸ್ತಾವಿಕ ನುಡಿ: ನಾಗಲೇಖ, ಅತಿಥಿಗಳು: ಹಿರೇಮಗಳೂರು ಕಣ್ಣನ್, ಡಾ. ನಾಗಲಕ್ಷ್ಮಿ ಚೌಧರಿ, ಮಹಿಮಾ ಪಟೇಲ್, ರಾಮೋಜಿ ಗೌಡ, ಲಕ್ಷ್ಮಿಪತಯ್ಯ, ಎಚ್.ಪಿ. ರಾಜಗೋಪಾಲ್ ರೆಡ್ಡಿ, ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 11

'ಸ್ವಾಮಿ ವಿವೇಕಾನಂದರು ಮತ್ತು ರಾಷ್ಟ್ರೀಯತೆ' ಉಪನ್ಯಾಸ: ಸ್ವಾಮಿ ವೀರೇಶಾನಂದ ಸರಸ್ವತಿ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಗಣೇಶೋತ್ಸವ ವಿಶೇಷ

ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ ನೃತ್ಯ ಪ್ರದರ್ಶನ: ಸಾಯಿ ಸಾಂಸ್ಕೃತಿಕ ಅಕಾಡೆಮಿಯ ವಿದ್ಯಾರ್ಥಿಗಳಿಂದ, ಮತ್ತು ತಂಡ, ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1

ಸಂಗೀತ ಕಛೇರಿ: ಬರ್ಫಿ ಮ್ಯೂಸಿಕ್ ತಂಡ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ, ಎರಡನೇ ಹಂತ, ಸಂಜೆ 7.30

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ 16ನೇ ದಿನದ ಪುಣ್ಯಾರಾಧನೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ವೀರಭದ್ರಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು: ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ, ಡಿ.ಕೆ. ಶಿವಕುಮಾರ್, ವಿ. ಗೋಪಾಲಗೌಡ, ಡಿ.ವಿ. ಸದಾನಂದಗೌಡ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಎನ್. ಚಲುವರಾಯಸ್ವಾಮಿ, ಆರ್. ಅಶೋಕ, ಡಾ.ಸಿ.ಎನ್. ಮಂಜುನಾಥ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಂ. ಕೃಷ್ಣಪ್ಪ, ಎಸ್.ಟಿ. ಸೋಮಶೇಖರ್, ಬಿ. ಕೆಂಚಪ್ಪಗೌಡ, ಶರತ್ ಕುಮಾರ್ ಬಚ್ಚೇಗೌಡ, ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ, ಬೆಳಿಗ್ಗೆ 11ರಿಂದ

ರಾಷ್ಟ್ರೀಯ ಅಲೆಮಾರಿಗಳ ವಿಮೋಚನಾ ದಿನಾಚರಣೆ: ಉದ್ಘಾಟನೆ: ರುದ್ರಪ್ಪ ಲಮಾಣಿ, ಇಂದೂಧರ ಹೊನ್ನಾಪುರ, ರವಿ ಮಾಕಳಿ, ಆದರ್ಶ ಯಲ್ಲಪ್ಪ, ರವಿಕುಮಾರ್, ಮಾವಳ್ಳಿ ಶಂಕರ್, ಅಂಜನಕುಮಾರ್, ಬಿ.ಟಿ. ಲಲಿತಾ ನಾಯಕ್, ಸುಭಾಷ್ ರಾಠೋಡ್, ವೆಂಕಟೇಶ್, ಎನ್. ಅನಂತ್ ನಾಯ್ಕ್, ಆಯೋಜನೆ: ಕರ್ನಾಟಕ ಬಂಜಾರ ಮಹಾಸಭಾ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಸೇವಾದಳ ದಿನಾಚರಣೆ–2025: ಉದ್ಘಾಟನೆ: ಕುಮಾರ್ ಬಂಗಾರಪ್ಪ, ಅಧ್ಯಕ್ಷತೆ: ಸುಭಾಷ್ ಸುವರ್ಣ, ಸನ್ಮಾನಿತರು: ಕೆ. ಬಾಲಕೃಷ್ಣ ಸುವರ್ಣ, ಎಸ್.ಎಸ್. ಜತ್ತನ್, ಎಸ್.ಆರ್. ಅಂಚನ್, ದಾಮೋದರ ಸುವರ್ಣ, ವಿ. ಗೋಪಾಲ್, ಡಿ.ಎನ್. ಜಗದೀಶ್, ಶಿವಾನಂದ ಸಾಲ್ಯಾನ್, ಉಪಸ್ಥಿತಿ: ಲೋಕನಾಥ್ ಪೂಜಾರಿ, ಜಗದೀಶ್ ಅಮೀನ್, ಆಯೋಜನೆ: ಬಿಲ್ಲವ ಅಸೋಸಿಯೇಷನ್ ಬೆಂಗಳೂರು, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಮಧ್ಯಾಹ್ನ 2

ತಿಂಗಳ ತೇರು 'ಜೀವನೋಲ್ಲಾಸ' ಮಾತು–ಮಂಥನ: ಅತಿಥಿಗಳು: ಡಿ.ಎನ್. ಮುನಿಕೃಷ್ಣ, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಮೂರನೇ ಮಹಡಿ, ಇಂದಿರಾನಗರ ಕ್ಲಬ್, ಎಚ್‌ಎಎಲ್ ಮೂರನೇ ಹಂತ, ಮಧ್ಯಾಹ್ನ 3.30

'ದ್ಯುತಿ' ಸಂಗೀತ, ನೃತ್ಯ ಪ್ರದರ್ಶನ: ತಬಲಾ: ವಿಕ್ರಮ ಘೋಷ್, ವಂಶಿ ವಾದನ: ಪ್ರವೀಣ್ ಗೋಡ್ಖಿಂಡಿ, ನೃತ್ಯ ಪ್ರದರ್ಶನ: ನಿರುಪಮಾ ರಾಜೇಂದ್ರ, ಆಯೋಜನೆ: ಅಭಿನವ ಡಾನ್ಸ್ ಕಂಪನಿ, ಸ್ಥಳ: ಮೀನಾಕ್ಷಿ ರಂಗಮಂಚ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಚಿಟಿಕೆ ಸುದ್ದಿ

ವೆಂಕಟಾಚಲಶಾಸ್ತ್ರಿಗೆ 'ಮುದ್ದುರಾಮ ಪ್ರಶಸ್ತಿ'



ವೆಂಕಟಾಚಲ ಶಾಸ್ತ್ರಿ

ಮೈಸೂರು: ಇಲ್ಲಿನ ಮುದ್ದುರಾಮ ಪ್ರತಿಷ್ಠಾನವು ನೀಡುವ 2025ನೇ ಸಾಲಿನ 'ಮುದ್ದುರಾಮ ಪ್ರಶಸ್ತಿ'ಗೆ ವಿದ್ವಾಂಸ ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರನ್ನು ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 50ಸಾವಿರ ಗೌರವಧನ ಹಾಗೂ ಫಲಕ ಒಳಗೊಂಡಿದೆ. ಸೆ.2ರಂದು ಸಂಜೆ 5ಕ್ಕೆ ಇಲ್ಲಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆಯುವ ಸಮಾರಂಭದಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರದಾನ ಮಾಡುವರು.

ಸಂಸ್ಕೃತ ವಿದ್ವಾಂಸ ಎಚ್.ವಿ.ನಾಗರಾಜರಾವ್ ಅಭಿನಂದನಾ ನುಡಿಗಳನ್ನಾಡುವರು. 1,008 ಚೌಪದಿಗಳನ್ನು ಒಳಗೊಂಡ 'ಮುದ್ದುರಾಮ ಮಂಜರಿ' ಕೃತಿ ಬಿಡುಗಡೆ ಮಾಡಲಾಗುವುದು ಪ್ರಕಟಣೆ ತಿಳಿಸಿದೆ.

ರೇಣುಕಾಚಾರ್ಯ ವಿರುದ್ಧ ಎಫ್‌ಐಆರ್

ರೇಣುಕಾಚಾರ್ಯ

ದಾವಣಗೆರೆ: ಗಣೇಶೋತ್ಸವ ವೇಳೆ ಡಿ.ಜೆ (ಡಿಸ್ಕ್ ಜಾಕಿ) ಬಳಕೆಗೆ ನಿಷೇಧ ಹೇರಿದ ವಿಷಯದಲ್ಲಿ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಹಾಗೂ ವಾಹನ ಸಂಚಾರ ತಡೆದು ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿರುವ ಆರೋಪದಡಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹಾಗೂ ಅವರ ಬೆಂಬಲಿಗರ ವಿರುದ್ಧ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಯುವಕರು ಡಿ.ಜೆ. ಬಳಸಿ ನಿಷೇಧಾಜ್ಞೆ ಉಲ್ಲಂಘಿಸಿ' ಎಂದು ಗುರುವಾರ ಕರೆ ನೀಡಿದ್ದ ರೇಣುಕಾಚಾರ್ಯ, 'ತಾಕತ್ತಿದ್ದರೆ ಪೊಲೀಸರು, ಜಿಲ್ಲಾಡಳಿತ ಅದನ್ನು ತಡೆಯಲಿ' ಎಂದು ಸವಾಲೆಸೆದಿದ್ದರು. ಶುಕ್ರವಾರ ರಾತ್ರಿ ಪೊಲೀಸರು ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಣೇಶೋತ್ಸವ ಹಾಗೂ ಈದ್ ಮಿಲಾದ್ ಮೆರವಣಿಗೆ ವೇಳೆ ಜಿಲ್ಲೆಯಾದ್ಯಂತ ಡಿ.ಜೆ ಬಳಕೆ ನಿಷೇಧಿಸಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಈಚೆಗಷ್ಟೇ ಆದೇಶ ಹೊರಡಿಸಿದ್ದರು.

ರೇಣುಕಾಚಾರ್ಯ ಅವರು ಕೆಲ ದಿನಗಳಿಂದ ನಿರಂತರವಾಗಿ ಜಿಲ್ಲಾಡಳಿತದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಜಿಲ್ಲಾಡಳಿತ ಹಾಗೂ ಪೊಲೀಸರು ಸುಪ್ರೀಂ ಕೋರ್ಟ್ ಆದೇಶದಂತೆ ಬೇರೆ ಧರ್ಮದವರು ಮೈಕ್‌ನಲ್ಲಿ ಆಜಾನ್ ಕೂಗುವುದನ್ನೂ, ಸಾರ್ವಜನಿಕ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಿ ನಮಾಜ್ ಮಾಡುವುದನ್ನೂ ತಡೆಯಲಿ ಎಂದು ಸವಾಲೆಸೆದಿದ್ದರು.

ವಿದ್ಯಾರ್ಥಿನಿಗೆ ಪ್ರಸವ: ತನಿಖೆ

ಶಹಾಪುರ (ಯಾದಗಿರಿ ಜಿಲ್ಲೆ): 'ನಗರದ ವಸತಿ ಶಾಲೆಯ ಶೌಚಾಲಯದಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಗಂಡು ಮಗುವಿಗೆ ಜನ್ಮನೀಡಿದ್ದ ಪ್ರಕರಣದ ತನಿಖೆಯನ್ನು ನಿವೃತ್ತ ನ್ಯಾಯಾಧೀಶ ಗೋಪಾಲ ಅವರಿಗೆ ವಹಿಸಲಾಗಿದೆ' ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಕಾಂತರಾಜು ಪಿ.ಎಸ್. ತಿಳಿಸಿದರು.

ನಗರದ ಸರ್ಕಾರಿ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚನ್ನಬಸಪ್ಪ ಅವರನ್ನು ತನಿಖೆಯಲ್ಲಿ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಒಂದು ತಿಂಗಳ ಒಳಗೆ ತನಿಖಾ ವರದಿಯನ್ನು ಸಲ್ಲಿಸುವಂತೆಯೂ ಸೂಚಿಸಲಾಗಿದೆ' ಎಂದರು.

ಸಂಘ ರಚನೆಗೆ ಏಜೆನ್ಸಿಗಳು ಅಡ್ಡಿ

ಕಾರ್ಯಾರಂಭವಾಗದ ಜಿಲ್ಲಾ ಕಾರ್ಮಿಕರ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ

• ಹರಿಶಂಕರ್ ಆರ್.

ಬಳ್ಳಾರಿ: ಖಾಸಗಿ ಏಜೆನ್ಸಿಗಳ ಶೋಷಣೆಯಿಂದ ಗುತ್ತಿಗೆ ನೌಕರರನ್ನು ಪಾರು ಮಾಡುವ ಉದ್ದೇಶವುಳ್ಳ 'ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ'ಗಳಿಗೆ ಏಜೆನ್ಸಿಗಳ ಲಾಬಿಯೇ ಅಡ್ಡಿಯಾಗಿದ್ದು, ಬೀದರ್ ಹೊರತುಪಡಿಸಿದರೆ ಯಾವ ಜಿಲ್ಲೆಗಳಲ್ಲೂ ಈ ವರೆಗೆ ಸಂಘಗಳು ಕಾರ್ಯಾರಂಭ ಮಾಡಿಲ್ಲ.

ಬೀದರ್‌ನಲ್ಲಿ 2008ರಲ್ಲೇ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ 'ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ' ಸ್ಥಾಪನೆಯಾಗಿದೆ. ಇದೇ ಮಾದರಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಸಂಘ ಆರಂಭಿಸಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರೂ ಹೇಳಿದ್ದಾರೆ.

ಮುಖ್ಯಾಂಶಗಳು

- ನೋಂದಾಯಿತ ಸಂಘಗಳಿಗೂ ಸಿಗದ 4ಜಿ 'ವಿನಾಯಿತಿ'
- ಸಂಘ ರಚನೆಯಿಂದ ಗುತ್ತಿಗೆ ಕಾರ್ಮಿಕರ ಸಮಸ್ಯೆ ದೂರ
- ಬೀದರ್‌ನಲ್ಲಿ ಮಾತ್ರ ಸಂಘ ಕಾರ್ಯಾರಂಭ

ಸಂಘ ಸ್ಥಾಪನೆಗೂ ಮೊದಲು, ಸಹಕಾರ ಇಲಾಖೆಯಲ್ಲಿ ನೋಂದಣಿ ಮಾಡಿಸಬೇಕು. ಬಳಿಕ, 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಿಂದ (ಟೆಂಡರ್ ಪ್ರಕ್ರಿಯೆಗಳಿಂದ) ವಿನಾಯಿತಿ ಪಡೆಯಲು ಕಾಯ್ದೆಯ ಸೆಕ್ಷನ್ 4 (ಜಿ) ಅಡಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ಬಳ್ಳಾರಿ, ಮೈಸೂರು, ಧಾರವಾಡ, ತುಮಕೂರು ಸೇರಿದಂತೆ ಹಲವು ಜಿಲ್ಲೆಗಳು ಸಂಘ ನೋಂದಾಯಿಸಿವೆ. 4(ಜಿ) ವಿನಾಯಿತಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿವೆ. ಆದರೆ, ವಿನಾಯಿತಿ ಇನ್ನೂ ಸಿಕ್ಕಿಲ್ಲ. ಇದಕ್ಕೆ ಖಾಸಗಿ ಏಜೆನ್ಸಿಗಳ ಒತ್ತಡವೇ ಕಾರಣ ಎಂದು ಕಾರ್ಮಿಕಸಂಘಟನೆಗಳುಆರೋಪಿಸಿವೆ.

ಸಂಘಗಳಿಗೆ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಸಾವಿರಾರು ಕಾರ್ಮಿಕರು ನೋಂದಣಿಯಾಗಿದ್ದಾರೆ. ಬಳ್ಳಾರಿಯಲ್ಲೇ 3,300ಕ್ಕೂ ಅಧಿಕ ಗುತ್ತಿಗೆ ನೌಕರರು ತಲಾ ₹1 ಸಾವಿರ ಠೇವಣಿ ನೀಡಿ ನೋಂದಾಯಿಸಿಕೊಂಡಿದ್ದಾರೆ. ಒಂದು ಬಾರಿ ಸಂಘ ಕಾರ್ಯಾರಂಭ ಮಾಡಿದರೆ, ಇವರೆಲ್ಲ ಏಜೆನ್ಸಿಯ ಕಪಿಮುಷ್ಠಿಯಿಂದ ಮುಕ್ತಿ ಪಡೆಯಲಿದ್ದಾರೆ.

ಇನ್ನೊಂದೆಡೆ, ಸಹಕಾರಿ ಇಲಾಖೆಯಲ್ಲಿ ನೋಂದಣಿಯಾದ ಸಂಘಗಳು ಬಹುಕಾಲ ನಿಷ್ಕ್ರಿಯವಾಗಿ ಉಳಿಯಲು ಅವಕಾಶವಿಲ್ಲ. ಕೂಡಲೇ ಕಾರ್ಯರಂಭ ಮಾಡಬೇಕಾದ ಅನಿವಾರ್ಯತೆ ಇದೆ.

ಏನಿದು ಜಿಲ್ಲಾ ಕಾರ್ಮಿಕ ಸೇವೆಗಳ ಸಹಕಾರ ಸಂಘ?

ಸರ್ಕಾರದ ಪ್ರತಿ ಇಲಾಖೆ, ಮಂಡಳಿ, ನಿಗಮಗಳಿಗೆ ಅಗತ್ಯವಿರುವ ಗುತ್ತಿಗೆ ನೌಕರರನ್ನು ನೇಮಿಸುವುದು 'ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘಗಳ' ಮುಖ್ಯ ಉದ್ದೇಶ. ಇದಕ್ಕೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರು. ನೌಕರರಿಗೆ ಸರ್ಕಾರದ ಮೂಲಕವೇ ನೇರವಾಗಿ ವೇತನ ಪಾವತಿ, ಭವಿಷ್ಯ ನಿಧಿ, ಇಎಸ್‌ಐ, ಸಾಲ ಸೌಲಭ್ಯ ಸೇರಿದಂತೆ ವಿವಿಧ ಭದ್ರತೆಗಳನ್ನು ಸಂಘ ಒದಗಿಸುತ್ತದೆ. ಗುತ್ತಿಗೆ ಕಾರ್ಮಿಕರು ಎದುರಿಸುತ್ತಿರುವ ಅನಿಶ್ಚಿತತೆ ದೂರವಾಗುವ ಆಶಯವಿದೆ. ಕಾರ್ಮಿಕ ಸಂಘ ಆರಂಭವಾದರೆ, ಏಜೆನ್ಸಿಗಳಿಂದ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪದ್ಧತಿಯೇ ನಿರ್ಮೂಲನೆಯಾಗುತ್ತದೆ.

> ಬಳ್ಳಾರಿ ಸಂಘಕ್ಕೆ ಕೆಟಿಪಿಪಿ ಕಾಯ್ದೆ ಅಡಿ 4(ಜಿ) ವಿನಾಯಿತಿ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ವಿನಾಯಿತಿ ಸಿಕ್ಕ ಕೂಡಲೇ ಸಂಘ ಕಾರ್ಯಾರಂಭವಾಗಲಿದೆ
>
> **ಪ್ರಶಾಂತ್ ಕುಮಾರ್ ಮಿಶ್ರಾ,** ಜಿಲ್ಲಾಧಿಕಾರಿ

> ಸಂಘ ರಚನೆ ಬಗ್ಗೆ ಕಾರ್ಮಿಕ ಸಚಿವರಿಗೂ ಮನವಿ ಮಾಡಿದ್ದೇವೆ. ಏಜೆನ್ಸಿಗಳು ಸರ್ಕಾರದ ಮೇಲೆ ಒತ್ತಡ ಹಾಕುತ್ತಿರುವ ಅನುಮಾನಗಳಿವೆ. ಸರ್ಕಾರ ಈ ಬಗ್ಗೆ ಗಮನಿಸಬೇಕು
>
> **ಎ.ದೇವದಾಸ್,** ಎಐಯುಟಿಯುಸಿ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ

ಚಿತ್ರದುರ್ಗದಲ್ಲಿ ಶನಿವಾರ ನಡೆದ ವಿಚಾರ ಸಂಕಿರಣದಲ್ಲಿ ಕೆ.ವಿ.ಪ್ರಭಾಕರ್, ಕೆ.ಎಸ್.ನವೀನ್, ಆಯೆಷಾ ಖಾನುಂ ಪಾಲ್ಗೊಂಡಿದ್ದರು

'ಅಂಬೇಡ್ಕರ್ ದೃಷ್ಟಿಕೋನಕ್ಕೆ ಜೀವಕೊಟ್ಟ ಪ್ರಜಾವಾಣಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: '2012ರಲ್ಲಿ ಅಂಬೇಡ್ಕರ್ ಜಯಂತಿಯಂದು 'ಪ್ರಜಾವಾಣಿ' ಪತ್ರಿಕೆ ದೇವನೂರ ಮಹದೇವ ಅವರ ಅತಿಥಿ ಸಂಪಾದಕತ್ವದಲ್ಲಿ ಸಂಚಿಕೆಯನ್ನು ಹೊರ ತಂದಿತ್ತು. ಅಂಬೇಡ್ಕರ್ ದೃಷ್ಟಿಕೋನಕ್ಕೆ ಅಂದಿನ ಸಂಚಿಕೆ ಮರುಜೀವ ಕೊಡುವ ಅದ್ಭುತ ಪ್ರಯತ್ನ ಮಾಡಿತ್ತು' ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಸ್ಮರಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಎಸ್‌ಸಿ– ಎಸ್‌ಟಿ ಪತ್ರಿಕಾ ಸಂಪಾದಕರ ಸಂಘ, ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಗರದಲ್ಲಿ ಶನಿವಾರ ನಡೆದ 'ಮಾಧ್ಯಮದಲ್ಲಿ ಅಂಬೇಡ್ಕರ್ ದೃಷ್ಟಿಕೋನ' ವಿಚಾರ ಸಂಕಿರಣ ಉದ್ಘಾಟಿಸಿ 'ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ' ಶೀರ್ಷಿಕೆಯಡಿ ದೇವನೂರ ಮಹಾದೇವ ಅವರು ಸಂಪಾದಕೀಯ ಬರೆದಿದ್ದರು. ಸಂಪಾದಕರಾಗಿದ್ದ ಕೆ.ಎನ್. ಶಾಂತಕುಮಾರ್ ಅವರು 'ಕಾಳಜಿಗಳ ಮರು ಶೋಧ' ಎನ್ನುವ ಇನ್ನೊಂದು ಸಂಪಾದಕೀಯ ಬರೆದಿದ್ದರು. ಇವೆರಡು ಬರಹಗಳು ಸಮಾಜದ ಕನ್ನಡಿಯಾಗಿದ್ದವು. ಆ ಸಂಚಿಕೆಯನ್ನು ಇವತ್ತಿಗೂ ನಾನು ಜೋಪಾನವಾಗಿಟ್ಟಿದ್ದೇನೆ' ಎಂದ ಅವರು 'ಪ್ರಜಾವಾಣಿ'ಯ ಆ ಸಂಚಿಕೆಯನ್ನು ಪ್ರದರ್ಶಿಸಿದರು.

'ಮಾಧ್ಯಮಗಳಲ್ಲಿ ದಲಿತ ಸಮುದಾಯದ ಪ್ರಾತಿನಿಧ್ಯವೇ ಇಲ್ಲ, ನಿರ್ಣಾಯಕ ಸ್ಥಾನಗಳಲ್ಲಿ ಮಹಿಳೆಯರಿಗೆ, ದಲಿತರಿಗೆ ಸುದ್ದಿ ಸಂಸ್ಥೆಗಳು ನಿಷೇಧ ಹೇರಿವೆ ಎಂದು ಅಧ್ಯಯನ ವರದಿಗಳು ತಿಳಿಸಿವೆ. ಸುದ್ದಿ ಮಾಧ್ಯಮಗಳಲ್ಲಿ ನಾಪತ್ತೆಯಾಗಿರುವ ಕಾಳಜಿಗಳ ಮರು ಶೋಧನೆಯಾಗಬೇಕು, ಅಂಬೇಡ್ಕರ್ ದೃಷ್ಟಿಕೋನದ ಮರುಸ್ಥಾಪನೆಯಾಗಬೇಕು' ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿದರು.

ಹಿರಿಯ ಪತ್ರಕರ್ತ ಡಿ.ಉಮಾಪತಿ ದಿಕ್ಸೂಚಿ ಭಾಷಣ ಮಾಡಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನುಂ, ಕಾರ್ಯದರ್ಶಿ ಸಹನಾ ಭಟ್, ಸದಸ್ಯರಾದ ಅಹೋಬಳಪತಿ, ಎಸ್‌ಸಿ, ಎಸ್‌ಟಿ ಸಂಪಾದಕರ ಸಂಘದ ಅಧ್ಯಕ್ಷ ಚಲುವರಾಜ್ ಇದ್ದರು.

'ಏಳು ಕೋಟಿ ಕನ್ನಡಿಗರ ಹಬ್ಬ ದಸರಾ'

ಪ್ರಜಾವಾಣಿ ವಾರ್ತೆ

ರಾಮಲಿಂಗಾ ರೆಡ್ಡಿ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): 'ಮೈಸೂರಿನಲ್ಲಿ ಆಚರಿಸುವ ದಸರಾ 7 ಕೋಟಿ ಕನ್ನಡಿಗರಿಗೆ ಸೇರಿದ ಹಬ್ಬ. ಬಿಜೆಪಿ ಮುಖಂಡರು ರಾಜಕೀಯ ಕಾರಣಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ಜನರು ನೆಮ್ಮದಿಯಿಂದ ಇರುವುದು ಅವರಿಗೆ ಬೇಕಾಗಿಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಭಿಪ್ರಾಯಪಟ್ಟರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ದಸರಾ ಹಬ್ಬಕ್ಕೆ ಎಪಿಜೆ ಅಬ್ದುಲ್ ಕಲಾಂ ಅವರನ್ನು ಆಹ್ವಾನಿಸಿದ್ದರು. ಕವಿ ಕೆ.ಎಸ್. ನಿಸಾರ್ ಅಹಮದ್ ದಸರಾ ಉದ್ಘಾಟಿಸಿದ್ದರು. ಅವರು ಕುಂಕುಮ ಹಚ್ಚಿಕೊಂಡು ಬಂದಿದ್ದರೇ? ಚೇಷ್ಟೆ ಮಾಡದಿದ್ದರೆ ಬಿಜೆಪಿ ಮುಖಂಡರಿಗೆ ನಿದ್ದೆ ಬರುವುದಿಲ್ಲ. ಮುಸ್ಲಿಂ ಎನ್ನುವ ಕಾರಣಕ್ಕೆ ಬಾನು ಮುಷ್ತಾಕ್ ಅವರ ವಿರುದ್ಧ ಅಪಸ್ವರ ಎತ್ತುವುದು ಸರಿಯಲ್ಲ' ಎಂದರು.

'ಸರ್ಕಾರ ಬಿಜೆಪಿಯ ಒತ್ತಡಕ್ಕೆ ಮಣಿಯುವುದಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಈಗಾಗಲೇ ನಿರ್ಧರಿಸಿದ್ದು ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಲಿದ್ದಾರೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸ್ವಯಂಪ್ರೇರಿತ ಪ್ರಕರಣ: ಮನವಿ



ಎಚ್.ಎ. ವೆಂಕಟೇಶ್

ಮೈಸೂರು: 'ದಸರಾ ಉದ್ಘಾಟಕರಾಗಿ ಲೇಖಕಿ ಬಾನು ಮುಷ್ತಾಕ್ ಅವರ ಆಯ್ಕೆ ವಿರೋಧಿಸಿ, ಒಂದು ರಾಜಕೀಯ ಪಕ್ಷದ ನಾಯಕರು ಹಾಗೂ ವಿವಿಧ ಮತೀಯ ಸಂಘಟನೆಗಳ ಕೆಲ ಮುಖಂಡರು ನೀಡುತ್ತಿರುವ ಹೇಳಿಕೆಗಳಿಂದ ಧಾರ್ಮಿಕ ಅಶಾಂತಿ ಸೃಷ್ಟಿಯಾಗುವ ವಾತಾವರಣ ನಿರ್ಮಾಣವಾಗುತ್ತಿದೆ. ಈ ಬೆಳವಣಿಗೆಯನ್ನು ತಡೆಯಲು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು' ಎಂದು ಕೆಪಿಸಿಸಿ ವಕ್ತಾರ ಎಚ್.ಎ. ವೆಂಕಟೇಶ್ ಮನವಿ ಮಾಡಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, 'ದ್ವೇಷ ಕಾರುವವರ ಮೇಲೆ ಕಠಿಣ ಕ್ರಮ ಜರುಗಿಸಲು ಹೈಕೋರ್ಟ್ ಮುಂದಾಗಬೇಕು' ಎಂದು ಕೋರಿದ್ದಾರೆ.

'ನಾಡಹಬ್ಬಕ್ಕೆ ಅಡಚಣೆ ಮಾಡಿ ಅದರ ಪಾವಿತ್ರ್ಯ ಹಾಳು ಮಾಡುವ ವರ್ತನೆಯನ್ನು ಕೆಲವರು ತೋರುತ್ತಿದ್ದಾರೆ. ಇದು ಪ್ರವಾಸಿಗರಿಗೆ ಅಡೆತಡೆ ಉಂಟು ಮಾಡುವಂತಿದೆ' ಎಂದು ದೂರಿದ್ದಾರೆ.

'ದಸರಾ ಸಾಮಾಜಿಕ ಸೌಹಾರ್ದ ಕಾಪಾಡುವ ಸಾಂಸ್ಕೃತಿಕ ಹಬ್ಬ. ಈ ಉತ್ಸವದಲ್ಲಿ ಧರ್ಮದ ದ್ವೇಷ ತುಂಬುವುದು ಹೇಡಿಗಳ ಕೃತ್ಯ' ಎಂದಿದ್ದಾರೆ.

'ಅದಕ್ಕೂ– ನಮಗೂ ಸಂಬಂಧವಿಲ್ಲ'

'ದಸರಾ ಉದ್ಘಾಟಕರ ವಿಚಾರದಲ್ಲಿ ನನ್ನ ಅಭಿಪ್ರಾಯವೇನೂ ಇಲ್ಲ. ಕರೆದವರು, ಕರೆಸಿಕೊಂಡವರಿಗಷ್ಟೇ ಗೊತ್ತು. ಸರ್ಕಾರದ ದಸರಾ ನಮ್ಮ ಪರಂಪರೆಯ ಭಾಗವಲ್ಲ. ನಮ್ಮ ದಸರಾ ಖಾಸಗಿಯಾಗಿಯೇ ನಡೆಯುತ್ತದೆ. ಸರ್ಕಾರದವರು ಅವರಿಗೆ ಬೇಕಾದ ರೀತಿ ನಡೆಸುತ್ತಾರೆ. ಅದಕ್ಕೂ– ನಮಗೂ ಸಂಬಂಧವಿಲ್ಲ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

'ಚಾಮುಂಡೇಶ್ವರಿ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದೆ. ಅದು ಹಿಂದೂಗಳಿಗೆ ಸೇರಿದ ದೇವಾಲಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಚಾಮುಂಡೇಶ್ವರಿ ಪ್ರಾಧಿಕಾರ ಅಧಿಕೃತವೋ, ಅಲ್ಲವೋ ಎಂಬುದನ್ನು ನ್ಯಾಯಾಲಯ ತೀರ್ಮಾನಿಸುತ್ತದೆ' ಎಂದರು.

'ವಿರೋಧ ನಾಗರಿಕವಾಗಿರಲಿ'

ಮೈಸೂರು: 'ಲೇಖಕಿ ಬಾನು ಮುಷ್ತಾಕ್ ವಿಷಯದಲ್ಲಿ ವಿರೋಧವು ನಾಗರಿಕವಾಗಿರಬೇಕೇ ಹೊರತು ಅಸಹ್ಯಕರವಾಗಿರಬಾರದು. ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ಜನಾಂಗೀಯ ದ್ವೇಷ ಹರಡುವಂಥ ಹೇಳಿಕೆ ನೀಡಿರುವುದು ಸರಿಯಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಅಶೋಕ ಅವರಿಗೆ ನಾಚಿಕೆ ಆಗಬೇಕು. ದನದ ಮಾಂಸ ತಿಂದು ಬರುತ್ತಾರೆಂದು ದೂರುತ್ತಾರೆ. ಆದರೆ ಗೋವಾ, ಗುಜರಾತ್, ಒಡಿಶಾದಲ್ಲಿ ದನದ ಮಾಂಸ ಮಾರಾಟ ಮಾಡುತ್ತಿರುವವರೇ ಬಿಜೆಪಿಗರು. ಗೋಮಾಂಸ ರಫ್ತಿನಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದೆ' ಎಂದರು.

'ಬಾನು ಮುಷ್ತಾಕ್ ಚಾಮುಂಡಿ ಬೆಟ್ಟ ಹತ್ತಬಾರದು ಎನ್ನುವ ಅಧಿಕಾರವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಗೆ ನೀಡಿದವರು ಯಾರು? ಇದು ಪ್ರಜಾಪ್ರಭುತ್ವದ ರಾಷ್ಟ್ರ. ಬೆಟ್ಟವು ಯಾವುದೇ ಜಾತಿ, ಧರ್ಮದ ಆಸ್ತಿಯಲ್ಲ. ಸರ್ಕಾರದ ಆಸ್ತಿ' ಎಂದರು.

'ಸರ್ಕಾರದ ಆಯ್ಕೆ ಸ್ವಾಗತಾರ್ಹ. 2 ವರ್ಷ ಹಿಂದೆ ಬಾನು ಮುಷ್ತಾಕ್ ಯಾವ ಸಂದರ್ಭದಲ್ಲಿ, ತಾವು ಯಾವ ಅರ್ಥದಲ್ಲಿ ಕನ್ನಡ ಕುರಿತಂತೆ ಹೇಳಿಕೆ ನೀಡಿದ್ದರು ಎಂಬ ಬಗ್ಗೆಯೂ ಸ್ಪಷ್ಟನೆ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೌನ ಮುರಿದು ವಿವಾದಕ್ಕೆ ಅಂತ್ಯ ಹಾಡಬೇಕು' ಎಂದು ಒತ್ತಾಯಿಸಿದರು.

'ಮೈಸೂರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಎರಡು ಬಾರಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಕರೆದೊಯ್ದಿರುವುದು ಇತಿಹಾಸದಲ್ಲಿ ದಾಖಲಾಗಿದೆ. ಬಾನು ಮುಷ್ತಾಕ್ ಅವರ ಆಯ್ಕೆ ವಿರೋಧಿಸುವ ಮೊದಲು, ಮಾಜಿ ಸಂಸದ ಪ್ರತಾಪ ಸಿಂಹ ಚರಿತ್ರೆಯನ್ನು ಓದಬೇಕು' ಎಂದರು.

> ಅನುವಾದಕಿ ದೀಪಾಭಾಸ್ತಿ ಅವರು ಬುಕರ್ ಪ್ರಶಸ್ತಿಯನ್ನು ಬಾನು ಮುಷ್ತಾಕ್ ಜೊತೆಗೆ ಹಂಚಿಕೊಂಡಿದ್ದಾರೆ. ಅವರನ್ನೂ ಆಹ್ವಾನಿಸಬೇಕು. ಅರಮನೆ ವೇದಿಕೆಯಲ್ಲಿ ಇಬ್ಬರನ್ನೂ ಸಿದ್ದರಾಮಯ್ಯನವರು ಗೌರವಿಸಲಿ
>
> **ಎಚ್.ವಿಶ್ವನಾಥ್,** ವಿಧಾನ ಪರಿಷತ್ ಸದಸ್ಯ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.33	24,307	21,868
ಹಾರಂಗಿ	2,859	2,858.51	7,853	5,479
ಕಬಿನಿ	2,284.00	2,283.66	19,215	21,650
ಹೇಮಾವತಿ	2,922	2,921.90	9,020	7,960
ಲಿಂಗನಮಕ್ಕಿ	1,819	1,817.40	44,964	52,439
ಸೂಪಾ (ಮೀ)	564	558.87	21,261.07	3,003.14
ಮಾಣಿ	595	593.65	3,523	-
ತುಂಗಭದ್ರಾ	1,633	1,625.86	47,211	64,566
ಮಲಪ್ರಭಾ	2,079.5	2,079.10	7,686	4,094
ಘಟಪ್ರಭಾ	2175	2,174.76	9,272	11,206
ಭದ್ರಾ *	186	184.8	26,391	32,410
ಆಲಮಟ್ಟಿ (ಮೀ)	519.6	519.56	78,390	68,240
ನಾರಾಯಣಪುರ (ಮೀ)	492.25	491.95	99,000	1,01,000

* ನೆಲಮಟ್ಟದಿಂದ

ಭಾರತ ಕಮ್ಯುನಿಸ್ಟ್ ಪಕ್ಷದ 25ನೇ ರಾಜ್ಯ ಸಮ್ಮೇಳನಕ್ಕೆ ಚಾಲನೆ

'ಕಾರ್ಮಿಕರಿಗೆ ಮೋದಿ ಸರ್ಕಾರ ಕಂಟಕ'

ಪ್ರಜಾವಾಣಿ ವಾರ್ತೆ

ಕಲಬುರಗಿ: ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) 25ನೇ ರಾಜ್ಯ ಸಮ್ಮೇಳನ ನಾಲ್ಕು ದಶಕಗಳ ಬಳಿಕ ಎರಡನೇ ಬಾರಿಗೆ ಕಲಬುರಗಿಯಲ್ಲಿ ಶನಿವಾರ ಆರಂಭವಾಯಿತು. ಸಮ್ಮೇಳನದ ಅಂಗವಾಗಿ ನಗರದ ಕನ್ನಡ ಭವನದಿಂದ ಬಸವರಾಜಪ್ಪ ಅಪ್ಪ ಸ್ಮಾರಕ ಭವನದವರೆಗೆ ಬೃಹತ್ ಮೆರವಣಿಗೆ ನಡೆಯಿತು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಅಮರಜೀತ್ ಕೌರ್, 'ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕಳೆದ 11 ವರ್ಷಗಳಲ್ಲಿ ರೈತರು, ಕಾರ್ಮಿಕರು, ಯುವಕರಿಗೆ ಕಂಟಕವಾಗಿದೆ. ರೈತರಿಗೆ ಮರಣಶಾಸನವಾಗಿದ್ದ ಮೂರು ಕೃಷಿ ಕಾಯ್ದೆಗಳನ್ನು ರೈತರ ಸತತ ಒತ್ತಡಕ್ಕೆ ಮಣಿದು ವಾಪಸ್ ತೆಗೆದುಕೊಂಡರೂ ಹಿಂಬಾಗಿಲಿನ ಮೂಲಕ ರೈತ ವಿರೋಧಿಯಾದ, ಕಾರ್ಪೊರೇಟ್ ಪರವಾದ ನೀತಿಗಳನ್ನು ಜಾರಿಗೆ ತರುತ್ತಿದ್ದಾರೆ' ಎಂದು ಟೀಕಿಸಿದರು.

ಕಲಬುರಗಿಯಲ್ಲಿ ಆಯೋಜಿಸಿರುವ ಸಿಪಿಐ 25ನೇ ರಾಜ್ಯ ಸಮ್ಮೇಳನದ ಅಂಗವಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ಶನಿವಾರ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

'ಎಡಪಕ್ಷಗಳ ಬೆಂಬಲದೊಂದಿಗೆ ಅಧಿಕಾರದಲ್ಲಿದ್ದ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಹಳ್ಳಿಯ ಬಡ ಕೂಲಿಕಾರರಿಗೆ ನೆರವಾಗಲು ಮನರೇಗಾ ಯೋಜನೆಯನ್ನು ಜಾರಿಗೆ ತಂದಿತ್ತು. ಆದರೆ, ಮೋದಿ ಸರ್ಕಾರ ವರ್ಷದಿಂದ ವರ್ಷಕ್ಕೆ ಈ ಯೋಜನೆಗೆ ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸುತ್ತಿದೆ' ಎಂದು ಹರಿಹಾಯ್ದರು.

'ದೇಶವು ಭಾರಿ ಪ್ರಮಾಣದ ನಿರುದ್ಯೋಗವನ್ನು ಎದುರಿಸುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದೂ ಕಾರಣವಾಗಿದೆ. ಮಂಜೂರಾದ ಎಲ್ಲ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು' ಎಂದು ಒತ್ತಾಯಿಸಿದರು.

ಚಿಂತಕ ಪ್ರೊ.ಆರ್.ಕೆ. ಹುಡಗಿ ಮಾತನಾಡಿ, 'ತಾತ್ಕಾಲಿಕವಾಗಿ ಈಗ ದೇಶದಲ್ಲಿ ಕೋಮುವಾದಿಗಳು ಮುನ್ನಡೆ ಸಾಧಿಸಿದಂತೆ ಕಂಡು ಬಂದರೂ ಭವಿಷ್ಯದಲ್ಲಿ ಅವರು ನೇಪಥ್ಯಕ್ಕೆ ಸರಿಯಲಿದ್ದಾರೆ. ದೇಶಕ್ಕೆ ಬಹಳ ದೀರ್ಘವಾದ ಜಾತ್ಯತೀತ ಪರಂಪರೆ ಇದೆ' ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಸಿದ್ದನಗೌಡ ಪಾಟೀಲ ಮಾತನಾಡಿ, '1925ರಲ್ಲಿ ಸ್ಥಾಪನೆಯಾದ ಸಿಪಿಐ, ದೇಶದ ದುಡಿಯುವ ಜನರ ಮೊದಲ ರಾಜಕೀಯ ಪಕ್ಷವಾಗಿದೆ. ಹಲವು ನಾಯಕರ, ಕಾರ್ಯಕರ್ತರ ದಿಟ್ಟತನದಿಂದ ಇದೀಗ 100 ವರ್ಷ ಪೂರೈಸುತ್ತಿದೆ. ಶತಮಾನದ ಬಳಿಕವೂ ವರ್ಗ ಕ್ರಾಂತಿಯನ್ನು ನೆರವೇರಿಸಲು ಇನ್ನೂ ಪ್ರಯತ್ನ ನಡೆದಿರುವ ಬಗ್ಗೆ ಬೇಸರವಿದೆ' ಎಂದು ಹೇಳಿದರು.

'ಧರ್ಮ, ಭಕ್ತಿ ಪ್ರದರ್ಶನ ವಸ್ತುಗಳಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: ಧರ್ಮ, ಪೂಜೆ, ಭಕ್ತಿ ಇವು ಪ್ರದರ್ಶನಕ್ಕೆ ಇರಿಸುವ ವಸ್ತುಗಳಲ್ಲ. ನಮ್ಮ ಆಚಾರ ವಿಚಾರಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೃಷ್ಣ ಮಠದ ರಾಜಾಂಗಣದಲ್ಲಿ ಶನಿವಾರ ನಡೆದ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಪಾದರ 64ನೇ ಜನ್ಮ ನಕ್ಷತ್ರೋತ್ಸವ ಮತ್ತು ಶ್ರೀಮನ್ಮಧ್ವಾಚಾರ್ಯರ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ ಸಮಾರಂಭದಲ್ಲಿ ಅಂಚೆ ಚೀಟಿ ಬಿಡುಗಡೆ ಗೊಳಿಸಿ ಅವರು ಮಾತನಾಡಿದರು.

ಧರ್ಮವು ಮನುಷ್ಯನಿಗೆ ಆತ್ಮವಿಶ್ವಾಸ ಹೆಚ್ಚಿಸುವ ದಾರಿ. ಧರ್ಮ ಯಾವುದಾದರೂ ತತ್ವ ಒಂದೇ. ಮನುಷ್ಯ ಯಶಸ್ಸು ಸಾಧಿಸಬೇಕಾದರೆ ಧರ್ಮ ರಾಯನ ಧರ್ಮ, ಕರ್ಣನ ದಾನಗುಣ, ಅರ್ಜುನನ ಗುರಿ, ಭೀಮನ ಬಲ ಜೊತೆಗೆ ಕೃಷ್ಣನ ತಂತ್ರವೂ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ಕೆಲವರು ಬಂಡೆಯ ವಿಚಾರ ಮಾತನಾಡಿದರು. ಬಂಡೆ ಎಂದರೆ ಪ್ರಕೃತಿ, ಕಡೆದರೆ ಅದು ಆಕೃತಿ, ಬಂಡೆಯನ್ನು ಹೇಗೆ ಬೇಕಾದರೂ ನಿಮಗೆ ಬಳಸಿಕೊಳ್ಳಬಹುದು ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ರಾಜಕಾರಣದ ಸಂಘರ್ಷವನ್ನು ಮೀರಿ ಡಿ.ಕೆ. ಶಿವಕುಮಾರ್ ಅವರ ಬಗ್ಗೆ ನಮಗೆ ಪ್ರೀತಿ ಇದೆ. ರಾಜಕಾರಣದಲ್ಲಿ ನೇರ, ದಿಟ್ಟ, ಶಕ್ತಿಮೀರಿ ಕೆಲಸ ಮಾಡುವ ಶಕ್ತಿ ಅವರಿಗಿದೆ ಎಂದರು.

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ, ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಸ್ವಾಮೀಜಿ, ಅದಮಾರು ಮಠಾಧೀಶ ವಿಶ್ವಪ್ರಿಯತೀರ್ಥ ಸ್ವಾಮೀಜಿ, ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ಕರ್ನಾಟಕ ವಲಯ ಪ್ರಧಾನ ಪೋಸ್ಟ್‌ಮಾಸ್ಟರ್ ಜನರಲ್ ಕೆ. ಪ್ರಕಾಶ್, ಆಫ್ರಿಕನ್ ವಿಶ್ವವಿದ್ಯಾಲಯದ ಕುಲಪತಿ ಕೆ. ರವಿ ಆಚಾರ್ಯ, ಮಾಹೆ ವಿ.ವಿ. ಸಹ ಕುಲಾಧಿಪತಿ ಡಾ. ಎಚ್.ಎಸ್, ಬಲ್ಲಾಳ್ ಉಪಸ್ಥಿತರಿದ್ದರು.

ಉಡುಪಿಯ ಕೃಷ್ಣ ಮಠಕ್ಕೆ ಶನಿವಾರ ಭೇಟಿ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇವರ ದರ್ಶನ ಪಡೆದು, ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಗಳಿಂದ ಪ್ರಸಾದ ಸ್ವೀಕರಿಸಿದರು

ಮೂರು ದಿನ ವಾಸ್ತವ್ಯ ಹೂಡಿದ್ದ ಸಾಕ್ಷಿ ದೂರುದಾರ

ಜಯಂತ್ ನಿವಾಸ: ಎಸ್‌ಐಟಿ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಿರುವುದಾಗಿ ಹೇಳಿರುವ ಸಾಕ್ಷಿ ದೂರುದಾರ ಮೂರು ದಿನ ವಾಸ್ತವ್ಯ ಹೂಡಿದ್ದ ಹೋರಾಟಗಾರ ಜಯಂತ್ ಅವರ ನಿವಾಸದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಶನಿವಾರ ಸ್ಥಳ ಮಹಜರು ನಡೆಸಿದೆ.

ಬೆಳ್ತಂಗಡಿಯಿಂದ ಎರಡು ವಾಹನದಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿ ದೂರುದಾರನನ್ನು ಕರೆದುಕೊಂಡು ಬಂದ ಎಸ್‌ಐಟಿ ಅಧಿಕಾರಿಗಳು, ತಜ್ಞರ ತಂಡದ ಜತೆ ಪೀಣ್ಯದ ಟಿ.ಜಯಂತ್ ಅವರ ಬಾಡಿಗೆ ನಿವಾಸಕ್ಕೆ ಭೇಟಿ ನೀಡಿ, ಶೋಧ ನಡೆಸಿತು.

ಸ್ಥಳ ಮಹಜರು ನಡೆಸಿದ ಸಂದರ್ಭದಲ್ಲಿ ಜಯಂತ್ ಮನೆಯಲ್ಲಿ ಇರಲಿಲ್ಲ. ಅವರ ಪತ್ನಿ ಹಾಗೂ ಮಕ್ಕಳ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ದೂರುದಾರ ಯಾವಾಗ ಮನೆಗೆ ಬಂದಿದ್ದ? ಎಷ್ಟು ದಿನ ಮನೆಯಲ್ಲಿದ್ದ? ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ. ಅಲ್ಲದೇ ಅಕ್ಕಪಕ್ಕದ ಮನೆಗಳ ನಿವಾಸಿಗಳಿಂದ ದೂರುದಾರನ ವಾಸ್ತವ್ಯ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ಸತತ 5 ತಾಸು ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಈ ವೇಳೆ ಜಯಂತ್ ಅವರ ಪತ್ನಿಯ ಮೊಬೈಲ್ ವಶಕ್ಕೆ ಪಡೆದಿದೆ. ಕೆಲವು ವಸ್ತುಗಳನ್ನು ವಶಕ್ಕೆ ಪಡೆದು ಪಂಚನಾಮೆ ಮಾಡಲಾಗಿದೆ.

ವಕೀಲರ ಭೇಟಿಗೆ ಬೆಂಗಳೂರಿಗೆ ಬಂದಿದ್ದ ದೂರುದಾರ, ಜಯಂತ್ ಅವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದ ಹಾಗೂ ಮೂರನೇ ಬಾರಿ ಜಯಂತ್ ನಿವಾಸಕ್ಕೆ ಬಂದ ವೇಳೆ ತಲೆ ಬುರುಡೆ ತಂದಿದ್ದ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಮುಖ್ಯಾಂಶಗಳು

- ಜಯಂತ್ ಪತ್ನಿ, ಮಕ್ಕಳ ಹೇಳಿಕೆ ದಾಖಲಿಸಿದ ಪೊಲೀಸರು
- ಸತತ 5 ತಾಸು ವಿಚಾರಣೆ
- ಅಕ್ಕಪಕ್ಕದ ಮನೆಗಳ ನಿವಾಸಿಗಳಿಂದ ಮಾಹಿತಿ ಸಂಗ್ರಹ

'ತಲೆ ಬುರುಡೆ ಜತೆ ಸ್ವಾಮೀಜಿ ಭೇಟಿ'

'ದೆಹಲಿಗೆ ತಲೆ ಬುರುಡೆ ತೆಗೆದುಕೊಂಡು ಹೋಗಿದ್ದು ನಿಜ. ನಾನು, ದೂರುದಾರ, ಸುಜಾತಾ ಭಟ್, ಗಿರೀಶ್ ಮಟ್ಟೆಣ್ಣನವರ ಸೇರಿ ದೆಹಲಿಗೆ ಕಾರಿನಲ್ಲಿ ಹೋಗಿದ್ದೆವು. ದೆಹಲಿಯಿಂದ ಮಂಗಳೂರಿಗೆ ಬುರುಡೆ ತರಲಾಯಿತು. ಈ ನಡುವೆ ಮಠದ ಸ್ವಾಮೀಜಿಯೊಬ್ಬರನ್ನು ಭೇಟಿ ಮಾಡಲಾಗಿತ್ತು. ಆದರೆ ಯಾವ ಮಠ, ಯಾವ ಸ್ವಾಮೀಜಿ ಎಂಬುದನ್ನು ದೂರುದಾರನ ಜತೆಯಲ್ಲಿ ಇದ್ದವರೇ ಹೇಳಬೇಕು. ಈ ಪ್ರಕರಣದಲ್ಲಿ ಯಾವುದೇ ಶಿಕ್ಷೆ ಅನುಭವಿಸಲು ಸಿದ್ಧ' ಎಂದು ಟಿ.ಜಯಂತ್ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

'ಬೆಂಗಳೂರಿನಲ್ಲಿರುವ ನನ್ನ ನಿವಾಸದಲ್ಲಿ ಎಸ್‌ಐಟಿ ಸ್ಥಳ ಮಹಜರು ನಡೆಸಿದೆ. ನಾನು ಊರಿನಲ್ಲಿ ಇದ್ದೇನೆ. ಮನೆಯಲ್ಲಿ ಇಬ್ಬರು ಮಕ್ಕಳಿದ್ದು, ಅವರನ್ನೇ ಕೇಳಿದರೆ ಉತ್ತರ ನೀಡುತ್ತಾರೆ. ನಾಲ್ಕು ತಿಂಗಳ ಹಿಂದೆ ಮನೆಗೆ ಕರೆದುಕೊಂಡು ಬಂದಿದ್ದು ನಿಜ. ಮೂರು ದಿನ ನನ್ನ ಮನೆಯಲ್ಲಿ ವಾಸ್ತವ್ಯ ಮಾಡಿದ್ದ. ಪ್ರಕರಣ ಈವರೆಗೂ ಬರುತ್ತದೆ ಎಂಬುದು ಗೊತ್ತಿರಲಿಲ್ಲ' ಎಂದು ತಿಳಿಸಿದ್ದಾರೆ.

5ನೇ ದಿನವೂ ಸುಜಾತಾ ಭಟ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ತನ್ನ ಮಗಳು ಅನನ್ಯಾ ಭಟ್ ವರ್ಷಗಳ ಹಿಂದೆ ಧರ್ಮಸ್ಥಳ ಗ್ರಾಮದಲ್ಲಿ ನಾಪತ್ತೆಯಾಗಿದ್ದಾಳೆ ಎಂದು ದೂರು ನೀಡಿರುವ ಸುಜಾತಾ ಭಟ್ ಅವರ ವಿಚಾರಣೆ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಶನಿವಾರವೂ ಮುಂದುವರಿಯಿತು. ಈ ಮೂಲಕ ಅವರ ವಿಚಾರಣೆ ಸತತ ಐದನೇ ದಿನಕ್ಕೆ ಕಾಲಿಟ್ಟಿತು.

'ಸುಜಾತಾ ಭಟ್ ತನಿಖಾ ತಂಡದ ಹಾದಿ ತಪ್ಪಿಸಿರುವುದು ಅಥವಾ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರುವುದು ವಿಚಾರಣೆಯಲ್ಲಿ ಸಾಬೀತಾದರೆ ಅದಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಮುಂದಿನದ್ದೆಲ್ಲವೂ ನ್ಯಾಯಾಲಯದಲ್ಲಿ ನಿರ್ಧಾರ ಆಗಲಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಸಮೀರ್ ವಿಚಾರಣೆ: ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತುಹಾಕಲಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ ಕೃತಕ ಬುದ್ಧಿಮತ್ತೆ ಬಳಸಿ 23 ನಿಮಿಷಗಳ ವಿಡಿಯೊ ಸಿದ್ಧಪಡಿಸಿ ಪ್ರಸಾರ ಮಾಡಿದ್ದ ಯೂಟ್ಯೂಬರ್ ಸಮೀರ್ ಎಂ.ಡಿ., ಶನಿವಾರ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಾಜರಾದರು.

ಮಧ್ಯಾಹ್ನದವರೆಗೆ ಅವರು ಠಾಣೆಯಲ್ಲಿದ್ದರು. ಅವರ ಹೇಳಿಕೆ ಪಡೆದುಕೊಂಡು ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಡಿಯೊಗೆ ಸಂಬಂಧಿಸಿ ಸಮೀರ್ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು.

ಎಸ್‌ಐಟಿ ವಶದಲ್ಲೇ ಇರಲಿ

'ಸಾಕ್ಷಿ ದೂರುದಾರನನ್ನು ತನಿಖೆಯ ನಂತರವೂ ಎಸ್‌ಐಟಿ ವಶದಲ್ಲೇ ಇರಿಸಬೇಕು' ಎಂದು ಸಾಮಾಜಿಕ ಹೋರಾಟಗಾರ್ತಿ, ಸೌಜನ್ಯಾ ಪರ ಹೋರಾಟದಲ್ಲಿ ಸಕ್ರಿಯರಾಗಿರುವ ಪ್ರಸನ್ನಾ ರವಿ ಅವರು ಶನಿವಾರ ಎಸ್‌ಐಟಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ತನಿಖೆಯ ನಂತರ ಸಾಕ್ಷಿ ದೂರುದಾರನಿಗೆ ಏನಾದೀತು ಎಂದು ಹೇಳುವುದು ಕಷ್ಟ. ಈ ಕಾರಣದಿಂದ ಆತನಿಗೆ ರಕ್ಷಣೆ ಅಗತ್ಯ ಎಂಬುದನ್ನು ಪ್ರತಿಪಾದಿಸಿದ್ದೇನೆ' ಎಂದರು.

'ಸೌಜನ್ಯಾ ಅವರ ತಾಯಿ ಕುಸುಮಾವತಿ ಈಚೆಗೆ ಎಸ್‌ಐಟಿಗೆ ಕೊಟ್ಟಿರುವ ದೂರಿನಲ್ಲಿ ತಮ್ಮ ಮಗಳ ಸಾವಿಗೆ ಸಂಬಂಧಿಸಿ ಸಾಕ್ಷಿ ದೂರುದಾರನಿಗೆ ಮಾಹಿತಿ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಆತನಿಗೂ ಅಪಾಯ ಆಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಇನ್ನಷ್ಟು ಸ್ಥಳಗಳಲ್ಲಿ ಮಹಜರು: 'ಸಾಕ್ಷಿ ದೂರುದಾರನನ್ನು ಕೆಲ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಲಾಗುತ್ತಿದೆ. ಸಾಕ್ಷಿ ದೂರುದಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ ತಲೆಬುರುಡೆಯ ಎಫ್‌ಎಸ್‌ಎಲ್ ವರದಿ ಇನ್ನೂ ತಲುಪಿಲ್ಲ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಸಿದ್ರಾಮುಲ್ಲಾಖಾನ್' ಸ್ಟೇಟಸ್ ಪಿಡಿಒ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡುವ ರೀತಿಯಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ ಆಳಂದ ತಾಲ್ಲೂಕಿನ ಸುಂಟನೂರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಪ್ರವೀಣಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.



ಪ್ರವೀಣ ಕುಮಾರ್

ಆಗಸ್ಟ್ 21ರಂದು ಪ್ರವೀಣಕುಮಾರ್ ತಮ್ಮ ಮೊಬೈಲ್‌ನ ವಾಟ್ಸ್‌ಆ್ಯಪ್‌ನಲ್ಲಿ 'ಸಿದ್ರಾಮುಲ್ಲಾಖಾನ್' ಎಂಬ ಬರಹದ ಜೊತೆಗೆ ಸಿದ್ದರಾಮಯ್ಯ ಅವರ ತಲೆಗೆ ಮುಸ್ಲಿಮರು ಧರಿಸುವ ಟೊಪ್ಪಿಗೆ ಹಾಕಿರುವಂತೆ ಎಡಿಟ್ ಮಾಡಲಾದ ಚಿತ್ರವನ್ನು ಸ್ಟೇಟಸ್ ಇಟ್ಟುಕೊಂಡಿದ್ದರು.

ಗ್ರಾಮದ ಮುಖಂಡ ಮಹಾಲಿಂಗಪ್ಪ ಹರವಾಳ, ಆಳಂದ ತಾಲ್ಲೂಕು ಕುರುಬರ ಸಂಘದ ಯುವ ಘಟಕದ ಅಧ್ಯಕ್ಷ ಬೀರಣ್ಣಾ ಪೂಜಾರಿ ಅವರು ಪಿಡಿಒ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿ ಪಂಚಾಯಿತಿ ಅಧಿಕಾರಿಗಳಿಗೆ ದೂರು ನೀಡಿದ್ದರು. ಗ್ರಾಮದ ಮುಖಂಡ ಮಲ್ಲಿಕಾರ್ಜುನ ಡಣ್ಣೂರ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ನಿಂಬರ್ಗಾ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಮಾನತು: ಘಟನೆಯ ಕುರಿತು ವರದಿ ತರಿಸಿಕೊಂಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭಂವರ್ ಸಿಂಗ್ ಮೀನಾ ಅವರು ಪಿಡಿಒ ಪ್ರವೀಣಕುಮಾರ್ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಆನೆ ದಾಳಿ ಸಂತ್ರಸ್ತರ ಅರಣ್ಯ ರೋದನ



ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕಿನ ಬೂದನೂರು ಗ್ರಾಮದಲ್ಲಿ ಓಡಾಡಿದ್ದ ಕಾಡಾನೆ

ಕಾಡಾನೆ ಸೆರೆ ಕಾರ್ಯಾಚರಣೆ ಅಂಕಿಅಂಶ

115 2015–2024ರವರೆಗೆ ಸೆರೆ ಹಿಡಿದು ಪಳಗಿಸಿರುವ ಪುಂಡಾನೆಗಳು

130 ಕಾಡಾನೆಗಳ ಸ್ಥಳಾಂತರ

110 ಬೇರೆ ರಾಜ್ಯಗಳಿಗೆ ಕೊಡುಗೆಯಾಗಿ ನೀಡಿರುವ ಆನೆಗಳ ಸಂಖ್ಯೆ

350 ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಕೆ

₹15 ಲಕ್ಷ ಆನೆ ಕಾರ್ಯಾಚರಣೆಗೆ ತಗುಲುವ ಅಂದಾಜು ವೆಚ್ಚ

‘ಆನೆ ಕಾರಿಡಾರ್‌ಗೆ ಭೂಮಿ ಖರೀದಿಸಲಿ’

‘ಹಿಂದೆ ಕಾಡು ಸಮೃದ್ಧವಾಗಿತ್ತು. ಕಾಡಂಚಿನಲ್ಲೂ ರೈತರಿಗೆ ಕಾಡಾನೆ ಸೇರಿ ವನ್ಯಜೀವಿಗಳಿಂದ ಸಮಸ್ಯೆ ಇರಲಿಲ್ಲ. ಅರಣ್ಯ ನಾಶದಿಂದ ಕಾಡು ಪ್ರಾಣಿಗಳು ನಾಡಿಗೆ ಬರಬೇಕಾದ ಸ್ಥಿತಿ ಬಂದಿದೆ. ಪ್ರವಾಸೋದ್ಯಮ ಕೇಂದ್ರಿತ ಅಭಿವೃದ್ಧಿಯೇ ಸರ್ಕಾರಕ್ಕೆ ಮುಖ್ಯವಾಗಿದೆ. ಹೀಗಾಗಿ ಅರಣ್ಯದಂಚಿನಲ್ಲಿ ನಿಯಮ ಮೀರಿ ರೆಸಾರ್ಟ್, ಹೋಂಸ್ಟೇಗಳು ನಿರ್ಮಾಣವಾಗಿವೆ. ಆನೆಗಳು ಕೊಡಗು ಭಾಗದಲ್ಲಿ ತೋಟದಲ್ಲಿಯೇ ಮರಿ ಹಾಕಿ ಅಲ್ಲಿಯೇ ಜೀವಿಸುತ್ತಿವೆ. ಕಾಡಾನೆಗಳು ತೋಟದಾನೆಗಳಾಗಿ ಮಾಡಿದವರು ನಾವೇ ಅಲ್ಲವೆ! ಆನೆ, ಮಾನವ ಸಂಘರ್ಷ ಕೊನೆಗೊಳಿಸಲು ದೊಡ್ಡಿ ಮಾಡಿ ಆನೆಗಳನ್ನು ದನಗಳಂತೆ ಕೂಡಿ ಹಾಕುವುದು ವಿವೇಕಿಗಳು ಮಾಡುವ ಕೆಲಸವಲ್ಲ. ಇದು ಹಣದ ಲೂಟಿಯ ಮಾರ್ಗವಷ್ಟೇ. ಅದರ ಬದಲು ಅದೇ ಹಣದಲ್ಲಿ ಆನೆಗಳ ಕಾರಿಡಾರ್ ರಕ್ಷಣೆಯಾಗಲಿ. ಬಂಡವಾಳಶಾಹಿಗಳಿಗೆ ಕೈಗಾರಿಕೆ ಸ್ಥಾಪಿಸಲು ರೈತರ ಭೂಮಿ ಕಸಿಯುವ ಕೆಲಸ ಮಾಡುವ ಬದಲು, ಆನೆಗಳ ಕಾರಿಡಾರ್ ರಕ್ಷಿಸಬೇಕು. ಹೆದ್ದಾರಿ, ಗಣಿಗಾರಿಕೆ, ಪ್ರವಾಸೋದ್ಯಮದ ಹೆಸರಿನಲ್ಲಿ ಕಾರಿಡಾರ್ ನಾಶ ಮಾಡಲಾಗಿದೆ. ಆನೆ,ಮಾನವ ಸಂಘರ್ಷ ತಪ್ಪಿಸಲು ಸರ್ಕಾರ ಪ್ರಾಮಾಣಿಕ ಕಾರ್ಯ ಮಾಡಬೇಕು.

ಬಡಗಲಪುರ ನಾಗೇಂದ್ರ
ಅಧ್ಯಕ್ಷ,ರಾಜ್ಯರೈತಸಂಘ

ಒಂದನೇ ಪುಟದಿಂದ...

ನಾಡಿನತ್ತ ಮುಖ ಮಾಡಿರುವ ಕಾಡಾನೆಗಳು ಸೇರಿದಂತೆ ವನ್ಯಜೀವಿಗಳಿಂದ ದಾಳಿಗೊಳಗಾಗಿ ಅರೆಜೀವ ಹಿಡಿದು ಬದುಕುತ್ತಿರುವ ಸಂತ್ರಸ್ತರ ನೋವಿನ ಕತೆ ತೆರೆದುಕೊಳ್ಳುತ್ತದೆ. ಒಬ್ಬೊಬ್ಬರದ್ದೂ ಒಂದೊಂದು ಬಗೆಯ ಗೋಳು ಮತ್ತು ಕರುಣಾಜನಕ ಕತೆ. ರಾಜ್ಯದಲ್ಲಿ ವನ್ಯಜೀವಿಗಳ ದಾಳಿಗೆ ಕಳೆದ ಐದು ವರ್ಷಗಳಲ್ಲಿ 217 ಮಂದಿ ಬಲಿಯಾಗಿದ್ದಾರೆ. 1,355 ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಕಾಡಾನೆ ದಾಳಿಯಿಂದಾದ ಸಾವು–ನೋವೇ ಹೆಚ್ಚು. ವಿವಿಧ ಹಂತದ ಅಂಗವೈಕಲ್ಯಕ್ಕೆ ತುತ್ತಾಗಿ ನಿತ್ಯವೂ ಆ ನೋವಿನಲ್ಲೇ ಕಣ್ಣೀರು ಹಾಕುತ್ತಾ ಬದುಕುತ್ತಿರುವ ಸಂತ್ರಸ್ತರ ಬದುಕನ್ನು ಕಣ್ಣಾರೆ ಕಂಡರೆ ಎಂಥವರ ಮನವಾದರೂ ಒಂದು ಕ್ಷಣ ಕಲುಕುತ್ತದೆ.

ಬಿಡಿಗಾಸಿನ ಪರಿಹಾರ: ಕಾಡಾನೆ ದಾಳಿಗೊಳಗಾಗಿ ಅಂಗವಿಕಲರಾದವರಿಗೆ ಅರಣ್ಯ ಇಲಾಖೆಯಿಂದ ಸಿಕ್ಕಿದ್ದು ಬಿಡಿಗಾಸಿನ ಪರಿಹಾರ. ಬಹುತೇಕ ಸಂತ್ರಸ್ತರು ಸುಧಾರಿಸಿಕೊಳ್ಳಲು ಕನಿಷ್ಠ ಆರು ತಿಂಗಳಿಂದ ಎರಡ್ಮೂರು ವರ್ಷಗಳವರೆಗೆ ಆಸ್ಪತ್ರೆಗೆ ಅಲೆದಿದ್ದಾರೆ. ಕಾಡಾನೆ ದಾಳಿಯಿಂದ ಶಾಶ್ವತ ಮತ್ತು ಭಾಗಶಃ ಅಂಗವೈಕಲ್ಯ, ಗಾಯಾಳುಗಳಿಗೆ ಅರಣ್ಯ ಇಲಾಖೆ ಅಲ್ಪ ಪರಿಹಾರ ನೀಡಿ ಕೈ ತೊಳೆದುಕೊಳ್ಳುತ್ತಿದೆ. ವಾಸ್ತವದಲ್ಲಿ ಸಂತ್ರಸ್ತರು ತಮ್ಮ ಚಿಕಿತ್ಸೆಗೆ ಪರಿಹಾರದ ಮೊತ್ತದ ಎರಡರಿಂದ ಮೂರು ಪಟ್ಟು ಖರ್ಚು ಮಾಡಿದ್ದಾರೆ. ಇಂದಿಗೂ ಆಸ್ಪತ್ರೆಗೆ ಮತ್ತು ಔಷಧಕ್ಕೆ ಹಣ ಸುರಿಯುತ್ತಲೇ ಇದ್ದಾರೆ. ಇವರಲ್ಲಿ ಹೆಚ್ಚಿನ ಸಂತ್ರಸ್ತರು ಬಡ ರೈತರು ಹಾಗೂ ಕೂಲಿ ಕಾರ್ಮಿಕರು.

ತಾರತಮ್ಯ: ಮಾನವ– ವನ್ಯಜೀವಿ ಸಂಘರ್ಷದಿಂದ ಪ್ರಾಣ ಹಾನಿ ಮತ್ತು ಅಂಗವೈಕಲ್ಯ ಪ್ರಕರಣಗಳ ಪರಿಹಾರದಲ್ಲೂ ಸಾರ್ವಜನಿಕರು ಮತ್ತು ಸಿಬ್ಬಂದಿ ಜೀವದ ವಿಷಯದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬುದು ಕೃಷಿ ಕಾರ್ಮಿಕರ ಆಕ್ರೋಶ. ಅರಣ್ಯದಿಂದ ಹೊರಗೆ ವನ್ಯಜೀವಿಗಳ ದಾಳಿಯಿಂದ ಸಾರ್ವಜನಿಕರು ಮೃತಪಟ್ಟರೆ ವರ್ಷದ ಹಿಂದೆ ₹15 ಲಕ್ಷ ನೀಡುತ್ತಿದ್ದ ಪರಿಹಾರ ಮೊತ್ತವನ್ನು ಈ ವರ್ಷ ₹20 ಲಕ್ಷಕ್ಕೆ ಏರಿಸಲಾಗಿದೆ. ಜೊತೆಗೆ ಮೃತರ ಒಬ್ಬರು ಅವಲಂಬಿತರಿಗೆ ಐದು ವರ್ಷದವರೆಗೆ ₹4 ಸಾವಿರ ಪಿಂಚಣಿ ಪಾವತಿಸಲಾಗುತ್ತಿದೆ.

ಆದರೆ ಅರಣ್ಯ ಇಲಾಖೆಯ ಹೊರಗುತ್ತಿಗೆ ಸಿಬ್ಬಂದಿ ಕಾಡಿನಲ್ಲಿ ಆನೆ ಓಡಿಸುವಾಗ ಮೃತಪಟ್ಟರೆ ₹25 ಲಕ್ಷ ಪರಿಹಾರ ನೀಡಲಾಗುತ್ತದೆ. ಅವರ ಅವಲಂಬಿತರೊಬ್ಬರಿಗೆ ತಿಂಗಳಿಗೆ ₹5 ಸಾವಿರ ಪಿಂಚಣಿ ನೀಡಲಾಗುತ್ತದೆ. ಇಲಾಖೆ ಕಾಯಂ ಸಿಬ್ಬಂದಿಗೆ ವಿಮೆ ಇರುವುದರಿಂದ ಅವರೇನಾದರೂ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟರೆ ₹50 ಲಕ್ಷ ಪರಿಹಾರ ಸಿಗುತ್ತದೆ. ಈ ತಾರತಮ್ಯವೇಕೆ ಎನ್ನುವ ಪ್ರಶ್ನೆ ಉಳಿದಿದೆ.

ಕಾಡು ಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆಗೆ ₹10 ಲಕ್ಷ ಪರಿಹಾರ, ಭಾಗಶಃ ಅಂಗವಿಕಲತೆಗೆ ₹5 ಲಕ್ಷ, ಕಾಡು ಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ₹60 ಸಾವಿರದವರೆಗೆ ಪರಿಹಾರ, ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟವಾದ ಪ್ರತಿ ಪ್ರಕರಣಕ್ಕೆ ₹20 ಸಾವಿರ ನೀಡಲಾಗುತ್ತಿದೆ. ವನ್ಯಜೀವಿಗಳ ದಾಳಿಯಿಂದ ಸಂಭವಿಸಿದ ಮನುಷ್ಯ ಮತ್ತು ಸಾಕುಪ್ರಾಣಿಗಳ ಸಾವು–ನೋವು, ಬೆಳೆ–ಆಸ್ತಿ ನಷ್ಟ ಹಾಗೂ ಮೃತರ ಅವಲಂಬಿತರ ಮಾಸಾಶನಕ್ಕೆ ಅರಣ್ಯ ಇಲಾಖೆ ಕಳೆದ ಐದು ವರ್ಷದಲ್ಲಿ ₹177.28 ಕೋಟಿ ವ್ಯಯಿಸಿದೆ!

ಮಾನದಂಡವೇನು?: ವನ್ಯಜೀವಿ ದಾಳಿಯಿಂದ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶದಲ್ಲಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರಬಾರದು. ಮರಣೋತ್ತರ ಪರೀಕ್ಷೆ ವರದಿಯಲ್ಲಿ ವ್ಯಕ್ತಿ ವನ್ಯಜೀವಿಯಿಂದ ಮೃತನಾಗಿದ್ದಾನೆಂದು ದೃಢಪಟ್ಟಾಗ ಅವರ ವಾರಸುದಾರರಿಗೆ ₹20 ಲಕ್ಷ ಪರಿಹಾರ ನೀಡಲಾಗುತ್ತದೆ. ಈ ಪೈಕಿ ₹5 ಲಕ್ಷವನ್ನು ತಕ್ಷಣ ನೀಡಬೇಕು. ಉಳಿದ ಹಣವನ್ನು ಕ್ಷೇತ್ರ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಂತದಲ್ಲಿ ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿಗಳಿಂದ ವಿಚಾರಣೆ ನಡೆಸಿ, ಅಗತ್ಯವಿರುವ ದಾಖಲೆ ಪಡೆದು ಪರಿಶೀಲಿಸಿ ಬಳಿಕ ಹಣ ಬಿಡುಗಡೆ ಮಾಡಲಾಗುತ್ತದೆ.

ಶೀಘ್ರ ಪರಿಹಾರ ನೀಡಬೇಕು ಎನ್ನುವುದು ಕಡತದಲ್ಲಿದೆ. ಆದರೆ ಇದೇನು ಸುಲಭವಾಗಿ ಬಿಡುಗಡೆಯಾಗುವುದಿಲ್ಲ. ‘ಕಾಡಾನೆ ದಾಳಿಗೆ ಸಿಲುಕಿ ಹಾಸಿಗೆ ಹಿಡಿದು ಸುಧಾರಿಸಿಕೊಂಡ ನಂತರ ನೋವಿನಲ್ಲೇ ಪರಿಹಾರಕ್ಕಾಗಿ ಅರಣ್ಯ ಇಲಾಖೆ ಕಚೇರಿಗೆ ಅಲೆದು ಸುಸ್ತಾದೆ. ಕಡೆಗೆ ನನ್ನ ಸ್ಥಿತಿಯನ್ನು ಅಳೆದು ತೂಗಿ ₹2.50 ಲಕ್ಷ ಪರಿಹಾರ ಕೊಟ್ಟರು. ನನ್ನ ದೇಹಕ್ಕೆ 27 ಹೊಲಿಗೆ ಹಾಕಲಾಗಿದೆ. ಕೈಗೆ ಬಂದ ಪರಿಹಾರಕ್ಕಿಂತ ಹೆಚ್ಚು ಹಣ ಆಸ್ಪತ್ರೆಗೆ ಖರ್ಚಾಯಿತು. ಮೂತ್ರಪಿಂಡ ವಿಫಲವಾಗಿದ್ದು ಆರು ತಿಂಗಳಿಗೊಮ್ಮೆ ತಪಾಸಣೆ ನಡೆಸಬೇಕೆಂದು ವೈದ್ಯರು ಹೇಳಿದ್ದಾರೆ. ಅದಕ್ಕೂ ನನ್ನ ಬಳಿ ಹಣವಿಲ್ಲದಂತಾಗಿದೆ’ ಎಂದು ಫಾತಿಮಾ ಅಳಲು ತೋಡಿಕೊಂಡರು.

‘ಆನೆ ದಾಳಿಯಿಂದ ನಿಮಗೆ ಅಷ್ಟೇನು ತೊಂದರೆಯಾಗಿಲ್ಲ ಎಂದ ಅರಣ್ಯ ಇಲಾಖೆಯವರು ಪರಿಹಾರವಾಗಿ ಕೊಟ್ಟಿದ್ದು ಕೇವಲ ₹35 ಸಾವಿರ. ಆದರೆ, ಚಿಕಿತ್ಸೆಗೆ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚವಾಗಿದೆ. ನೋವು ನಿವಾರಣೆಗೆ ಅಂದಿನಿಂದ ತಿಂಗಳಿಗೆ ₹600 ಮೊತ್ತದ ಮಾತ್ರೆಗಳನ್ನು ಸೇವಿಸುತ್ತಿದ್ದೇನೆ. ಏನೇ ಆದರೂ ಬಡವರಿಗೆ ಇಂತಹ ಸ್ಥಿತಿ ಬರಬಾರದು. ಇದ್ದರೆ ಚೆನ್ನಾಗಿರಬೇಕು. ಇಲ್ಲದಿದ್ದರೆ ಸತ್ತು ಹೋಗಿ ಬಿಡಬೇಕು’ ಎಂದು ಲಕ್ಷ್ಮಮ್ಮ ನೋವಿನಿಂದ ನುಡಿದರು.

ಅಭಿವೃದ್ಧಿಯ ಸಂಘರ್ಷ: ಮನುಷ್ಯ ಒಂದೆಡೆ ತನ್ನ ಅಭಿವೃದ್ಧಿ ನೆಲೆಯನ್ನು ಕಾಡಿನತ್ತ ವಿಸ್ತರಿಸುತ್ತಿದ್ದರೆ ಮತ್ತೊಂದೆಡೆ ಕಾಡಾನೆ ಸೇರಿದಂತೆ ವಿವಿಧ ವನ್ಯಜೀವಿಗಳು ತಮ್ಮ ಆವಾಸಸ್ಥಾನ ಮತ್ತು ಆಹಾರವನ್ನು ನಾಡಿನಲ್ಲಿ ಹುಡುಕತೊಡಗಿವೆ. ಕಾಡಿನಲ್ಲಿ ಇಲ್ಲವೇ ಮೃಗಾಲಯ ಹಾಗೂ ವನ್ಯಜೀವಿಧಾಮದಲ್ಲಷ್ಟೇ ಈ ಹಿಂದೆ ಆನೆ, ಚಿರತೆ, ಕರಡಿಗಳ ದರ್ಶನ ಸಿಗುತ್ತಿತ್ತು. ಆದರೆ, ಕಳೆದ ಒಂದೂವರೆ ದಶಕದಲ್ಲಿ ಅದೇ ಆನೆಗಳು ಈಗ ಮನೆ ಮತ್ತು ಜಮೀನುಗಳಿಗೆ ನುಗ್ಗುತ್ತಿವೆ. ಚಿರತೆಗಳು ಗ್ರಾಮಗಳಿಗೆ ನುಗ್ಗಿ ಮನೆಯ ಮುಂದೆ ಮಲಗಿದ ನಾಯಿ, ಕೊಟ್ಟಿಗೆಯಲ್ಲಿರುವ ಹಸುಗಳನ್ನು ಎಳೆದೊಯ್ಯುತ್ತಿವೆ. ಎದುರಿಗೆ ಸಿಕ್ಕವರ ಮೇಲೆರಗಿ ಜೀವ ತೆಗೆಯುತ್ತಿವೆ. ಗಾಯಗೊಳಿಸಿ ಜೀವನಪೂರ್ತಿ ನರಳುವಂತೆ ಮಾಡಿದ ಅನೇಕ ಪ್ರಕರಣಗಳಿವೆ.

ಬೆಳೆಹಾನಿ ಸಾಮಾನ್ಯ: ಹಾಸನ, ಬೆಂಗಳೂರು ದಕ್ಷಿಣ (ರಾಮನಗರ), ಕೊಡಗು, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ಮೈಸೂರು, ಚಿಕ್ಕಮಗಳೂರು, ಧಾರವಾಡ, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾವಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಇದೆ. ಜೀವ ಹಾನಿ, ಗಾಯಗೊಳಿಸುವುದು ಹಾಗೂ ಬೆಳೆಹಾನಿ ಸಾಮಾನ್ಯವಾಗಿದೆ.

ಹೆಸರಿಗಷ್ಟೇ ಆನೆ ಕಾರಿಡಾರ್ ಅಸ್ತಿತ್ವದಲ್ಲಿವೆ. ಎಲ್ಲಾ ಕಡೆ ಒತ್ತುವರಿಯಾಗಿ ಕಾರಿಡಾರ್ ತುಂಡುತುಂಡಾಗಿದೆ. ಆನೆಗಳ ಆವಾಸಸ್ಥಾನವಾಗಿರುವ ರಾಷ್ಟ್ರೀಯ ಉದ್ಯಾನ, ವನ್ಯಜೀವಿಧಾಮ, ಅಭಯಾರಣ್ಯ, ಮೀಸಲು ಅರಣ್ಯ, ಪಶ್ಚಿಮ ಘಟ್ಟದ ಕಾಡು, ನದಿಯಂಚಿನ ಪ್ರದೇಶಗಳನ್ನು ದಾಟಿ ಕಾಡಾನೆಗಳು ನಾಡಿಗೆ ಬರುತ್ತಿವೆ.

‘ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಮತ್ತು ಕುಶಾಲನಗರದ ದುಬಾರೆಯಲ್ಲಿ ಆನೆ ಶಿಬಿರಗಳಿದ್ದು ವಿವಿಧೆಡೆ ಸೆರೆ ಹಿಡಿದ ಪುಂಡಾನೆಗಳನ್ನು ಇಲ್ಲಿ ಪಳಗಿಸಲಾಗುತ್ತದೆ. ಜೀವ ಹಾನಿ ಜೊತೆಗೆ ಹೆಚ್ಚಿನ ಬೆಳೆ ಹಾನಿ ಮಾಡುವ ಪುಂಡಾನೆಗಳನ್ನು ಸೆರೆ ಕಾರ್ಯಾಚರಣೆಗೆ ಈ ಶಿಬಿರದಲ್ಲಿ ಪಳಗಿಸಿದ ಸಾಕಾನೆಗಳನ್ನು ಬಳಸಲಾಗುತ್ತದೆ’ ಎಂದು ಶಿವಮೊಗ್ಗ ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಸನ್ನಕೃಷ್ಣ ಪಟಗಾರ ಮಾಹಿತಿ ನೀಡಿದರು.

ಆನೆಗಳನ್ನು ಹಿಡಿದು ಬೇರೆ ಕಾಡಿಗೆ ಬಿಡುವುದು ಅವೈಜ್ಞಾನಿಕ. ಹುಟ್ಟಿದೂರಲ್ಲಿ ಬೆಳೆದ ಮಗುವನ್ನು ಬೇರೆಲ್ಲೊ ಬಿಟ್ಟು ಬಂದರೆ ತಬ್ಬಲಿಗಳನ್ನು ಮತ್ತು ಭಿಕ್ಷುಕರನ್ನು ಸೃಷ್ಟಿಸಿದಂತಲ್ಲವೇ? ಎಲ್ಲೇ ಬಿಟ್ಟರೂ ಅವು ಮತ್ತೆ ಹಿಂದಿರುಗಿ ಬಂದಿರುವ ಹಲವು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ ಎನ್ನುತ್ತಾರೆ ವನ್ಯಜೀವಿ ವಿಜ್ಞಾನಿ ಕೃಪಾಕರ.

ಮೂಲನೆಲೆಗೆ ವಾಪಸಾಗುವ ಧಾವಂತದಲ್ಲಿರುವ ಕಾಡಾನೆಗಳು ತಮಗೆ ಪರಿಚಯವಿಲ್ಲದ ಹಾದಿಯಲ್ಲಿ ಸಿಗುವ ಜಮೀನು-ಗ್ರಾಮಗಳಲ್ಲಿ ಮನುಷ್ಯರನ್ನು ಕಂಡಾಗ ಅವು ಅನುಭವಿಸಿದ್ದ ಮಾನಸಿಕ ಕಿರಿಕಿರಿಯು ಸಹಜವಾಗಿಯೇ ಆಟಾಟೋಪದ ರೂಪದಲ್ಲಿ ವ್ಯಕ್ತವಾಗುತ್ತದೆ ಎಂದು ವಿಶ್ಲೇಷಿಸುತ್ತಾರೆ.

ಆವಾಸಸ್ಥಾನ ರಕ್ಷಣೆಯೇ ಪರಿಹಾರ: ‘ಜನಸಂಖ್ಯೆ ಹೆಚ್ಚಿದಂತೆ ಹೇಗೆ ನಗರ ಮತ್ತು ಪಟ್ಟಣಗಳನ್ನು ವಿಸ್ತರಿಸಿ ಮೂಲಸೌಕರ್ಯಗಳನ್ನು ವಿಸ್ತರಿಸಲು ಸರ್ಕಾರ ರೂಪುರೇಷೆ ಸಿದ್ಧಪಡಿಸಿ ಯೋಜನೆ ರೂಪಿಸುತ್ತದೊ, ಅದೇ ರೀತಿ ವನ್ಯಜೀವಿಗಳ ವಿಷಯದಲ್ಲೂ ಚಿಂತನೆ ನಡೆಸಬೇಕು. 2010ರಲ್ಲಿ ರಾಜ್ಯದಲ್ಲಿ 5,740 ಇದ್ದ ಕಾಡಾನೆಗಳ ಸಂಖ್ಯೆ ಈಗ 6,395ಕ್ಕೆ ಏರಿಕೆಯಾಗಿದೆ. ಕಾಡಿನಲ್ಲಿ ಅವುಗಳ ಆವಾಸಸ್ಥಾನ ಕಿರಿದಾಗುತ್ತಾ ಬಂದಿದೆ. ಆಹಾರ ಸೇರಿದಂತೆ ವಿವಿಧ ಕಾರಣಗಳಿಗಾಗಿ ಆನೆಗಳು ನಾಡಿನತ್ತ ಮುಖ ಮಾಡಿವೆ. ಅವುಗಳ ಸ್ವಾಭಾವಿಕ ಆವಾಸಸ್ಥಾನ ಸಂರಕ್ಷಿಸಿ ಹೊರಗೆ ಬಾರದಂತೆ ನೋಡಿಕೊಳ್ಳುವುದೊಂದೇ ಇದಕ್ಕಿರುವ ಪರಿಹಾರ’ ಎನ್ನುತ್ತಾರೆ ಚನ್ನಪಟ್ಟಣ ರೈತ ಮುಖಂಡ ಸಿ. ಪುಟ್ಟಸ್ವಾಮಿ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಬ್ಯುರೊಗಳಿಂದ

ಸಂಘರ್ಷಕ್ಕೆ ಮಾನವನ ಹಸ್ತಕ್ಷೇಪ ಕಾರಣ

ಕಾಡಾನೆಗಳೇಕೆ ನಾಡಿಗೆ ಬರುತ್ತಿವೆ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್(ನಿಯಾಸ್) ವಿಜ್ಞಾನಿ ಡಾ. ವಿದ್ಯಾ ಈ ಕುರಿತು ಸಮಗ್ರ ಸಂಶೋಧನೆ ನಡೆಸಿದ್ದಾರೆ.

‘17 ವರ್ಷಗಳಿಂದ ಆನೆಗಳ ಸಂಖ್ಯೆಯಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ. ನಾಡಿಗೆ ಬರಲು ಅವುಗಳ ಸಾಂದ್ರತೆಯೂ ಕಾರಣವಲ್ಲ. ಮಾನವನ ಹಸ್ತಕ್ಷೇಪದಿಂದಾಗಿ ಕೆಲ ದಶಕಗಳಿಂದ ಕಾಡಿನ ಮೂಲಸ್ವರೂಪಕ್ಕೆ ಧಕ್ಕೆಯಾಗಿದೆ. ಈಗಾಗಲೇ ಪಶ್ಚಿಮ ಘಟ್ಟದ ಸಾವಿರಾರು ಎಕರೆ ಕಾಡುಗಳು ಒತ್ತುವರಿಯಾಗಿ ತೋಟಗಳಾಗಿವೆ. ಬಹುತೇಕ ಅರಣ್ಯಗಳನ್ನು ಸೀಳಿದಂತೆ ರಸ್ತೆಗಳು ಬೇರ್ಪಡಿಸಿವೆ. ಅಳಿದುಳಿದ ನೆಲೆಗಳನ್ನು ಅಣೆಕಟ್ಟೆಗಳು ಮತ್ತು ಹೆದ್ದಾರಿ ಕಾರಿಡಾರ್ ಕತ್ತರಿಸಿ ಹಾಕಿವೆ. ಈಗ ಕಾಡಾನೆ ತಡೆಯಲು ನಾವು ಕಂದಕ ಮತ್ತು ಬೇಲಿಗಳ ಮೊರೆ ಹೋಗಿದ್ದೇವೆ. ಯಾವುದಾದರೊಂದು ಆನೆ ಕಾಡಂಚಿನ ಜಮೀನಿಗೆ ಹೋಗಲು ಶುರು ಮಾಡಿದರೆ ಕ್ರಮೇಣ ಇಡೀ ಗುಂಪು ಆಹಾರದ ಹೊಸ ಮೂಲ ಕಂಡುಕೊಳ್ಳುತ್ತದೆ. ಬೆಳೆಯ ಅವುಗಳಿಗೆ ಆಹಾರವಷ್ಟೆ. ಫಸಲು ನಾಶ, ಆನೆ ದಾಳಿ ಎಂಬುದು ನಮ್ಮ ತೀರ್ಮಾನ.

ಆನೆಗಳು ಸಂವೇದನಾಶೀಲ ಸಾಮಾಜಿಕ ಪ್ರಾಣಿಗಳು. ಮಾನವ ಸಮಾಜದಂತೆಯೇ ಅವುಗಳ ಸಮಾಜದ ಒಳಗೆ ಸಾಕಷ್ಟು ಒತ್ತಡಗಳು, ಕಟ್ಟುಪಾಡುಗಳು ಇರುತ್ತವೆ. ದೊಡ್ಡಿ ಮಾಡಿ ಕೂಡಿಡುವುದಾಗಲಿ, ಅವುಗಳ ವಲಸೆಯ ದಾರಿಗಳನ್ನು ನಮ್ಮಿಷ್ಟಕ್ಕೆ ಬದಲಿಸುವುದಾಗಲಿ ಮಾಡಿದರೆ, ಅದು ಅಮಾನವೀಯ. ಮಾನವೀಯತೆಯ ಹೆಸರಿನಲ್ಲಿ ಕ್ರೌರ್ಯವನ್ನು ಪ್ರತಿಪಾದಿಸುವುದು ನಾಗರಿಕ ಸಮಾಜಕ್ಕೆ ಸಲ್ಲದ ನಡವಳಿಕೆ. 1990ರಲ್ಲಿ ವಿಜ್ಞಾನಿ ಅಜಯ್ ದೇಸಾಯಿ ಅವರು, ಆನೆಗಳ ಕಾರಿಡಾರ್ ಬಗ್ಗೆ ತಿಳಿಸುವವರೆಗೂ ಕಾರಿಡಾರ್ ಎಷ್ಟು ಮುಖ್ಯವೆಂದು ಗೊತ್ತಿರಲಿಲ್ಲ. ಅಷ್ಟೊತ್ತಿಗಾಗಲೇ ಕಾರಿಡಾರ್‌ಗಳನ್ನು ದುರಸ್ತಿ ಮಾಡುವುದೂ ಕಷ್ಟವೆನಿಸುವಷ್ಟು ನಾಶವಾಗಿತ್ತು. ಕಾರಿಡಾರ್‌ಗಳನ್ನು ವಿಸ್ತರಿಸುವ ಇಚ್ಛಾಶಕ್ತಿ ಆಡಳಿತ ವ್ಯವಸ್ಥೆಗೆ ಬೇಕು. ಆಗ ಕಾಡಾನೆ–ಮಾನವ ಸಂಘರ್ಷ ನಿಧಾನವಾಗಿ ತಗ್ಗಲಿದೆ.

ಕೃಪಾಕರ ಸೇನಾನಿ, ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತ ವನ್ಯಜೀವಿ ಚಿತ್ರ ನಿರ್ಮಾಪಕರು

ಪರಿಹಾರದ ಅಂಕಿಅಂಶ

- **₹50 ಲಕ್ಷ** ಕಾಡಾನೆ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಕಾಯಂ ಸಿಬ್ಬಂದಿ ಮೃತಪಟ್ಟರೆ ಸಿಗುವ ಪರಿಹಾರ
- **₹25 ಲಕ್ಷ** ಕಾಡಾನೆ ಓಡಿಸುವ ಕಾರ್ಯಾಚರಣೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿ ಮೃತಪಟ್ಟರೆ ನೀಡುವ ಪರಿಹಾರ
- **₹20 ಲಕ್ಷ** ಕಾಡಾನೆ ದಾಳಿಯಿಂದ ಸಾರ್ವಜನಿಕರು ಮೃತಪಟ್ಟರೆ ಕೊಡುವ ಪರಿಹಾರ
- **₹10 ಲಕ್ಷ** ಕಾಡಾನೆ ದಾಳಿಯಿಂದ ಶಾಶ್ವತ ಅಂಗವಿಕಲತೆ ಉಂಟಾದರೆ ಸಿಗುವ ಪರಿಹಾರ
- **₹5 ಲಕ್ಷ** ಭಾಗಶಃ ಅಂಗವಿಕಲತೆಗೆ ಪರಿಹಾರ
- **₹60 ಸಾವಿರ** ಕಾಡು ಪ್ರಾಣಿಗಳಿಂದ ಗಾಯಗೊಂಡರೆ ಸಿಗುವ ಗರಿಷ್ಠ ಪರಿಹಾರ
- **₹20 ಸಾವಿರ** ಕಾಡಾನೆ ದಾಳಿಯಿಂದಾಗುವ ಆಸ್ತಿ ನಷ್ಟದ ಪ್ರತಿ ಪ್ರಕರಣಕ್ಕೆ ಪರಿಹಾರ
- **₹5 ಸಾವಿರ** ಮೃತ ಸಿಬ್ಬಂದಿ ಕುಟುಂಬದ ಒಬ್ಬರಿಗೆ ನೀಡುವ ಮಾಸಿಕ ಪಿಂಚಣಿ
- **₹4 ಸಾವಿರ** ಮೃತರ ಕುಟುಂಬದ ಒಬ್ಬರಿಗೆ ಐದು ವರ್ಷದವರೆಗೆ ಸಿಗುವ ಮಾಸಿಕ ಪಿಂಚಣಿ

ಕಾಡಾನೆ ದಾಳಿಯಿಂದ ಸ್ವಾಧೀನ ಕಳೆದುಕೊಂಡಿರುವ ತಮ್ಮ ಕಾಲನ್ನು ತೋರಿಸಿದ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಿಪುರದ ಲಕ್ಷ್ಮಮ್ಮ

> **ಆನೆಯನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ, ಮತ್ತದೇ ಜಾಗದಲ್ಲಿ ಬಿಡಲಾಗುತ್ತಿದೆ. ಅದೇ ಹಣವನ್ನು ಬಳಸಿ ಆನೆಗಳಿಗೆ ಕಾರಿಡಾರ್ ಅಥವಾ ಆನೆಧಾಮ ನಿರ್ಮಿಸಿದರೆ ಸಮಸ್ಯೆ ಬಹುತೇಕ ಪರಿಹಾರವಾಗಬಹುದು**
> **ಕಿಶೋರ್ ಕುಮಾರ್**
> ಪರಿಸರವಾದಿ, ಹಾಸನ

> **ಕಾಡಾನೆಗಳ ಹಾವಳಿಗೆ ಬೇಸತ್ತು ಅರಣ್ಯದಂಚಿನ ಗ್ರಾಮಗಳ ರೈತರು ತಮ್ಮ ಕೃಷಿ ಭೂಮಿಗಳನ್ನು ಪಾಳು ಬಿಟ್ಟಿದ್ದಾರೆ. ಅಂತಹ ಭೂಮಿಗಳನ್ನು ಅರಣ್ಯ ಇಲಾಖೆ ಭೋಗ್ಯಕ್ಕೆ ಪಡೆದು ರೈತರಿಗೆ ಇಂತಿಷ್ಟು ಮೊತ್ತ ಪಾವತಿಸಬೇಕು**
> **ಸಿ. ಪುಟ್ಟಸ್ವಾಮಿ**
> ರೈತ ಮುಖಂಡ, ಚನ್ನಪಟ್ಟಣ

ಕಾಡಾನೆ ದಾಳಿಯಿಂದ ಗಾಯಗೊಂಡಿರುವ ಕೈ ಮತ್ತು ಭುಜವು ಸ್ವಾಧೀನ ಕಳೆದುಕೊಂಡಿರುವುದನ್ನು ತೋರಿಸಿದ ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಿಪುರ ಗ್ರಾಮದ ಗೋವಿಂದ ಶೆಟ್ಟಿ

ರೈಲ್ವೆ ಬ್ಯಾರಿಕೇಡ್ ವಿವರ (ಕಿ.ಮೀ.ಗಳಲ್ಲಿ)

ಪ್ರದೇಶ	ಉದ್ದ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ	61.61
ಬಂಡೀಪುರ ಹುಲಿ ಸಂರಕ್ಷಿತ ಅಭಯಾರಣ್ಯ	91.43
ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ಪ್ರದೇಶ	29.51
ಕಾವೇರಿ ವನ್ಯಜೀವಿ ಅಭಯಾರಣ್ಯ	51.59
ಬಿಳಿಗಿರಿರಂಗನಬೆಟ್ಟ (ಬಿಆರ್‌ಟಿ) ಹುಲಿ ಸಂರಕ್ಷಿತ ಅಭಯಾರಣ್ಯ	13.14
ನಾಗರಹೊಳೆ ಹುಲಿ ಸಂರಕ್ಷಿತ ಅಭಯಾರಣ್ಯ	101.85
ಮಡಿಕೇರಿ	36.50
ಹಾಸನ	36.25
ಭದ್ರಾ ಹುಲಿ ಸಂರಕ್ಷಿತ ಅಭಯಾರಣ್ಯ	3.55
ರಾಮನಗರ	8.25

(ಮಾಹಿತಿ: ಅರಣ್ಯ ಇಲಾಖೆ)

ವಧು ಸಿಗದೆ ಪರದಾಟ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಿದರುತಳ ಗ್ರಾಮದಲ್ಲಿ ಕಾಡಾನೆ ಹಾವಳಿ ತೀವ್ರವಾಗಿದೆ. ಗ್ರಾಮದ ಕೆಲವರು ಊರು ಬಿಟ್ಟು ಬೇರೆಡೆ ಬಾಡಿಗೆ ಮನೆಯಲ್ಲಿ ನೆಲೆಸಿದ್ದಾರೆ. ಗದ್ದೆ ಮತ್ತು ತೋಟಗಳು ಪಾಳು ಬಿದ್ದಿವೆ. ಗ್ರಾಮಕ್ಕೆ ಹೆಣ್ಣು ಕೊಡಲು ಜನ ಹಿಂದೇಟು ಹಾಕುತ್ತಿದ್ದಾರೆ. 45 ವರ್ಷ ದಾಟಿದರೂ ಇಲ್ಲಿನ ವಿವಾಹ ಭಾಗ್ಯವಿಲ್ಲವಾಗಿದೆ. ಜಮೀನು ಪಾಳು ಬಿಟ್ಟಿರುವವರು ಕೊಟ್ಟಿಗೆಹಾರ ಸೇರಿದಂತೆ ಬೇರೆಡೆ ಕೂಲಿ ಮಾಡಿ ಬದುಕುತ್ತಿದ್ದಾರೆ. ಒಂದು ಕಾಲದಲ್ಲಿ ಭೂಮಾಲೀಕರಾಗಿದ್ದವರು ಈಗ ಕಾಫಿತೋಟ, ಹೋಂಸ್ಟೆ, ರೆಸಾರ್ಟ್, ಹೋಟೆಲ್‌ಗಳಲ್ಲಿ ಕೂಲಿ ಕಾರ್ಮಿಕರಾಗಿದ್ದಾರೆ.

‘ನಮ್ಮೂರಿನ ಹೆಸರು ಕೇಳಿದರೆ ಸುತ್ತಲಿನ ಯಾವ ಹಳ್ಳಿಯಲ್ಲೂ ವಧು ಸಿಗುವುದಿಲ್ಲ. ಇದರಿಂದ ಮದುವೆ ಕನಸೇ ಕಮರಿ ಹೋಗಿದೆ’ ಎಂದು ರೆಸಾರ್ಟ್‌ವೊಂದರಲ್ಲಿ ಚಾಲಕನಾಗಿರುವ ಗ್ರಾಮದ ಸತೀಶ್, ಕೂಲಿ ಕಾರ್ಮಿಕ ಗಿರೀಶ್ ಬೇಸರ ವ್ಯಕ್ತಪಡಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 31–8–2000

● ಸಣ್ಣ ಕೈಗಾರಿಕೆಗಳ ಅಬಕಾರಿ ಶುಲ್ಕ ವಿನಾಯ್ತಿ ಒಂದು ಕೋಟಿಗೆ ಏರಿಕೆ

ನವದೆಹಲಿ, ಆಗಸ್ಟ್ 30 (ಯುಎನ್‌ಐ)– ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮಹತ್ವದ ಕ್ರಮವಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಅವುಗಳಿಗೆ ನೀಡಲಾಗುವ ಅಬಕಾರಿ ಶುಲ್ಕ ವಿನಾಯ್ತಿಯ ಮಿತಿಯನ್ನು 50 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗೆ ಏರಿಸಿದರು.

ಬಿಜೆಪಿ ನೇತೃತ್ವದ ಸರ್ಕಾರ ಈ ಕ್ಷೇತ್ರಕ್ಕೆ ನೀಡಲಾಗುವ ಅಬಕಾರಿ ಶುಲ್ಕದಲ್ಲಿ ಮಾಡುತ್ತಿರುವ ಎರಡನೇ ಏರಿಕೆ ಇದಾಗಿದೆ. 1998ರಲ್ಲಿ 30 ಲಕ್ಷ ರೂಪಾಯಿಗಳಿಂದ 50 ಲಕ್ಷ ರೂಪಾಯಿಗೆ ಏರಿಸಲಾಗಿತ್ತು ಎಂದು ಹೇಳಿದರು.

75 ವರ್ಷಗಳ ಹಿಂದೆ

ಗುರುವಾರ, 31–8–1950

● ಕಮ್ಯುನಿಸ್ಟರಿಂದ ಪೋಹಾಂಗ್ ವ್ಯೂಹ ಭೇದನ

ಟೋಕಿಯೊ, ಆಗಸ್ಟ್ 30– ಪೂರ್ವತೀರದ ಪೋಹಾಂಗ್ ಉತ್ತರದಲ್ಲಿರುವ ದಕ್ಷಿಣ ಕೊರಿಯದ ವ್ಯೂಹದೊಳಕ್ಕೆ ಕಮ್ಯುನಿಸ್ಟರ ‘ಶತಾಯ–ಗತಾಯ’ ಹೋರಾಟದ ದಳವೊಂದು ಈ ರಾತ್ರಿ ಭೇದಿಸಿ ನುಗ್ಗಿದೆ. ಅಮೆರಿಕನ್ನರು ತೀರದಲ್ಲಿರುವ ತಮ್ಮ ಹಡಗುಗಳಿಂದ ತೋಪಿನ ಮಳೆಗರೆದರೂ ಈ ದಳ ಲೆಕ್ಕಿಸದೆ ನುಗ್ಗಿತು. ಈ ಮುಂಚೂಣಿಯ ಹಿಂಬದಿಯಲ್ಲಿ ಕನಿಷ್ಠ ಒಂದಾದರೂ ಕಮ್ಯುನಿಸ್ಟ್ ಡಿವಿಜನ್ ಇದ್ದು, ಅದು ಪ್ಯೂಸಾನ್ ಕಡೆಗೆ ರಭಸದಿಂದ ನುಗ್ಗಬೇಕೆಂಬ ಮಹಾ ಪ್ರಯತ್ನದ ಹೊಂಚು ಹಾಕುತ್ತಿದೆ ಎಂಬುದಾಗಿ ವರದಿಯಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

31 ಆಗಸ್ಟ್ 2025 ಭಾನುವಾರ ಶ್ರೀ ವಿಶ್ವಾವಸುನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಅಷ್ಟಮಿ ಗಂ. 24-58 **ನಕ್ಷತ್ರ:** ಅನುರಾಧ ಗಂ. 17-27 **ಯೋಗ:** ವೈಧೃತಿ ಗಂ. 15-59 **ಕರಣ:** ವಿಷ್ಠಿ ಗಂ. 11-55 ಸಿಂಹ ಮಾಸದ 14 ನೇ ದಿನ. **ಮಳೆ ನಕ್ಷತ್ರ :** ಹುಬ್ಬಾ 1 ನೇ ಪಾದ. ರಾಹುಕಾಲ : ಸಾಯಂಕಾಲ 04-30 – 06-00 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-39 **ಮುಸ್ಲಿಂ ದಿನಾಂಕ :** 07 ರಬಿಉಲ್ಲಾವಲ್ **ದಿನ ವಿಶೇಷ :** ರಾಧಾಷ್ಟಮಿ, ದೂರ್ವಾಷ್ಟಮಿ (ಬಂಗಾಳ), ಮಹಾಲಕ್ಷ್ಮೀ ವ್ರತಾರಂಭ **ಅದೃಷ್ಟ ಸಂಖ್ಯೆ :** 2, 7

ಮೇಷ: ನಿಮ್ಮ ನೇರ, ದಿಟ್ಟ ಮಾತುಗಳು ಇತರರಿಗೆ ನೋವಾಗದಂತೆ ಇರಲಿ. ವಿದ್ಯಾರ್ಥಿಗಳ ಪಠ್ಯೇತರ ವಿಷಯದ ಮನೋಕಾಮನೆ ಪೂರ್ಣಗೊಳ್ಳುವುದು. ದಾಂಪತ್ಯ ಜೀವನ ಪರಸ್ಪರ ಸೋಲು ಗೆಲುವಿನಿಂದ ಉತ್ತಮವಾಗಿರುತ್ತದೆ.

ವೃಷಭ: ದುಂದುವೆಚ್ಚ ಕಡಿಮೆ ಮಾಡಿದರೆ ಆರ್ಥಿಕತೆಯಲ್ಲಿ ಒಂದು ಮೆಟ್ಟಿಲು ಮೇಲೇರಲು ಸಾಧ್ಯವಾಗುತ್ತದೆ. ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕೈ ಹಾಕುವವರಿಗೆ ಶುಭದಿನ. ವಿದೇಶಿ ವ್ಯವಹಾರದಿಂದ ನಿರೀಕ್ಷಿತ ಲಾಭ ಹೊಂದಬಹುದು.

ಮಿಥುನ: ನೆಮ್ಮದಿಯ ವಾತಾವರಣ ವೃದ್ಧಿಯಾಗಲಿದೆ. ಸಿಹಿ ತಿನಿಸು ವ್ಯಾಪಾರ, ಲೇವಾದೇವಿ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ. ಟೀಕಿಸುವವರು ಎದುರಾದರೆ ನಿಮ್ಮ ಕೆಲಸ ಯಶಸ್ಸಿನ ದಾರಿಯಲ್ಲಿದೆ ಎಂದು ತಿಳಿಯಿರಿ.

ಕರ್ಕಾಟಕ: ಭೋಜನದ ಸಮಯದಲ್ಲಿ ವ್ಯತ್ಯಯಗಳು ಸಂಭವಿಸುವುದಾಗಿ ಕಾಣುವುದು. ನಿಮ್ಮ ಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ. ಸಂಜೆಯ ಸಮಯದಲ್ಲಿ ಮನಸ್ಸಿಗೆ ನೆಮ್ಮದಿ ನೀಡುವ ಸುದ್ದಿ ಕೇಳುವಿರಿ.

ಸಿಂಹ: ಆಹಾರ ಪದ್ಧತಿಯಲ್ಲಿ ನಿಯಮ ಮಾಡಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಅನಾರೋಗ್ಯದ ಸಂಭವವಿರುವುದರಿಂದ ಆರೋಗ್ಯದ ಮೇಲೆ ನಿಗವಿರಲಿ. ಈಶ್ವರ ಆರಾಧನೆಯಿಂದ ಶುಭವಾಗುವುದು.

ಕನ್ಯಾ: ಬಲಶಾಲಿಯಾದ ವಿರೋಧಿಗಳನ್ನು ಮಣಿಸಲು ಅವರ ಅನ್ಯಾಯಗಳನ್ನು ಬೆಳಕಿಗೆ ತರಲು ನೀವು ಮಾಡಿದ ಪ್ರಯತ್ನ ಉತ್ತಮ ಫಲವನ್ನು ನೀಡಲಿದೆ. ಬಂಗಾರ, ಬೆಳ್ಳಿ ಮತ್ತು ರತ್ನ ವ್ಯಾಪಾರಿಗಳಿಗೆ ಉತ್ತಮವಾದ ಲಾಭವಾಗುವುದು.

ತುಲಾ: ನಿಮ್ಮ ಮಗಳ ವಿಚಾರವಾಗಿ ನೀವು ಮಾಡಿದ ಪರೀಕ್ಷೆಯಲ್ಲಿ ಆಕೆ ಉತ್ತಮವಾದ ವರ್ತನೆ ತೋರಿ ನಿಮ್ಮನ್ನು ಸಮಾಧಾನಗೊಳಿಸುತ್ತಾಳೆ. ಯಾವುದೋ ಯೋಚನೆಯಲ್ಲಿ ಕೆಲಸ ಮಾಡಿ ಅಪಘಾತ ಮಾಡಿಕೊಳ್ಳಬೇಡಿ.

ವೃಶ್ಚಿಕ: ವಂಶಾಭಿವೃದ್ಧಿಯಾಗಿರುವ ವಿಚಾರದಿಂದ ಸಂತೋಷ ಮುಗಿಲು ಮುಟ್ಟುವುದು. ನಿಮ್ಮ ಮಾನಸಿಕ ಶಕ್ತಿಗಳು ಅತ್ಯಂತ ಬಲಯುತವಾಗಿ ಇಂದು ನಿಮ್ಮ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ.

ಧನು: ಬಹುದಿನಗಳ ನಿರೀಕ್ಷೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಿಮ್ಮ ಉತ್ತಮ ಪ್ರದರ್ಶನಕ್ಕೆ ಪ್ರಶಂಸೆಗಳ ಮಹಾಪೂರವೆ ಹರಿದು ಬರಲಿದೆ. ಆಕಸ್ಮಿಕವಾಗಿ ಬರುವಂತಹಾ ಖರ್ಚು ವೆಚ್ಚಗಳ ಮೇಲೆ ನಿಗಾ ವಹಿಸಿ.

ಮಕರ: ನಿಮ್ಮ ಸುತ್ತಮುತ್ತಲ ಜನರೊಂದಿಗಿನ ಬಾಂಧವ್ಯವು ಈ ದಿನ ಉತ್ತಮಗೊಳ್ಳುವುದು. ವೈದ್ಯರ ಬೇಜವಬ್ದಾರಿತನದಿಂದ ಪ್ರಾಣಾಪಾಯ ಸಂಭವಿಸಬಹುದು. ಕಥೆ-ಕಾದಂಬರಿ ಬಗ್ಗೆ ಆಸಕ್ತಿ ಮೂಡಲಿದೆ.

ಕುಂಭ: ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗುವುವು. ಕುಟುಂಬದಲ್ಲಿ ಸಣ್ಣಪುಟ್ಟ ಕಲಹಗಳಾಗುವ ಸಾಧ್ಯತೆ ಇದೆ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ.

ಮೀನ: ವಿದೇಶಿ ವ್ಯವಹಾರಗಳನ್ನು ಹೊಂದಿರುವಂತಹವರು ಹೆಚ್ಚಿನ ಲಾಭವನ್ನು ಅಪೇಕ್ಷಿಸಬಹುದು. ದಾಂಪತ್ಯದಲ್ಲಿ ಉಂಟಾದ ಭಿನ್ನಾಭಿಪ್ರಾಯ ಸರಿಯಾದ ಮಾತುಕತೆಯಿಂದ ದೂರವಾಗಲಿದೆ.

ಪದಬಂಧ 6150

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬರದಲ್ಲಿ ಹೊರದೂಡುವಿಕೆ (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡಿ ತೋರಿದ ಸಲಿಗೆ! (3)
7.ಪದರದೊಳಗೆ ಮೋಕ್ಷ ಕಂಡೀತೇ? (2)
9.ಶಿಷ್ಯನಿಗೆ ವಿದ್ಯೆಯನ್ನು ಕಲಿಸುವವನು (2)
11.ಮರದ ಮೆಟ್ಟು (3)
12.ಆನೆ ಮೇಲೆ ಕುಳಿತುಕೊಳ್ಳಲು ಹಾಕಿದ ಭದ್ರಾಸನ (3)
14.ಮಧುರ ಫಲಗಳನ್ನು ನೀಡುವ ವೃಕ್ಷ (2)
15.ಜನನಿ ನುಡಿದಿರುವ ಸತ್ಯ (2)
17.ಶಿವನ ಇನ್ನೊಂದು ಹೆಸರು (3)
19.ಹೊಗಳಿಕೆಯ ವಿರುದ್ಧ ಪದ (4)
20.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ

1.ಸ್ಲೇಟಿನ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
6.ಧಣಿಗೆ ಆಗಿರುವ ಆಯಾಸ (3)
8.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
13.ಲಾಂಗೂಲವಿರುವ ಹುಡುಗ! (3)
14.ಮಾತೆ ತೋರಿಸಿದ ಪ್ರೀತಿ (3)
16.ಜನರು ಗಲಿಬಿಲಿಯಿಂದ ಏರಿದ ವೇದಿಕೆ (3)
17.ಅಂಕೆಗೆ ಸಿಕ್ಕದಿರುವಾಗ ಬಂದಿರುವ ಅನುಮಾನ (2)
18.ಕಾಮನ ಪಕ್ಷಿ (2)



6149ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪರ 4.ಡಾಮರ
5.ಅನುಭೂತಿ 6.ತಾಪತ್ರಯ
7.ನಗು 9.ತಮ
13.ತಳಮಳ 14.ಪ್ರತೀಹಾರ
15.ಗಂಜಲ 16.ಗರುಡ

ಮೇಲಿಂದ ಕೆಳಕ್ಕೆ:
1.ಗಂಡಾಗುಂಡಿ
2.ಕರತಾಡನ 3.ವಿಭೂತಿ
5.ಅಯಸ್ಕಾಂತ
8.ಗುರುತರ 10.ಮಗಳಗಂಡ
11.ತರುಲತೆ 12.ಪ್ರತೀಕ

ಸುಡೊಕು 6534

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	2			8		9		1
	9	8		2				4
	4		9			3		8
6								9
	5		7	6	9		8	
8						6		
		4	2			7		6
				9	7			
						4		5

6533 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ಆಂಜಿಯೋಪ್ಲಾಸ್ಟಿ ಕಾರ್ಯಾಗಾರ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು 150 ಮಂದಿಗೆ ಉಚಿತ ಸ್ಟೆಂಟ್ ಅಳವಡಿಸುವ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಸೆ.15ರಿಂದ 17ರವರೆಗೆ ಹಮ್ಮಿಕೊಂಡಿದೆ.

ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಹಾಗೂ ಅಮೆರಿಕದ ಮೆಡ್‌ಟ್ರಾನಿಕ್ಸ್ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ಸೆ.15ರಂದು ಮೈಸೂರಿನ ಶಾಖೆಯಲ್ಲಿ ಹಾಗೂ ಸೆ.16 ಮತ್ತು 17ರಂದು ಬೆಂಗಳೂರಿನ ಸಂಸ್ಥೆಯ ಆವರಣದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ಸೆಪ್ಟೆಂಬರ್ 13ರ ಒಳಗೆ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ 080 22977433/22ಗೆ ಕರೆ ಮಾಡಬಹುದು ಎಂದು ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ತಿಳಿಸಿದ್ದಾರೆ.

ಆನಂದಗೆ 'ವಿ.ಕೃ. ಗೋಕಾಕ್ ಪ್ರಶಸ್ತಿ'


ಆನಂದ ಪಾಟೀಲ

ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಜಂಟಿಯಾಗಿ ನೀಡುವ 2025ನೇ ಸಾಲಿನ 'ವಿ.ಕೃ. ಗೋಕಾಕ್ ಪ್ರಶಸ್ತಿ'ಗೆ ಸಾಹಿತಿ ಆನಂದ ಪಾಟೀಲ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಸೆ.7ರಂದು ಬೆಳಿಗ್ಗೆ 10.30ಕ್ಕೆ ಭಾರತೀಯ ವಿದ್ಯಾ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಎಸಿಪಿ ಸೇರಿ ಐವರ ವಿಚಾರಣೆ

ಕಲಬುರಗಿ: ಸಿವಿಲ್ ಪ್ರಕರಣವೊಂದರಲ್ಲಿ ಮಧ್ಯಸ್ಥಿಕೆ ವಹಿಸಿ ಲಂಚಕ್ಕೆ ಬೇಡಿಕೆಯಿಟ್ಟ ಆರೋಪದಡಿ ನಗರದ ದಕ್ಷಿಣ ಉಪವಿಭಾಗದ ಎಸಿಪಿ ಶರಣಬಸಪ್ಪ ಸುಬೇದಾರ್ ಸೇರಿದಂತೆ ಐವರನ್ನು ಕಲಬುರಗಿ ಲೋಕಾಯುಕ್ತ ಪೊಲೀಸರು ಶನಿವಾರವೂ ವಿಚಾರಣೆಗೆ ಒಳಪಡಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ಸಂಜೆ ಎಸಿಪಿ ಸುಬೇದಾರ ಅವರಲ್ಲದೇ ರೈಟರ್ ಚಂದ್ರಕಾಂತ, ಕಾನ್‌ಸ್ಟೆಬಲ್ ರಾಘವೇಂದ್ರ, ಇಬ್ಬರು ಖಾಸಗಿ ವ್ಯಕ್ತಿಗಳಾದ ದಸ್ತಗೀರ್ ಹಾಗೂ ಶಿವಪ್ಪ ವಾರಿಕ್ ಅವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಕರೆತಂದಿದ್ದರು. ನಗರದ ಐವಾನ್–ಎ–ಶಾಹಿ ಅತಿಥಿ ಗೃಹದ ಕಟ್ಟಡದಲ್ಲಿ ಶುಕ್ರವಾರ ತಡರಾತ್ರಿ 2.30ರವರೆಗೂ ವಿಚಾರಣೆ ನಡೆಸಿದ್ದರು.

'ಭಾಗವತ್ ಸಲಹೆ ದೇಶಕ್ಕೆ ಮಾರಕ'

ಮಹದೇವಪ್ಪ

ಬೆಂಗಳೂರು: 'ಮೂರು ಮಕ್ಕಳನ್ನು ಹೊಂದಿ' ಎನ್ನುವ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಸಲಹೆ ದೇಶದ ಬೆಳವಣಿಗೆಗೆ ಮಾರಕ ಎಂದು ಸಮಾಜಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದ್ದಾರೆ.

ಎಲ್ಲವನ್ನೂ ಧರ್ಮದ ಕಣ್ಣಿಲ್ಲಿ ನೋಡುತ್ತಾ, ದೇಶವನ್ನು ಮೌಢ್ಯತೆ ಮತ್ತು ಅವೈಜ್ಞಾನಿಕತೆಯ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅವಿವೇಕದ ಸಲಹೆಗಳನ್ನು ನೀಡುತ್ತಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

ಕೇಂದ್ರಕ್ಕೆ ಹೈಕೋರ್ಟ್ ನೋಟಿಸ್

ಆನ್‌ಲೈನ್ ಜೂಜಾಟ ತಡೆ ಕಾಯ್ದೆ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜು ನಿಷೇಧಿಸಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ' ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕಾಯ್ದೆಯನ್ನು ಪ್ರಶ್ನಿಸಿ ದೆಹಲಿಯ, 'ಹೆಡ್ ಡಿಜಿಟಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ'ಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ) ಸಿದ್ಧಾರ್ಥ ಶರ್ಮಾ ಮತ್ತು ಮುಂಬೈನ ಸುಮಿತ್ ಸಿಂಗ್ ನಿಂದರಾಜೋಗ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಆರ್ಯಮಾ ಸುಂದರಮ್ ಅವರು, 'ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ. ಆದರೆ, ಅಧಿಸೂಚನೆ ಇನ್ನೂ ಪ್ರಕಟವಾಗಿಲ್ಲ. ರಾತ್ರೋರಾತ್ರಿ ಗೇಮಿಂಗ್ ಕ್ಷೇತ್ರವನ್ನು ಮುಚ್ಚಿದರೆ ಅದರಿಂದ ಭಾರಿ ಅಪಾಯ ಎದುರಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಇದರಲ್ಲಿ ಲಕ್ಷಾಂತರ ಮಂದಿಯ ಉದ್ಯೋಗದ ವಿಚಾರ ಅಡಕವಾಗಿದೆ. ಹಾಗಾಗಿ, ಅರ್ಜಿಗೆ ಸಂಬಂಧಿಸಿದಂತೆ ನಮ್ಮ ವಾದ ಪೂರ್ಣಗೊಳ್ಳುವ ತನಕ ಕೇಂದ್ರ ಸರ್ಕಾರ ಕಾಯ್ದೆಯ ಅಧಿಸೂಚನೆ ಪ್ರಕಟಿಸದಂತೆ ನಿರ್ದೇಶಿಸಬೇಕು. ಇಲ್ಲವೇ, ಅಧಿಸೂಚನೆ ಪ್ರಕಟಿಸುವುದಕ್ಕೂ ಒಂದು ವಾರ ಮೊದಲು ನಮಗೆ ಮಾಹಿತಿ ನೀಡಲು ನಿರ್ದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಯಾರಿಗೋ ಸಮಸ್ಯೆಯಾಗಿದೆ ಎಂದ ಮಾತ್ರಕ್ಕೆ ಕಾಯ್ದೆಗೆ ಸಂಬಂಧಿಸಿದ ಅಧಿಸೂಚನೆ ಪ್ರಕಟಿಸುವುದನ್ನು ಮುಂಚಿತವಾಗಿ ತಿಳಿಸುವ ಅಗತ್ಯವಿಲ್ಲ. ಈ ವಿಷಯದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡಲಾಗದು. ಇದರಲ್ಲಿ ಗಡಿಯಾಚೆಗಿನ ಪರಿಣಾಮಗಳಿವೆ ಎಂಬುದನ್ನು ನ್ಯಾಯಪೀಠ ಸೂಕ್ಷ್ಮವಾಗಿ ಪರಿಗಣಿಸಬೇಕು' ಎಂದು ಕೋರಿದರು.

'ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕಿದ ಬಳಿಕ ಅಧಿಸೂಚನೆ ಪ್ರಕಟಿಸುವುದು ಸಾಂವಿಧಾನಿಕ ಪ್ರಕ್ರಿಯೆ. ಆದಾಗ್ಯೂ, ಅರ್ಜಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಯಾದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, ಆಕ್ಷೇಪಣೆ ಸಲ್ಲಿಸಲು ಸೂಚಿಸಿ ವಿಚಾರಣೆಯನ್ನು ಸೆ. 8ಕ್ಕೆ ಮುಂದೂಡಿತು.

'ಶ್ರೀನಾಥ್ ಜೋಶಿ ಮೊಬೈಲ್‌ನಲ್ಲಿನ ದತ್ತಾಂಶ ನಾಶ'

'ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ದಂಧೆಯಲ್ಲಿ ಭಾಗಿಯಾದ ಪ್ರಕರಣದಲ್ಲಿ ಆರೋಪಿಯಾಗಿರುವ ಐಪಿಎಸ್ ಅಧಿಕಾರಿ ಶ್ರೀನಾಥ್ ಎಂ.ಜೋಶಿ ಅವರಿಂದ ಪಡೆಯಲಾಗಿರುವ ಎರಡು ಮೊಬೈಲ್ ಫೋನ್‌ಗಳಲ್ಲಿ ಎಲ್ಲ ದತ್ತಾಂಶಗಳನ್ನು ಅಳಿಸಿ ಹಾಕಲಾಗಿದೆ' ಎಂದು ಲೋಕಾಯುಕ್ತ, ಹೈಕೋರ್ಟ್‌ಗೆ ಅರುಹಿದೆ.

ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಶ್ರೀನಾಥ್ ಎಂ.ಜೋಶಿ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಲೋಕಾಯುಕ್ತ ಪರ ವೆಂಕಟೇಶ್ ಅರಬಟ್ಟಿ ಜಾಮೀನು ಅರ್ಜಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, 'ಈ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಸೇವೆಯಿಂದ ವಜಾಗೊಂಡಿರುವ ಮೊದಲ ಆರೋಪಿ ನಿಂಗಪ್ಪ ಸಾವಂತ್ ಜೊತೆ ಶ್ರೀನಾಥ್ ಜೋಶಿ ನಿರಂತರ ಸಂಪರ್ಕದಲ್ಲಿದ್ದುದು ಪತ್ತೆಯಾಗಿದೆ. ಇದಕ್ಕೆ ಪೂರಕವಾಗಿ ಆಡಿಯೊ ಮತ್ತು ಫೋಟೊ ಸಾಕ್ಷ್ಯಗಳು ಲಭ್ಯವಾಗಿವೆ' ಎಂದರು.

'ಇಬ್ಬರೂ ಆರೋಪಿಗಳ ವಿರುದ್ಧದ ಆಪಾದನೆಗಳು ತುಂಬಾ ಗಂಭೀರವಾಗಿವೆ. ತನಿಖೆ ಪ್ರಗತಿಯಲ್ಲಿದೆ. ಈ ಕಾರಣಕ್ಕಾಗಿಯೇ ವಿಚಾರಣಾ ನ್ಯಾಯಾಲಯ ಜೋಶಿ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ' ಎಂದರು.

ಇದಕ್ಕೆ ಪ್ರತಿಯಾಗಿ ಜೋಶಿ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಸರ್ಕಾರಿ ಅಧಿಕಾರಿಗಳನ್ನು ಸಂಪರ್ಕಿಸುವಂತೆ ನಿಂಗಪ್ಪ ಸಾವಂತ್‌ಗೆ ಜೋಶಿ ನಿರ್ದೇಶನ ನೀಡಿದ್ದಾರೆ ಎಂಬುದಕ್ಕೆ ಪೂರಕವಾದ ಯಾವುದೇ ದಾಖಲೆಯನ್ನು ಲೋಕಾಯುಕ್ತ ಪೊಲೀಸರು ನೀಡಿಲ್ಲ. ಈ ಪ್ರಕರಣದಲ್ಲಿ ಈಗಾಗಲೇ ನಿಂಗಪ್ಪಗೆ ಜಾಮೀನು ದೊರೆತಿದೆ. ಲೋಕಾಯುಕ್ತ ಪೊಲೀಸರು ಜೋಶಿ ಅವರ ಮನೆಯಲ್ಲಿ ಶೋಧ ನಡೆಸಿದಾಗ ಯಾವುದೇ ಮಹತ್ವದ ದಾಖಲೆಗಳು ದೊರೆತಿಲ್ಲ' ಎಂದರು.

ದಿನದ ಕಲಾಪದ ವೇಳೆ ಅಂತ್ಯಗೊಂಡ ಕಾರಣ ವಾದ–ಪ್ರತಿವಾದವನ್ನು ಮೊಟಕಗೊಳಿಸಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಆತುರದ ಕ್ರಮ ಬೇಡ' ಎಂಬ ಈ ಹಿಂದಿನ ಆದೇಶವನ್ನು ವಿಸ್ತರಿಸಿತು. ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಲಾಗಿದೆ.

ಸಿಇಟಿ: 2ನೇ ಸುತ್ತಿನ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟವಾಗಿದ್ದು, ಸೀಟು ಹಂಚಿಕೆಯಾದವರು ಸೆ.3ರ ಒಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಸುತ್ತಿನ ಅಂತಿಮ ಫಲಿತಾಂಶವನ್ನು ಎಂಸಿಸಿ ಫಲಿತಾಂಶದ ನಂತರ ಪ್ರಕಟಿಸಲಾಗುವುದು. ಅಲ್ಲಿಯವರೆಗೂ ಯಾವುದೇ ಛಾಯ್ಸ್ ಆಯ್ಕೆಗೆ ಅವಕಾಶ ಇಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌.ಪ್ರಸನ್ನ ಹೇಳಿದ್ದಾರೆ.

ಅಖಿಲ ಭಾರತ ಮಟ್ಟದ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಸಿಇಟಿ ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಅವರಿಗೆ ಅನುಕೂಲ ಮಾಡಿಕೊಡಲು ನಾಲ್ಕು ಛಾಯ್ಸ್‌ಗಳ ಆಯ್ಕೆಗೆ ಅವಕಾಶ ನೀಡಲಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳನ್ನು ಹೊರತುಪಡಿಸಿ, ಇತರ ಎಲ್ಲ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಛಾಯ್ಸ್-1 ಮತ್ತು ಛಾಯ್ಸ್- 2 ಆಯ್ಕೆ ಮಾಡಿದವರಿಗೆ ಶುಲ್ಕ ಪಾವತಿಸಲು ಸೆ. 2ರವರೆಗೆ ಅವಕಾಶ ನೀಡಲಾಗಿದೆ. ಭಾನುವಾರ ಸೇರಿದಂತೆ ಎಲ್ಲ ಸಾರ್ವತ್ರಿಕ ರಜಾ ದಿನಗಳಲ್ಲೂ ಕಾಲೇಜುಗಳು ಕಾರ್ಯನಿರ್ವಹಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಸೀಟು ಹಂಚಿಕೆಯ ನಂತರ ಯಾವುದೇ ಛಾಯ್ಸ್ ಆಯ್ಕೆ ಮಾಡದವರನ್ನು ಸೀಟು ಹಂಚಿಕೆ ಪ್ರಕ್ರಿಯೆಯಿಂದ ಹೊರ ಹಾಕಲಾಗುತ್ತದೆ. ಮತ್ತೆ ಒಳ ಬರಲು ಅವಕಾಶ ಇಲ್ಲ' ಎಂದಿದ್ದಾರೆ.

ಶಾಸಕರ ಕರೆ ಸ್ವೀಕರಿಸದ ಅಧಿಕಾರಿ ಅಮಾನತು

ಚಿಕ್ಕಬಳ್ಳಾಪುರ: ಬಾಗೇಪಲ್ಲಿ ಶಾಸಕ ಎಸ್‌.ಎನ್‌.ಸುಬ್ಬಾರೆಡ್ಡಿ ಅವರ ಕರೆ ಸ್ವೀಕರಿಸದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಬಿಂದುಮಣಿ ಎಂ.ಎಲ್.ಅವರನ್ನು ಕೆಲಸದಿಂದ ಅಮಾನತುಗೊಳಿಸಲಾಗಿದೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮಾತನಾಡಲು ಬಿಂದುಮಣಿ ಅವರಿಗೆ ಶಾಸಕರು ಮೂರು ದಿನ ಕರೆ ಮಾಡಿದ್ದಾರೆ. ಆದರೆ ಅಧಿಕಾರಿ ಕರೆ ಸ್ವೀಕರಿಸಿಲ್ಲ. ಇದರಿಂದ ಅಸಮಾಧಾನಗೊಂಡ ಶಾಸಕರು ಬಿಂದುಮಣಿ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕು ಎಂದು ಇಲಾಖೆಯನ್ನು ಕೋರಿದ್ದರು.

'ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸದೆ, ಬೇಜವಾಬ್ದಾರಿ ತೋರಿದ್ದಾರೆ. ಆದ್ದರಿಂದ ಇವರನ್ನು ಅಮಾನತುಗೊಳಿಸುವಂತೆ' ಅಲ್ಪಸಂಖ್ಯಾತ ನಿರ್ದೇಶನಾಲಯದ ನಿರ್ದೇಶಕರು, ಇಲಾಖೆಯ ಅಧೀನ ಕಾರ್ಯದರ್ಶಿಗೆ ಪ್ರಸ್ತಾವ ಸಲ್ಲಿಸಿದ್ದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

ವೀರಶೈವ ಲಿಂಗಾಯತರು ಸಮೀಕ್ಷೆಯಲ್ಲಿ ನೈಜ ಮಾಹಿತಿಯನ್ನೇ ನೀಡುವಂತೆ ಕರೆ ನೀಡಲು ಸಮುದಾಯದ ಸಭೆಯಲ್ಲಿ ನಿರ್ಧರಿಸಲಾಗಿತ್ತು

'ಮೀಸಲಾತಿಗೂ, ಜಾತಿವಾರು ಸಮೀಕ್ಷೆಗೂ ಸಂಬಂಧ ಇಲ್ಲ'

ಬೆಂಗಳೂರು: 'ಮೀಸಲಾತಿಗೂ, ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗೂ ಸಂಬಂಧವಿಲ್ಲ. ಹೀಗಾಗಿ ವೀರಶೈವ ಲಿಂಗಾಯತರು ಸಮೀಕ್ಷೆ ವೇಳೆ ನೈಜ ಮಾಹಿತಿಯನ್ನೇ ನೀಡಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಈಶ್ವರ ಖಂಡ್ರೆ

'ಸಮುದಾಯದ ಸಚಿವರು, ಶಾಸಕರ ಸಭೆಯನ್ನು ಹಿಂದಿನ ಶುಕ್ರವಾರ ನಡೆಸಲಾಗಿತ್ತು' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲವರು ಮೀಸಲಾತಿ ದೊರಕಬಹುದು ಎಂದು ತಮ್ಮ ಉಪಜಾತಿಗೆ ಸಮೀಪದ ಮತ್ತೊಂದು ಜಾತಿಯ ಹೆಸರು ಬರೆಸಲಿದ್ದಾರೆ ಎಂಬುದರ ಬಗ್ಗೆ ಚರ್ಚೆಯಾಯಿತು. ಈ ಸಮೀಕ್ಷೆಯ ವರದಿ ಗೌಪ್ಯವಾಗಿ ಇರಲಿದ್ದು, ಇಲ್ಲಿ ತಪ್ಪು ಮಾಹಿತಿ ಕೊಟ್ಟ ತಕ್ಷಣ ಅದೇ ಜಾತಿಯ ಜಾತಿ ಪ್ರಮಾಣ ಪತ್ರ ಲಭಿಸುವುದಿಲ್ಲ' ಎಂದರು.

ಮಹಾಸಭಾದ ಪದಾಧಿಕಾರಿಗಳ ಸಭೆ: 'ವೀರಶೈವ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳ ಸಭೆಯು ಶನಿವಾರ ನಡೆದಿದ್ದು, ಸಮೀಕ್ಷೆಯ ಕೈಪಿಡಿ ಬಿಡುಗಡೆಯಾದ ನಂತರ ಅದನ್ನು ಪರಿಶೀಲಿಸಿ, ಮುಂದಿನ ನಡೆ ನಿರ್ಧರಿಸುವ ಬಗ್ಗೆ ಚರ್ಚಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

'ದುರ್ಬಲರ ಮೇಲಿನ ದೌರ್ಜನ್ಯ ತಡೆಗಟ್ಟಿ'

ರಾಷ್ಟ್ರಪತಿ ಪದಕ ಪ್ರದಾನ ಸಮಾರಂಭದಲ್ಲಿ ಪೊಲೀಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ದುರ್ಬಲ ವರ್ಗದವರು ಜಾತಿ ತಾರತಮ್ಯ ಅನುಭವಿಸುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ದೌರ್ಜನ್ಯಗಳನ್ನು ತಡೆಗಟ್ಟಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ತಾಕೀತು ಮಾಡಿದರು.

ಪೊಲೀಸ್ ಇಲಾಖೆ ಶನಿವಾರ ರಾಜಭವನದಲ್ಲಿ ಆಯೋಜಿಸಿದ್ದ ರಾಷ್ಟ್ರಪತಿ ಪದಕ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ರತಿ ಜಿಲ್ಲೆಯಲ್ಲಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ವಿಶೇಷ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ನಾನು ಇತ್ತೀಚೆಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಿಸಿಆರ್‌ಇ ಪೊಲೀಸ್ ಠಾಣೆಗಳ ಕಾರ್ಯ ಮತ್ತು ಪ್ರಗತಿ ತೃಪ್ತಿದಾಯಕವಿಲ್ಲ. ಇದನ್ನು ಪೊಲೀಸ್ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ದುರ್ಬಲವರ್ಗದವರಿಗೆ ಸುರಕ್ಷತೆ ಒದಗಿಸುವ ಸರ್ಕಾರದ ಉದ್ದೇಶ ಸಫಲವಾಗುವ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಬೇಕು' ಎಂದು ಹೇಳಿದರು.

ರಾಷ್ಟ್ರಪತಿ ಪದಕ ಪಡೆದ ಪೊಲೀಸ್ ಅಧಿಕಾರಿಗಳೊಂದಿಗೆ ಎಂ.ಎ. ಸಲೀಂ, ಸಿದ್ದರಾಮಯ್ಯ, ಥಾವರಚಂದ್ ಗೆಹಲೋತ್, ಜಿ. ಪರಮೇಶ್ವರ, ನಸೀರ್ ಅಹಮದ್ — ಪ್ರಜಾವಾಣಿ ಚಿತ್ರ

'ಇತರೆ ರಾಜ್ಯಗಳಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿರುದ್ಧ ಶಿಕ್ಷೆಯ ಪ್ರಮಾಣ ನಮ್ಮಲ್ಲಿ ಬಹಳ ಕಡಿಮೆಯಿದೆ. ಈ ಬಗ್ಗೆ ಪೊಲೀಸರು ಗಮನಹರಿಸಬೇಕು' ಎಂದು ಸೂಚಿಸಿದರು.

'ವಿಶಿಷ್ಟ ಸೇವೆ ಸಲ್ಲಿಸಿರುವ ಪೊಲೀಸರಿಗೆ ಕೊಡ ಮಾಡಲಾದ ಸೇವಾ ಪದಕದ ಹಿಂದೆ ಅವರ ಸೇವಾ ಮನೋಭಾವ, ಪ್ರಾಮಾಣಿಕತೆ ಹಾಗೂ ಪರಿಶ್ರಮವಿದೆ. ಸಾಮಾಜಿಕ ಕಳಕಳಿಯೊಂದಿಗೆ ಸೇವೆ ಸಲ್ಲಿಸಿದಾಗ ಮಾತ್ರ ಇಂತಹ ಸಾಧನೆ ಮಾಡಲು ಸಾಧ್ಯ. ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಜೊತೆಗೆ ಜನರ ಆಸ್ತಿಪಾಸ್ತಿ ಸಂರಕ್ಷಿಸುವುದು ಪೊಲೀಸರ ಜವಾಬ್ದಾರಿ' ಎಂದರು.

'ಬಲಾಢ್ಯರ ಕೈಯಲ್ಲಿ ಅಧಿಕಾರವಿದ್ದರೆ, ದುರ್ಬಲ ವರ್ಗದವರ ಜೀವನ ದುಸ್ತರವಾಗುತ್ತದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದರು. ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಿಕೊಡಬೇಕು. ಪೊಲೀಸರ ಸಂಖ್ಯೆಯ ಬಗ್ಗೆ ಗಮನಹರಿಸದೇ, ಅವರು ತಡೆಗಟ್ಟಿರುವ ಅಪರಾಧಗಳೆಷ್ಟು ಎಂಬುದನ್ನು ಪರಿಗಣಿಸಬೇಕು. ಪೊಲೀಸರ ಸಾಮಾಜಿಕ ಬದ್ಧತೆಯಿಂದ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ' ಎಂದು ಹೇಳಿದರು.

ಗೃಹ ಸಚಿವ ಜಿ. ಪರಮೇಶ್ವರ ಮಾತನಾಡಿ, 'ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ರಾಜ್ಯದಲ್ಲಿ 45ಕ್ಕೂ ಹೆಚ್ಚು ಸೈಬರ್ ಪೊಲೀಸ್ ಠಾಣೆಗಳಿದ್ದು, ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಕೊಲೆ ಹಾಗೂ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇಕಡ 99ರಷ್ಟು ಪ್ರಕರಣಗಳನ್ನು ಭೇದಿಸಲಾಗಿದೆ. ಇಲಾಖೆಯ ಬಗ್ಗೆ ಮಾಡುವ ಟೀಕೆಗಳನ್ನು ಸಲಹೆ ರೂಪದಲ್ಲಿ ಸ್ವೀಕರಿಸಿ ಪ್ರಾಮಾಣಿಕವಾಗಿ ಕಾರ್ಯನಿರ್ಹಿಸಬೇಕು' ಎಂದರು.

ಇದೇ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 2022 ಹಾಗೂ 2023ನೇ ಸಾಲಿನ ರಾಷ್ಟ್ರಪತಿ ಪದಕಗಳನ್ನು ಪೊಲೀಸ್ ಅಧಿಕಾರಿಗಳಿಗೆ ಪ್ರದಾನ ಮಾಡಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

'ಅಭಿಮಾನ್ ಸ್ಟುಡಿಯೊದಲ್ಲಿ ಸಸ್ಯೋದ್ಯಾನ'

ಅರಣ್ಯ ಭೂಮಿಯನ್ನು ಇಲಾಖೆಗೆ ಮರಳಿಸುವಂತೆ ಪತ್ರ ಬರೆಯಲಾಗಿದೆ– ಸಚಿವ ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಟಿ.ಎನ್. ಬಾಲಕೃಷ್ಣ ಅವರ ಅಭಿಮಾನ್ ಸ್ಟುಡಿಯೊಗೆ ಮಂಜೂರು ಮಾಡಿದ್ದ, ನಟ ವಿಷ್ಣುವರ್ಧನ್ ಸಮಾಧಿ ತೆರವಿನಿಂದ ವಿವಾದಕ್ಕೆ ಗುರಿಯಾಗಿದ್ದ ಕೆಂಗೇರಿಯ ಅರಣ್ಯ ಭೂಮಿಯು ಇಲಾಖೆಗೆ ಮರಳಿ ಬಂದರೆ ಅಲ್ಲಿ ಒಂದು ಸಸ್ಯೋದ್ಯಾನ ನಿರ್ಮಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಡಾ. ವಿಷ್ಣುಸೇನಾ ಸಮಿತಿಯ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್, ವಿಷ್ಣುವರ್ಧನ್ ಸ್ಮಾರಕ ಕುರಿತಂತೆ ಈಶ್ವರ ಖಂಡ್ರೆ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

> ಅಭಿಮಾನ್ ಸ್ಟುಡಿಯೊ ಆವರಣದಲ್ಲಿರುವ ವಿಷ್ಣುವರ್ಧನ್, ಬಾಲಕೃಷ್ಣ ಅವರ ಸಮಾಧಿಗಳು ಸ್ಮಾರಕವಾಗಲಿ. ಭೂಮಿಯನ್ನು ಅರಣ್ಯ ಇಲಾಖೆಯು ಹಿಂಪಡೆಯುವ ನಿರ್ಧಾರ ಮತ್ತೊಂದು ಗೊಂದಲವಾಗದಿರಲಿ
>
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಖಂಡ್ರೆ ಅವರು, 'ಬೆಂಗಳೂರು ವ್ಯಾಪಕವಾಗಿ ಬೆಳೆದಿದ್ದು, ಶ್ವಾಸತಾಣಗಳ ಅಗತ್ಯವಿದೆ' ಎಂದೂ ಹೇಳಿದರು.

'ಟಿ.ಎನ್. ಬಾಲಕೃಷ್ಣ ಅವರಿಗೆ ಸ್ಟುಡಿಯೊ ನಿರ್ಮಾಣಕ್ಕಾಗಿ ಮಂಜೂರು ಮಾಡುವಾಗ ವಿಧಿಸಿದ್ದ ಷರತ್ತುಗಳ ಉಲ್ಲಂಘನೆಯಾಗಿದೆ. ಹೀಗಾಗಿ, ಈ ಭೂಮಿಯನ್ನು ಅರಣ್ಯ ಇಲಾಖೆಗೆ ಮರಳಿಸಲು ಈಗಾಗಲೇ ಪತ್ರ ಬರೆಯಲಾಗಿದೆ' ಎಂದರು.

'ಮೈಲಸಂದ್ರ ಗ್ರಾಮದ ಸರ್ವೆ ನಂ.26 ರಲ್ಲಿ 62 ಎಕರೆ20 ಗುಂಟೆ ಪ್ರದೇಶವನ್ನು 'ತುರಹಳ್ಳಿ ರಾಜ್ಯ ಅರಣ್ಯ' ಎಂದು ಘೋಷಿಸಿ ಮೈಸೂರು ಸರ್ಕಾರ 1935ರಲ್ಲಿ ಅಧಿಸೂಚನೆ ಹೊರಡಿಸಿತ್ತು. 1980ರ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೆ ಬರುವ ಮೊದಲು ಈ ಅರಣ್ಯ ಭೂಮಿಯ ಪೈಕಿ 20 ಎಕರೆ ಪ್ರದೇಶವನ್ನು ಸ್ಟುಡಿಯೊ ನಿರ್ಮಿಸುವ ಸಲುವಾಗಿ ಟಿ.ಎನ್.ಬಾಲಕೃಷ್ಣ ಅವರಿಗೆ 1969ರಲ್ಲಿ ಒಂದು ಎಕರೆಗೆ ₹300ರಂತೆ ಒಟ್ಟು ₹6 ಸಾವಿರದಂತೆ 20 ಎಕರೆ ಪ್ರದೇಶವನ್ನು ಷರತ್ತುಬದ್ಧವಾಗಿ ಮಂಜೂರು ಮಾಡಲಾಗಿತ್ತು' ಎಂದರು.

'2003ರಲ್ಲಿ 10 ಎಕರೆಯನ್ನು ಬಾಲಕೃಷ್ಣ ಅವರ ಮಕ್ಕಳು ಸರ್ಕಾರದಿಂದ ಪೂರ್ವಾನುಮತಿ ಪಡೆದು ಮಾರಾಟ ಮಾಡಿದ್ದಾರೆ. ಮಾರಾಟದಿಂದ ಬಂದ ಹಣದಿಂದ ಸ್ಟುಡಿಯೊ ಅಭಿವೃದ್ಧಿಪಡಿಸಬೇಕು ಎಂದು ಷರತ್ತು ಹಾಕಲಾಗಿತ್ತು. ಆದರೆ, ಈವರೆಗೆ ಅಭಿವೃದ್ಧಿ ಪಡಿಸಿಲ್ಲ. ಬದಲಾಗಿ ಉಳಿದ 10 ಎಕರೆ ಜಮೀನನ್ನೂ ಮಾರಾಟ ಮಾಡಲು ಮುಂದಾಗಿರುವುದು ಷರತ್ತಿನ ಉಲ್ಲಂಘನೆಯಾಗಿದೆ. ಈ ಅರಣ್ಯ ಭೂಮಿಯನ್ನು ಇಲಾಖೆಗೆ ಮರಳಿಸುವಂತೆ ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದರು.

'ಕಂದಾಯ ಇಲಾಖೆ ವಶದಲ್ಲಿರುವ ಅರಣ್ಯ ಭೂಮಿಯನ್ನು ಯಾವುದೇ ಸಂಸ್ಥೆ, ವ್ಯಕ್ತಿಗಳಿಗೆ ಮಂಜೂರು ಮತ್ತು ಗುತ್ತಿಗೆ ನೀಡಿದ್ದರೆ, ಅನ್ಯ ಉದ್ದೇಶಕ್ಕೆ ಬಳಕೆ ಆಗುತ್ತಿದ್ದರೆ, ಅದರ ಪರಿಶೀಲನೆಗೆ ವಿಶೇಷ ತನಿಖಾ ತಂಡ ರಚಿಸುವಂತೆ ಇದೇ ಮೇ 15ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಪೀಠ ಸೂಚಿಸಿದೆ' ಎಂದೂ ತಿಳಿಸಿದರು.

ವಿಷ್ಣುವರ್ಧನ್ ಸ್ಮಾರಕಕ್ಕೆ ಜಮೀನು ನೀಡಲಾಗುವುದೇ ಎಂಬ ಪ್ರಶ್ನೆಗೆ, 'ಈ ಬಗ್ಗೆ ಸರ್ಕಾರ ನಿಯಮಾನುಸಾರ ತೀರ್ಮಾನಿಸಲಿದೆ' ಎಂದರು.

ಡಿಪಿಆರ್ ಸಿದ್ಧಪಡಿಸಿದ ರೈಲ್ವೆ ಇಲಾಖೆ ● ಸಹಭಾಗಿತ್ವಕ್ಕೆ ಜಿಂದಾಲ್ ಉತ್ಸುಕತೆ

ಅಂಕೋಲಾ ರೈಲು ಮಾರ್ಗಕ್ಕೆ ₹16,435 ಕೋಟಿ

● ಮಂಜುನಾಥ ಹೆಬ್ಬಾರ್

ನವದೆಹಲಿ: ಪಶ್ಚಿಮ ಘಟ್ಟದ ದಟ್ಟ ಕಾನನಗಳ ನಡುವೆ 108 ಕಿ.ಮೀ. ಸಾಗುವ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣಕ್ಕೆ ₹16,435 ಕೋಟಿ ವೆಚ್ಚವಾಗಲಿದೆ ಎಂದು ರೈಲ್ವೆ ಇಲಾಖೆ ಅಂದಾಜಿಸಿದೆ.

ನೈರುತ್ಯ ರೈಲ್ವೆಯು ಪರಿಸರ ಪರಿಣಾಮಗಳ ಸಮೀಕ್ಷೆ ನಡೆಸಿ ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ ರೈಲ್ವೆ ಇಲಾಖೆಗೆ ಸಲ್ಲಿಸಿದೆ. ಪರಿಸರವಾದಿಗಳ ತೀವ್ರ ವಿರೋಧದ ಹಿನ್ನೆಲೆಯಲ್ಲಿ ಯೋಜನೆಯ ವಿನ್ಯಾಸ ಬದಲಿಸಲಾಗಿದ್ದು, ವಿದ್ಯುದ್ದೀಕರಣದ ಜೋಡಿ ಮಾರ್ಗ ನಿರ್ಮಾಣ ಮಾಡಲಾಗುತ್ತದೆ.

ಯೋಜನೆಯ ಸಮಗ್ರ ಪರಿಣಾಮದ ಮೌಲ್ಯಮಾಪನ ನಡೆಸಿ ವರದಿ ಸಲ್ಲಿಸುವಂತೆ ಡೆಹ್ರಾಡೂನ್‌ನ ರಾಷ್ಟ್ರೀಯ ವನ್ಯಜೀವಿ ಸಂಸ್ಥೆಗೆ ರೈಲ್ವೆ ಇಲಾಖೆ ಸೂಚಿಸಿದೆ. ಸಂಸ್ಥೆಯು ಮುಂದಿನ ವರ್ಷ ಜೂನ್ ತಿಂಗಳಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದೆ. ಸಂಸ್ಥೆಯು ವರದಿ ಸಲ್ಲಿಸಿದ ಬಳಿಕ ಡಿಪಿಆರ್‌ನಲ್ಲಿ ಇನ್ನಷ್ಟು ಪರಿಷ್ಕರಣೆ ಮಾಡಲಾಗುತ್ತದೆ. ಆ ಬಳಿಕ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಡಿಪಿಆರ್ ಸಲ್ಲಿಸಲಾಗುತ್ತದೆ. ಅಲ್ಲಿ ಅನುಮೋದನೆ ಸಿಕ್ಕ ನಂತರ ಕಾಮಗಾರಿ ನಡೆಸಲಾಗುತ್ತದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಕರಾವಳಿ ಕರ್ನಾಟಕ ಹಾಗೂ ಕೇಂದ್ರ ಕರ್ನಾಟಕ ನಡುವೆ ತಡೆರಹಿತ ಸಂಪರ್ಕಕ್ಕೆ ಅನುವು ಮಾಡಿಕೊಡುವ ಯೋಜನೆಯ ಅನುಷ್ಠಾನದಲ್ಲಿ ಸಹಭಾಗಿತ್ವ ವಹಿಸಲು ಜಿಂದಾಲ್ ಕಂಪನಿ ಉತ್ಸುಕತೆ ತೋರಿದೆ. ಈ ಸಂಬಂಧ ರೈಲ್ವೆ ಸಚಿವಾಲಯದೊಂದಿಗೆ ಸಂಸ್ಥೆ ಮಾತುಕತೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಯೋಜನೆಯ ತ್ವರಿತ ಅನುಷ್ಠಾನಕ್ಕೆ ಸಮಾಲೋಚಕರ ನೇಮಕ ಸೇರಿದಂತೆ ವಿವಿಧ ಉಪಕ್ರಮಗಳನ್ನು ಕೈಗೊಳ್ಳುವಂತೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಒತ್ತಡ ಹೇರಿದ್ದಾರೆ.

ಸಮಗ್ರ ಸಾರಿಗೆ ಯೋಜನೆ ವರದಿ ಸಲ್ಲಿಕೆ: ಇನ್ನೊಂದೆಡೆ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ನಿರ್ದೇಶನದ ಹಿನ್ನೆಲೆಯಲ್ಲಿ ಸಮಗ್ರ ಸಾರಿಗೆ ಯೋಜನೆ ಸಿದ್ಧಪಡಿಸಲು ಐಡೆಕ್ ಸಂಸ್ಥೆಗೆ ರಾಜ್ಯ ಸರ್ಕಾರ ಸೂಚಿಸಿತ್ತು. ಸಂಸ್ಥೆಯು ಲೋಕೋಪಯೋಗಿ ಇಲಾಖೆಗೆ ವರದಿ ಸಲ್ಲಿಸಿತ್ತು. ಈ ವರದಿಯಲ್ಲಿ ಕೆಲವೊಂದು ಬದಲಾವಣೆ ಮಾಡುವಂತೆ ನೈರುತ್ಯ ರೈಲ್ವೆ ಸೂಚಿಸಿತ್ತು. ಪರಿಷ್ಕೃತ ವರದಿಯನ್ನು ಐಡೆಕ್ ಸಂಸ್ಥೆಯು ಮೂಲಸೌಕರ್ಯ ಇಲಾಖೆಗೆ ಇತ್ತೀಚೆಗೆ ಸಲ್ಲಿಸಿದೆ.

ವಿನ್ಯಾಸ ಬದಲಿಸಲು ಸೂಚಿಸಿದ್ದ ವನ್ಯಜೀವಿ ಮಂಡಳಿ: ಈ ಯೋಜನೆಯಿಂದಾಗಿ ಎರಡು ಲಕ್ಷ ಮರಗಳ ಹನನವಾಗಲಿದೆ ಎಂದು ಪರಿಸರವಾದಿಗಳು ಕಳವಳ ವ್ಯಕ್ತಪಡಿಸಿದ್ದರು. ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯಕ್ಕೆ 2017ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಮಾರ್ಗ ನಿರ್ಮಾಣಕ್ಕೆ 595.64 ಹೆಕ್ಟೇರ್ ಅರಣ್ಯ ಬಳಕೆಯಾಗಲಿದೆ ಎಂದು ರಾಜ್ಯ ಸರ್ಕಾರ ಪ್ರಸ್ತಾಪಿಸಿತ್ತು. ಶರಾವತಿ ವನ್ಯಜೀವಿ ಧಾಮ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಈ ಮಾರ್ಗ ಹಾದು ಹೋಗಲಿದೆ ಎಂದೂ ಉಲ್ಲೇಖಿಸಿತ್ತು.

ಈ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಪರಿಸರ ಇಲಾಖೆಯ ತಜ್ಞರ ಸಮಿತಿಯ ಶಿಫಾರಸಿನ ಪ್ರಕಾರವೇ ರೈಲ್ವೆ ಇಲಾಖೆ ಹೊಸ ಪ್ರಸ್ತಾವನೆ ಸಲ್ಲಿಸಬೇಕು ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿ ತಾಕೀತು ಮಾಡಿತ್ತು.

ದಟ್ಟ ಅರಣ್ಯಗಳ ನಡುವೆ ಸಾಗುವ ಈ ಯೋಜನೆಗೆ ಈಗಿನ ಸ್ವರೂಪದಲ್ಲಿ ಯೋಜನೆಗೆ ಒಪ್ಪಿಗೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದ ತಜ್ಞರ ಸಮಿತಿ, ಪರಿಸರಕ್ಕೆ ಹಾನಿಯಾಗದಂತೆ ಯೋಜನೆ ಅನುಷ್ಠಾನಕ್ಕೆ ರೈಲ್ವೆ ಇಲಾಖೆಯು ಹೊಸ ಪ್ರಸ್ತಾವನೆ ಸಿದ್ಧಪಡಿಸುವಂತೆ ಸಲಹೆ ನೀಡಿತ್ತು. ಈ ಯೋಜನೆ ಅನುಷ್ಠಾನ ಮಾಡಿದರೆ ಅಪಾರ ಪ್ರಮಾಣದ ಕಾಡು ನಾಶವಾಗಲಿದೆ ಎಂದು 2022ರ ಹುಲಿ ಗಣತಿ ವರದಿಯಲ್ಲೂ ಎಚ್ಚರಿಸಲಾಗಿತ್ತು.

ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ:ಎಸ್‌ಯುಪಿ(2)58/2024-25 ದಿನಾಂಕ: 30.08.2025

ಟೆಂಡರ್ ಅಧಿಸೂಚನೆ(ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಉಪಕರಣಗಳಿಗೆ ಟೆಂಡರ್ ಕರೆಯಲಾಗಿದೆ. ಕೆಪಿಪಿ.ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 15.09.2025 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.inನ್ನು ಸಂಪರ್ಕಿಸಲುಕೋರಿದೆ.

ಸಹಿ/-
ಸದಸ್ಯ ಕಾರ್ಯದರ್ಶಿ, ಆರೋಗ್ಯರಕ್ಷಾ ಸಮಿತಿ ಹಾಗೂ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR / MNG / 697/ MPL / 25-26

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ–577501
E-mail: dcpocta@gmail.com Ph: 08194-295822

ಪೋಷಕರ ಪತ್ತೆಗಾಗಿ ಮನವಿ

ತಂದೆ ತಾಯಿಯವರನ್ನು ಪತ್ತೆ ಹಚ್ಚಲು ನೆರವು ನೀಡಿ ಹೆಣ್ಣು ಶಿಶುವಿನ ವಿವರಗಳನ್ನು ಭಾವಚಿತ್ರದೊಂದಿಗೆ ನೀಡಲಾಗಿದೆ.

(1) ಹೆಸರು:– ನವಜಾತ ಹೆಣ್ಣು ಶಿಶು (2) ವಯಸ್ಸು:– ಸುಮಾರು 5–6 ದಿನದ ಮಗು (3) ಸಿಕ್ಕಿದ ಸ್ಥಳ:– ರಾಷ್ಟ್ರೀಯ ಹೆದ್ದಾರಿ 48ರ ಸೀಬಾರ ಬಳಿ ಕುರಿಗಾಹಿಗಳು ನೋಡಿ ಆಟೋದವರಿಗೆ ತಿಳಿಸಿದ್ದು, ಅವರು ಶಿಶುವನ್ನು ರಕ್ಷಿಸಿ ಚಿತ್ರದುರ್ಗ ಮಕ್ಕಳ ಕಲ್ಯಾಣ ಸಮಿತಿಗೆ ವರ್ಗಾಯಿಸಿರುತ್ತಾರೆ. (4) ಶಿಶು ದೊರೆತ ದಿನಾಂಕ:–21–08–2025 (5) ಮೈಬಣ್ಣ:– ಬಿಳಿಬಣ್ಣ (6) ತೂಕ:– 2.5 ಕೆ.ಜಿ. (7) ಶಿಶುವಿನ ಆರೋಗ್ಯ ಸ್ಥಿತಿ:–ಉತ್ತಮವಾಗಿದೆ. (8) ಶಿಶುವಿನ ವಿಷಯವಾಗಿ ಯಾರನ್ನು ಸಂಪರ್ಕಿಸಬೇಕು:– ಅಧೀಕ್ಷಕರು, ಸರ್ಕಾರಿ ವಿಶೇಷ ದತ್ತು ಕೇಂದ್ರ, ಕೇರಾಫ್ ಬಾಲಕಿಯರ ಬಾಲಮಂದಿರ, ಕಲಾ ಕಾಲೇಜು ಹತ್ತಿರ, ಚಿತ್ರದುರ್ಗ–577501. ದೂರವಾಣಿ ಸಂಖ್ಯೆ 9945785784 08194–200336

DIPR/CTA/KSMCA/311/2025-26

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.
ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ ಚಿತ್ರದುರ್ಗ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1086/2025–26/ ದಿನಾಂಕ:26.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2025–26/ ದಿನಾಂಕ: 26.08.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 01 ಕಾಮಗಾರಿಗೆ **ಟೆಂಡರ್‌ಗಿಟ್ಟ ಮೊತ್ತ ರೂ. 881.97 ಲಕ್ಷಕ್ಕೆ ಟೆಂಡರ್ ಕರೆಯಲಾಗಿದೆ.** ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in ದಿನಾಂಕ: 29.08.2025 ಬೆಳಗ್ಗೆ 11:30 ಗಂಟೆಯಿಂದ ಪಡೆಯಬಹುದು (Download).** ಕೆ.ಡಬ್ಲ್ಯೂ–4 ಕಾಮಗಾರಿಗೆ ಪ್ರೀ ಬಿಡ್ ಸಭೆಯನ್ನು **ದಿನಾಂಕ: 04.09.2025 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ** ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ದಿನಾಂಕ: 18.09.2025 ರಂದು ಬೆಳಗ್ಗೆ 11:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19.09.2025ರ ಬೆಳಗ್ಗೆ 11:31 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:250/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಮಟೆಂಪ್ರ:ಸ.ಇಂ–2:2025–26/1335
ದಿ:28.08.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:24/2025–26

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ 5054 ಯೋಜನೆ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಟೆಂಡರಿಗಿಟ್ಟ ಮೊತ್ತ ರೂ.84.00ಲಕ್ಷ & ರೂ.42.20ಲಕ್ಷ ಮೊತ್ತದ ಎರಡು ಪ್ಯಾಕೇಜ್ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಮರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಪಡೆಯಬಹುದು. ಟೆಂಡರ್‌ಗಳನ್ನು https://kppp.karnataka.gov.in ಆನ್‌ಲೈನ್ ಮೂಲಕ ಪಡೆಯಬಹುದು. ನಿಗಧಿಪಡಿಸಿದ ಕೊನೆಯ ದಿನಾಂಕ:15.09.2025ರ ಸಂಜೆ 4.00 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ,

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/397/2025–26

ಈರುಳ್ಳಿ ಬೆಳೆ ಹಾನಿ: ರೈತರಿಗೆ ಸಂಕಷ್ಟ

ದೇಶದ ಮೊದಲ ಟೆಂಪರ್ಡ್ ಗ್ಲಾಸ್ ತಯಾರಿಕಾ ಘಟಕ ಉದ್ಘಾಟನೆ

ನೋಯ್ಡಾ (ಪಿಟಿಐ): ಮೊಬೈಲ್ ಫೋನ್‌ನ ಪರದೆಯ ರಕ್ಷಣೆಗೆ ಬಳಸುವ ಟೆಂಪರ್ಡ್ ಗ್ಲಾಸ್‌ಗಳನ್ನು ತಯಾರಿಸುವ ದೇಶದ ಮೊದಲ ತಯಾರಿಕಾ ಘಟಕವನ್ನು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಉದ್ಘಾಟಿಸಿದರು.

ಅಶ್ವಿನಿ ವೈಷ್ಣವ್

ಆಪ್ಟಿಮಸ್ ಇನ್ಫ್ರಾಕಾಮ್ ಕಂಪನಿ ಉತ್ತರಪ್ರದೇಶದ ನೋಯ್ಡಾದಲ್ಲಿ ಘಟಕ ಸ್ಥಾಪಿಸಿದ್ದು, ಟೆಂಪರ್ಡ್ ಗ್ಲಾಸ್ ತಯಾರಿಸಲು ಅಮೆರಿಕದ ಮೆಟೀರಿಯಲ್ ಟೆಕ್ನಾಲಜಿ ಕಂಪನಿ ಕಾರ್ನಿಂಗ್ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

ಘಟಕವು ವಾರ್ಷಿಕ 2.5 ಕೋಟಿ ಟೆಂಪರ್ಡ್ ಗ್ಲಾಸ್ ತಯಾರಿಕಾ ಸಾಮರ್ಥ್ಯವನ್ನು ಹೊಂದಿದೆ. ಎರಡನೇ ಹಂತದಲ್ಲಿ, ತಯಾರಿಕೆಯನ್ನು ವಾರ್ಷಿಕ 20 ಕೋಟಿ ಸಾಮರ್ಥ್ಯಕ್ಕೆ ಹೆಚ್ಚಿಸಲಾಗುವುದು ಎಂದರು.

ಕಳೆದ 11 ವರ್ಷದಲ್ಲಿ ದೇಶದ ಎಲೆಕ್ಟ್ರಾನಿಕ್ಸ್ ತಯಾರಿಕೆಯು ಆರು ಪಟ್ಟು ಹೆಚ್ಚಳವಾಗಿದ್ದು, ₹11.5 ಲಕ್ಷ ಕೋಟಿ ಮೌಲ್ಯ ಹೊಂದಿದೆ. ರಫ್ತು ಮೌಲ್ಯ ₹3 ಲಕ್ಷ ಕೋಟಿಯಾಗಿದ್ದು, 25 ಲಕ್ಷ ಜನರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗಗಳನ್ನು ನೀಡಿದೆ ಎಂದು ತಿಳಿಸಿದ್ದಾರೆ.

'ಟೆಂಪರ್ಡ್ ಗ್ಲಾಸ್ ತಯಾರಿಕೆಗೆ ಮುಂದಿನ ಒಂದು ವರ್ಷದಲ್ಲಿ ₹800 ಕೋಟಿ ಹೂಡಿಕೆ ಮಾಡಲಾಗುವುದು. ಇದು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 16 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸುವ ಅಂದಾಜಿದೆ' ಎಂದು ಆಪ್ಟಿಮಸ್ ಇನ್ಫ್ರಾಕಾಮ್‌ನ ಅಧ್ಯಕ್ಷ ಅಶೋಕ್ ಕುಮಾರ್ ಗುಪ್ತಾ ಹೇಳಿದ್ದಾರೆ.

ಸೆಪ್ಟೆಂಬರ್ ವೇಳೆಗೆ ರೈನೋಟೆಕ್ ಬ್ರ್ಯಾಂಡ್ ಅಡಿಯಲ್ಲಿ ಟೆಂಪರ್ ಗ್ಲಾಸ್‌ಗಳನ್ನು ಮಾರಾಟ ಮಾಡಲಾಗುವುದು. ಇದಕ್ಕೆ ಒಂದು ವರ್ಷದ ವಾರಂಟಿ ಇರುತ್ತದೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಪುತ್ತೂರು			
ಆಪಿ	55639-56069	ಕೋಕ	20000-28000	ಬಿಳಿಗೋಟು	23699-34699
ಬೆಟ್ಟೆ	30129-30579	ಹೊಸತು	26000-48500	ಚಾಲಿ	38299-43099
ಕೆಂಪುಗೋಟು	21609-22010	ಶಿರಸಿ		ರಾಶಿ	46909-50550
ರಾಶಿ	55119-55559	ಬೆಟ್ಟೆ	28989-36909		

'ನಗರ ಮೂಲಸೌಕರ್ಯ ಅಭಿವೃದ್ಧಿಗೆ ₹10 ಲಕ್ಷ ಕೋಟಿ ಹೂಡಿಕೆ'

ನವದೆಹಲಿ (ಪಿಟಿಐ): ಕಳೆದ ದಶಕದಲ್ಲಿ ಕೇಂದ್ರ ಸರ್ಕಾರವು ನಗರದ ಮೂಲಸೌಕರ್ಯ ವಲಯದ ಅಭಿವೃದ್ಧಿಗೆ ₹30 ಲಕ್ಷ ಕೋಟಿ ಹೂಡಿಕೆ ಮಾಡಿದೆ. ಮುಂದಿನ ನಾಲ್ಕು ವರ್ಷದಲ್ಲಿ ಮತ್ತೆ ₹10 ಲಕ್ಷ ಕೋಟಿ ಹೂಡಿಕೆ ಮಾಡುವ ಅಂದಾಜಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಶ್ರೀನಿವಾಸ್ ಕೆ. ಹೇಳಿದ್ದಾರೆ.

ಭಾರತದ ನಗರಗಳು ಕ್ಷಿಪ್ರವಾಗಿ ಬೆಳೆಯುತ್ತಿದ್ದು, ಮುಂದಿನ 20 ವರ್ಷದಲ್ಲಿ ಜನಸಂಖ್ಯೆಯ ಶೇ 50ಕ್ಕಿಂತ ಹೆಚ್ಚು ಜನರು ನಗರ ಪ್ರದೇಶಗಳಲ್ಲಿ ವಾಸಿಸಲಿದ್ದಾರೆ. ಈ ಕ್ಷಿಪ್ರ ನಗರೀಕರಣವು ಸವಾಲು ಮತ್ತು ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಹೇಳಿದ್ದಾರೆ.

2004ರಿಂದ 2014ರ ವರೆಗೆ ವಲಯದಲ್ಲಿ ₹1.78 ಲಕ್ಷ ಕೋಟಿ ಮಾತ್ರ ಹೂಡಿಕೆಯಾಗಿತ್ತು. ಆದರೆ, ಕಳೆದ ದಶಕದಲ್ಲಿ ₹30 ಲಕ್ಷ ಕೋಟಿ ಹೂಡಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ನಗರ ಮೂಲಸೌಕರ್ಯ ಮತ್ತು ನಗರ ಪ್ರದೇಶವು ಹೆಚ್ಚಿನ ಹೂಡಿಕೆ ಸ್ವೀಕರಿಸಿದೆ ಎಂದಿದ್ದಾರೆ. ರಿಯಲ್ ಎಸ್ಟೇಟ್ ವಲಯವು, ವಲಯದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

ನಿರಂತರ ಮಳೆಯಿಂದ ಕೊಳೆರೋಗ • ಬೆಳೆ ರಕ್ಷಣೆಗೆ ಔಷಧ ಸಿಂಪಡಿಸಲು ಮುಂದಾದ ರೈತರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ವಿಜಯಪುರ, ವಿಜಯನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅತಿವೃಷ್ಟಿ ಹಾಗೂ ತೇವಾಂಶ ಹೆಚ್ಚಳದಿಂದಾಗಿ ಅಪಾರ ಪ್ರಮಾಣದಲ್ಲಿ ಈರುಳ್ಳಿ ಬೆಳೆ ಹಾನಿಯಾಗಿದ್ದು, ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಸುಮಾರು 2,920 ಹೆಕ್ಟೇರ್‌ನಲ್ಲಿ ಈರುಳ್ಳಿ ಬೆಳೆ ಹಾನಿಯಾಗಿದೆ. ನವಲಗುಂದ, ಅಣ್ಣಿಗೇರಿ, ಹುಬ್ಬಳ್ಳಿ ತಾಲ್ಲೂಕುಗಳಲ್ಲಿ ಬೆಳೆ ಹಾನಿಯಾಗಿದೆ ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

ವಿಜಯಪುರ ಜಿಲ್ಲೆಯಲ್ಲಿ ಮಳೆ ಹಾಗೂ ಡೋಣಿ ನದಿ ಪ್ರವಾಹದಿಂದ ಅಂದಾಜು 370 ಹೆಕ್ಟೇರ್ ಈರುಳ್ಳಿ ಬೆಳೆ ಹಾನಿ ಆಗಿದೆ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಹುಲ್ ಕುಮಾರ್ ಬಾವಿದೊಡ್ಡಿ ತಿಳಿಸಿದ್ದಾರೆ.

'ಜಿಲ್ಲೆಯಲ್ಲಿ 16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಒಂದೂವರೆ ತಿಂಗಳ ಹಿಂದೆ ಈರುಳ್ಳಿ ಬಿತ್ತನೆಯಾಗಿತ್ತು. ನಿರಂತರ ಮಳೆ ಹಾಗೂ ಡೋಣಿ ನದಿ ಪ್ರವಾಹದಿಂದ ಹೊಲಗಳಲ್ಲಿ ನೀರು ನಿಂತು ಈರುಳ್ಳಿ ಕೊಳೆತು ಹೋಗಿದೆ' ಎಂದು ಹೇಳಿದ್ದಾರೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಹೋಬಳಿ ವ್ಯಾಪ್ತಿಯಲ್ಲಿ ತೇವಾಂಶ ಹೆಚ್ಚಳವಾಗಿ 60 ಎಕರೆ ಈರುಳ್ಳಿ ಬೆಳೆಗೆ ಸುಳಿ ರೋಗ ಬಾಧಿಸಿದೆ. ಚಿಗಟೇರಿ, ಬೆಣ್ಣಿಹಳ್ಳಿ, ನಜೀರ ನಗರ, ಪೃಥ್ವೇಶ್ವರ, ನಿಲುವಂಜಿ, ಮತ್ತಿಹಳ್ಳಿ, ಗೌರಿಪುರ, ಬಳಿಗನೂರು, ಮೈದೂರು ವ್ಯಾಪ್ತಿಯಲ್ಲಿ ಸುಳಿ ಹಾಗೂ ಕೊಳೆ ರೋಗ ಕಾಣಿಸಿದೆ. ಬೆಳೆ ರಕ್ಷಣೆಗೆ ರೈತರು ಔಷಧಿ ಸಿಂಪಡಿಸುತ್ತಿದ್ದಾರೆ. ಮಳೆ ಮುಂದುವರಿದರೆ ತೇವಾಂಶ ಮತ್ತಷ್ಟು ಹೆಚ್ಚಿ ಬೆಳೆ ಸಂಪೂರ್ಣ ನಾಶವಾಗಲಿದೆ ಎಂದು ರೈತರು ತಿಳಿಸಿದ್ದಾರೆ.

ಹೂವಿನಹಡಗಲಿ ತಾಲ್ಲೂಕಿನಲ್ಲಿ ಈರುಳ್ಳಿ ಬೆಳೆಗೆ ಕೊಳೆರೋಗ ಕಾಣಿಸಿಕೊಂಡಿದೆ. ತಾಲ್ಲೂಕಿನಲ್ಲಿ 1,500 ಎಕರೆಯಲ್ಲಿ ಮುಂಗಾರು ಈರುಳ್ಳಿ ಬಿತ್ತನೆಯಾಗಿದೆ. ಇಟ್ಟಿಗಿ ಹೋಬಳಿಯಲ್ಲಿ ಹೆಚ್ಚು ಈರುಳ್ಳಿ ಕ್ಷೇತ್ರವಿದ್ದು, ಕೆಂಪು ಮಸಾರಿಗಿಂತ ಕಪ್ಪು ಎರೆಭೂಮಿಯಲ್ಲಿನ ಬೆಳೆ ರೋಗಕ್ಕೆ ತುತ್ತಾಗಿದೆ. ಇಟ್ಟಿಗಿ, ಉತ್ತಂಗಿ, ಮುಸುವಿನ ಕಲ್ಲಹಳ್ಳಿಯ ಆಯ್ದ ಭಾಗಗಳಲ್ಲಿ ಕೊಳೆ ರೋಗ ಕಾಣಿಸಿಕೊಂಡಿದ್ದು, ರೈತರನ್ನು ಚಿಂತೆಗೀಡು ಮಾಡಿದೆ.

'ಜಿಟಿ ಜಿಟಿ ಮಳೆಯಿಂದಾಗಿ ವಾತಾವರಣದಲ್ಲಿ ತೇವಾಂಶ ಹೆಚ್ಚಳವಾಗಿ ಈರುಳ್ಳಿಗೆ ಥ್ರಿಫ್ಸ್ ನುಸಿಬಾಧೆ (ಕೊಳೆರೋಗ) ಕಾಣಿಸಿಕೊಂಡಿದೆ. ತಡವಾಗಿ ಬಿತ್ತನೆಯಾದ ಬೆಳೆ ಮತ್ತು ರೋಗಕ್ಕೆ ತುತ್ತಾಗದೇ ಇರುವ ಬೆಳೆಗಳಿಗೆ ಶಿಫಾರಸು ಮಾಡಿರುವ ಕೀಟನಾಶಕ ಸಿಂಪಡಿಸಿದರೆ ರೋಗ ಹತೋಟಿಗೆ ಬರುತ್ತದೆ' ಎಂದು ಎಂದು ಕೃಷಿ ವಿಜ್ಞಾನಿಗಳು ಹೇಳುತ್ತಾರೆ.

ಸತತ ಮಳೆ ಹಾಗೂ ನದಿಗಳ ಪ್ರವಾಹದಿಂದ ಬೆಳಗಾವಿ ಜಿಲ್ಲೆಯಲ್ಲಿ 1,368 ಹೆಕ್ಟೇರ್ ಈರುಳ್ಳಿ ಬೆಳೆ ಹಾನಿಯಾಗಿದೆ. ತೋಟಗಾರಿಕೆ, ಕೃಷಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಮತ್ತೊಮ್ಮೆ ಜಂಟಿ ಸಮೀಕ್ಷೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಹಾಂತೇಶ ಮುರಗೋಡ ಹೇಳುತ್ತಾರೆ.

ಬೆಳೆ ಹಾನಿ ಎಲ್ಲಿ, ಎಷ್ಟು? (ಹೆಕ್ಟೇರ್‌ನಲ್ಲಿ)



ಮಹಾರಾಷ್ಟ್ರದಿಂದ ಶೇ 70ರಷ್ಟು ಆವಕ

ಬೆಂಗಳೂರು: ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ ಶನಿವಾರ 44,356 ಚೀಲ ಈರುಳ್ಳಿ ಆವಕವಾಗಿದೆ. ಇದರಲ್ಲಿ ಶೇ 70ರಷ್ಟು ಮಹಾರಾಷ್ಟ್ರದಿಂದ ಪೂರೈಕೆಯಾಗಿದ್ದು, ಉಳಿದ ಶೇ 30ರಷ್ಟು ಕರ್ನಾಟಕದ ಈರುಳ್ಳಿ ಆಗಿದೆ. ಮಹಾರಾಷ್ಟ್ರದಲ್ಲಿನ ರೈತರು ಈರುಳ್ಳಿಯನ್ನು ಚೆನ್ನಾಗಿ ಒಣಗಿಸಿ, ದಾಸ್ತಾನು ಮಾಡಿ ಮಾರುಕಟ್ಟೆಗೆ ತರುತ್ತಿದ್ದಾರೆ. ಇದರಿಂದ ಉತ್ತಮ ಗುಣಮಟ್ಟದ ಈರುಳ್ಳಿ ಕ್ವಿಂಟಲ್‌ಗೆ ₹1,800ರ ವರೆಗೆ ಇದೆ. ಆದರೆ, ಕರ್ನಾಟಕದಲ್ಲಿ ಬೆಳೆದ ಈರುಳ್ಳಿ ಕ್ವಿಂಟಲ್‌ಗೆ ₹1,500 ದೊರೆಯುತ್ತಿದೆ.

ಮಳೆಯಿಂದ ಬೆಳೆ ನೆನೆದಿದ್ದು, ಒಣಗಿಸಲು ಆಗುತ್ತಿಲ್ಲ. ಇದರಿಂದ ಈರುಳ್ಳಿ ಗುಣಮಟ್ಟ ಕಡಿಮೆಯಾಗುತ್ತಿದೆ. ಇದೇ ದರ ವ್ಯತ್ಯಾಸಕ್ಕೆ ಕಾರಣ. ರೈತರು ಕೆಲ ದಿನ ತಡವಾದರೂ ಈರುಳ್ಳಿಯನ್ನು ಒಣಗಿಸಿ ಮಾರುಕಟ್ಟೆಗೆ ತಂದರೆ ಉತ್ತಮ ಬೆಲೆ ಸಿಗಲಿದೆ ಎಂದು ಯಶವಂತಪುರ ಮಾರುಕಟ್ಟೆಯ ಈರುಳ್ಳಿ ವರ್ತಕರು ಹೇಳುತ್ತಿದ್ದಾರೆ.

50 ಕೆ.ಜಿ ಈರುಳ್ಳಿಗೆ ₹50

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಜಿಲ್ಲೆಯಲ್ಲಿ ಈರುಳ್ಳಿ ಕಟಾವು ನಡೆದಿದ್ದು, ಬೆಲೆ ಕುಸಿತದಿಂದ ಬೆಳೆಗಾರರು ಕಂಗಾಲಾಗಿದ್ದಾರೆ. 50 ಕೆ.ಜಿಯ ಈರುಳ್ಳಿ ಚೀಲ ₹50ರಿಂದ ₹500ಕ್ಕೆ ಮಾರಾಟ ಆಗುತ್ತಿದ್ದು, ರೈತರನ್ನು ನಷ್ಟಕ್ಕೆ ದೂಡಿದೆ.

ಈರುಳ್ಳಿಗೆ ಉತ್ತಮ ದರ ದೊರೆತು, ಗಣೇಶ ಹಬ್ಬದ ಸಂಭ್ರಮ ಇಮ್ಮಡಿಗೊಳಿಸುತ್ತದೆ ಎಂಬ ರೈತರ ನಂಬಿಕೆ ದರ ಕುಸಿತದಿಂದಾಗಿ ಹುಸಿಯಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ಪ್ರತಿ ಚೀಲಕ್ಕೆ ₹1,600ರಿಂದ ₹3,450ರವರೆಗೆ ದರ ಸಿಕ್ಕಿತ್ತು. ಈ ಬಾರಿ ಪ್ರತಿ ಕೆ.ಜಿ ಕೇವಲ ₹1ರಿಂದ ₹10ರ ವರೆಗೆ ಮಾರಾಟವಾಗುತ್ತಿದೆ.

ಜಿಲ್ಲೆಯಲ್ಲಿ ಈ ಹಂಗಾಮಿನಲ್ಲಿ 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗಿದೆ. ಸ್ಥಳೀಯವಾಗಿ ಬೇಡಿಕೆ ತಗ್ಗಿದ್ದು, ರೈತರು ಬಾಡಿಗೆ ವಾಹನದಲ್ಲಿ ಬೆಂಗಳೂರಿನ ಯಶವಂತಪುರ ಮಾರುಕಟ್ಟೆಗೆ ಸಾಗಿಸುತ್ತಿದ್ದಾರೆ.

'ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ 4 ಕೆ.ಜಿ ಈರುಳ್ಳಿಗೆ ₹100 ದರವಿದೆ. ಸೂಪರ್ ಮಾರ್ಕೆಟ್‌ನಲ್ಲಿ ಕೆ.ಜಿ.ಗೆ ₹35ರಂತೆ ಮಾರಾಟವಾಗುತ್ತಿದೆ. ಚೀಲ ಈರುಳ್ಳಿ ಬೆಳೆಯಲು ₹800 ಖರ್ಚಾಗುತ್ತದೆ. ಸಾಗಣೆ ವೆಚ್ಚ ಸೇರಿ ₹1,000ಕ್ಕಿಂತಲೂ ಹೆಚ್ಚು ಖರ್ಚಾಗುತ್ತದೆ. ಇದರಲ್ಲಿ ಅರ್ಧದಷ್ಟು ದರವೂ ಸಿಗದಿದ್ದರೆ ಜೀವನ ನಡೆಸುವುದು ಹೇಗೆ?' ಎಂದು ಚಳ್ಳಕೆರೆ ತಾಲ್ಲೂಕಿನ ಬಾಲೇನಹಳ್ಳಿ ಗ್ರಾಮದ ರೈತ ಸಿದ್ದೇಶ್ ನೋವಿನಿಂದ ಪ್ರಶ್ನಿಸಿದರು.

ಜಿಲ್ಲೆಯಲ್ಲಿ ಈಗಷ್ಟೇ ಈರುಳ್ಳಿ ಕಟಾವು ಆರಂಭವಾಗಿದೆ. ಇನ್ನೂ 3 ತಿಂಗಳು ಕಟಾವು ಮುಂದುವರಿಯಲಿದ್ದು, ಬೆಲೆ ಹೆಚ್ಚಳವಾಗುವ ನಿರೀಕ್ಷೆ ಇದೆ

ಎಸ್.ಎಸ್.ಭೋಗಿ
ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ

ಮಳೆ ತಂದ ಸಂಕಷ್ಟ: 'ಮಳೆಯಿಂದಾಗಿ ಸ್ಥಳೀಯ ಈರುಳ್ಳಿಯ ಗುಣಮಟ್ಟ, ಬಣ್ಣ ಹಾಳಾಗಿದೆ. ವರ್ತಕರು ಸ್ಥಳೀಯ ಈರುಳ್ಳಿ ನಿರಾಕರಿಸಿ ಮಹಾರಾಷ್ಟ್ರದಿಂದ ಬಂದಿರುವ ಈರುಳ್ಳಿ ಖರೀದಿಸುತ್ತಿದ್ದಾರೆ. ನಷ್ಟ ನಮ್ಮ ಬೆನ್ನುಹತ್ತಿದೆ' ಎಂದು ಹೊಸದುರ್ಗ ತಾಲ್ಲೂಕು ಹೊಸಕುಂದೂರಿನ ಲೋಕೇಶ್ ಜಿ. ನೋವಿನಿಂದ ನುಡಿದರು.

ಚಳ್ಳಕೆರೆ ತಾಲ್ಲೂಕು ಬಾಲೇನಹಳ್ಳಿ ಗ್ರಾಮದಲ್ಲಿ ಈರುಳ್ಳಿ ಕಟಾವು ಮಾಡಿ ಚೀಲದಲ್ಲಿ ತುಂಬಿರುವುದು

'ಕಲ್ಯಾಣ'ದಲ್ಲೂ ಮಳೆಗೆ ಈರುಳ್ಳಿ ಆಹುತಿ

ಕಲಬುರಗಿ: ವ್ಯಾಪಕ ಮಳೆಯಿಂದ ಕಲ್ಯಾಣ ಕರ್ನಾಟಕ ಭಾಗದ ಹಲವೆಡೆ ಬೆಳೆದಿದ್ದ ಈರುಳ್ಳಿ ಬೆಳೆ ನಾಶವಾಗಿದೆ. ಕಲಬುರಗಿ ಜಿಲ್ಲೆಯಲ್ಲಿ 603 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿದ್ದು, ಈ ಪೈಕಿ ಮುಂಗಾರು ಮಳೆಗೆ 31.20 ಹೆಕ್ಟೇರ್ ಬೆಳೆ ಹಾನಿಯಾಗಿದೆ. 'ಐದು ಎಕರೆ ಜಮೀನಿನಲ್ಲಿ ಎರಡು ತಿಂಗಳ ಹಿಂದೆ ಹನಿ ನೀರಾವರಿ ಬಳಸಿಕೊಂಡು ಈರುಳ್ಳಿ ಬಿತ್ತಿದ್ದೆ. ಆಗಸ್ಟ್‌ನಲ್ಲಿ ಸುರಿದ ನಿರಂತರ ಮಳೆಯಿಂದ ಈರುಳ್ಳಿ ಬೆಳೆ ಸಂಪೂರ್ಣ ಕೊಳೆತಿದೆ. ವೆಚ್ಚ ಮಾಡಿದ್ದ ₹1 ಲಕ್ಷ ಮಣ್ಣು ಪಾಲಾಗಿದೆ' ಎಂದು ಅಫಜಲಪುರ ತಾಲ್ಲೂಕಿನ ಹಸರಗಂಡಗಿ ಗ್ರಾಮದ ಈರುಳ್ಳಿ ಬೆಳೆಗಾರ ಮರೆಪ್ಪ ವಾಲಿಕಾರ ಅಳಲು ತೋಡಿಕೊಂಡಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಮಳೆಯಿಂದ 11 ಹೆಕ್ಟೇರ್ ಪ್ರದೇಶದ ಈರುಳ್ಳಿ ಬೆಳೆ ಹಾನಿಯಾಗಿದೆ. ಬೀದರ್ ಜಿಲ್ಲೆಯಲ್ಲಿ ಸುಮಾರು 600 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆ ಮಾಡಲಾಗಿತ್ತು.

ಬೆಳೆ ಹಾನಿ ಬಗೆಗೆ ಇನ್ನೂ ಸಮೀಕ್ಷೆ ನಡೆಯುತ್ತಿದ್ದು, ಅಪಾರ ಪ್ರಮಾಣದಲ್ಲಿ ಹಾನಿ ಅಂದಾಜಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ ಬಾವಗೆ ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಡಾ. ಇ.ವಿ. ವೆಂಕಟರಾಮು ಗುಪ್ತ
05.06.1936 - 29.08.2025
ನೀವು ಶ್ರೇಷ್ಠ ಕರ್ಮಯೋಗಿ, ಅತ್ಯುತ್ತಮ ವೈದ್ಯನಾರಾಯಣ, ಮತ್ತು ಉಜ್ವಲವಾದ ಸ್ಫೂರ್ತಿ ನೀಡಿದ್ದೀರಿ. ನಿಮ್ಮ ಅಗಲಿಕೆಯನ್ನು ಸಹಿಸಲು ನಮಗೆ ಶಕ್ತಿ ನೀಡಿ. ನೀವು ನಿಜವಾಗಿಯೂ ಅಮರರು.
ಇಂತಿ ದುಃಖತಪ್ತರು: ಧರ್ಮಪತ್ನಿ – ಶ್ರೀಮತಿ ಕೆ.ಜಿ. ಸರಸ್ವತಮ್ಮ, ಮಕ್ಕಳು – ಸವಿತ ಶ್ರೀ ಇ.ವಿ. ಮತ್ತು ಸುಮಿತ್ರಶ್ರೀ ಇ.ವಿ., ಮೊಮ್ಮಗ – ಅರೂಶ್, ಈರೆಂಟಿ ಮತ್ತು ಕೋಟ ಕುಟುಂಬಸ್ಥರು

ಚಿರಸ್ಮರಣೆ



(31.08.1976)
ಶ್ರೀ ಎಚ್.ಕೆ. ಮುನಿವೆಂಕಟಸ್ವಾಮಪ್ಪ
ನೀವು ನಮ್ಮನಗಲಿ 49 ವರ್ಷಗಳು ಕಳೆದರೂ ಸದಾ ತಮ್ಮನ್ನು ಸ್ಮರಿಸುವ ಶ್ರೀಮತಿ/ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ ಮತ್ತು ಹೆಚ್.ಕೆ.ಎಂ.ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರು

ಮುಂಬೈ ಧಾರಣೆ (ಶೇಂಗಾ)

30-08-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಪಾಮ್ ವಾರದ ಡೆಲಿವರಿ	1258 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1345)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,03,200 (1,02,300)
ಬೆಳ್ಳಿ ಕೆ.ಜಿಗೆ	1,20,500 (1,17,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹555
12 ಕ್ಕೆ	₹75
ಮೈಸೂರು: 100 ಕ್ಕೆ	₹563

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-652
ದ್ವಿತಳಿ (ಬಿ.ವಿ)	₹430-768

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1355 (1355)
ಸೋಯಾ (ರಿಫೈನ್ಡ್)	₹1255 (1260)
ಸೂರ್ಯಕಾಂತಿ (ರಿಫೈನ್ಡ್)	₹1405 (1410)
ಪಾಮೋಲಿನ್	₹1260 (1265)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27000-28000
ಮಧುಗಿರಿ	₹14500-16000

ಕೇಂದ್ರ ಸರ್ಕಾರಕ್ಕೆ ₹7,324 ಕೋಟಿ ಡಿವಿಡೆಂಡ್ ಪಾವತಿ: ಎಲ್‌ಐಸಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 2024–25ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ₹7,324 ಕೋಟಿ ಡಿವಿಡೆಂಡ್ ಅನ್ನು ಕೇಂದ್ರ ಸರ್ಕಾರಕ್ಕೆ ಪಾವತಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಎಲ್‌ಐಸಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಆರ್.ದೊರೈಸ್ವಾಮಿ ಡಿವಿಡೆಂಡ್‌ನ ಚೆಕ್ ಅನ್ನು ಸಲ್ಲಿಸಿದರು. ಈ ವೇಳೆ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ಮತ್ತು ಜಂಟಿ ಕಾರ್ಯದರ್ಶಿ ಪರ್ಶಾಂತ್ ಕುಮಾರ್ ಗೋಯಲ್ ಇದ್ದರು.

ಆಗಸ್ಟ್ 26ರಂದು ನಡೆದ ಎಲ್‌ಐಸಿಯ ವಾರ್ಷಿಕ ಸಾಮಾನ್ಯ ಸಭೆಯು ಈ ಡಿವಿಡೆಂಡ್ ನೀಡಲು ಅನುಮೋದನೆ ನೀಡಿತ್ತು. ಮಾರ್ಚ್ 31ರ ವೇಳೆಗೆ ಎಲ್‌ಐಸಿಯ ಒಟ್ಟು ಆಸ್ತಿ ಮೌಲ್ಯ ₹56.23 ಲಕ್ಷ ಕೋಟಿಯಾಗಿದೆ.

ಮುದ್ರಾಂಕ ಶುಲ್ಕ ತಗ್ಗಿಸಿ: ನರೆಡ್ಕೊ

ನವದೆಹಲಿ (ಪಿಟಿಐ): ಮನೆಗಳ ನೋಂದಣಿ ಮೇಲಿನ ಮುದ್ರಾಂಕ ಶುಲ್ಕವನ್ನು ರಾಜ್ಯ ಸರ್ಕಾರಗಳು ಕಡಿಮೆ ಮಾಡಬೇಕು ಎಂದು ರಾಷ್ಟ್ರೀಯ ರಿಯಲ್ ಎಸ್ಟೇಟ್ ಅಭಿವೃದ್ಧಿ ಮಂಡಳಿ (ನರೆಡ್ಕೊ) ಒತ್ತಾಯಿಸಿದೆ.

₹45 ಲಕ್ಷದವರೆಗಿನ ಮನೆಗಳಿಗೆ ಮುದ್ರಾಂಕ ಶುಲ್ಕವನ್ನು ತಗ್ಗಿಸಬೇಕು. ಇದು ಮನೆಗಳಿಗೆ ಬೇಡಿಕೆ ಮತ್ತು ಪೂರೈಕೆಯನ್ನು ಹೆಚ್ಚಿಸಲಿದ್ದು, ಕಡಿಮೆ ದರದಲ್ಲಿ ಮನೆ ಹೊಂದಲು ಸಾಧ್ಯವಾಗುತ್ತದೆ ಎಂದು ನರೆಡ್ಕೊ ಅಧ್ಯಕ್ಷ ಜಿ. ಹರಿಬಾಬು ಹೇಳಿದ್ದಾರೆ.

ಜಾಗದ ಬೆಲೆ ಮತ್ತು ನಿರ್ಮಾಣ ವೆಚ್ಚದಲ್ಲಿನ ಹೆಚ್ಚಳದಿಂದ ಮನೆಗಳ ಮಾರಾಟದಲ್ಲಿ ಇಳಿಕೆಯಾಗಿದೆ. ಹೀಗಾಗಿ ಮನೆಗಳ ನೋಂದಣಿಗಿರುವ ಮುದ್ರಾಂಕ ಶುಲ್ಕವನ್ನು ಕಡಿಮೆ ಮಾಡಬೇಕು. ಪ್ರಸ್ತುತ ಮುದ್ರಾಂಕ ಶುಲ್ಕ ರಾಜ್ಯಗಳಲ್ಲಿ ಶೇ 5ರಿಂದ ಶೇ 10ರ ನಡುವೆ ಇದೆ ಎಂದು ತಿಳಿಸಿದ್ದಾರೆ.

ಮನೆಗಳ ಪೂರೈಕೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರಗಳು ಕೊಳೆಗೇರಿ ಅಭಿವೃದ್ಧಿಯತ್ತ ಗಮನಹರಿಸಬೇಕು ಎಂದು ಹರಿಬಾಬು ಸಲಹೆ ನೀಡಿದ್ದಾರೆ.

ಏಳು ವರ್ಷ ಬಳಿಕ ಮೋದಿ ಚೀನಾ ಭೇಟಿ

ಒಂದನೇ ಪುಟದಿಂದ...

ಇನ್ನೊಂದೆಡೆ ಅಮೆರಿಕದ ಸುಂಕ ಸಮರದಿಂದ (ಶೇ 50ರಷ್ಟು ಸುಂಕ) ಮೋದಿ ಅವರು ಜಪಾನ್, ಚೀನಾ ಸೇರಿ ಪೂರ್ವ ಏಷ್ಯಾ ರಾಷ್ಟ್ರಗಳೊಂದಿಗೆ ಆರ್ಥಿಕ ಪಾಲುದಾರಿಕೆ ವಿಸ್ತರಿಸಲು ಆಸಕ್ತಿ ತೋರಿಸಿದ್ದಾರೆ. ಈ ನಿಟ್ಟಿನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಭಾನುವಾರ ನಿಗದಿಯಾಗಿರುವ ಸಭೆಯ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

'ಎಸ್‌ಸಿಒ' ಶೃಂಗಸಭೆ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ವಿವಿಧ ದೇಶಗಳ ಮುಖಂಡರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೂ ಮಾತುಕತೆ ನಡೆಸುವ ಸಾಧ್ಯತೆ ಇದೆ.

ಪಾಶ್ಚಿಮಾತ್ಯ ದೇಶಗಳ ಪ್ರಾಬಲ್ಯದ ನ್ಯಾಟೊ ಮಿಲಿಟರಿ ಮೈತ್ರಿಕೂಟದ ವಿರುದ್ಧ, ಮಧ್ಯ ಏಷ್ಯಾದ ರಾಷ್ಟ್ರಗಳ ನಡುವಿನ ಸಂಬಂಧ ಗಾಢವಾಗಿಸುವ ನಿಟ್ಟಿನಲ್ಲಿ ರಷ್ಯಾ ಮತ್ತು ಚೀನಾಕ್ಕೂ 'ಎಸ್‌ಸಿಒ' ವೇದಿಕೆ ಮಹತ್ವದ್ದಾಗಿದೆ.

ಪುಟಿನ್ ಮಾತುಕತೆ: ಉಕ್ರೇನ್ – ರಷ್ಯಾ ಸಂಘರ್ಷದ ವಿಚಾರವಾಗಿ ಮಧ್ಯಸ್ಥಿಕೆ ವಹಿಸಿದ್ದ ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಅವರೊಂದಿಗೆ ಪುಟಿನ್ ಮಾತುಕತೆ ನಡೆಸಲಿದ್ದಾರೆ. ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ಅವರೊಂದಿಗೆ ಟೆಹರಾನ್ ಪರಮಾಣು ಕಾರ್ಯಕ್ರಮದ ಬಗ್ಗೆ ಮಾತುಕತೆ ನಡೆಸಲಿದ್ದಾರೆ ಎಂದು ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

20ಕ್ಕೂ ಹೆಚ್ಚು ದೇಶಗಳ ನಾಯಕರು ಭಾಗಿ: ಶಾಂಘೈ ಸಹಕಾರ ಸಂಘಟನೆಯಲ್ಲಿ ಚೀನಾ, ಭಾರತ, ರಷ್ಯಾ, ಪಾಕಿಸ್ತಾನ, ಇರಾನ್, ಕಜಾಕಸ್ತಾನ, ಕಿರ್ಗಿಸ್ತಾನ, ತಜಿಕಿಸ್ತಾನ, ಉಜ್ಬೆಕಿಸ್ತಾನ ಮತ್ತು ಬೆಲಾರಸ್ ಸೇರಿ 10 ಸದಸ್ಯ ದೇಶಗಳಿವೆ.

ಇದಲ್ಲದೆ 16 ದೇಶಗಳು 'ಎಸ್‌ಸಿಒ'ನ ವೀಕ್ಷಕರು ಅಥವಾ ಸಂವಾದ ಪಾಲುದಾರ ದೇಶಗಳಾಗಿವೆ. ತಿಯಾನ್‌ಜಿನ್‌ನಲ್ಲಿ ನಡೆಯಲಿರುವ ಸಭೆಯಲ್ಲಿ 20ಕ್ಕೂ ಹೆಚ್ಚು ದೇಶಗಳ ನಾಯಕರು ಭಾಗವಹಿಸಲಿದ್ದಾರೆ.

'ಸುವರ್ಣ ಅಧ್ಯಾಯ'

'ಜಪಾನ್ ಭೇಟಿಯು ಫಲದಾಯಕವಾಗಿದೆ. ಉಭಯ ದೇಶಗಳ ನಡುವೆ ಮಹತ್ವದ 13 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಇದರ ಪ್ರಯೋಜನ ದೇಶದ ಜನರಿಗೆ ಲಭಿಸಲಿದೆ. ಜಪಾನ್ ಪ್ರಧಾನಿ ಶಿಗೆರು ಇಶಿಬಾ, ಅಲ್ಲಿನ ಸರ್ಕಾರ ಮತ್ತು ಜನರಿಗೆ ಧನ್ಯವಾದ ತಿಳಿಸುತ್ತೇನೆ' ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತ – ಜಪಾನ್ ನಡುವೆ ಆರ್ಥಿಕ ಪಾಲುದಾರಿಕೆಯ ಹೊಸ ಮತ್ತು ಸುವರ್ಣ ಅಧ್ಯಾಯವೊಂದು ಆರಂಭಗೊಂಡಿದೆ' ಎಂದು ಪ್ರಧಾನಿ ಹೇಳಿದ್ದಾರೆ.

ಟ್ರಂಪ್ 'ದಂಡಾಸ್ತ್ರ' ವಿರುದ್ಧ ಫೆಡರಲ್ ನ್ಯಾಯಾಲಯ ಆದೇಶ

'ಸುಂಕ ವಿಧಿಸುವುದು ಅಕ್ರಮ'

ವಾಷಿಂಗ್ಟನ್/ನ್ಯೂಯಾರ್ಕ್ (ನ್ಯೂಯಾರ್ಕ್ ಟೈಮ್ಸ್/ಪಿಟಿಐ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತರ ದೇಶಗಳ ಮೇಲೆ ಹೆಚ್ಚಿನ ಸುಂಕ ವಿಧಿಸುತ್ತಿರುವುದು ಕಾನೂನುಬಾಹಿರ' ಎಂದು ಫೆಡರಲ್ ಮೇಲ್ಮನವಿ ನ್ಯಾಯಾಲಯವೊಂದು ಹೇಳಿದೆ.

'ಅಮೆರಿಕವು ಆಮದು ಮಾಡಿಕೊಳ್ಳುತ್ತಿರುವ ಎಲ್ಲ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಲು ಟ್ರಂಪ್ ಅವರಿಗೆ ಅಧಿಕಾರವಿಲ್ಲ' ಎಂದು ಕೆಳಹಂತದ ನ್ಯಾಯಾಲಯವೊಂದು ಮೇ ತಿಂಗಳಲ್ಲಿ ಹೇಳಿತ್ತು. ಇದನ್ನೇ ಫೆಡರಲ್ ಮೇಲ್ಮನವಿ ನ್ಯಾಯಾಲಯ ಶುಕ್ರವಾರ ಪುನರುಚ್ಚರಿಸಿದೆ. ಟ್ರಂಪ್ ಅವರ ಸರ್ಕಾರಕ್ಕೆ ಇದು ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅಕ್ಟೋಬರ್ ಮಧ್ಯದವರೆಗೂ ನ್ಯಾಯಾಲಯವು ಸಮಯಾವಕಾಶ ನೀಡಿದೆ.

'ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರ ತಯಾರಿ ನಡೆಸಿಕೊಳ್ಳುತ್ತಿದೆ' ಎಂದು ಟ್ರಂಪ್ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ.

ಸರ್ಕಾರದ ವಾದವೇನು?: ಒಂದು ವೇಳೆ ನಮ್ಮ ಸುಂಕ ವಿಧಿಸುವ ಅಧಿಕಾರವನ್ನು ಮೊಟಕುಗೊಳಿಸಿದರೆ, ದೇಶದ ಆರ್ಥಿಕತೆಗೆ ದೊಡ್ಡ ಹೊಡೆತ ಬೀಳಲಿದೆ ಎಂದು ಸರ್ಕಾರವು ನ್ಯಾಯಾಲಯದಲ್ಲಿ ವಾದಿಸಿತು. ನ್ಯಾಯಾಲಯದ ಆದೇಶ ಬರುವುದಕ್ಕೂ ಮುನ್ನ ಮಾತನಾಡಿದ್ದ ಟ್ರಂಪ್ ಅವರ ಉನ್ನತ ಆರ್ಥಿಕ ಸಲಹೆಗಾರರು, 'ಇತರ ದೇಶಗಳೊಂದಿಗೆ ಮಾಡಿಕೊಂಡ ವ್ಯಾಪಾರ ಒಪ್ಪಂದಕ್ಕೆ ತೀವ್ರ ಹೊಡೆತ ಬೀಳಲಿದೆ' ಎಂದು ಭೀತಿ ವ್ಯಕ್ತಪಡಿಸಿದ್ದರು.

'ದೇಶಕ್ಕೆ ಮಾರಕ'

ಸುಂಕ ವಿಧಿಸಿರುವುದನ್ನು ತೆಗೆದು ಹಾಕಬೇಕು ಎಂದು ತೀವ್ರ ಪಕ್ಷಪಾತಿ ಆಗಿರುವ ಮೇಲ್ಮನವಿ ನ್ಯಾಯಾಲಯವೊಂದು ಹೇಳಿದೆ. ಅಂತ್ಯದಲ್ಲಿ ಅಮೆರಿಕವೇ ಗೆಲ್ಲಲಿದೆ ಎಂಬುದು ಅವರಿಗೆ ಗೊತ್ತಿಲ್ಲ. ಒಂದು ವೇಳೆ ಸುಂಕ ವಿಧಿಸಿರುವುದನ್ನು ತೆಗೆದುಹಾಕಿದರೆ ದೇಶಕ್ಕೆ ಮಾರಕವಾಗಲಿದೆ

ಡೊನಾಲ್ಡ್ ಟ್ರಂಪ್,
ಅಮೆರಿಕ ಅಧ್ಯಕ್ಷ

ನವರೊ ಹೇಳಿಕೆಗೆ ಯಹೂದಿ ಸಂಘಟನೆ ಆಕ್ಷೇಪ

ಭಾರತವು ರಷ್ಯಾದಿಂದ ತೈಲ ಖರೀದಿ ಮಾಡುತ್ತಿದೆ. ಆದ್ದರಿಂದ ರಷ್ಯಾ–ಉಕ್ರೇನ್ ಯುದ್ಧಕ್ಕೆ ಭಾರತವೇ ಕಾರಣ ಎಂದಿದ್ದ ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಅವರ ಹೇಳಿಕೆಗೆ ಅಮೆರಿಕದ ಯಹೂದಿ ಸಂಘಟನೆಯೊಂದು ಆಕ್ಷೇಪ ವ್ಯಕ್ತಪಡಿಸಿದೆ.

'ರಷ್ಯಾ–ಉಕ್ರೇನ್ ಯುದ್ಧಕ್ಕೆ ಭಾರತ ಕಾರಣವಲ್ಲ. ಅಮೆರಿಕ ಮತ್ತು ಭಾರತವು ತಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಬೇಕು' ಎಂದೂ ಸಂಘಟನೆ ಅಭಿಪ್ರಾಯಪಟ್ಟಿದೆ. ಈ ಬಗ್ಗೆ ಸಂಘಟನೆಯು ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿದೆ.

'ಅಮೆರಿಕದ ಅಧಿಕಾರಿಗಳು ಭಾರತದ ವಿರುದ್ಧ ನಿರಂತರವಾಗಿ ದಾಳಿ ನಡೆಸುತ್ತಿದ್ದಾರೆ. ಇದು ನಮಗೆ ತೀವ್ರ ನೋವು ಉಂಟುಮಾಡಿದೆ. ನವರೊ ಅವರದ್ದು ಅವಮಾನಕಾರಿಯಾದಂಥ ಆರೋಪವಾಗಿತ್ತು. ಭಾರತವು ಅಮೆರಿಕದ ಸೋದರ ದೇಶವೇ ಆಗಿದೆ. ಪ್ರಮುಖ ಪಾಲುದಾರ ದೇಶ ಕೂಡ. ಆದ್ದರಿಂದ ಎರಡೂ ದೇಶಗಳು ತಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳಬೇಕು' ಎಂದಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

SALE OF PROPERTY IN CHIKMAGALUR

Notice is hereby given to public at large that the undersigned Advocates are investigating the title of the Schedule Property, owned and possessed by **Mr HarishKumar MG, Mr Gangadhar Sudhir Vernekar, Mr Gangadhar Raghavendra Vernekar And Mr Kosa Prasanna Kumar** (hereinafter known as Owners).

The Owners have represented that they are the absolute Owners of the Schedule Properties, having unrestricted rights of alienation over the same and that the Schedule Properties are free from all encumbrances, mortgages, charges, court cases, attachments, lien, litigation and/or any family dispute and/or third party rights/claims of any nature whatsoever.

Public is notified that if any person/s, entity, company, firm or institution has or asserts any rights, title or interest by way of sale, lease, license, tenancy, mortgage, charge, lien, easement, objection, agency, license, gift, family arrangement / settlement, allotment, pending litigation, claim, demand or of whatsoever nature in or upon the Schedule Properties, the same may be brought to the notice of the undersigned in writing together with all details and documents in support of such claim by 14.8.2025 from the date of this Notice, failing which it shall be deemed that the Owner has a clear and marketable title to the Schedule Property

SCHEDULE PROPERTIES

All that piece and parcel of immovable properties described herein below are situated in Joladalu VILLAGE, Vastare Hobli, CHIKAMAGALURU TALUK, CHIKAMAGALURU DISTRICT, KARNATAKA STATE, measuring 15 acres and 1 gunta.

Survey Number	Acres	Guntas
1/1A	4	39
1/1B	3	29
3/2		30
60	1	25
68		4
70	3	17
75		17
Total	11	161
Total	**15**	**1**

Advocate : Meiyappan Mohan
Email: meiyappanmohan.legal@gmail.com
Mobile: +91-9733135027 (Shyam)
+ 91- 9994504095 (Meiyappan)

Place: Chennai
Date: 28.08.2025

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈವಾಹಿಕ

Grooms Wanted

Brahmin

ಬ್ರಾಹ್ಮಣ ವರ ಬೇಕಾಗಿದೆ
ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ. ಬ್ರಾಹ್ಮಣ ಕನ್ಯೆ (ವಧುವಿನ) ವಯಸ್ಸು 22, PUC ಕಲಿತಿರುವ / ವಯಸ್ಸು 25, MBA / ವಯಸ್ಸು 28, SSLC / ವಯಸ್ಸು 33, PUC /ವಯಸ್ಸು 38, SSLC / ವಯಸ್ಸು 30, BE ಇಂಜಿನಿಯರ್ ವಧುವಿಗೆ ಸೂಕ್ತವಾದ ಸದ್ಗುಣವಂತ ವರ ಬೇಕಾಗಿದೆ. ವಧುಗಳಿಗೆ ಮಾತ್ರ ಉಚಿತ ನೊಂದಾವಣೆ. (ವಧು–ವರಾನ್ವೇಷಣ ಕೇಂದ್ರ) M. 8904834199

Business Offers

Business For Sale

WAREHOUSE FOR rent in Davanagere Opp: GMIT Engineering College, P.B. Road. Building area 7000 sqft 63 kva power supply, 63 kva D.G also available with 5 tonns E.O.T Crane. Ph: 6361814243/ 9535404457

ಪ್ರವಾಸ

Travel

27.10.2025 ಆಂಧ್ರ ಪ್ರವಾಸ 13.11.2025 ಅಷ್ಟ ಜ್ಯೋತಿರ್ಲಿಂಗ ಪ್ರವಾಸ 08.10.2025 ರಿಂದ 10 ದಿನಗಳ ನೇಪಾಳ ಪೋಕ್ರಾ,ಮುಕ್ತಿನಾಥ ಜನಕಪುರ್ ನೈಮಿಶಾರಣ್ಯ ಅಯೋಧ್ಯೆ. 29.11.2025 ರಿಂದ 12 ದಿನಗಳ ಆಗ್ರಾ,ಮಥುರ ಜೈಪುರ್,ಪುಷ್ಕರ್ ಜೈಸಲ್ಮೇರ್ ಜೋದ್‌ಪುರ್ ಉದಯಪುರ್ ಮೌಂಟ್‌ಅಬು ಸಂಪರ್ಕಿಸಿ.ವಿಷ್ಣು ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 9482239855

ವಿಮಾನ ಪ್ರವಾಸ 9.10.2025 ಗುಜರಾತ್ ಎರಡು ಜ್ಯೋತಿರ್ಲಿಂಗ 7 ದಿನಗಳು: 9.10.25 ಮಧ್ಯಪ್ರದೇಶ ಗುಜರಾತ್ ನಾಲ್ಕು ಜ್ಯೋತಿರ್ಲಿಂಗ 10 ದಿನ: 27.10.25 ನೇಪಾಳ ಕಾಶಿ 10 ದಿನ. 12.11.25 ರಾಜಸ್ಥಾನ 10 ದಿನ: 29.11.25 ಪುರಿ ಜಗನ್ನಾಥ ವೈದ್ಯನಾಥ ಕಲ್ಕತ್ತ 8 ದಿನ: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ; 8496044942, 8277409101

ಉದ್ಯೋಗಾವಕಾಶ

Multiple Vacancy

REQUIRED EXPERIENCED Telecaller (BOYS & GIRLS) FieldExecutive, Team leader For MNC bank collection. 9886553838, 7019700755.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

SP ಸೆಲೆಬ್ರಿಟಿ ವೆಲ್ ನೆಸ್ ಟ್ರೈನಿಂಗ್ ಅಕಾಡೆಮಿ ಇವರ ವತಿಯಿಂದ ಉಚಿತ ಬ್ಯೂಟಿ ಪಾರ್ಲರ್ ತರಬೇತಿ ನೀಡಲಾಗುತ್ತದೆ. ತರಬೇತಿ ಪಡೆದ ವಿದ್ಯಾರ್ಥಿಗಳಲ್ಲಿ ಮೂರು ಲಕ್ಕಿವಿನ್ನರ್ ಗಳಿಗೆ ತುಂಬಾ ಬೆಲೆಬಾಳುವ ಬಂಪರ್ ಬಹುಮಾನ ನೀಡಲಾಗುವುದು. ಶೇಷಾದ್ರಿಪುರಂ, ಬೆಂಗಳೂರು, 9019626612.

ವ್ಯಾಪಾರ

Business to Business

Construction And Maintenance

INDUSTRIAL SHED 5000sft PEB Structure,125KVA Cummins Generator, Tube ICE Plant 5ton/day for sale call 9483215391

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮೇಘಸ್ಫೋಟ, ಭೂಕುಸಿತ: 11 ಸಾವು

ಜಮ್ಮು–ಕಾಶ್ಮೀರ: ಭಾರಿ ಮಳೆ, ಹಲವು ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು–ಕಾಶ್ಮೀರದ ರಿಯಾಸಿ ಮತ್ತು ರಾಮ್‌ಬನ್ ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಮೇಘಸ್ಫೋಟ ಮತ್ತು ಭೂಕುಸಿತದ ಅವಘಡಗಳಲ್ಲಿ ಒಟ್ಟು 11 ಮಂದಿ ಮೃತಪಟ್ಟಿದ್ದಾರೆ.

ರಿಯಾಸಿ ಜಿಲ್ಲೆಯ ಬದ್ದರ್ ಗ್ರಾಮದಲ್ಲಿ ರಾತ್ರೋರಾತ್ರಿ ಭಾರಿ ಭೂಕುಸಿತ ಸಂಭವಿಸಿದೆ. ಮಣ್ಣು ಮತ್ತು ಕಲ್ಲು ಬಿದ್ದ ಪರಿಣಾಮ ಮನೆಯೊಂದು ಕುಸಿದಿದ್ದು, ಐದು ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ರಾಂಬನ್ ಜಿಲ್ಲೆಯ ರಾಜ್‌ಗಡ ಗ್ರಾಮದಲ್ಲಿಯೂ ಮೇಘಸ್ಫೋಟದಿಂದ, ನಾಲ್ವರು ಪ್ರಾಣ ಕಳೆದುಕೊಂಡಿದ್ದಾರೆ. ದಿಢೀರ್ ಪ್ರವಾಹದಿಂದಾಗಿ ಹಲವಾರು ಮನೆಗಳಿಗೆ ಹಾನಿಯಾಗಿದೆ. ಮಣ್ಣು ಮತ್ತು ಕಲ್ಲುಗಳು ಬಿಲಾಲ್‌ರ ನದಿಗೆ ಬಿದ್ದಿರುವ ಪರಿಣಾಮ ನೀರಿನ ಹರಿವು ಸ್ಥಗಿತವಾಗಿದೆ. ನದಿಪಾತ್ರದಲ್ಲಿರುವ ಮನೆಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ಉಧಮ್‌ಪುರದಲ್ಲಿ ಒಂದೇ ದಿನ 629 ಮಿ.ಮೀ ಮಳೆ ಸುರಿದಿದ್ದು, ಭೂಕುಸಿತ ಸೇರಿದಂತೆ ಅಪಾರ ಹಾನಿ ಸಂಭವಿಸಿದೆ.

ಕಳೆದ ಮೂರು ವಾರಗಳಿಂದ ವರುಣನ ಅಬ್ಬರಕ್ಕೆ ಜಮ್ಮು–ಕಾಶ್ಮೀರ ತತ್ತರಿಸಿದೆ. ಆಗಸ್ಟ್ 14ರಂದು ಕಿಶ್ತವಾರದಲ್ಲಿ ಸಂಭವಿಸಿದ ಮೇಘಸ್ಫೋಟ, ಪ್ರವಾಹ ಮತ್ತು ಭೂಕುಸಿತದಿಂದಾಗಿ ಮಾತಾ ವೈಷ್ಣೋದೇವಿ ಭಕ್ತರು ಸೇರಿದಂತೆ ಇದುವರೆಗೆ ಒಟ್ಟು 160 ಜನ ಮೃತಪಟ್ಟಿದ್ದಾರೆ. ಕೆಲ ದಿನಗಳ ಹಿಂದೆಯಷ್ಟೇ ರಿಯಾಸಿಯ ಕತ್ರಾದಲ್ಲಿ 34 ಮಂದಿ ಮೃತಪಟ್ಟಿದ್ದಾರೆ.

ಮೂಲಸೌಕರ್ಯಗಳಿಗೂ ಹಾನಿಯಾಗಿದೆ. ಕತ್ರಾ, ವೈಷ್ಣೋದೇವಿ ತಪ್ಪಲಿನ ಶಿಬಿರ ಮತ್ತು ದೇಶದ ಇತರ ಭಾಗಗಳಿಗೆ ಸಂಪರ್ಕಿಸುವ ರೈಲು ಸೇವೆ ಐದನೇ ದಿನವೂ ಸ್ಥಗಿತಗೊಂಡಿದೆ. ಬಂಡೆಗಳು ಉರುಳಿಬಿದ್ದಿರುವ ಕಾರಣ ನಾಲ್ಕು ದಿನಗಳಿಂದ ಮುಚ್ಚಿದ್ದ ಶ್ರೀನಗರ–ಜಮ್ಮು ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ಜಮ್ಮು ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಯಾಗಿರುವ ಮನೆ– ಪಿಟಿಐ ಚಿತ್ರ

ಸಾವಿರಕ್ಕೂ ಅಧಿಕ ಗ್ರಾಮಗಳಿಗೆ ಹಾನಿ

ಚಂಡೀಗಢ: ಪಂಜಾಬ್‌ನಲ್ಲಿ ಪ್ರವಾಹದಿಂದಾಗಿ ಒಂದು ಸಾವಿರಕ್ಕೂ ಅಧಿಕ ಗ್ರಾಮಗಳಿಗೆ ಮತ್ತು 6,100 ಹೆಕ್ಟೇರ್ ಕೃಷಿಭೂಮಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರವಾಹ ಪೀಡಿತ ಪ್ರದೇಶದಿಂದ ಈವರೆಗೆ 11,330 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಶಿಮ್ಲಾ: ಇಬ್ಬರ ಸಾವು

ಹಿಮಾಚಲಪ್ರದೇಶದ ಶಿಮ್ಲಾ ಜಿಲ್ಲೆಯ ಒಂದು ಗ್ರಾಮದಲ್ಲಿ ಶುಕ್ರವಾರ ರಾತ್ರಿ ಭೂಕುಸಿತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಐದು ಮನೆಗಳಿಗೆ ಹಾನಿಯಾಗಿದೆ.

ಮಣಿಮಹೇಶ ಯಾತ್ರೆ ಕೈಗೊಂಡಿದ್ದ ಸಾವಿರಾರು ಭಕ್ತರು ಛಂಬಾ ಜಿಲ್ಲೆಯಲ್ಲಿ ಸಿಲುಕಿದ್ದಾರೆ. ಆಗಸ್ಟ್ 24ರಿಂದ ಈವರೆಗೆ 10 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಟ್ಟು 560 ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಂಡಿದೆ.

ಭಾರಿ ಮಳೆ ಸಾಧ್ಯತೆ: ಮುಂದಿನ ದಿನಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಕೇಂದ್ರ– ರಾಜ್ಯ ಸರ್ಕಾರಗಳ ಸಂಬಂಧ ಮುಖ್ಯಮಂತ್ರಿಗಳಿಗೆ ಸ್ಟಾಲಿನ್ ಪತ್ರ

ಚೆನ್ನೈ (ಪಿಟಿಐ): ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ ಕುರಿತಂತೆ ತಮಿಳುನಾಡು ಸರ್ಕಾರ ಸಿದ್ಧಪಡಿಸಿರುವ ಪ್ರಶ್ನಾವಳಿ ಬಗ್ಗೆ ಅಭಿಪ್ರಾಯಗಳನ್ನು ತಿಳಿಸುವಂತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ರಾಜಕೀಯ ಮುಖಂಡರನ್ನು ಕೋರಿದ್ದಾರೆ.

ಎಂ.ಕೆ.ಸ್ಟಾಲಿನ್

ಈ ಕುರಿತು ಎಲ್ಲರಿಗೂ ಪತ್ರ ಬರೆದಿದ್ದು, ಅದರ ಪ್ರತಿಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ರಾಜ್ಯ ಸರ್ಕಾರ ರಚಿಸಿರುವ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ನೇತೃತ್ವದ ಉನ್ನತ ಸಮಿತಿಯು ಈ ಪ್ರಶ್ನಾವಳಿ ಸಿದ್ಧಪಡಿಸಿದೆ. ಭಾರತೀಯ ಕಡಲಯಾನ ವಿ.ವಿ ಮಾಜಿ ಕುಲಪತಿ ಕೆ.ಅಶೋಕ ವರ್ಧನ್ ಶೆಟ್ಟಿ, ತಮಿಳುನಾಡು ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಎಂ.ನಾಗನಾಥನ್ ಈ ಸಮಿತಿ ಸದಸ್ಯರಾಗಿದ್ದಾರೆ.

ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧ ಕುರಿತು ಆಗಸ್ಟ್ 23ರಂದು ಆಯೋಜಿಸಿದ್ದ ರಾಷ್ಟ್ರೀಯ ವಿಚಾರ–ಸಂಕಿರಣದಲ್ಲಿ ಈ ಪ್ರಶ್ನಾವಳಿ ಬಿಡುಗಡೆ ಮಾಡಲಾಗಿದೆ. ಉನ್ನತ ಸಮಿತಿಗೆ ನೆರವಾಗುವ ಉದ್ದೇಶದಿಂದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಆನ್‌ಲೈನ್ ಮೂಲಕ ಪ್ರತಿಕ್ರಿಯೆಗಳನ್ನು ಕೇಳಲಾಗಿದೆ.

'ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಂದಿರುವ ಸರಣಿ ತಿದ್ದುಪಡಿಗಳು, ಕಾಯ್ದೆಗಳು ಹಾಗೂ ನೀತಿಗಳಿಂದಾಗಿ ಅಧಿಕಾರ ಹಂಚಿಕೆಯಲ್ಲಿ ಕ್ರಮೇಣ ವ್ಯತ್ಯಾಸಗಳಾಗಿದ್ದು, ಇವುಗಳು ಕೇಂದ್ರಕ್ಕೆ ಹೆಚ್ಚು ಅನುಕೂಲರವಾಗಿವೆ' ಎಂದು ಸ್ಟಾಲಿನ್ ಪತ್ರದಲ್ಲಿ ವಿವರಿಸಿದ್ದಾರೆ.

ಪತ್ರದಲ್ಲಿನ ಪ್ರಮುಖ ಅಂಶಗಳು

- ಬೃಹತ್ ಸಚಿವಾಲಯಗಳು ಕೇಂದ್ರದ ಮಟ್ಟದಲ್ಲಿವೆ. ಇವುಗಳು ರಾಜ್ಯ ಸರ್ಕಾರಗಳ ಕಾರ್ಯವನ್ನೇ ನಕಲು ಮಾಡುತ್ತಿವೆ. ಇಲ್ಲವೇ ಹಣಕಾಸು ಅಥವಾ ಯೋಜನೆಗಳ ಮುಖಾಂತರ ಕಠಿಣ ನಿಬಂಧನೆಗಳನ್ನು ಹೇರುವ ಮೂಲಕ ರಾಜ್ಯಗಳ ಆದ್ಯತೆ ಮಾಡುವ ರೀತಿಯಲ್ಲಿ ಪ್ರಭಾವ ಬೀರುತ್ತಿವೆ
- ಕೇಂದ್ರ ಸರ್ಕಾರ ಪುರಸ್ಕೃತ ಎಲ್ಲ ಯೋಜನೆಗಳಿಗೆ ಏಕ ರೀತಿಯ ಮಾರ್ಗಸೂಚಿಗಳನ್ನು ರಚಿಸಲಾಗುತ್ತದೆ. ಅನುಮೋದನೆಯಿಂದ ಹಿಡಿದು ಅನುಷ್ಠಾನ ವರೆಗೆ ಸೇರಿ ಎಲ್ಲ ಕಾರ್ಯಗಳಲ್ಲಿ ಅನಪೇಕ್ಷಿತ ಹಸ್ತಕ್ಷೇಪ ಮಾಡಲಾಗುತ್ತದೆ
- ಪ್ರಸಕ್ತ ಬೆಳವಣಿಗೆಗಳ ಮರುಪರಿಶೀಲನೆ ನಡೆಸಬೇಕು ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಕುರಿತು ಚೌಕಟ್ಟನ್ನು ರೂಪಿಸುವುದು ಇಂದಿನ ತುರ್ತು

ಬಿಜೆಪಿ, ಆರ್‌ಎಸ್‌ಎಸ್, ಚುನಾವಣಾ ಆಯೋಗದಿಂದ ಅಕ್ರಮ: ರಾಹುಲ್

'ಮತ ಕಳ್ಳತನದ ವಿರುದ್ಧ ಚಳವಳಿ'

ಆರಾ (ಪಿಟಿಐ): ಬಿಹಾರದಲ್ಲಿ ಆರಂಭವಾಗಿರುವ 'ಮತದಾರ ಅಧಿಕಾರ ಯಾತ್ರೆ'ಯು ಜನರ ಮತಗಳನ್ನು ಕದಿಯುವ ವಿರುದ್ಧ ದೇಶದಾದ್ಯಂತ ಚಳವಳಿಯಾಗಲಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಇಲ್ಲಿ ಹೇಳಿದರು.

ಭೋಜ್‌ಪುರದ ಆರಾದಲ್ಲಿ ನಡೆದ ಕಾಂಗ್ರೆಸ್‌ನ ಮತದಾರ ಅಧಿಕಾರ ಯಾತ್ರೆಯಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಬಿಹಾರದಲ್ಲಿ ಒಂದೇ ಒಂದು ಮತವನ್ನು ಕದಿಯಲು ನಾವು ಅವಕಾಶ ನೀಡುವುದಿಲ್ಲ' ಎಂದರು.

ದೇಶದಲ್ಲಿ ನಡೆದಿರುವ 'ಮತ ಕಳ್ಳತನ'ದಲ್ಲಿ ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಚುನಾವಣಾ ಆಯೋಗ ಭಾಗಿಯಾಗಿವೆ ಎಂದು ವಾಗ್ದಾಳಿ ನಡೆಸಿದರು.

'ಮತದಾನವು ದಲಿತರು, ಅಲ್ಪ-ಸಂಖ್ಯಾತರು ಮತ್ತು ಮಹಿಳೆಯರ ಹಕ್ಕು. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಚುನಾವಣೆಯಲ್ಲಿ ಗೆಲ್ಲಲು ಈ ಮತಗಳನ್ನೇ ಕದಿಯುತ್ತಿದೆ. ಮತದಾರರ ಪಟ್ಟಿಯ ಪರಿಷ್ಕರಣೆಯು ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ದಾಳಿ' ಎಂದರು.

ಬಿಹಾರದ ಗೋಪಾಲ್‌ಗಂಜ್‌ನಲ್ಲಿ ನಡೆದ 'ಮತ ಅಧಿಕಾರ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತರ ಜತೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾದರು. ಜಿ.ಪರಮೇಶ್ವರ, ಬಿ.ಕೆ.ಹರಿಪ್ರಸಾದ್, ಕೆ.ಜೆ.ಜಾರ್ಜ್, ಜಮೀರ್ ಅಹಮದ್ ಖಾನ್, ಸಲೀಂ ಅಹಮದ್, ಸತೀಶ ಜಾರಕಿಹೊಳಿ, ಯತೀಂದ್ರ ಸಿದ್ದರಾಮಯ್ಯ, ಎಂ.ಸಿ. ಸುಧಾಕರ್, ನಸೀರ್ ಅಹಮದ್ ಜತೆಗಿದ್ದರು

ಮೌನ ಮೆರವಣಿಗೆ

ಬಿಹಾರದಲ್ಲಿ ಕಾಂಗ್ರೆಸ್ ನಡೆಸಿರುವ 'ಮತದಾರ ಅಧಿಕಾರ ಯಾತ್ರೆ'ಯಲ್ಲಿ ಕೆಲವು ದಿನದ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತಂತೆ ಕೀಳು ಅಭಿರುಚಿಯ ಮಾತುಗಳನ್ನಾಡಿರುವುದನ್ನು ಖಂಡಿಸಿ ಬಿಜೆಪಿ ನಾಯಕರು ಪಟ್ನಾದಲ್ಲಿ ಮೌನ ಮೆರವಣಿಗೆ ನಡೆಸಿದರು.

'ಬಿಜೆಪಿಯು ಜನರ ಮತದಾನದ ಹಕ್ಕನ್ನು ಕಸಿಯುವ ಮೂಲಕ ಸಂವಿಧಾನದ ಮೇಲೆ ದಾಳಿ ನಡೆಸುತ್ತಿದ್ದು, ಮಹಾರಾಷ್ಟ್ರ ಸೇರಿದಂತೆ ದೇಶದ ಇತರೆ ಭಾಗಗಳಲ್ಲಿ ಮತಗಳನ್ನು ಕದಿಯುವಲ್ಲಿ ಯಶಸ್ವಿಯಾಗಿದೆ' ಎಂದು ದೂರಿದರು.

> **ದೇಶದಲ್ಲಿ ಇನ್ಮುಂದೆ ಮತ ಕಳ್ಳತನ ನಡೆಯಲು ಅವಕಾಶ ನೀಡಲ್ಲ. ಜನರು ಈಗಾಗಲೇ ಬಿಜೆಪಿ ನಾಯಕರನ್ನು ಮತ ಕಳ್ಳರು ಎನ್ನುತ್ತಿದ್ದಾರೆ**
>
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

ಎಸ್‌ಐಆರ್: ಹೆಸರು ಕೈಬಿಡಲು 2 ಲಕ್ಷ ಅರ್ಜಿ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯಿಂದ ತಮ್ಮ ಹೆಸರು ಕೈಬಿಡುವಂತೆ 1.98 ಲಕ್ಷ ಮತದಾರರು ಹಾಗೂ ಹೆಸರು ಸೇರ್ಪಡೆಗೆ 30 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದಾರೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆದಿದ್ದು, ಅದರ ಭಾಗವಾಗಿ ಈ ಪ್ರಕ್ರಿಯೆ ನಡೆದಿದೆ.

ಪರಿಷ್ಕರಣೆಯ ಮೊದಲ ಹಂತದ ನಂತರ ಕರಡು ಮತದಾರರ ಪಟ್ಟಿಯನ್ನು ಆ. 1ರಂದು ಪ್ರಕಟಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ಸೆ. 1ರವರೆಗೂ ಕಾಲಾವಕಾಶ ನೀಡಲಾಗಿತ್ತು.

ಬಿಹಾರ ವಿಧಾನಸಭೆಗೆ ಮುಂಬರುವ ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಸೆ. 30ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಗೊಳ್ಳುವ ನಿರೀಕ್ಷೆಯಿದೆ.

ರಾಜಕೀಯ ಪಕ್ಷಗಳು ನೇಮಿಸಿದ್ದ ಬೂತ್ ಮಟ್ಟದ ಏಜೆಂಟರು, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗಾಗಿ 25 ಹಾಗೂ ತೆಗೆಯಲು 103 ಅರ್ಜಿಗಳನ್ನು ಸಲ್ಲಿಸಿದ್ದಾರೆ.

'ಮಾನವ ಜಿಪಿಎಸ್' ಉಗ್ರನ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಗುಡ್ಡಗಾಡು ಪ್ರದೇಶಗಳ ಪರಿಚಯವಿದ್ದ, ಸುಮಾರು 100 ಮಂದಿ ನುಸುಳುಕೋರರಿಗೆ ಸಹಕಾರ ನೀಡಿ, ಕಳೆದ 30 ವರ್ಷಗಳಿಂದ ಇಲ್ಲಿ ಸಕ್ರಿಯವಾಗಿದ್ದ ಬಾಗು ಖಾನ್ ಎಂಬ ಉಗ್ರರ ಕಮಾಂಡರ್‌ನನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ. ಇದು ಭದ್ರತಾ ಪಡೆಗಳಿಗೆ ದೊರೆತ ಬಹುದೊಡ್ಡ ಯಶಸ್ಸಾಗಿದೆ.

ಬಾಗು ಖಾನ್‌ನನ್ನು 'ಮಾನವ ಜಿಪಿಎಸ್' ಎಂದೇ ಕರೆಯಲಾಗುತ್ತಿತ್ತು. ಎಲ್‌ಒಸಿ ಬಳಿಯ ನೌಶೋರ್ ನಾರ್ ಎಂಬಲ್ಲಿ ಭದ್ರತಾ ಪಡೆಗಳು 'ಆಪರೇಷನ್ ನೌಶೋರ್ ನಾರ್ 4' ಕಾರ್ಯಾಚರಣೆಯನ್ನು ಕಳೆದ ವಾರ ನಡೆಸಿದ್ದವು. ಈ ವೇಳೆ ಖಾನ್ ಸೇರಿದಂತೆ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದೆ.

'ಬಾಗು ಖಾನ್, ಹಿಜ್ಬುಲ್ ಮುಜಾಹಿದ್ದೀನ್ ಉಗ್ರ ಸಂಘಟನೆಗೆ ಸೇರಿದವನಾಗಿದ್ದ. ಆದರೆ, ಬೇರೆ ಉಗ್ರ ಸಂಘಟನೆಗಳಿಗೂ ಸಹಕಾರ ನೀಡುತ್ತಿದ್ದ. ಭಾರಿ ಶಸ್ತ್ರಗಳಿದ್ದ ಉಗ್ರರು ನೌಶೋರ್ ನಾರ್ ಪ್ರದೇಶದಲ್ಲಿ ದೇಶದ ಒಳಗೆ ನುಸುಳಲು ಯತ್ನಿಸಿದರು. ಈ ವೇಳೆ ಉಗ್ರರು ಹಾಗೂ ಭದ್ರತಾ ಪಡೆಗಳ ಮಧ್ಯೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ಇಬ್ಬರು ಉಗ್ರರು ಮೃತಪಟ್ಟರು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪಿಂಚಣಿಗೆ ಅರ್ಜಿ ಸಲ್ಲಿಸಿದ ಧನಕರ್

ಜೈಪುರ (ಪಿಟಿಐ): ಸ್ಥಗಿತಗೊಳಿಸಿರುವ ತಮ್ಮ ಪಿಂಚಣಿಯನ್ನು ಮತ್ತೆ ನೀಡುವಂತೆ ಕೋರಿ ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಾಜಸ್ಥಾನ ವಿಧಾನಸಭೆಯ ಕಾರ್ಯದರ್ಶಿಗೆ ಅರ್ಜಿ ಸಲ್ಲಿಸಿದ್ದಾರೆ.

ಕಿಶನ್‌ಗಢ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್ ಶಾಸಕರಾಗಿ 1993ರಿಂದ 1998ರವರೆಗೆ ಪ್ರತಿನಿಧಿಸಿದ್ದ ಧನಕರ್ ಅವರು 2019ರವರೆಗೆ ಪಿಂಚಣಿ ಪಡೆಯುತ್ತಿದ್ದರು. ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ನೇಮಕಗೊಂಡ ಬಳಿಕ ಪಿಂಚಣಿಯನ್ನು ಸ್ಥಗಿತಗೊಳಿಸ-ಲಾಗಿತ್ತು.

ಅನಾರೋಗ್ಯದ ಕಾರಣ ನೀಡಿ ಜುಲೈ 21ರಂದು ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

ಧನಕರ್ ಅವರ ರಾಜೀನಾಮೆ ಅಂಗೀಕಾರವಾದ ದಿನದಿಂದ ಪಿಂಚಣಿ ಸೌಲಭ್ಯವನ್ನು ಅನ್ವಯಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'50 ಶಸ್ತ್ರಾಸ್ತ್ರ ದಾಳಿಗೇ ಪಾಕ್ ಹೈರಾಣ'

'ಸಿಂಧೂರ' ಮೆಲುಕು ಹಾಕಿದ ಏರ್ ಮಾರ್ಷಲ್ ತಿವಾರಿ

ನವದೆಹಲಿ(ಪಿಟಿಐ): 'ಭಾರತೀಯ ವಾಯುಪಡೆ 50ಕ್ಕಿಂತಲೂ ಕಡಿಮೆ ಶಸ್ತ್ರಾಸ್ತ್ರಗಳನ್ನು ಬಳಸಿ ದಾಳಿ ನಡೆಸಿ, ಪಾಕಿಸ್ತಾನದ ಸೇನಾನೆಲೆಗಳಿಗೆ ಧಕ್ಕೆ ಉಂಟುಮಾಡಿತು. ಇದರಿಂದ ವಿಚಲಿತಗೊಂಡ ಪಾಕಿಸ್ತಾನವು, ಸೇನಾ ಕಾರ್ಯಾಚರಣೆ ನಿಲ್ಲಿಸುವಂತೆ ಮೇ 10ರ ಮಧ್ಯಾಹ್ನದ ವೇಳೆ ಬೇಡಿಕೊಂಡಿತು' ಎಂದು ವೈಸ್ ಚೀಫ್ ಆಫ್ ಏರ್ ಸ್ಟಾಫ್ ಏರ್ ಮಾರ್ಷಲ್ ನರ್ಮದೇಶ್ವರ ತಿವಾರಿ ಶನಿವಾರ ಹೇಳಿದ್ದಾರೆ.

'ಪಾಕಿಸ್ತಾನ ಸೇನೆ ಮೇಲೆ ಸಂಪೂರ್ಣ ಪ್ರಾಬಲ್ಯ ಸಾಧಿಸಲು ಭಾರತೀಯ ವಾಯುಪಡೆ ಸಮರ್ಥ-ವಾಗಿತ್ತು' ಎಂದು ಅವರು ಆಪರೇಷನ್ ಸಿಂಧೂರ ಮೆಲುಕು ಹಾಕಿದರು.

ಏರ್ ಮಾರ್ಷಲ್ ತಿವಾರಿ ಅವರು ಆಪರೇಷನ್ ಸಿಂಧೂರದಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಎನ್‌ಡಿಟಿವಿ ಆಯೋಜಿಸಿದ್ದ 'ರಕ್ಷಣಾ ಶೃಂಗಸಭೆ'ಯಲ್ಲಿ ಮಾತನಾಡಿದ ಅವರು, '50ಕ್ಕಿಂತಲೂ ಕಡಿಮೆ ಶಸ್ತ್ರಾಸ್ತ್ರಗಳಿಂದ ದಾಳಿ ನಡೆಸಿ, ಶತ್ರುದೇಶದ ಸೇನೆ ಮೇಲೆ ಸಂಪೂರ್ಣ ಪ್ರಾಬಲ್ಯ ಸಾಧಿಸಿದ ವಿದ್ಯಮಾನ ಹಿಂದೆಂದೂ ನಡೆದಿರಲಿಲ್ಲ' ಎಂದರು.

'ಪಾಕಿಸ್ತಾನದಲ್ಲಿರುವ ಉಗ್ರರ ನೆಲೆಗಳನ್ನು ನಾಶ ಮಾಡಿ, ನಮ್ಮ ಉದ್ದೇಶದ ಬಗ್ಗೆ ಪಾಕಿಸ್ತಾನಕ್ಕೆ ತಿಳಿಸಲಾಯಿತು. ದಾಳಿಯನ್ನು ತೀವ್ರಗೊಳಿಸಲು ಭಾರತ ಬಯಸುತ್ತಿಲ್ಲ ಎಂಬುದನ್ನು ಕೂಡ ಸ್ಪಷ್ಟಪಡಿಸಲಾಯಿತು. ಆದರೆ, ಮೇ 9–10ರ ರಾತ್ರಿ ಪಾಕಿಸ್ತಾನ ಪಡೆಗಳಿಂದ ದಾಳಿ ನಡೆದಾಗ, ತಕ್ಕ ಉತ್ತರ ನೀಡಲು ನಿರ್ಧರಿಸಿ, ಕಾರ್ಯಾಚರಣೆ ನಡೆಸಲಾಯಿತು' ಎಂದು ತಿವಾರಿ ವಿವರಿಸಿದರು.

> **ಆಪರೇಷನ್ ಸಿಂಧೂರ ವೇಳೆ ನಾಶ ಮಾಡಲಾದಂತಹ ಪಾಕಿಸ್ತಾನದ ಕೆಲ ಗುರಿಗಳನ್ನು 1971ರಲ್ಲಿ ನಡೆದ ಯುದ್ಧದ ವೇಳೆ ತಲುಪಿರಲೇ ಇಲ್ಲ**
>
> **ಏರ್ ಮಾರ್ಷಲ್ ನರ್ಮದೇಶ್ವರ ತಿವಾರಿ**, ವೈಸ್ ಚೀಫ್ ಆಫ್ ಏರ್ ಸ್ಟಾಫ್

ಹಣ ದುರ್ಬಳಕೆ: ಎಎಐ ಅಧಿಕಾರಿ ಬಂಧಿಸಿದ ಸಿಬಿಐ

ನವದೆಹಲಿ(ಪಿಟಿಐ): ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದ (ಎಎಐ) ₹232 ಕೋಟಿಯನ್ನು ತನ್ನ ವೈಯಕ್ತಿಕ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದ ಆರೋಪದ ಮೇಲೆ ಪ್ರಾಧಿಕಾರದ ಹಣಕಾಸು ವಿಭಾಗದ ಹಿರಿಯ ವ್ಯವಸ್ಥಾಪಕರೊಬ್ಬರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ರಾಹುಲ್ ವಿಜಯ್ ಬಂಧಿತ ಅಧಿಕಾರಿ. ಡೆಹ್ರಾಡೂನ್ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, 2019–20 ರಿಂದ 2022–23ರ ನಡುವೆ ಅವರು ಪ್ರಾಧಿಕಾರದ ಎಲೆಕ್ಟ್ರಾನಿಕ್ ದಾಖಲೆಗಳನ್ನು ತಿರುಚಿ, ಹಣವನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡು, ಟ್ರೇಡಿಂಗ್‌ಗೆ ಈ ಹಣ ಬಳಸಿರುವುದು ಪತ್ತೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎಂಬಿಬಿಎಸ್ ಪ್ರವೇಶ ಕ್ರಮಬದ್ಧ'

ಎಸ್‌ಟಿ ಪ್ರಮಾಣಪತ್ರ ಅಮಾನ್ಯಗೊಂಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದ್ಯಾರ್ಥಿನಿಯೊಬ್ಬರು ಸಲ್ಲಿಸಿದ್ದ ಪರಿಶಿಷ್ಟ ಪಂಗಡ ಜಾತಿ ಪ್ರಮಾಣಪತ್ರವನ್ನು 2022ರಲ್ಲಿ ಅಮಾನ್ಯಗೊಳಿಸಲಾಗಿದ್ದರೂ, ಅದೇ ಪ್ರಮಾಣಪತ್ರ ಸಲ್ಲಿಸಿ 2016ರಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಆಕೆ ಪಡೆದಿದ್ದ ಪ್ರವೇಶಾತಿಯನ್ನು ಸುಪ್ರೀಂ ಕೋರ್ಟ್ ಅನುಮೋದಿಸಿ ತೀರ್ಪು ನೀಡಿದೆ.

'ಈ ಪ್ರಕರಣದಲ್ಲಿ, ಮೇಲ್ಮನವಿದಾರ ವಿದ್ಯಾರ್ಥಿನಿ ವರ್ತನೆ ಅನುಚಿತವಾಗಿದೆ. ಆಕೆಯ ವೃತ್ತಿ ಹಾಗೂ ಜೀವನ ಕುರಿತಾದ ಏಕೈಕ ವಿಚಾರ ಗಮನದಲ್ಲಿಟ್ಟುಕೊಂಡು ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಲು ಆಕೆಗೆ ಒಂದು ಅವಕಾಶ ನೀಡಲಾಗುವುದು' ಎಂದು ನ್ಯಾಯಾಲಯ ಹೇಳಿದೆ.

ಚೈತನ್ಯಾ ಎಂಬುವವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಕೆ.ವಿ. ವಿಶ್ವನಾಥನ್ ನೇತೃತ್ವದ ಪೀಠ ನಡೆಸಿತು.

'ಎಲ್ಲರಿಗೂ ಕಾನೂನು ಪ್ರಕಾರವೇ ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಬೇಕು. ಆದರೆ, ಈ ಪ್ರಕರಣದಲ್ಲಿ ವಾಸ್ತವ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಗಮನಿಸಿದಾಗ, ಮೇಲ್ಮನವಿದಾರರಿಗೆ ಒಂದು ಅವಕಾಶ ನೀಡಬೇಕು ಎಂದು ನಾವು ಭಾವಿಸಿದ್ದೇವೆ' ಎಂದು ಆಗಸ್ಟ್ 25ರಂದು ನೀಡಿರುವ ತೀರ್ಪಿನಲ್ಲಿ ಪೀಠ ಹೇಳಿದೆ.

'ಈ ಲೋಪಕ್ಕೆ ಸಂಬಂಧಿಸಿ, ಮೇಲ್ಮನವಿದಾರಳ ತಂದೆ ಹಣದ ರೂಪದಲ್ಲಿ ಪರಿಹಾರ ಒದಗಿಸಬೇಕು. ಎರಡು ತಿಂಗಳ ಒಳಗಾಗಿ ರಾಷ್ಟ್ರೀಯ ರಕ್ಷಣಾ ನಿಧಿಯಲ್ಲಿ ₹5 ಲಕ್ಷ ಠೇವಣಿ ಇರಿಸಬೇಕು' ಎಂದು ಪೀಠವು ಚೈತನ್ಯಾ ಅವರ ತಂದೆ ಸಂಜೀವ ವಿಠಲರಾವ್ ಪಾಲೇಕರ್ ಅವರಿಗೆ ನಿರ್ದೇಶನ ನೀಡಿದೆ.

ವಿಚಾರಣೆ ವೇಳೆ, 'ಮೇಲ್ಮನವಿದಾರ ವಿದ್ಯಾರ್ಥಿನಿ ಪ್ರತಿಭಾವಂತೆಯಾಗಿದ್ದು, ಎಂಬಿಬಿಎಸ್ ಪೂರ್ಣಗೊಳಿಸಿ ಈಗ ಸ್ನಾತಕೋತ್ತರ ಕೋರ್ಸ್ ಮಾಡುತ್ತಿದ್ದಾಳೆ. ತನ್ನ ವೈದ್ಯಕೀಯ ಪದವಿಯನ್ನು ಅನುಮೋದಿಸುವಂತೆ ಕೋರಿ ಆಕೆ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಿದಲ್ಲಿ, ಅದು ಆಕೆಯ ಸಂಪೂರ್ಣ ಕೆರಿಯರ್‌ಗೆ ಅಂತ್ಯ ಹಾಡಿದಂತಾಗಲಿದೆ' ಎಂದು ಪೀಠ ಹೇಳಿದೆ.

'ತನ್ನ ಪುತ್ರಿ, ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾಗಿ ಹೇಳಿ ಮುಂದೆ ಯಾವತ್ತೂ ಯಾವ ಪ್ರಯೋಜನವನ್ನೂ ಪಡೆಯುವುದಿಲ್ಲ, ತನ್ನ ಕುಟುಂಬದ ಯಾವ ಸದಸ್ಯ ಕೂಡ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾಗಿ ಹೇಳಿ ಯಾವ ಪ್ರಯೋಜನವನ್ನು ಪಡೆಯುವುದಿಲ್ಲ ಎಂಬುದಾಗಿ ಆಕೆಯ ತಂದೆ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಇದನ್ನು ಪರಿಗಣಿಸಿ, ಎಂಬಿಬಿಎಸ್ ಕೋರ್ಸ್‌ಗೆ ಆಕೆ ಪಡೆದಿರುವ ಪ್ರವೇಶವನ್ನು ಕ್ರಮಬದ್ಧಗೊಳಿಸಲಾಗುವುದು' ಎಂದೂ ಪೀಠ ಹೇಳಿದೆ.

'ಸಂಬಂಧಪಟ್ಟ ಸಮಿತಿಯು ಮೇಲ್ಮನವಿದಾರಳ ಪ್ರಮಾಣ ಪತ್ರಗಳನ್ನು ಸರಿಯಾಗಿ ಪರಿಶೀಲನೆ ನಡೆಸಿ, ಆಕೆ ಪರಿಶಿಷ್ಟ ಪಂಗಡಕ್ಕೆ ಸೇರಿದವಳಲ್ಲ ಎಂದು ಘೋಷಿಸಿದ್ದರೆ, ಈ ವಿಚಾರ ಇಷ್ಟೊಂದು ಬೆಳೆಯುತ್ತಿರಲಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಟೆಂಡರ್ ಹಾಗೂ ಬಹಿರಂಗ ಹರಾಜು

ವಲಯ ಕೃಷಿ ಸಂಶೋಧನಾ ಕೇಂದ್ರ, ಕೃ.ವಿ.ವಿ., ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ ದಿನಾಂಕ; **03.09.2025ರಂದು ಬುಧವಾರ ಬೆಳಿಗ್ಗೆ 10.30 ಗಂಟೆಗೆ 2025–26**ನೇ ಸಾಲಿನ **ಸಪೋಟ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಮತ್ತು ಬಹಿರಂಗ ಹರಾಜು** ಮೂಲಕ ಮಾರಾಟ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರ ಕಛೇರಿ, ವ.ಕೃ.ಸಂ.ಕೇ., ಜಿ.ಕೆ.ವಿ.ಕೆ ಅಥವಾ **ದೂರವಾಣಿ ಸಂಖ್ಯೆ: 080–23330153 / ವಿಸ್ತರಣೆ: 315** ಇಲ್ಲಿ ಸಂಪರ್ಕಿಸಿ.

ಆಯುಷ್ ಇಲಾಖೆ
ಸರ್ಕಾರಿ ಕೇಂದ್ರೀಯ ಔಷಧಾಗಾರ, ಅಶೋಕ ಪಿಲ್ಲರ್ ಹತ್ತಿರ, ಜಯನಗರ, ಬೆಂಗಳೂರು, ಇ–ಮೇಲ್: ddgcpblr@gmail.com
ದೂರವಾಣಿ ಸಂಖ್ಯೆ: 080–26561790

ಮರು ಇ–ಟೆಂಡರ್
ಅಧಿಸೂಚನೆ ಸಂಖ್ಯೆ: GCP-SUPOOTHS/25/2025 ದಿನಾಂಕ: 30.08.2025

ಸರ್ಕಾರಿ ಕೇಂದ್ರೀಯ ಔಷಧಾಗಾರ, ಜಯನಗರ, ಬೆಂಗಳೂರು ಇಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರ ಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳಿಗೆ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.09.2025 ಸಮಯ 17.30 ಗಂಟೆಯವರೆಗೆ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಮುಖಾಂತರ ಸಲ್ಲಿಸಬಹುದು.

ಸಹಿ/–
ಉಪನಿರ್ದೇಶಕರು (ಫಾ) / ಅಧ್ಯಕ್ಷರು
ಟೆಂಡರ್ ಆಹ್ವಾನ ಪ್ರಾಧಿಕಾರ
ವಾ.ಸಾ.ಸಂ.ಇ/ವಾಪ್ರ/2560/ಆಕಾರ್/2025–26

ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ
1ನೇ ಮಹಡಿ, ಲೈಬ್ರರಿ ಬ್ಲಾಕ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು–560002. Ph No: 080–26700074, 26700075,
Email: ksdneb@gmail.com ವೆಬ್‌ಸೈಟ್: **www.ksdneb.org**
ಸಂಖ್ಯೆ: ಕ.ರಾ.ಶು.ಪ.ಮಂ./ಸಿಬ್ಬಂದಿ/10/2025–26 ದಿನಾಂಕ: 30.08.2025

2025–26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕಟಣೆ

2025–26 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಶುಶ್ರೂಷ ಶಾಲೆ ಮತ್ತು ಖಾಸಗಿ ಶುಶ್ರೂಷ ಶಾಲೆಗಳಲ್ಲಿನ ಶೇಕಡ 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ದ್ವಿತೀಯ ಪಿಯುಸಿಯ ಶೇಕಡ 40% ರಷ್ಟು ಅಂಕ ಪಡೆದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕನಿಷ್ಠ ಶೇಕಡ 35% ಅಂಕ ಪಡೆದಿರಬೇಕು) ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಹಾಗೂ ಸೇವಾನಿರತ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ (ಪಿ.ಹೆಚ್.ಸಿ.ಓ) ಅಭ್ಯರ್ಥಿಗಳಿಗೆ **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು 01–09–2025 ರಿಂದ 06–09–2025 ರವರೆಗೆ** ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. **www.ksdneb.org**

ಸಹಿ/– ಕಾರ್ಯದರ್ಶಿಗಳು, ಕ.ರಾ.ಶು.ಪ.ಮಂ. ಬೆಂಗಳೂರು

ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)
ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in
ಇ–ಮೇಲ್: comm_srs@yahoo.com
ನಂ. ನಸಶಿ/ನೈವಿ/ಟೆಂಡರ/ವಿವ–/2025–26 ದಿನಾಂಕ: 25.08.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ–2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ ಟೆಂಡರ್ ಡಾಕ್ಯುಮೆಂಟ್ KG-2ರ ನಿಬಂಧನೆಗೊಳಪಟ್ಟಂತೆ, KPP Portal ನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ (1) DMA/2024-25/IND2441 (ಅಂದಾಜು ಮೊತ್ತ ರೂ. 54.50 ಲಕ್ಷಗಳು)ಕಾಮಗಾರಿಗೆ ಟೆಂಡರಗಳನ್ನು, KPP Portal ಮೂಲಕ ಕರೆಯಲಾಗಿದ್ದು, KPP Portal ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು.

(1) KPP Portal ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.09.2025 (ಸಂಜೆ 16.00 ಗಂಟೆವರೆಗೆ) (2) KPP Portal ಮೂಲಕ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.09.2025 (ಸಂಜೆ 16.30 ಗಂಟೆಗೆ) (3) KPP Portal ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.09.2025 (ಮಧ್ಯಾಹ್ನ 11.30 ಗಂಟೆಗೆ) (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು KPP Portal ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಪೌರಾಯುಕ್ತರು, ನಗರಸಭೆ, ಶಿರಸಿ.
DIPR/ADK/KSMCA/429/25-26 dt.29.08.2025

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ – 561 203.
E-mail : itstaff_ulb_doddaballapur@yahoo.com
Website : www.doddaballapurcity.gov.in
ಸಂಖ್ಯೆ: ನ.ಸ.ದೊ./ತಾಂ.ವಿ./ಟಿ.ಎನ್.ನಂ.12/25–26 ದಿನಾಂಕ: 29–08–2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ಅಮೃತ್–2.0 ಯೋಜನೆಯಡಿ ಈ ಕೆಳಕಂಡ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) DMA/2025-26/OW/WORK_INDENT46915, 2) DMA/2025-26/OW/WORK_INDENT46916 & 3) DMA/2025-26/OW/WORK_INDENT46918.

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp.karnataka.gov.in) ಮುಖಾಂತರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15–09–2025 ರ ಸಂಜೆ 5.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : 16–09–2025 ರ ಸಂಜೆ 5.15 ಗಂಟೆಗೆ.

ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಆಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ. | ಸಹಿ/– ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ. | ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ. | ಸಹಿ/– ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/2550/2025–26

ಕರ್ನಾಟಕ ಸರ್ಕಾರ ಆಯುಷ್ ಇಲಾಖೆ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ–573201
E-mail: dao.hassan09@gmail.com ದೂರವಾಣಿ ಸಂ:08172–272272
ಸಂ: ಜಿಆಕಹಾ/38/ಸಿಬ್ಬಂದಿ(1)/ಗ್ರೂ.ಟೆಂಡರ್/2025–26
ದಿನಾಂಕ: 29–08–2025.

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ನೌಕರರ ಸೇವೆಯನ್ನು ಒದಗಿಸಲು ನೋಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯವರಿಂದ 01ವರ್ಷದ ಅವಧಿಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 29–08–2025ರಿಂದ 29–09–2025ರವರೆಗೆ ಆನ್ ಲೈನ್ ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸುವುದು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್ ಅಧಿಸೂಚನೆ ಸಂ: AYD/2025-26/SE0167 ನಲ್ಲಿ ನೋಡಬಹುದಾಗಿದೆ.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.
ವಾಸಾಸಂಇ/ಹಿಸನಿ/ಹಾಸನ/505/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ದಾವಣಗೆರೆ ವಿಭಾಗ ಕಛೇರಿ, ದಾವಣಗೆರೆ.
ನಂ.ಕಕೊಅಮ/ಕಾಪಾಅ/ದಾವಿ/ಐ.ಎಫ್.ಟಿ–01/2025–26/ ದಿನಾಂಕ:29–08–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಯ ವಿವಿದ ನಗರ/ಪಟ್ಟಣಗಳಲ್ಲಿ 2025–26ನೇ ಸಾಲಿನ ಕೊಳಚೆ ಸುಧಾರಣೆ ಕ್ರಿಯಾ ಯೋಜನೆಯ ಲೆಕ್ಕ ಶೀರ್ಷಿಕೆ 4217–04–015–0–01 ರಡಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ kppp.karnataka.gov.in ಮುಖಾಂತರ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆ.ಡಬ್ಲ್ಯೂ–2 & 3 ರ ನಿಯಮಾವಳಿಗಳಂತೆ ಟೆಂಡರ್‌ನ್ನು ಕರೆಯಲಾಗಿದೆ. ಅದರಂತೆ kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ 15.09.2025 ಸಾಯಂಕಾಲ 4.00 ಗಂಟೆಯುವರೆಗೆ Upload ಮಾಡಬಹುದಾಗಿರುತ್ತದೆ ಸದರಿ ಟೆಂಡರ್‌ನ್ನು ದಿನಾಂಕ 17.09.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕ್ರಮ ಸಂಖ್ಯೆ 5ರ ಕಾಮಗಾರಿಯ ದ್ವಿ ಲಕೋಟೆ ಪದ್ಧತಿಯಾಗಿದ್ದು, ಸದರಿ ಟೆಂಡರ್‌ನ್ನು ಸಹ ದಿನಾಂಕ 17.09.2025 ರ ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಕಾಮಗಾರಿಯ ವಿವರ ಮತ್ತು ಇತರೆ ವಿಷಯಗಳನ್ನು kppp.karnataka.gov.in ವೆಬ್ ಸೈಟನಲ್ಲಿ ಪಡೆಯಬಹುದಾಗಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಭಾಗ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(1) PROVIDING CC ROAD, RCC DRAIN & ETC WORKS FOR JANATHA COLONY SLUM AT CHALLKERE TOWN, CHITHRADURGA DISTRICT. Tender Amount:- 20,65,124/- EMD Amount:- 25,814/- Indent No:- KSDB/2025-26/RD/WORK_INDENT263
(2) PROVIDING CC ROAD FOR MADAKARI A.K COLONY SLUM AT CHALLKERE TOWN, CHITHRADURGA DISTRICT. Tender Amount:- 20,65,124/- EMD Amount:- 51,628/- Indent No:-KSDB/2025-26/RD/WORK_INDENT264
(3) PROVIDING CC ROAD FOR ABISHEK NAGARA SLUM AT CHALLKERE TOWN, CHITHRADURGA DISTRICT. Tender Amount:- 20,65,124/- EMD Amount:- 51,628/- Indent No:-KSDB/2025-26/RD/WORK_INDENT265
(4) PROVIDING CC ROAD FOR AK & AD COLONY SLUM AT HOLALKERE TOWN, CHITHRADURGA DISTRICT. Tender Amount:- 41,31,044/- EMD Amount:- 1,03,276/- Indent No:-KSDB/2025-26/RD/WORK_INDENT266
KW-3 Two Cover:- (5) PROVIDING CC ROAD FOR INDIRA NAGARA SLUM AT HANAGAL TOWN, HAVERI DISTRICT. Tender Amount:- 82,63,320/- EMD Amount:- 2,06,583/- Indent No:-KSDB/2025-26/RD/WORK_INDENT267

–ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ದಾವಣಗೆರೆ ವಿಭಾಗ, ದಾವಣಗೆರೆ.
ವಾಸಾಇ/ಡಿವಿಜಿ/305/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಕಛೇರಿ ವಿಳಾಸ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರಕಾರ್ಯಾಲಯ, ಹೆಚ್.ಆರ್.ಜಿ. ವೃತ್ತ, ಬಳ್ಳಾರಿ–583101.
ದೂ.ಸಂ: 08392–273731, E-Mail: combudably@gmail.com. Web: www.bellary.uda.gov.in
ಸಂಖ್ಯೆ: ಬನಆಪ್ರಾ/ಇಎನ್‌ಜಿಜಿ/ಮಹಾಯೋಜನೆ/01/2025–26 ದಿನಾಂಕ:26/08/2025

ತಿದ್ದುಪಡಿ ಟೆಂಡರ್ ಪ್ರಕಟಣೆಯನ್ನು ಮುಂದೂಡುವ ಬಗ್ಗೆ

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 05/08/2025 ರಂದು ಕರೆಯಲಾಗಿದ್ದ ಟೆಂಡರ್ ಇಂಡೆಂಟ್ ಸಂಖ್ಯೆ: **Preparation of Master Plan for Ballari Urban Development Area. BUDA/2025-26/SE0015(GIS Based)** ರ ಕಾಮಗಾರಿಯನ್ನು ಪೂರೈಸಲು ಸಲಹೆ ಮತ್ತು ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ **(Corrigendum/Addendum)**ಸೇರಿಸಿದ್ದು, ಪ್ರಂಯುಕ್ತ ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್ **http://kppp.karnataka.gov.in** ನಲ್ಲಿ ಒದಿಕೊಳ್ಳತಕ್ಕದ್ದು ಹಾಗೂ ಪರಿಶೀಲಿಸಿಕೊಳ್ಳತಕ್ಕದ್ದು.

Details of Work: 1.Preparation of Master Plan for Ballari Urban Development Area. BUDA/2025-26/SE0015(GIS Based) **Estimated Cost (Rs. in Lakhs):** 200.00.

The Tender Events are as under:
a)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **12/09/2025 up to 16:30 Hrs.**
b)ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15-09-2025 at 17:00 Hrs.**
c)ಆರ್ಥಿಕ ಬಿಡ್ ತೆರೆಯುವ ದಿನಾಂಕ: **22-09-2025 at 17:00 Hrs.**

ಸಹಿ/– ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/413/ಕೆಎಸ್‌ಎಂಸಿಎ/2025–26

ಪೂತನಿಯ ಹೊಸ ಪ್ರಯೋಗ
ರಾತ್ರಿ ಪೂರ್ತಿ ಪ್ರದರ್ಶನಗೊಳ್ಳುವ ಪೂತನಿ ನಾಟಕವನ್ನು 90 ನಿಮಿಷಕ್ಕಿಳಿಸಿ ಹೊಸ ಪ್ರಯೋಗ ಮಾಡಿದ್ದಾರೆ ಡಿ.ಬಿ.ಮಲ್ಲಿಕಾರ್ಜುನಸ್ವಾಮಿ ಮಹಾಮನೆ 12

‘ಗುರು’ತ್ವ ದೊಡ್ಡದು ಕನಾ...

• ರಘುನಾಥ ಚ.ಹ.

ಭಾರತೀಯ ಚಿತ್ರರಂಗಕ್ಕೆ ಕನ್ನಡ ಸಿನಿಮಾ ನೀಡಿದ ಅಪೂರ್ವ ಕೊಡುಗೆಗಳಲ್ಲೊಂದು, 1958ರಲ್ಲಿ ತೆರೆಕಂಡ ‘ಸ್ಕೂಲ್ ಮಾಸ್ಟರ್.’ ಬಿ.ಆರ್. ಪಂತುಲು ನಿರ್ದೇಶನದ ಈ ಸಿನಿಮಾದ ಎರಡು ಗೀತೆಗಳು ಮೂರ್ನಾಲ್ಕು ದಶಕಗಳ ಕಾಲ ಶಾಲಾಪರಿಸರದಲ್ಲಿ ಪ್ರಸಿದ್ಧವಾಗಿದ್ದವು. ಮೊದಲನೆಯದು, ಕೆ. ಪ್ರಭಾಕರ ಶಾಸ್ತ್ರಿ ವಿರಚಿತ ‘ಬನ್ನಿರೈ ಬನ್ನಿರೈ ಗುರುಸೇವೆಯೆ ನಮ್ಮ ಸರ್ವೋದಯ, ಗುರುಮನೆಯೆ ನಮ್ಮೂರ ದೇವಾಲಯ.’ ಎರಡನೆಯದು, ಅನೇಕ ಶಾಲೆಗಳಲ್ಲಿ ಪ್ರಾರ್ಥನಾಗೀತೆಯಾಗಿದ್ದ ಸೋಸಲೆ ಅಯ್ಯಾ ಶಾಸ್ತ್ರಿಗಳ ‘ಸ್ವಾಮಿದೇವನೆ ಲೋಕಪಾಲನೆ’ ರಚನೆ.

‘ಸ್ಕೂಲ್ ಮಾಸ್ಟರ್’ ಸಿನಿಮಾದ ಗೀತೆಗಳು ಹೊಸ ತಲೆಮಾರಿನ ಬಹುತೇಕರಿಗೆ ಪರಿಚಿತ ಇಲ್ಲದಿರಬಹುದು. ಆದರೆ, ಆ ಗೀತೆಗಳ ಆಶಯ ಇಂದಿನ ವಿದ್ಯಾರ್ಥಿಗಳಲ್ಲೂ ಇದೆ ಎನ್ನುವುದಕ್ಕೆ, ಪತ್ರಿಕೆಗಳಲ್ಲಿ ಆಗಾಗ ಪ್ರಕಟಗೊಳ್ಳುವ ಹಳೆಯ ವಿದ್ಯಾರ್ಥಿಗಳ ಸಮ್ಮಿಲನದ ಫಲಶ್ರುತಿಯ ವರದಿಗಳು ನಿದರ್ಶನದಂತಿವೆ. ಹತ್ತಾರು ವರ್ಷಗಳ ನಂತರ ಹಳೆಯ ವಿದ್ಯಾರ್ಥಿಗಳು ಒಟ್ಟಿಗೆ ಸೇರಿ ಸಂಭ್ರಮಿಸುವ, ಗುರುವಂದನೆ ನಡೆಸುವ, ತಾವು ಕಲಿತ ಶಾಲೆಗಳಿಗೆ ಕೊಡುಗೆ ನೀಡುವ ವಿದ್ಯಮಾನಗಳು ನಾಡಿನ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿವೆ.

ಶಿಕ್ಷಣ ವಹಿವಾಟಿನ ರೂಪ ತಾಳಿ, ಗುರು–ಶಿಷ್ಯರ ನಡುವಣ ಸಂಬಂಧ ಆರ್ದ್ರತೆ ಕಳೆದುಕೊಂಡಿದೆ ಎನ್ನುವ ದೂರು ದುಮ್ಮಾನವನ್ನು ಸುಳ್ಳು ಮಾಡುವಂತೆ ಬೆಂಗಳೂರಿನ ಬಡಾವಣೆಯೊಂದರ ಶಾಲೆಯಿಂದ ಹಿಡಿದು ಕಲ್ಯಾಣ ಕರ್ನಾಟಕದ ಹಳ್ಳಿಯೊಂದರ ಪುಟ್ಟ ಶಾಲೆಯವರೆಗೂ ಹಳೆಯ ವಿದ್ಯಾರ್ಥಿಗಳ ಸಮಾವೇಶ–ಸಮ್ಮಿಲನಗಳು ನಡೆಯುತ್ತಲೇ ಇವೆ.

ನಾಗರಮುನ್ನೋಳಿ ಸರ್ಕಾರಿ ಪ್ರೌಢಶಾಲೆಯ 2011–12ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ನಡೆಸಿದ ಗುರುವಂದನಾ ಕಾರ್ಯಕ್ರಮ

ಸರ್ಕಾರಿ ಶಾಲೆಗಳ ಮಕ್ಕಳಿಗೆ ತಮಗೆ ಅಕ್ಷರಜ್ಞಾನ ನೀಡಿದ ವಿದ್ಯಾಸಂಸ್ಥೆಗಳ ಬಗ್ಗೆ ವಿಶೇಷ ಅಕ್ಕರೆ. ಶಾಲೆಯ ನೆನಪುಗಳನ್ನು ಹುಡುಕಿಕೊಂಡು ಹೋಗುವವರಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿತವರೇ ಹೆಚ್ಚು. ಪ್ರವೇಶಕ್ಕೆ ದೊಡ್ಡ ಮೊತ್ತದ ಹಣ ಪಡೆಯುವ ಖಾಸಗಿ ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆನಪಿನ ನವಿಲುಗರಿಗಳನ್ನು ಉಳಿಸುವುದು ತೀರಾ ಕಡಿಮೆ; ನೆನಪುಗಳಿದ್ದರೂ, ಅವು ತೀರಾ ಸೀಮಿತ. ಖಾಸಗಿ ವಿದ್ಯಾಸಂಸ್ಥೆಗಳ ಜೊತೆಗಿನ ನಂಟು ‘ಕೊಡು ಕೊಳು’ ರೂಪದಲ್ಲಿರುವುದೇ ಹೆಚ್ಚು. ಆ ಕಾರಣದಿಂದಲೇ ಧೈರ್ಯವಾಗಿ ಹೇಳಬಹುದು, ಸರ್ಕಾರಿ ಶಾಲೆಗಳ ಸಂಬಂಜ ದೊಡ್ಡದು ಕನಾ!

> ‘ಕಾಲ ಮೊದಲಿನಂತಿಲ್ಲ’ ಎನ್ನುವ ಹಳಹಳಿಕೆಗೆ ‘ಗುರು–ಶಿಷ್ಯ’ ಪರಂಪರೆಯೂ ಹೊರತಾದುದಲ್ಲ. ಆದರೆ, ಹಳೆಯ ವಿದ್ಯಾರ್ಥಿಗಳ ಸಮ್ಮಿಲನದ ಘಟನೆಗಳು ಗುರು–ಶಿಷ್ಯ ಪರಂಪರೆಯ ಹೊಸ ಸಾಧ್ಯತೆಯನ್ನೇ ನಮ್ಮೆದುರು ತೆರೆದಿಡುತ್ತಿವೆ.

ಸರ್ಕಾರಿ ಶಾಲೆಗಳ ಜೊತೆಗಿನ ನಂಟೆಂದರೆ ಅದು ಗುರುಗಳೊಂದಿಗಿನ ಸಂಬಂಧವೂ ಹೌದು. ನಮ್ಮ ಎದೆಯಂಗಳವನ್ನು ತೇವ ಮಾಡಿಕೊಂಡರೆ ಶಿಕ್ಷಕರ ಜಂಬೂಸವಾರಿಯೇ ಜೀವಗೊಂಡಂತಾಗುತ್ತದೆ. ಬಂಕಾಪುರದ ರನ್ನಮಯ್ಯನನ್ನು ಎದೆಗೆ ಬೀಳಿಸಿದ ಮೇಷ್ಟ್ರು, ಎದೆಗಿಳಿಯದ ಇಂಗ್ಲಿಷನ್ನು ಕಂಠಪಾಠದ ಮೂಲಕ ಗಂಟಲಿಗೆ ತುರುಕಿದ ಮೇಡಂ, ಮುಂಗಾರುಮಳೆಯಂತೆ ಎದೆಯಲ್ಲಿ ಉಳಿದುಹೋದ ಸಮಾಜಶಾಸ್ತ್ರದ ಶಿಕ್ಷಕ, ಭಿನ್ನರಾಶಿಯನ್ನು ಭಿನ್ನಭಾವ ತೋರದೆ ಕಲಿಸಿದ ಲೆಕ್ಕದಮೇಷ್ಟ್ರು, ಸಮವಸ್ತ್ರ ತೊಡದೆ ಬಂದುದಕ್ಕಾಗಿ ಹುಣಸೆ ಬರಲಲ್ಲಿ ಮೊಳಕಾಲುಗಳ ಮೇಲೆ ಚಿತ್ತಾರ ಮೂಡಿಸಿದ ಪೀಟಿ ಟೀಚರ್ರು... ಎಂದುರೋ ಮಹಾನುಭಾವುಲು...

ಹರಿಶ್ಚಂದ್ರ ನೃಪಾಲ ರಾಜ್ಯತ್ಯಾಗ ಮಾಡುವಾಗ, ಪ್ರಜಾಸಮೂಹ ಶೋಕಿಸುತ್ತದೆ. ಅಯೋಧ್ಯೆಯ ಪ್ರಜೆಗಳ ದುಃಖವನ್ನು ಕಂಡು, ‘ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ’ ಎನ್ನುತ್ತಾನೆ ‘ಹರಿಶ್ಚಂದ್ರ ಕಾವ್ಯ’ದ ರಾಘವಾಂಕ. ಆ ಮಾತು ಸರ್ಕಾರಿ ಶಾಲೆಗಳಲ್ಲಿ ಆಗಾಗ ಜೀವಗೊಳ್ಳುತ್ತಿರುತ್ತದೆ. ಇಷ್ಟದ ಶಿಕ್ಷಕನೋ ಶಿಕ್ಷಕಿಯೋ ವರ್ಗವಾಗಿ ಹೋದಾಗ, ‘ಶಾಲೆಯ ಪುಣ್ಯ ಗುರುವಿನ ರೂಪದಲಿ ಹೋಗುತಿದೆ’ ಎಂಬಂತೆ ಮಕ್ಕಳು ಕಣ್ಣೀರಿಡುವ ವಿಸ್ಮಯಗಳು ಮೊಬೈಲ್ ಕಾಲಘಟ್ಟದಲ್ಲೂ ಘಟಿಸುತ್ತಿವೆ. ‘ಪುರದ ಪುಣ್ಯ’ದ ರೂಪದಲ್ಲಿ ಕಂಡ ವರ್ಗವಾದ ಗುರುವನ್ನು ತಮ್ಮೂರಿನ ಶಾಲೆಯಲ್ಲಿಯೇ ಉಳಿಸಿಕೊಳ್ಳಲು ಗ್ರಾಮಸ್ಥರು ಧ್ವನಿಯೆತ್ತಿದ ನಿದರ್ಶನಗಳೂ ಇವೆ. ಕಾಲ ಯಾವುದಾದರೇನು, ಗುರುವಿನ ಗುರುತ್ವ ನಿಚ್ಚಂ ಪೊಸತು.

ನಾಡಿನ ಯಾವುದಾದರೂ ಭಾಗದ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಕಲರವ ಆಗಾಗ ಅನುರಣನಗೊಳ್ಳುತ್ತಿರುತ್ತದೆ. ಶಾಲೆ ಕಾಲೇಜಿನ ನಂತರ ಬದುಕಿನ ದಾರಿಗಳು ಕವಲೊಡೆಯುತ್ತಿದ್ದವು. ಹಾಗಾಗಿ, ವಿದ್ಯಾಭ್ಯಾಸದ ನಂತರವೂ ಸ್ನೇಹ ಮುಂದುವರೆಯುವುದು ಸುಲಭವಾಗಿರಲಿಲ್ಲ. ಆ ತೊಡಕು ಈಗಿಲ್ಲ. ಅಂಗೈಯಲ್ಲಿನ ಮೊಬೈಲ್ ಫೋನ್‌ಗಳ ತರಂಗಗಳು ವಿಶ್ವವ್ಯಾಪಿ ಆಗಿರುವಾಗ, ಕಳೆದುಹೋದ ಸ್ನೇಹದ ತಂತುಗಳು ಕೂಡಿಕೊಳ್ಳುವುದು ಸುಲಭವಾಗಿದೆ. ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂಗಳೆಲ್ಲ ಸ್ನೇಹಿತರನ್ನು ಒಗ್ಗೂಡಿಸುವ ಚಾವಡಿಗಳಾಗಿವೆ. ಸಾಮಾಜಿಕ ಜಾಲತಾಣಗಳ ಮೂಲಕ ಹಳೆಯ ವಿದ್ಯಾರ್ಥಿಗಳು ಒಗ್ಗೂಡಿದಾಗ ನಂಟು ಕೂಡಬಹುದು; ನಂಟಿನ ಅಂಟು ಬಲವಾಗಬೇಕಲ್ಲ? ಆ ಅಂಟಿಗೆ ಬಲ ತರುವುದು ಶಾಲೆಯ ನೆನಪುಗಳು.

ಫೇಸ್‌ಬುಕ್ ಇಲ್ಲವೇ ವಾಟ್ಸ್‌ಆ್ಯಪ್ ಗುಂಪುಗಳ ಸ್ನೇಹಕೂಟದ ಮುಂದಿನ ನಡೆಯೇ, ಎಲ್ಲರೂ ಒಂದೆಡೆ ಸೇರಿ ಸಂಭ್ರಮಿಸುವುದು. ಅಂಥ ಸಂಭ್ರಮಕ್ಕೆ ಶಾಲಾಕಾಲೇಜುಗಳು ವೇದಿಕೆಯಾಗುತ್ತವೆ. ‘ಸ್ನೇಹಕೂಟ’, ‘ಸಮ್ಮಿಲನ’, ‘ಸಮಾವೇಶ’ – ಹೆಸರು ಬೇರೆಯಾದರೂ ಉದ್ದೇಶ ಒಂದೇ: ಬಾಲ್ಯದ ನೆನಪುಗಳನ್ನು ವರ್ತಮಾನದಲ್ಲಿ ಹಸಿರಾಗಿಸುವುದು.

ಹಳೆಯ ವಿದ್ಯಾರ್ಥಿಗಳ ಸಮ್ಮಿಲನದಲ್ಲಿ ಗುರುಗಳೇ ಕೇಂದ್ರಬಿಂದು. ಗುರು–ಶಿಷ್ಯರ ಸಮ್ಮಿಲನದ ಭಾವತೀವ್ರತೆಯನ್ನು ಹಿಡಿದಿಡುವುದು ಸುಲಭವಲ್ಲ. ಶಾಲಾಕಟ್ಟಡದಂತೆ ಗುರುಗಳೂ ಈಗ ದಣಿದಿದ್ದಾರೆ. ಕಟ್ಟಡದ ಮಾಸಲು ಬಣ್ಣ ಹಾಗೂ ಗೋಡೆಗಳಲ್ಲಿನ ಬಿರುಕು ಗೆರೆಗಳಂತೆ, ಮೇಷ್ಟ್ರ ತಲೆಗೂದಲು ಬೆಳ್ಳಗಾಗಿದೆ, ಮುಖದಲ್ಲಿ ಸುಕ್ಕುಗಳು ಮೂಡಿವೆ. ಮಕ್ಕಳ ರೂಪಾಂತರ ಮತ್ತೂ ದೊಡ್ಡದು. ಸಿಂಬಳ ಸುರಿಸುತ್ತಿದ್ದ ‘ಗೊಣ್ಣೆಸುರುಕ’ ಈಗ ವೈದ್ಯ. ನೆತ್ತಿಗೆ ಸದಾ ಮೆತ್ತಿಕೊಂಡಿರುತ್ತಿದ್ದ ಹರಳೆಣ್ಣೆ ಮುಖದಲ್ಲೂ ಜಿನುಗಿ, ‘ಜಿಡ್ಡಮ್ಮ’ ಎಂದು ಸಹಪಾಠಿಗಳಿಂದ ಕರೆಸಿಕೊಳ್ಳುತ್ತಿದ್ದ ನಾಗವೇಣಿಯೀಗ ಭೌತಶಾಸ್ತ್ರದ ಉಪನ್ಯಾಸಕಿ. ಕೆಲಸಕ್ಕೆ ಬಾರದವರು ಎಂದು ಶಿಕ್ಷಕರ ಬಿರುನುಡಿಗಳಿಗೆ ಗುರಿಯಾಗಿದ್ದ ಹಾಗೂ ಸೀಮೆಸುಣ್ಣ, ರೂಲುದೊಣ್ಣೆ, ಕಟ್ಟಿಗೆಯ ಅಳತೆಪಟ್ಟಿಗಳಿಗೆ ಗುರಿಯಾಗುತ್ತಿದ್ದ ಅವನು ಇವನು ಅವಳು ಇವಳು ಏನೆಲ್ಲಾ ಆಗಿದ್ದಾರೆ... ಪೊಲೀಸ್, ಶುಶ್ರೂಷಕಿ, ಕಾಲ್‌ಸೆಂಟರ್ ಉದ್ಯೋಗಿ, ಎಂಜಿನಿಯರ್... ರಾಜಕಾರಣದ ಪೋಷಾಕು ತೊಟ್ಟ ವ್ಯಕ್ತಿಯೂ ಅಲ್ಲಿದ್ದಾನೆ. ಕೊರಳು ಬೆರಳುಗಳನ್ನು ಚಿನ್ನದಿಂದ ಸಿಂಗರಿಸಿಕೊಂಡ ರಿಯಲ್ ಎಸ್ಟೇಟ್ ಉದ್ಯಮಿಯೂ ಇದ್ದಾನೆ. ಪುಟ್ಟ ಶಾಲೆಯೊಂದರ ಬಿತ್ತುಗಳು ದೇಶವನ್ನೂ ದಾಟಿ ಎಲ್ಲೆಲ್ಲೋ ಚಿಗುರಾಗಿ ಹೂವಾಗಿ ಹಣ್ಣಾಗಿ ನಳನಳಿಸುತ್ತಿವೆ...

ಆ ಕ್ಷಣ...

ತೆನೆ ತೂಗಿ ನಿಂತ ಫಸಲನ್ನು ನೋಡಿ ಕಣ್ಣುಗಳಲ್ಲಿ ಕಾಮನಬಿಲ್ಲು ತುಂಬಿಕೊಳ್ಳುವ ರೈತನ ಪರಿಸ್ಥಿತಿ ಶಿಕ್ಷಕರದು. ತಾವು ಅಕ್ಷರ ತಿದ್ದಿಸಿದ ಮಕ್ಕಳು, ತಮ್ಮ ನಿರೀಕ್ಷೆಗಳೆಲ್ಲವನ್ನೂ ಮೀರಿ ಏನೆಲ್ಲಾ ಆಗಿರುವ ಕ್ಷಣ ಕಣ್ಣೆದುರು ಸಾಕ್ಷಾತ್ಕಾರಗೊಳ್ಳುವುದಿದೆಯಲ್ಲ, ಅದಕ್ಕಿಂತಲೂ ಮಿಗಿಲಾದ ಅಮೃತಗಳಿಗೆ ಗುರುವಿನ ಬಾಳಿನಲ್ಲಿ ಬರುವುದು ಸಾಧ್ಯವಿದೆಯೇ?

ಈಗ, ಏನೆಲ್ಲ ಪೋಷಾಕುಗಳಲ್ಲಿ ನಿಂತಿದ್ದರೂ, ಆ ಪೋಷಾಕುಗಳ ಹಿಂದಿರುವುದು ಅದೇ ಮಕ್ಕಳು. ಅದೇ ಗೌರವ, ಅದೇ ವಿನಯ ಹಾಗೂ ಗುರುಗಳ ಬಗ್ಗೆ ಪ್ರಯತ್ನಪೂರ್ವಕವಾಗಿ ಆವಾಹಿಸಿಕೊಂಡ ಅಂದಿನ ಭಯ.

ಸಿಹಿಮಾತು, ಸಿಹಿಯುಣಿಸು, ಆ ಕ್ಷಣ ಎಲ್ಲವೂ ಸಿಹಿ. ಅದು ಗುರುಗಳಿಗೆ ಮಣಿಯುವ ಸಮಯ. ಉಡುಗೊರೆ ನೀಡಿ ಗೌರವಿಸುವ ಕ್ಷಣ.

ಗುರುಗಳಿಗೆ ಗೌರವ ಸಂದರಷ್ಟೇ ಸಾಕೆ? ತಾವು ಕಲಿತ ಶಾಲೆಯ ಕಟ್ಟಡ ಜೀರ್ಣವಾಗಿದೆ. ಆ ಕಟ್ಟಡಗಳಲ್ಲೇ ಪುಟ್ಟ ಪುಟ್ಟ ಮಕ್ಕಳ ಕನಸುಗಳಿಗೆ ಕಾವು ದೊರೆಯುತ್ತಿದೆ. ಶಾಲೆಗೆ ಹೊಸ ರೂಪು ನೀಡುವ ಸಂಕಲ್ಪ ಹಳೆಯ ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳುವುದಕ್ಕೆ ಹೆಚ್ಚು ಸಮಯ ಬೇಕಾಗುವುದಿಲ್ಲ. ‘ಬನ್ನಿರೈ ಬನ್ನಿರೈ...’ ಎಂದು ಪಂತುಲು ಮೇಷ್ಟ್ರ ಶಿಷ್ಯವೃಂದ ಒಂದಾಗಿ ಗುರುಮನೆಯನ್ನು ಕಟ್ಟಿಕೊಟ್ಟಂತೆ, ವರ್ತಮಾನದಲ್ಲಿ ಹಳೆಯ ವಿದ್ಯಾರ್ಥಿಗಳಿಂದ ಹೊಸ ರೂಪು ಪಡೆಯುತ್ತಿರುವ ಶಾಲೆಗಳೂ ಇವೆ. ಹೀಗೆ, ಹಳೆಯ ವಿದ್ಯಾರ್ಥಿಗಳಿಂದ ಹೊಸ ಸ್ವರೂಪ ಪಡೆದ ಶಾಲೆಗಳ ಕಥನಗಳನ್ನು ಯಾರಿಗಾದರೂ ಸಂಕಲಿಸುವುದು ಸಾಧ್ಯವಾದರೆ, ಆ ಕಥನ ಗುರು–ಶಿಷ್ಯ ಪರಂಪರೆಯ ಅಪೂರ್ವ ಕಥನವಾಗುವುದರ ಜೊತೆಗೆ, ಕರ್ನಾಟಕದ ಸರ್ಕಾರಿ ಶಾಲೆಗಳ ಅಧ್ಯಯನವೂ ಆದೀತು.

ಮೂಡಲಗಿಯ ಎಸ್.ಎಸ್.ಆರ್. ಪ್್ರೌಢಶಾಲೆಯ 1982–83ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಸಮ್ಮಿಲನ

‘ಮೊದಲು ಮೀಟರ್ ಕಡ್ಡಿ ಸರಿ ಇರಬೇಕು’

ನಾನು ಯುವರಾಜ ಕಾಲೇಜಿನಲ್ಲಿ ಬಿ.ಎಸ್‌ಸಿ ಓದುತ್ತಿದ್ದಾಗ ಪ್ರೊ.ಸುಜನಾ ನನ್ನ ಗುರುಗಳಾಗಿದ್ದರು. ನಮ್ಮ ಕನ್ನಡದ ಹಾಗೂ ಮೈಸೂರು ವಿಶ್ವವಿದ್ಯಾಲಯದ ಬೆಸ್ಟ್ ಮೈಂಡ್ಸ್‌ಗಳಲ್ಲಿ ಅವರೊಬ್ಬರು. ನಮಗೆ ಕನ್ನಡ ಸಾಹಿತ್ಯದಲ್ಲಿ ಅಗಾಧವಾದ ಅಭಿರುಚಿ, ಪ್ರೀತಿಯನ್ನು ಮೂಡಿಸಿದವರು.

ಸದಾ ಅವರೊಂದು ಮಾತು ಹೇಳುತ್ತಿದ್ದರು– ‘ನೋಡು ಮರಿ, ಬಟ್ಟೆಯನ್ನು ಅಳೆಯುವ ಮೀಟರ್ ಕಡ್ಡಿಯು ಮೊದಲು ನೂರು ಸೆಂಟಿಮೀಟರ್ ಇರಬೇಕಪ್ಪಾ’ ಅಂತ. ಇನ್ನೊಂದನ್ನು ಅಳೆಯುವುದಕ್ಕೆ ಮೊದಲು ತನ್ನನ್ನು ನಾನು ಅಳೆದುಕೊಂಡಿರಬೇಕು. ತಾನು ಕಡಿಮೆಯೋ ಉದ್ದವೋ ಇದ್ದರೆ ಎಲ್ಲವನ್ನೂ ಅದು ತನ್ನಂತೆಯೇ, ಕಡಿಮೆಯಾಗಿ, ಉದ್ದಕ್ಕೇ ಅಳೆಯುತ್ತದೆ. ಆದ್ದರಿಂದ ಬೇರೆಯವರನ್ನು ಅಳೆಯುವಾಗ ನಿಮ್ಮನ್ನು ನೀವು ಮೊದಲು ಅಳತೆ ಮಾಡಿಕೊಂಡಿರುವಿರಾ ಎಂಬುದನ್ನು ನೋಡಿಕೊಳ್ಳಿ.

ಇದು ಬಹಳ ತಾತ್ವಿಕವಾದ ಮತ್ತು ಪರಿಪೂರ್ಣವಾದ ಮಾತು. ಈ ಮಾತು ನನ್ನನ್ನು ಬಹುವಾಗಿ ಪ್ರಭಾವಿಸಿದೆ.

ಪ್ರೊ.ಎಂ.ಕೃಷ್ಣೇಗೌಡ, ನಗೆಮಾತುಗಾರ

‘ಪ್ರತಿಯೊಬ್ಬರಲ್ಲೂ ಗುರುಗಳನ್ನು ಕಾಣುತ್ತೇನೆ’

ನನಗೆ ಪ್ರತಿಯೊಬ್ಬರಲ್ಲೂ ಗುರು ಕಾಣಿಸುತ್ತಾರೆ. ಮನೆಯಲ್ಲಿ ತಂದೆ–ತಾಯಿ ಗುರುವಿನ ಸ್ಥಾನದಲ್ಲಿದ್ದಾರೆ. ನನ್ನ ಜೀವನದಲ್ಲಿ ನಾನು ಸರಿ ಮಾರ್ಗದಲ್ಲಿ ಹೆಜ್ಜೆ ಇಡಲು ಪ್ರೇರಣೆ ನೀಡುತ್ತಿರುವವರು ನನ್ನ ಸಂಗೀತದ ಶಿಕ್ಷಕರಾದ ಮೈಸೂರಿನ ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್‌ನ ಸುನಿತಾ ಚಂದ್ರಕುಮಾರ್. ನಾನು ಇವರನ್ನು ಮೇಷ್ಟ್ರು ಎಂದೇ ಕರೆಯುತ್ತೇನೆ. ಅವರೊಂದಿಗೆ ಎಂಟು ವರ್ಷಗಳ ಒಡನಾಟ ನನಗಿದೆ. ಇವರು ಕೇವಲ ಸಂಗೀತದ ಪಾಠ ಮಾಡುವ ಗುರುಗಳಾಗದೆ ಜೀವನಕ್ಕೆ ಬೇಕಾದ ಅಂಶಗಳನ್ನು ಹೇಳಿಕೊಟ್ಟವರು. ಕೆಲಸ ಎಷ್ಟು ಅಚ್ಚುಕಟ್ಟಾಗಿರಬೇಕು, ಜೀವನದಲ್ಲಿ ಹೇಗೆ ಶಿಸ್ತಿನಿಂದ ಇರಬೇಕು ಮುಂತಾದ ವಿಷಯಗಳನ್ನು ಕಲಿಸಿದವರು. ಇವೆಲ್ಲವೂ ನನ್ನ ಸಿನಿಪಯಣಕ್ಕೂ ಸಹಾಯವಾಗಿದೆ. ಕನ್ನಡವನ್ನು ಪ್ರೀತಿಸಲು, ಕನ್ನಡದ ಅಕ್ಷರಗಳನ್ನು, ಪದಗಳನ್ನು ಮುದ್ದು ಮಾಡಲು ಕಲಿಸಿದವರು ಇವರು. ಸಿನಿಮಾ ಕ್ಷೇತ್ರದಲ್ಲಿ ನನಗೆ ಗುರುಗಳಾದವರು ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದ ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ.

ಅಂಕಿತಾ ಅಮರ್, ನಟಿ

‘ಸಮಾಜವೇ ಬೆಸ್ಟ್ ಟೀಚರ್’

ನನ್ನ ವ್ಯಕ್ತಿತ್ವ ರೂಪಿಸುವಲ್ಲಿ ಮತ್ತು ಐಎಎಸ್ ಅಧಿಕಾರಿಯಾಗಿ ನಾಗರಿಕ ಸೇವೆ ಮಾಡಲು ಅವಕಾಶ ಸಿಕ್ಕಿರುವುದು ಕೂಡ ಸಮಾಜದಿಂದ ಕಲಿತ ಪಾಠಗಳಿಂದಲೇ. ಹೀಗಾಗಿ ನನ್ನ ಪಾಲಿಗೆ ಸಮಾಜವೇ ‘ಬೆಸ್ಟ್ ಟೀಚರ್’.

ಹುಟ್ಟಿನಿಂದ ಸಾಯುವವರೆಗೆ ಬದುಕು ಅನೇಕ ಪಾಠಗಳನ್ನು ಕಲಿಸುತ್ತದೆ. ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಹಸನಾಗುತ್ತದೆ. ಜತೆಗೆ ಬೇರೆಯವರ ಬದುಕನ್ನೂ ಹಸನುಗೊಳಿಸಲು ಸಾಧ್ಯವಾಗುತ್ತದೆ.

ನಾನು ಶಾಲಾ ದಿನಗಳಲ್ಲಿ ಹುಟ್ಟೂರು ಕೆಂಬೋಡಿಯಿಂದ ಕೋಲಾರಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ನಿತ್ಯ ಸಂಚರಿಸುತ್ತಿದ್ದೆ. ಪ್ರಯಾಣದಲ್ಲಿ ವಿವಿಧ ಕ್ಷೇತ್ರಗಳ ಜನರು ಭೇಟಿಯಾಗುತ್ತಿದ್ದರು. ಅವರ ಹಿನ್ನೆಲೆ, ಕತೆ, ಪರಿಶ್ರಮ, ಹೋರಾಟವನ್ನು ಕೇಳಿದಾಗ ನಾವು ಕೂಡ ಏನಾದರೂ ಸಾಧಿಸಬೇಕು, ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು ಅನಿಸುತ್ತಿತ್ತು. ಕೆಳ ಮಧ್ಯಮ ವರ್ಗದಿಂದ ಬಂದ ನನ್ನಂಥವರಿಗೆ ಜೀವನಸ್ತರವನ್ನು ಉತ್ತಮಗೊಳಿಸಲು ಇದ್ದ ಆಸರೆಯೇ ಶಿಕ್ಷಣ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬದುಕಿನ ಪಾಠ ಕಲಿಸಿದ ಎಲ್ಲರಿಗೂ ಕೃತಜ್ಞಳಾಗಿದ್ದೇನೆ.

ಕೆ.ಆರ್. ನಂದಿನಿ, ಐಎಎಸ್, ಸಿಇಒ, ಮಂಡ್ಯ ಜಿಲ್ಲಾ ಪಂಚಾಯಿತಿ

ಹಂದಿಗುಂದದ ಬಸವನಗರದಲ್ಲಿ ಶ್ರೀ ವಿ.ಪಿ. ಮಠ ಮಾರ್ಗದ ಉದ್ಘಾಟನೆ — ಚಿತ್ರಗಳು: ಸಿ.ಎಸ್.ಹಿರೇಮಠ

ಗುರುವಿನ ಮಾರ್ಗದಲ್ಲಿ...

• ಸಂತೋಷ ಈ. ಚಿನಗುಡಿ

ಪುಷ್ಪಾಲಂಕೃತ ಸಾರೋಟು, ಅದರ ಮುಂದೆ ವಾದ್ಯಮೇಳಗಳ ನಿನಾದ, ಹಾಡು–ಕುಣಿತ, ಇಡೀ ಊರಿನ ಜನ ಒಂದೇ ಕಡೆ ಸೇರಿ ನಿರ್ಮಾಣಿಸಿದ ಸಂಭ್ರಮ...

ಇದು ಯಾವುದೋ ಜಾತ್ರೆ, ಉತ್ಸವ ಅಥವಾ ಸಾಹಿತ್ಯ ಸಮ್ಮೇಳನದ ಮೆರವಣಿಗೆಯಲ್ಲ. ಪಾಠ ಕಲಿಸಿ ಬದುಕಿಗೆ ದಾರಿ ತೋರಿಸಿದ ನೆಚ್ಚಿನ ಗುರುವಿಗೆ ವಿದ್ಯಾರ್ಥಿಗಳು, ಊರ ಜನರು ನಿವೃತ್ತಿ ಸಂದರ್ಭದಲ್ಲಿ ಬೀಳ್ಕೊಟ್ಟ ಪರಿ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಹಂದಿಗುಂದ ಶ್ರೀ ಸಿದ್ಧೇಶ್ವರ ಕನ್ನಡ ಪ್ರೌಢಶಾಲೆಯಲ್ಲಿ (ಎಸ್‌ವಿಎಸ್) ಮೂವತ್ತೂರು ವರ್ಷ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ವಿಜಯಕುಮಾರ ಪಂಚಾಕ್ಷರಿ ಮಠ (ವಿ.ಪಿ.ಮಠ) ಅವರ ಹೆಸರು ಸುತ್ತಲಿನ ಹತ್ತೂರುಗಳಲ್ಲಿ ಮನೆಮಾತು.

ಇದಷ್ಟೇ ವಿಷಯ ಅಲ್ಲ; ಈ ಗ್ರಾಮದ ಮುಖ್ಯರಸ್ತೆಗೆ ‘ಶ್ರೀ ವಿ.ಪಿ.ಮಠ ಮಾರ್ಗ’ ಎಂದು ನಾಮಕರಣ ಮಾಡಿದ್ದಾರೆ. ಊರಿನ ಜನರ ಸಮ್ಮುಖದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಸಾಮಾನ್ಯ ಸಭೆ ಕರೆದು ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಮುಂದೆ ಯಾವುದೇ ಪರಿಸ್ಥಿತಿಯಲ್ಲೂ ಈ ಹೆಸರು ಬದಲಾವಣೆ ಮಾಡಬಾರದು ಎಂಬ ನಿರ್ಧಾರಕ್ಕೂ ಬಂದಿದ್ದಾರೆ. ಅಷ್ಟರಮಟ್ಟಿಗೆ ಸಾಮಾನ್ಯ ಶಿಕ್ಷಕರೊಬ್ಬರ ಪ್ರಭಾವಳಿ ಊರನ್ನು ಆವರಿಸಿಕೊಂಡಿದೆ.

11ನೇ ಪುಟಕ್ಕೆ...

ಮುಖ್ಯಶಿಕ್ಷಕನೇ ಗಂಟೆ ಬಾರಿಸುವವ...



‘ಕೆಲ ವರ್ಷಗಳ ಹಿಂದೆ ಶಾಲೆಯ ಡಿ ದರ್ಜೆ ನೌಕರ ನಿವೃತ್ತರಾದರು. ಶಾಲೆ ಗಂಟೆ ಬಾರಿಸಲು ಯಾರೂ ಇಲ್ಲವಾದರು. ನಾನೇ ಗಂಟೆ ಬಾರಿಸಲು ಶುರು ಮಾಡಿದೆ. ಅದನ್ನು ಕಂಡು ಉಳಿದ ಶಿಕ್ಷಕರು ಪಾಳಿ ಪ್ರಕಾರ ಗಂಟೆ ಬಾರಿಸಲು ಶುರು ಮಾಡಿದರು. ಸಮಸ್ಯೆಗಳನ್ನು ಹೀಗೂ ಪರಿಹರಿಸಬಹುದು’ ಎಂದು ವಿ.ಪಿ.ಮಠ ನಕ್ಕರು.

‘ಒಂದು ದಿನವೂ ಶಾಲೆ ಅವಧಿಯಲ್ಲಿ ಕಾಂಪೌಂಡ್ ದಾಟಿ ಹೋಗಿಲ್ಲ. ಚಹಾದ ಅಂಗಡಿಗಳಲ್ಲಿ ಹರಟೆ ಹೊಡೆದಿಲ್ಲ. ಮೀಸಲಿದ್ದ ರಜೆ ಪಡೆದಿಲ್ಲ. ಒಂದು ದಿನವೂ ಪ್ರಾರ್ಥನೆಗೆ ತಡವಾಗಿ ಬಂದಿಲ್ಲ. ಹೀಗಾಗಿ, ಮಕ್ಕಳು– ಶಿಕ್ಷಕರೂ ಈ ಶಿಸ್ತು ಪಾಲಿಸಿದರು’ ಎನ್ನುತ್ತಾರೆ.

‘ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪಾಲಕರ ಸಭೆಯನ್ನು ಪ್ರತಿ ತಿಂಗಳು ನಡೆಸುತ್ತ ಬಂದೆ. ಈಗ ಅದನ್ನೇ ಸರ್ಕಾರ ಕಡ್ಡಾಯ ಮಾಡಿದೆ. ನಾನು ಈ ಸಭೆಯನ್ನು ಎರಡು ದಶಕ ನಿರಂತರ ನಡೆಸಿಕೊಂಡು ಬಂದೆ’ ಎಂದು ಅವರು ಹೇಳುತ್ತಾರೆ.

ರೀಲ್ಸ್ ಟೀಚರ್ ಸಂಧ್ಯಾ ಕಾಮತ್

• ಅಭಿಲಾಷ್ ಪಿ.ಎಸ್.

‘ಪೇಪರ್ ತಿದ್ದಿ ಆಗಿದೆ ಆಯ್ತಾ...ಎಷ್ಟು ಮಾರ್ಕ್ಸ್ ಬಂದಿದೆ ಅಂತ ನಿಮ್ಮ ಬಂಡವಾಳ ಎಲ್ಲಾ ಗೊತ್ತಾಗ್ತದೆ...ನಿಮ್ಮ ಗ್ರಹಚಾರ ಎಲ್ಲಾ ಬಿಡ್ಸಿ ಬಿಡ್ತೇನೆ...ಎಲ್ಲಿ ಆ ಸ್ಕೇಲ್...ಗಣೇಶ..ಬಾರಾ ಇಲ್ಲಿ...ಸಾಕಾ 30....ದಡ್ಡಶಿಖಾಮಣಿ ತಂದು...ಸುಧಾಕರ 60...ಬರ್ಬಾರ್ತಾ ರಾಯರ ಕುದುರೆ ಕತ್ತೆ ಆಗ್ತಾ ಉಂಟು...ಸುರೇಶನ ಜೊತೆ ತಿರ್ಗುದು ಸ್ವಲ್ಪ ಕಮ್ಮಿ ಮಾಡು ಆಯ್ತಾ..’

80–90ರ ದಶಕಗಳಲ್ಲಿ ಪ್ರಾಥಮಿಕ, ಪ್ರೌಢಶಾಲೆಗೆ ಹೋಗುವ ಸಂದರ್ಭದಲ್ಲಿ ಶಿಕ್ಷಕರಿಂದ ಈ ರೀತಿ ಬೈಗುಳ ತಿನ್ನದೇ ಇರುವವರು ವಿರಳ. ಉತ್ತರ ಪತ್ರಿಕೆ ಕೈಗೆ ಸಿಕ್ಕ ದಿನಗಳನ್ನು ನೆನಪಿಸಿಕೊಂಡರೆ ಈಗಲೂ ಮೈನಡುಗುತ್ತದೆ. ಬೆನ್ನು, ಅಂಗೈಯಲ್ಲೊಮ್ಮೆ ಬಿಸಿಯ ಅನುಭವವಾಗುತ್ತದೆ. ಆ ದಿನಗಳನ್ನು ಮೆಲುಕು ಹಾಕಿದಾಗ ಮುಗುಳ್ನಗೆಯೊಂದು ಅರಿವಿಲ್ಲದೇ ಹೊಮ್ಮಿರುತ್ತದೆ. ‘ನಾವು ಹೇಗಿದ್ವಿ ನೋಡು’ ಎನ್ನುವ ಉದ್ಗಾರ ಬರುತ್ತದೆ. ಇಂತಹ ಶಾಲಾ ದಿನಗಳನ್ನು ರೀಲ್ಸ್ ಮೂಲಕ ಮತ್ತೆ ಮತ್ತೆ ನೆನಪಿಸುತ್ತಿರುವವರು ಮುಲ್ಕಿಯ ಸಂಧ್ಯಾ ಕಾಮತ್. ಇವರು ಮಣಿಪಾಲದ ಮಾಧವ ಕೃಪ ಶಾಲೆಯಲ್ಲಿ ಕನ್ನಡ ಶಿಕ್ಷಕಿ.

ಇವರು ಕನ್ನಡ, ಸಂಸ್ಕೃತ ಮತ್ತು ಹಿಂದಿಯಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಮಂಗಳೂರಿನ ಕೆನರಾ ಸಿಬಿಎಸ್‌ಇ ಶಾಲೆ, ಡೆಲ್ಲಿ ಪಬ್ಲಿಕ್ ಶಾಲೆ, ಕಿನ್ನಿಗೋಳಿ ರೋಟರಿ ಶಾಲೆಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

‘ನಾನು ರೀಲ್ಸ್ ಲೋಕಕ್ಕೆ ಕಾಲಿಟ್ಟಿದ್ದೇ ಶಿಕ್ಷಕರ ದಿನದಂದು. 2023ರಲ್ಲಿ ಶಿಕ್ಷಕರಿಗೆ ಸ್ಪರ್ಧೆ ಆಯೋಜಿಸಲಾಗಿತ್ತು ಸ್ಕಿಟ್, ಪದ್ಯ ಅಥವಾ ನೃತ್ಯದ ವಿಡಿಯೊ ಕಳುಹಿಸಬೇಕಿತ್ತು. ನಾನು ಹಾಡು ಹಾಡಿ ಕಳುಹಿಸಿದ್ದೆ. ಹೀಗೆ ಮುಂದುವರಿದು ಮಕ್ಕಳಿಗೆ ಉತ್ತರ ಪತ್ರಿಕೆ ಕೊಡುವ ಶಿಕ್ಷಕಿಯಂತೆ ವಿಡಿಯೊ ಮಾಡಿದೆ. ಶಾಲಾ ದಿನಗಳಲ್ಲಿ ಕೈಯಲ್ಲೊಂದು ಅಡಿಕೋಲೋ, ಬೆತ್ತವೋ ಹಿಡಿದು ಶಿಕ್ಷಕರು ಉತ್ತರ ಪತ್ರಿಕೆಯನ್ನು ನೀಡಿದ ದಿನ ಎಲ್ಲರಿಗೂ ನೆನಪಿರುತ್ತದೆ. ಆ ವಿಡಿಯೊವನ್ನು ಸಾಮಾಜಿಕ ಮಾಧ್ಯಮಕ್ಕೆ ಹಾಕಿದೆ. ಅಂದು ಸಂಜೆ ಮನೆಗೆ ಬಂದ ವೇಳೆಗೆ ಈ ವಿಡಿಯೊ ವೈರಲ್ ಆಗಿ, ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ನನಗೇ ಕಳುಹಿಸುತ್ತಿದ್ದರು’ ಎನ್ನುತ್ತಾ ತಮ್ಮ ಮೊದಲ ಹೆಜ್ಜೆಯ ನೆನಪು ಮಾಡಿಕೊಂಡರು ಸಂಧ್ಯಾ.

‘ಏತಕ್ಕಾಗಿ ಈ ಮಾದರಿಯ ಕಾಂಟೆಂಟ್‌ಗಳನ್ನೇ ಆಯ್ಕೆ ಮಾಡಿಕೊಂಡಿರಿ’ ಎಂದು ಕೇಳಿದರೆ, ‘ದಿನನಿತ್ಯದ ಜೀವನವನ್ನು ವ್ಲಾಗ್ ಮಾಡುವವರು ಬಹಳಷ್ಟು ಜನರಿದ್ದಾರೆ. ನಾನು ಮಾಡಿದ ಮೊದಲ ರೀಲ್‌ಗೆ ಸಿಕ್ಕ ಪ್ರತಿಕ್ರಿಯೆ ನೋಡಿ ಈ ಮಾದರಿಯ ರೀಲ್‌ಗಳನ್ನೇ ಮಾಡಲು ನಿರ್ಧರಿಸಿದೆ. ಜನರಿಗೆ ಕಾನ್ಸೆಪ್ಟ್ ಬಹಳ ಇಷ್ಟವಾಗಿತ್ತು. ನನ್ನ ಫಾಲೊವರ್ಸ್ ಬಹುತೇಕ 40–60 ವರ್ಷ ಪ್ರಾಯದವರು. ಇವರೆಲ್ಲರೂ ಬಹುತೇಕ 70–90ರ ದಶಕದವರು. ಅವರೆಲ್ಲರೂ ಕಾಮೆಂಟ್‌ನಲ್ಲಿ ತಮ್ಮ ಶಿಕ್ಷಕರನ್ನು ನೆನಪಿಸಿಕೊಳ್ಳುವಾಗ ಇದಕ್ಕಿಂತ ಇನ್ನೇನು ಬೇಕು ಎಂದೆನಿಸಿತು. ಪ್ರತಿಯೊಂದು ವಿಷಯವನ್ನೂ ನಾನು ಶಿಕ್ಷಕಿಯಾಗಿ ರೀಲ್‌ನಲ್ಲಿ ಹೇಳಬಹುದು. ಹೀಗಾಗಿ ಇದರಲ್ಲೇ ಮುಂದುವರಿಯೋಣ ಎನಿಸಿತು. ನಾನು ಹೆಚ್ಚಾಗಿ ಹಳೆಯ ದಿನಗಳನ್ನು ಮೆಲುಕು ಹಾಕುವ ವಿಡಿಯೊಗಳನ್ನೇ ಮಾಡುತ್ತೇನೆ. ಆಯಾ ಸಂದರ್ಭದಲ್ಲಿ ಇರುವ ಹಬ್ಬಗಳು, ದಿನಗಳು, ಘಟನೆಗಳನ್ನು ಆಧರಿಸಿಕೊಂಡು ವಿಡಿಯೊ ಮಾಡುತ್ತಾನೆ. ನನ್ನ ಮೊದಲ ರೀಲ್‌ನಲ್ಲಿ ಹೇಳಿದ ಸಂಭಾಷಣೆ ಯೆಲ್ಲವೂ ನನ್ನ ಗುರುಗಳು ನಮಗೆ ತರಗತಿಯಲ್ಲಿ ಹೇಳಿದ ಮಾತುಗಳೇ! ನಾನು ಇದೀಗ ಶಿಕ್ಷಕಿಯಾಗಿ ಅದೇ ಬೈಗುಳವನ್ನೇ ವಿದ್ಯಾರ್ಥಿಗಳಿಗೆ ಹೇಳುತ್ತಿರುತ್ತೇನೆ’ ಎಂದು ನಕ್ಕರು ಸಂಧ್ಯಾ.

ಕಾಲ ಬದಲಾಗಿದೆ. ಮಕ್ಕಳ ಬಾಯಲ್ಲೂ ‘ಬಂದರೋ ಬಂದರೋ ಭಾವ ಬಂದರೋ..’ ಹಾಡು ಬರುತ್ತಿದೆ. ಇದನ್ನೂ ಬಳಸಿಕೊಂಡು ಸಂಧ್ಯಾ ರೀಲ್ಸ್ ಮಾಡಿದ್ದು, ‘ಬಂದದ್ದು ಭಾವ ಅಲ್ಲ...ಮಧ್ಯಾವಧಿ ಪರೀಕ್ಷೆ...ಪರೀಕ್ಷೆಯಲ್ಲಿ ಅಂಕ ಕಮ್ಮಿ ಬಂದರೆ ಭಾವ ಅಲ್ಲ, ಅಪ್ಪಸ ಶಾಲೆಗೆ ಬರ್ಬೇಕು’ ಎಂದು ಹೇಳಿ ನಗಿಸುತ್ತಾರೆ.

‘ನನ್ನ ತಂದೆ ನಿವೃತ್ತ ಮುಖ್ಯೋಪಾಧ್ಯಾಯರು. ಅವರನ್ನೂ ನೋಡಿ ಹಲವು ವಿಷಯಗಳನ್ನು ಕಲಿತಿದ್ದೇನೆ. ಇದನ್ನೂ ರೀಲ್ ಮಾಡುವ ಸಂದರ್ಭದಲ್ಲಿ ಬಳಸಿಕೊಂಡಿದ್ದೇನೆ. ಹಲವು ಗುರುಗಳು ನನಗೆ ಪಾಠ ಮಾಡಿದ್ದಾರೆ. ಅದರಲ್ಲಿ ಹೈಸ್ಕೂಲ್‌ನಲ್ಲಿ ನನಗೆ ಕನ್ನಡ ಕಲಿಸಿದ ಕೇಶವ ಮಾಸ್ತ್ರು ನನ್ನ ನೆಚ್ಚಿನ ಶಿಕ್ಷಕರು. ನಾನು ಈಗ ಕನ್ನಡ ಶಿಕ್ಷಕಿಯಾಗಿದ್ದೇನೆ ಎಂದರೆ ಅವರೇ ಸ್ಫೂರ್ತಿ. ಜೊತೆಗೆ ತಂದೆಯೇ ದೊಡ್ಡ ಗುರು’ ಎನ್ನುತ್ತಾ ತಮ್ಮ ಮುಂದಿನ ಯೋಜನೆಗಳತ್ತ ಮಾತು ಹೊರಳಿಸಿದರು.

11ನೇ ಪುಟಕ್ಕೆ...

‘ಪ್ರೇಕ್ಷಕರೇ ನನ್ನ ತರಗತಿಯ ಮಕ್ಕಳು’

‘ನನ್ನ ರೀಲ್ಸ್‌ಗೆ ಕಾಮೆಂಟ್‌ಗಳು ಸಕಾರಾತ್ಮಕವಾಗಿಯೇ ಬಂದಿವೆ. ಬಹುತೇಕರು ಮಕ್ಕಳನ್ನು ಏಕೆ ತೋರಿಸುವುದಿಲ್ಲ ಎಂದು ಕೇಳುತ್ತಾರೆ. ನನಗೆ ತರಗತಿಯ ಒಳಗೆ ಈ ರೀತಿ ರೀಲ್ಸ್ ಮಾಡಲು ಇಷ್ಟವಿಲ್ಲ. ಮಕ್ಕಳನ್ನು ವಿಡಿಯೊಗೆ ಬಳಸಿಕೊಂಡರೆ ಶಾಲೆ ಒಳಗೆ ಕಲಿಕೆಗೆ ಅಡ್ಡಿಯಾಗುತ್ತದೆ. ನನ್ನ ಮನಸ್ಸೂ ವಿಡಿಯೊಗೇ ಹೋಗುತ್ತದೆ. ಹೀಗಾಗಿ ನನ್ನೆಲ್ಲಾ ವಿಡಿಯೊಗಳಿಗೆ ಮನೆ, ಶಾಲೆಯ ಹೊರಗಿನ ಆವರಣವೇ ವೇದಿಕೆ. ನನಗೆ ಪ್ರೇಕ್ಷಕರೇ ತರಗತಿಯೊಳಗಿನ ಮಕ್ಕಳು. ಅವರೇ ಮಕ್ಕಳಾಗಿ ಕುಳಿತು ಈ ವಿಡಿಯೊ ನೋಡುತ್ತಾ ತಮ್ಮ ಹಳೆಯ ದಿನಗಳಿಗೆ ಹೋಗಿರುತ್ತಾರೆ. ಕಾಮೆಂಟ್‌ನಲ್ಲಿಯೂ ನನ್ನನ್ನು ಟೀಚರ್ ಎಂದೇ ಹಲವರು ಕರೆಯುತ್ತಾರೆ. ಅವರು ನನ್ನಲ್ಲಿ ಅವರ ಗುರುಗಳನ್ನು ಕಾಣುತ್ತಿದ್ದಾರೆ. ಅವರು ಹೇಳಿದ ನೆನಪುಗಳನ್ನು ನಾನು ರೀಲ್ಸ್‌ನ ಕಾನ್ಸೆಪ್ಟ್‌ಗಳಾಗಿಯೂ ಬಳಸಿಕೊಂಡಿದ್ದೇನೆ. ಜೊತೆಗೆ ನನ್ನ ಕರಾವಳಿಯ ಕನ್ನಡ ಭಾಷಾ ಶೈಲಿ ಅಡ್ಡಿಯಾಗಲಿಲ್ಲ. ಬೆಂಗಳೂರು, ಉತ್ತರ ಕರ್ನಾಟಕದ ಜನರೂ ನನ್ನ ಕನ್ನಡವನ್ನು ಇಷ್ಟಪಟ್ಟು ಸ್ವೀಕರಿಸಿದ್ದಾರೆ’ ಎನ್ನುತ್ತಾರೆ ಸಂಧ್ಯಾ.

ನೃತ್ಯದ ಲಾಲಿತ್ಯ ತಾಯಿ-ಮಗಳ ಸಾಂಗತ್ಯ

ಕರ್ನಾಟಕದ ಭರತನಾಟ್ಯ ಕಲಾವಿದೆಯರ ಪೈಕಿ ಅನೇಕರು ತಾಯಿ–ಮಗಳ ಕಳ್ಳುಬಳ್ಳಿ ಸಂಬಂಧದವರು. ಈ ಪೈಕಿ ಬಹುತೇಕರಿಗೆ ತಾಯಿಯೇ ಆರಂಭದ ಗುರು. ಕೆಲವರಿಗೆ ನಾಟ್ಯಪಯಣದ ಹಾದಿಯುದ್ದಕ್ಕೂ ಆಕೆಯೇ ಆಚಾರ್ಯೆ. ಆದರೆ ಆಧುನಿಕತೆಯ, ಪ್ರಯೋಗಶೀಲತೆಯ ಹಾದಿಯಲ್ಲಿ ಮಗಳನ್ನು ಮಾರ್ಗದರ್ಶಕಿಯಾಗಿಸಿಕೊಂಡಿರುವ ತಾಯಂದಿರೂ ಇದ್ದಾರೆ. ತಾಯಿಗೆ ಮಗಳು ನಟುವಾಂಗ ಆದ ಅಪರೂಪದ ಪ್ರಸಂಗಗಳಿಗೂ ನೃತ್ಯವೇದಿಕೆ ಸಾಕ್ಷಿಯಾಗಿದೆ. ಮಾತೆ–ಪುತ್ರಿಯರ ಇಂಥ 'ಕಲಾ ಸರಿತ್ ಸಾಗರ'ದ ಮೇಲೊಂದು ಮೆಲುಕು...

ಶ್ರೀಯಾ ಮತ್ತು ಸೌಮ್ಯಾ

• ವಿಕ್ರಂ ಕಾಂತಿಕೆರೆ

ಮಂಗಳೂರಿನಲ್ಲಿ ಈಚೆಗೆ ನಡೆದ ಕಲಾಪೋಷಕ, ಯುವ ಕಲಾವಿದ ಸ್ವರುಣ್ ರಾಜ್ ಅವರ ಸ್ಮರಣಾಂಜಲಿ ಕಾರ್ಯಕ್ರಮದ ಪ್ರಮುಖ ಭಾಗ, ನವದೆಹಲಿಯ ವಿದುಷಿ ಶುಭಾಮಣಿ ಮತ್ತು ಚೆನ್ನೈನ ವಿಜಯಕುಮಾರ್ ಅವರ ನೃತ್ಯ ಪ್ರದರ್ಶನ. ಶುಭಾಮಣಿ ಅವರ ಭರತನಾಟ್ಯದ ಕೆಲವು ಭಾಗಗಳಲ್ಲಿ ನಟುವಾಂಗ ಆಗಿದ್ದವರು ಅವರ ತಾಯಿ, ವಿದುಷಿ ಶಾರದಾಮಣಿ ಶೇಖರ್.

ಶುಭಾಮಣಿ

ಮಗಳಿಗೆ ತಾಯಿ ನಟುವಾಂಗ ಆಗುವ ಇಂಥ ಪ್ರಸಂಗಗಳು ವಿಶೇಷವೇನಲ್ಲ. ಈಚೆಗೆ, ತಾಯಿಗೆ ಮಗಳು ನಟುವಾಂಗ ಆಗುವುದು ಕೂಡ ಅಪರೂಪವೇನಲ್ಲ. ತಾಯಿ–ಮಗಳ ಸಾಂಗತ್ಯ ಇತ್ತೀಚಿನ ವರ್ಷಗಳಲ್ಲಿ ನೃತ್ಯದಲ್ಲಿ ಅಪ್ಪರ ಮಟ್ಟಿಗೆ ಗಟ್ಟಿಯಾಗಿ ಬೇರೂರಿದೆ. ಪರಂಪರೆ ಮತ್ತು ಹೊಸತನದ ಬೆಸುಗೆಯ ಕೊಂಡಿಯಾಗಿಯೂ ನೃತ್ಯರೂಪಕಗಳಲ್ಲಿ ಈ 'ಸಾಥ್–ಸಂಗತ್' ಮಿಳಿತವಾಗಿದೆ. ತೊದಲ್ನುಡಿಯುತ್ತ ಕೈ ಹಿಡಿದು ಅಡಿಯಿಟ್ಟ ಮಗಳು ಬೆಳೆದು ಗೆಜ್ಜೆಕಟ್ಟಿ ನೃತ್ಯಕ್ಕೆ ಹೆಜ್ಜೆ ಹಾಕಲು ಅಣಿಯಾಗುವುದಕ್ಕೆ ಸಾಕ್ಷಿಯಾದ, ಬಾಲಪಾಠ ಹೇಳಿಕೊಟ್ಟ ಅನೇಕ ವಿದುಷಿಯರಿಗೆ ಈಗ ಅದೇ ಮಗಳು ಹೊಸ ವಿಷಯಗಳನ್ನು ಕಲಿಸಿಕೊಡುವ ಗುರು. ಮಾನವ ಸಂಬಂಧಗಳಿಗೆ ಸಂಬಂಧಿಸಿದ ಪರಿಕಲ್ಪನೆಯ ನೃತ್ಯಸಂಯೋಜನೆಗಳಿಗೂ ಕೆಲವೊಮ್ಮೆ ಹೊಸಶೈಲಿಯ ಆವಿರ್ಭಾವಕ್ಕೂ ಈ ಸ್ಥಿತ್ಯಂತರ ಕಾರಣವಾಗಿದೆ.

ಅರೆಕಲ್ಲು ಮನೆಯಲ್ಲಿ ತಾಯಿ ಮತ್ತು ಅಜ್ಜಿಯ ಸಂಗೀತಾಸಕ್ತಿ ನೋಡುತ್ತ ಬೆಳೆದ ಮೈಸೂರಿನ ವಿದುಷಿ ಕೃಪಾ ಫಡ್ಕೆ ನೃತ್ಯ ಗುರುವಾಗಿ, ಸಂಯೋಜಕಿಯಾಗಿ ಹೆಸರು ಮಾಡಿದವರು. ಈಗ ಮಗಳು ಪೂಜಾ ಸುಗಮ್ ಜೊತೆ ಹೊಸ 'ಟ್ರೆಂಡ್'ಗೆ ಅವರು ಒಗ್ಗಿಕೊಂಡಿದ್ದಾರೆ. ಇವರಿಬ್ಬರದು ತಾಯಿ–ಮಗಳ ಸಂಬಂಧ ಮಾತ್ರವಲ್ಲ. ಒಬ್ಬರಿಗೊಬ್ಬರು ಗುರುವೂ ಆಗಿದ್ದಾರೆ, ಎಂ–ಡಾನ್ಸ್ ತರಗತಿಯಲ್ಲಿ 'ಕ್ಲಾಸ್‌ಮೇಟ್ಸ್' ಕೂಡ ಆಗಿದ್ದರು.

'ವಿದ್ವತ್‌ವರೆಗೆ ಪೂಜಾಗೆ ನಾನೇ ಪಾಠ ಮಾಡಿದ್ದು. ನನ್ನದು ಅಭಿನಯ ಪ್ರಧಾನವಾದ ಪಂದನಲ್ಲೂರು ಶೈಲಿ. ಮಗಳು ಸಂಗೀತವನ್ನೂ ಕಲಿತ ಕಾರಣ 'ಲಯಕಾರಿ'ಯಲ್ಲಿ ಪಳಗಿದ್ದಾಳೆ. ಚೆನ್ನೈ ಶೈಲಿಯಲ್ಲಿ ನಾಟ್ಯದ ವೇಗ ನಡೆಯನ್ನು ಕರಗತ ಮಾಡಿಕೊಂಡಿದ್ದಾಳೆ. ಕೆಲವು ಕಡೆಗಳಲ್ಲಿ ಜೊತೆಯಾಗಿ ಕಾರ್ಯಕ್ರಮ ನೀಡಿದ್ದು, ನೃತ್ಯ ನಾಟಕಗಳಲ್ಲೂ ಭಾಗವಹಿಸಿದ್ದೇವೆ. ಗುರು–ಶಿಷ್ಯ ನೃತ್ಯೋಲ್ಲಾಸ ಎಂಬ ಹೆಸರಿನಲ್ಲಿ ಯುಗಳ ನೃತ್ಯವನ್ನೂ ಮಾಡಿದ್ದೇವೆ. ನೃತ್ಯಗಿರಿ ಸಂಸ್ಥೆಯಲ್ಲಿ ಈಗ ಮಗಳೇ ನಟುವಾಂಗ' ಎಂದು ಹೇಳಿದರು ಸಂಸ್ಥೆಯ ಸ್ಥಾಪಕಿ ಕೃಪಾ ಫಡ್ಕೆ.

ಮಂಗಳೂರಿನ 'ನೃತ್ಯ ಸುಧಾ'ದ ವಿದುಷಿ ಸೌಮ್ಯಾ ಸುಧೀಂದ್ರ ಮತ್ತು ಮಗಳು ಶ್ರೀಯಾ ರಾವ್ ನಡುವಿನ ನೃತ್ಯಬಂಧದಲ್ಲಿ ಪುರಾಣ ಮತ್ತು ಇತಿಹಾಸದ ಮಹಿಳಾ ಪಾತ್ರಗಳನ್ನು ಪರಿಚಯಿಸುವ 'ಮಾತೃಜ' ಎಂಬ ರೂಪಕವೇ ಸಿದ್ಧವಾಗಿದೆ.

'ನಾನು ಬೆಳೆದ ಯಕ್ಷಗಾನದ ವಾತಾವರಣ ಮಗಳ ಮೇಲೆಯೂ ಪ್ರಭಾವ ಬೀರಿತು. ಹಸ್ತಗಳನ್ನು ಬೇಗನೇ ಕಲಿತಳು. ನನ್ನ ಜೊತೆ ಕುಳಿತು ನಾಟ್ಯಶಾಸ್ತ್ರದ ಶ್ಲೋಕಗಳನ್ನು ಕಂಠಪಾಠ ಮಾಡಿದಳು.

ಮೃದಂಗ ತರಗತಿಗೆ ಸೇರಿದ್ದರಿಂದ ನೃತ್ಯಕ್ಕೆ ಬೇಕಾದ ಲಯಗಳು, ಕೊನ್ನಕ್ಕೋಲ್ ಮುಂತಾದವುಗಳನ್ನು ಕರಗತ ಮಾಡಿಕೊಂಡಳು. ಇದೆಲ್ಲದರ ಪರಿಣಾಮವಾಗಿ ನನಗಿಂತ ಉತ್ತಮ ನಟುವಾಂಗ ಆಗಲು ಆಕೆಗೆ ಸಾಧ್ಯವಾಯಿತು. 'ಮಾತೃಜ'ದಲ್ಲಿ ಬರುವ 'ನೂಲಿನಂತೆ ಸೀರೆ, ಹೆತ್ತಬ್ಬೆಯ ನೆರಳಿನಂತೆ ತನಯೆ' ಎಂಬ ಸಾಲನ್ನು ಮೀರಿ ಆಕೆ ಬೆಳೆದಿದ್ದಾಳೆ. ಬಪ್ಪನಾಡು ಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ನನಗೇ ನಟುವಾಂಗ ಆಗಿದ್ದಾಳೆ' ಎನ್ನುತ್ತಾರೆ ಸೌಮ್ಯಾ.

ಪೂಜಾ ಮತ್ತು ಕೃಪಾ ಫಡ್ಕೆ

'ನನ್ನಿಂದ ನಾಟ್ಯದ ಆರಂಭಿಕ ಪಾಠ, ಗುರುಭಕ್ತಿಯನ್ನು ಆಕೆ ಕಲಿತಿರಬಹುದು. ಆದರೆ ಇತ್ತೀಚೆಗೆ ಆಕೆಯಿಂದ ನಾನು ಕಲಿತದ್ದೇ ಹೆಚ್ಚು. ಕೆಲವೊಂದು ಜೀವನ ಸಿದ್ಧಾಂತಗಳನ್ನು ನನಗೆ ಕಲಿಸಿದವಳು. ಮೂಗೂರು ಮತ್ತು ಪಂದನಲ್ಲೂರು ಶೈಲಿಯಲ್ಲಿ ಕಲಿತ ನಾನು ಈಗ ಮಗಳ ಜೊತೆ ಸೇರಿಕೊಂಡು ಶಾಸ್ತ್ರದ ಚೌಕಟ್ಟಿನಲ್ಲಿ ನನ್ನದೇ ಶೈಲಿಯೊಂದನ್ನು ರೂಢಿಸಿಕೊಂಡಿದ್ದೇನೆ' ಎನ್ನುತ್ತಾರೆ.

ಮಂಗಳೂರಿನ 'ನೃತ್ಯ ಭಾರತಿ'ಯ ಗೀತಾ ಸರಳಾಯ ಮತ್ತು ರಶ್ಮಿ ಚಿದಾನಂದ, ಮೂರೂವರೆ ದಶಕಗಳಿಂದ ಜೊತೆಯಾಗಿ ನೃತ್ಯದ ಹೆಜ್ಜೆ ಹಾಕುತ್ತಿದ್ದಾರೆ. ತಾಯಿಯ ಪರಂಪರಾಗತ ಶೈಲಿಗೆ ಸಾಣೆ ಹಿಡಿದು ಪ್ರಸ್ತುತ ಸಂದರ್ಭಕ್ಕೆ ಒಗ್ಗಿಸಿಕೊಳ್ಳುವುದರಲ್ಲಿ ರಶ್ಮಿಗೆ ವಿಶೇಷ ಕಾಳಜಿ. ತಾಯಿಯ ಸೋಲೊ ಪ್ರದರ್ಶನಗಳಿಗೆ ಗುರುವಾಗಿಯೂ ರಶ್ಮಿ ನೆರವಾಗುತ್ತಿದ್ದಾರೆ. ಒಬ್ಬರಿಗೊಬ್ಬರು ನಟುವಾಂಗ ಪಾತ್ರವನ್ನೂ ನಿರ್ವಹಿಸುತ್ತಿದ್ದಾರೆ.

ರಾಮ–ಸೀತೆ, ಶಿವ–ಪಾರ್ವತಿಯಾಗಿ 'ನೃತ್ಯ ಯುಗಳ' ಪ್ರದರ್ಶಿಸುವ ಈ ಜೋಡಿ 'ಕೃಷ್ಣಾಂತರಂಗ'ದಲ್ಲಿ ಬಾಲಕೃಷ್ಣನಿಂದ ಗೀತೋಪದೇಶದ ವರೆಗಿನ ಪ್ರಸಂಗವನ್ನೂ ಆಡಿತೋರಿಸುತ್ತಿದ್ದಾರೆ. ದುಬೈ, ಬಹರೇನ್, ಮಸ್ಕತ್ ವರೆಗೆ ಸಾಗಿರುವ ಈ ಸಂಯೋಜಕಿಯರು ಮಸ್ಕತ್‌ನಲ್ಲಿ ಶಾಖೆಯನ್ನೂ ತೆರೆದಿದ್ದಾರೆ.

ವಿದ್ಯಾಶ್ರೀ ಮತ್ತು ಪೂರ್ವಿ ಜೊತೆಯಾಗಿಯೇ ನೃತ್ಯ ಪ್ರದರ್ಶನ ನೀಡುವುದು ರೂಢಿ. ತಂಡದ ಕಾರ್ಯಕ್ರಮ ಇದ್ದಾಗಲೂ ಅದರಲ್ಲಿ ತಾಯಿ–ಮಗಳ 'ಯುಗಳ ನೃತ್ಯ'ವೊಂದು ಇರುವುದು ಕಡ್ಡಾಯ. 'ಇಬ್ಬರ ವಯಸ್ಸಿನ ನಡುವೆ ಇರುವ ಒಂದು ಪೀಳಿಗೆಯ ಅಂತರವನ್ನು ಗಮನದಲ್ಲಿರಿಸಿ ಶಕ್ತಿ ಮತ್ತು ದೌರ್ಬಲ್ಯವನ್ನು ಅಳೆದು ನೃತ್ಯ ಸಂಯೋಜನೆ ಮಾಡುತ್ತೇವೆ. ಆಕೆಗೆ ನಾಟ್ಯ ಕಲಿಸಿದ್ದು ನಾನಾದರೂ ಈಗ ಚೆನ್ನಾಗಿ ನೃತ್ಯ ಕಲಿಸಲು ಆಕೆಯೇ ನನಗೆ ಗುರು' ಎಂದು ವಿದ್ಯಾಶ್ರೀ ಹೇಳುತ್ತಾರೆ.

'ಹೊಸ ತಲೆಮಾರಿನವರಿಗೆ ಇರುವಷ್ಟು ದೇಹ ಕಸುವು ನಮ್ಮಲ್ಲಿ ಇರುವುದಿಲ್ಲ. ನಮ್ಮಲ್ಲಿ ಇರುವ ಸಾತ್ವಿಕ ಅಭಿನಯದ ಬಲ ಅವರಲ್ಲಿ ಇರುವುದಿಲ್ಲ. ಆದ್ದರಿಂದ ಬೇರು ಮತ್ತು ಚಿಗುರು ಸೇರುವಂತೆ ತಾಯಿ–ಮಗಳ ಕೂಡುವಿಕೆಯಿಂದ ಒಳ್ಳೆಯ ಪರಿಕಲ್ಪನೆ ಮೂಡಲು, ಮನೋಧರ್ಮ ಗಟ್ಟಿಯಾಗಲು ಸಾಧ್ಯ. ಮೈಸೂರು ಮತ್ತು ಪಂದನಲ್ಲೂರು ಶೈಲಿಯಲ್ಲಿ ಕಲಿತು ಕಲಾಕ್ಷೇತ್ರ ಶೈಲಿಯನ್ನು ರೂಢಿಸಿಕೊಂಡ ನಾನು ಈಗ ನಮ್ಮದೇ ಶೈಲಿಯನ್ನು ಬೆಳೆಸಿಕೊಂಡಿದ್ದೇನೆ. ಹಾಗೆ ನೋಡಿದರೆ ಪ್ರತಿಯೊಬ್ಬ ಕಲಾವಿದರಿಗೂ ಅವರದೇ ಆದ ಶೈಲಿ ಇದೆ' ಎನ್ನುವುದು ವಿದ್ಯಾಶ್ರೀ ಅವರ ಅಭಿಪ್ರಾಯ.

ಬದಲಾದ ಕಾಲಘಟ್ಟದಲ್ಲಿ ಇದೆಲ್ಲವೂ ಸಹಜ ಮತ್ತು ಸುಂದರ. ಇಂತಹ ಪ್ರಯೋಗಗಳಿಂದ ಪ್ರೇಕ್ಷಕರಿಗೇ ಹೆಚ್ಚು ಲಾಭ. ಆದ್ದರಿಂದ ಈ ರೀತಿಯ ಪ್ರಯೋಗಗಳು ಇನ್ನಷ್ಟು ಹೆಚ್ಚಾಗಲಿ.

ವಿದ್ಯಾಶ್ರೀ ಮತ್ತು ಪೂರ್ವಿ

ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು

ಪುತ್ತೂರಿನ ವಿಶ್ವಕಲಾನಿಕೇತನ ಸಂಸ್ಥೆಯಲ್ಲಿ ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳ ಅಪೂರ್ವ ನೃತ್ಯ ಸಂಗಮ. ನೃತ್ಯ ಗುರು ದಂಪತಿ ಕುದ್ಕಾಡಿ ವಿಶ್ವನಾಥ ರೈ ಮತ್ತು ನಯನಾ ರೈ ಅವರ ಮಕ್ಕಳು ಸ್ವಸ್ತಿಕಾ ಮತ್ತು ಆಸ್ತಿಕ ಅವರು ತಂದೆ–ತಾಯಿಯ ಜೊತೆಯಲ್ಲೇ ನೃತ್ಯದ ಅಡವುಗಳನ್ನು ಕಲಿತವರು. ನಂತರ ಸ್ವಸ್ತಿಕಾ ಅವರ ಪುತ್ರಿ ಆಂಗಿಕಾ ಕೂಡ ಇದೇ 'ಕಲಾಶಾಲೆ'ಯಲ್ಲಿ ಕಲಿತರು. ಎಲ್ಲರೂ ಜೊತೆಯಾಗಿ ಕಾರ್ಯಕ್ರಮ ನೀಡಿದ್ದೂ ಇದೆ. 'ನಾಟ್ಯಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ನಾವು ಯಾರೂ ಸಿದ್ಧಶೈಲಿಗೆ ಅಂಟಿಕೊಂಡಿಲ್ಲ. ಉತ್ತಮವಾದುದೆಲ್ಲವನ್ನೂ ಎಲ್ಲ ಕಡೆಯಿಂದ ಸ್ವೀಕರಿಸಿ ಪರಸ್ಪರ ಗುರು–ಶಿಷ್ಯರಾಗಿ ಬೆಳೆಯುತ್ತಿದ್ದೇವೆ. ಕಲಿಕೆಗೆ ತಲೆಮಾರಿನ ಅಂತರ ಅಡ್ಡಿಯಾಗುವುದಿಲ್ಲ. ಆದ್ದರಿಂದ ಮೊಮ್ಮಗಳಿಂದಲೂ ನಾನು ಹಲವು ಪಾಠಗಳನ್ನು ಕಲಿತಿದ್ದೇನೆ' ಎಂದು ನಯನಾ ಮನದಾಳ ಬಿಚ್ಚಿಟ್ಟರು.

ರೀಲ್ಸ್ ಟೀಚರ್ ಸಂಧ್ಯಾ ಕಾಮತ್

10ನೇ ಪುಟದಿಂದ...

ಮನರಂಜನೆ ಜೊತೆಗೆ ಪಾಠ

'ಈಗ ರೀಲ್ಸ್ ಮೂಲಕ ಜನರಿಗೆ ಮನರಂಜನೆ ನೀಡಿದ್ದೇನೆ. ಅವರ ಬಾಲ್ಯಕ್ಕೆ ಕರೆದೊಯ್ಯುವ ಪ್ರಯತ್ನ ಮಾಡುತ್ತಿದ್ದೇನೆ. ಇದೀಗ ಬಹುತೇಕ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುತ್ತಿದ್ದಾರೆ. ನಮ್ಮ ಕಾಲದಲ್ಲಿ ಕನ್ನಡ ಇಷ್ಟದ ಭಾಷೆಯಾಗಿತ್ತು. ಕನ್ನಡ ಪರೀಕ್ಷೆಗೆ ಹೆಚ್ಚು ಓದುತ್ತಲೂ ಇರಲಿಲ್ಲ. ಈಗಿನ ಮಕ್ಕಳಿಗೆ ಕನ್ನಡ ಎನ್ನುವುದೇ ಕಷ್ಟವಾಗಿದೆ. ಕನ್ನಡ ಎಂದರೆ ಅಳುತ್ತಾರೆ. ಹೀಗಾಗಿ ಅವರಿಗೆ ನನ್ನದೇ ಶೈಲಿಯಲ್ಲಿ ಯುಟ್ಯೂಬ್ ಮೂಲಕ ಕನ್ನಡ ವ್ಯಾಕರಣ ಕಲಿಸುವ ಯೋಚನೆ ಇದೆ. ನಗಿಸುತ್ತಲೇ ಅವರಿಗೆ ಪಾಠ ಮಾಡುವ ಪ್ಲ್ಯಾನ್ ಮಾಡಿದ್ದೇನೆ. ಇದು ಮಕ್ಕಳಿಗಷ್ಟೇ ಅಲ್ಲ, ಕನ್ನಡ ಕಲಿಯಬೇಕೆಂಬ ಎಲ್ಲರಿಗೂ ಅನುಕೂಲವಾಗಲಿದೆ' ಎನ್ನುತ್ತಾರೆ ಸಂಧ್ಯಾ.

ಸಂಧ್ಯಾ ಕಾಮತ್

ಹೀಗೆ ರೀಲ್ಸ್ ಮೂಲಕ ವೀಕ್ಷಕರನ್ನು ತಮ್ಮ ಬಾಲ್ಯಕ್ಕೆ ಕರೆದೊಯ್ಯುವ ಸಾಮರ್ಥ್ಯ ಹೊಂದಿರುವ ಸಂಧ್ಯಾ, ಸಿನಿಮಾದಂತೆ ಭಾಷೆಯ ಗಡಿ ಮೀರಿದ್ದಾರೆ. ಹಲವರು ಇವರ ವಿಡಿಯೊಗಳನ್ನು ನೋಡಿ ನೆನಪಿಗೆ ಬಂದ ತಮ್ಮ ಶಿಕ್ಷಕರ ಹೆಸರುಗಳನ್ನು ಕಾಮೆಂಟ್ ಬಾಕ್ಸ್‌ನುದ್ದಕ್ಕೂ ಹಾಕಿರುವುದು ಇದಕ್ಕೆ ಸಾಕ್ಷಿ.

ಸಾರೋಟಿನಲ್ಲಿ ಮೆರವಣಿಗೆ

ಗುರುವಿನ ಮಾರ್ಗದಲ್ಲಿ...

10ನೇ ಪುಟದಿಂದ...

ಯಾವ ಸಂಸ್ಥೆಗೆ ಸಹ ಶಿಕ್ಷಕರಾಗಿ ಬಂದಿದ್ದರೋ ಅದೇ ಸಂಸ್ಥೆಯ ಆಡಳಿತಾಧಿಕಾರಿಯಾಗಿ ಅವರನ್ನು ನಿವೃತ್ತಿ ದಿನವೇ ನೇಮಕ ಮಾಡಲಾಗಿದೆ.

ವಿ.ಪಿ.ಮಠ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಹಾಲಿಂಗಪುರದವರು. ಜಮಖಂಡಿ ತಾಲ್ಲೂಕಿನ ಮಳಲಿಯಲ್ಲಿ ಜೀವನ ಕಟ್ಟಿಕೊಂಡವರು. ಬಿಎಸ್‌ಸಿ, ಬಿ.ಇಡಿ ಮುಗಿಸಿದ ಬಳಿಕ 1992ರಲ್ಲಿ ಅವರು ಹಂದಿಗುಂದ ಶಾಲೆಯಲ್ಲಿ ಸಹ ಶಿಕ್ಷಕರಾದರು. ಅವರ ಕಾರ್ಯವೈಖರಿಗೆ ಆಡಳಿತ ಮಂಡಳಿ ಅಧ್ಯಕ್ಷರೂ ಆದ ಸಿದ್ಧೇಶ್ವರ ಮಠದ ಶಿವಾನಂದ ಸ್ವಾಮೀಜಿ ಮುಖ್ಯಶಿಕ್ಷಕ ಜವಾಬ್ದಾರಿ ವಹಿಸಿದರು. ಬಳಿಕದ ಮಕ್ಕಳ ಸಂಖ್ಯೆ ದುಪ್ಪಟ್ಟಾಯಿತು.

ಅನುಕಂಪ ನೌಕರಿ ಒಲ್ಲೆ ಎಂದರು!

ವಿಜಯಕುಮಾರ ತಂದೆ ಪಂಚಾಕ್ಷರಿ ಅವರೂ ಪ್ರೌಢಶಾಲೆ ಶಿಕ್ಷಕರಾಗಿದ್ದರು. ಸೇವಾವಧಿಯಲ್ಲೇ ಅವರು ನಿಧನರಾದರು. ಅನುಕಂಪ ಆಧರಿತ ಶಿಕ್ಷಕ ನೌಕರಿ ಸಿಕ್ಕರೂ ವಿಜಯಕುಮಾರ ಹೋಗಲಿಲ್ಲ. ಮರಾಠಿ ಹಾವಳಿ ಇರುವ ಗಡಿ ಗ್ರಾಮೀಣ ಭಾಗದ ಶಾಲೆಗಾಗಿ ಗಟ್ಟಿಯಾಗಿ ನಿಂತರು. ವೃತ್ತಿ ಬದುಕಿನ ಅರ್ಧದಷ್ಟು ಅವಧಿಯನ್ನು ಅನುದಾನವಿಲ್ಲದ ಶಾಲೆಯಲ್ಲೇ ಕಳೆದರು.

ಕೆಇಬಿಯಲ್ಲಿ ನೌಕರಿ, ಸಕ್ಕರೆ ಕಾರ್ಖಾನೆಯೊಂದರಲ್ಲಿ ಅಭಿವೃದ್ಧಿ ಅಧಿಕಾರಿ ಆಗುವ ಅವಕಾಶ ಹುಡುಕಿಕೊಂಡು ಬಂದರೂ ಇವರು ಈ ಊರನ್ನು, ಶಾಲೆಯನ್ನು ಬಿಟ್ಟುಹೋಗಲಿಲ್ಲ. 'ಶಿಕ್ಷಕರ ವೃತ್ತಿ ಸಂಬಳಕ್ಕಾಗಿ ಮಾಡುವಂಥದ್ದಲ್ಲ. ಅದನ್ನೂ ಮೀರಿದ್ದು' ಎನ್ನುವುದು ಅವರ ಮಾತು.

'ಮಕ್ಕಳಲ್ಲಿ ಶಿಸ್ತು ಮತ್ತು ಪ್ರಾಮಾಣಿಕತೆ ಬೆಳೆದರೆ ದೇಶ ಉದ್ಧಾರವಾಗುತ್ತದೆ ಎಂಬುದು ನನ್ನ ನಂಬಿಕೆ. ವೃತ್ತಿಯುದ್ದಕ್ಕೂ ಈ ಎರಡನ್ನು ಮಕ್ಕಳಲ್ಲಿ ತುಂಬಲು ಯತ್ನಿಸಿದೆ. ನನ್ನ ಶಿಷ್ಯರು ಈಗ ನ್ಯಾಯಾಧೀಶ, ಡಿಐಜಿ, ಸೇನಾಧಿಕಾರಿ, ಶಿಕ್ಷಣಾಧಿಕಾರಿ, ಕೃಷಿಕ, ಕಾರ್ಮಿಕ... ಹೀಗೆ ಎಲ್ಲ ವೃತ್ತಿಗಳಲ್ಲೂ ಬೆಳೆದಿದ್ದಾರೆ. ನ್ಯಾಯಾಧೀಶರಾದ ಶಿಷ್ಯನನ್ನು ಎಷ್ಟು ಪ್ರೀತಿಯಿಂದ ಮಾತನಾಡಿಸುತ್ತೇನೋ, ಕೃಷಿಕನಾದ ಶಿಷ್ಯನನ್ನೂ ಅಷ್ಟೇ ಆಪ್ತತೆಯಿಂದ ಕಾಣುತ್ತೇನೆ. ಗುರು ಎಲ್ಲರನ್ನು ಸಮಾನವಾಗಿ ಕಂಡರೆ ಶಿಷ್ಯರೂ ಅದನ್ನೇ ಕಲಿಯುತ್ತಾರೆ' ಎಂಬುದು ವಿ.ಪಿ.ಮಠ ಅವರ ಜೀವನಾನುಭವ ಮಾತು.

'ಊರಿನ ರಸ್ತೆಗೆ ನನ್ನ ಹೆಸರು ಇಡುವ ವಿಚಾರವನ್ನು ಗುಟ್ಟಾಗಿರಿಸಲಾಗಿತ್ತು. ಏಕೆಂದರೆ, ನಾನು ನಿರಾಕರಿಸುತ್ತೇನೆ ಎನ್ನುವುದು ಅವರಿಗೆ ಗೊತ್ತಿತ್ತು. ಆದ್ದರಿಂದ ಕೊಂಚವೂ ಸುಳಿವು ನೀಡದೇ ಏಕಾಏಕಿ ಫಲಕ ಉದ್ಘಾಟನೆ ಮಾಡಿಸಿದರು. ಫಲಕ ತೆರೆದಾಗ ಕಣ್ಣುಗಳು ಮಂಜಾದವು. ಎಲ್ಲಾ ಬ್ಯಾಚಿನ ವಿದ್ಯಾರ್ಥಿಗಳು ಸೇರಿದ್ದರು. ದೇಶ–ವಿದೇಶಗಳಲ್ಲಿ ಇದ್ದವರೂ ಬಂದಿದ್ದರು. ಪುಷ್ಪವೃಷ್ಟಿ ಮಾಡಿದರು. ಚಿನ್ನಾಭರಣಗಳನ್ನು ಉಡುಗೊರೆಯಾಗಿ ನೀಡಿದರು. ನಾನು ಎಂದೂ ಏನೂ ನಿರೀಕ್ಷೆ ಮಾಡಿದೇ ಕಲಿಸಿದೆ. ಎಲ್ಲವು ಅನಿರೀಕ್ಷಿತವಾಗಿ ಬಂದೇಬಿಟ್ಟವು' ಎಂದು ಧನ್ಯತಾ ಭಾವವನ್ನು ವ್ಯಕ್ತಪಡಿಸಿದರು.

ಗುರುತ್ವವೇ ಹೀಗೆ.

ಮುನ್ನೋಟ 31-08-2025 ರಿಂದ 06-09-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ಶಕ್ತಿಯನ್ನು ನಿಮಗಾಗಿ ಸರಿಯಾಗಿ ಬಳಸಿಕೊಳ್ಳಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಸಂಗಾತಿ ಕಡೆಯವರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸ್ವಲ್ಪ ಅಡ್ಡಿ ಬರಬಹುದು. ಸ್ಥಿರಾಸ್ತಿ ವ್ಯವಹಾರದಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ, ಆದರೆ ಹಣದ ಬಗ್ಗೆ ಗಮನ ಹರಿಸಿ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬಹಳ ಗೌರವಾನ್ವಿತರಾಗಿ ನಡೆದುಕೊಳ್ಳುವಿರಿ. ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಆಸ್ತಿ ವ್ಯವಹಾರಗಳಲ್ಲಿ ಸ್ವಲ್ಪ ತಕರಾರುಗಳು ಬರಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಕಷ್ಟವಾಗಬಹುದು. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವೃತ್ತಿಯಲ್ಲಿ ಸ್ವಲ್ಪ ಕಸಿವಿಸಿಗಳಿದ್ದರೂ ಕೂಡ ತೊಂದರೆ ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ದೇಹ ಸೌಂದರ್ಯದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ಕಡಿಮೆ ಇರುತ್ತದೆ. ಬಂಧುಗಳಿಂದ ನಿರೀಕ್ಷೆಗೆ ಮೀರಿದ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶವಿರುತ್ತದೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಅಷ್ಟು ಪ್ರಗತಿ ಇರುವುದಿಲ್ಲ. ನಿಮ್ಮ ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಹಣ ಈಗ ಬರುತ್ತದೆ. ಬಂಧುಗಳು ನಿಮ್ಮ ಒಳ್ಳೆಯ ಕಾರ್ಯಗಳಿಗೆ ಸಹಕಾರ ನೀಡುವರು. ವಿದ್ಯಾರ್ಥಿಗಳಿಗೆ ವಿವಿಧ ರೀತಿಯಲ್ಲಿ ಮುಂದೆ ಬರಲು ಅವಕಾಶ ದೊರೆಯುತ್ತದೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಸಂಗಾತಿಯ ನಿಲುವುಗಳು ಕೆಲವೊಮ್ಮೆ ಭಿನ್ನವಾಗಬಹುದು. ರಾಜಕಾರಣಿಗಳಿಗೆ ಅನಿರೀಕ್ಷಿತ ಅಪವಾದದ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಕೆಲಸಗಳಲ್ಲಿ ನೀವು ಮುಳುಗಿರುವಿರಿ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಬಂಧುಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳ ನಡುವೆ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರಯತ್ನಪಡುವಿರಿ. ಸ್ಥಿರಾಸ್ತಿ ಪಡೆಯಲು ಹಿರಿಯರಿಂದ ಈಗ ಸಹಾಯ ದೊರೆಯುತ್ತದೆ. ವಿದೇಶಿ ವ್ಯವಹಾರಗಳಿಂದ ಸಂಗಾತಿಗೆ ಸ್ವಲ್ಪ ಲಾಭವಾಗುತ್ತದೆ. ತೈಲ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಅತಿಯಾದ ಆತ್ಮಗೌರವ ಇರುತ್ತದೆ. ಆದಾಯವು ಸ್ವಲ್ಪ ಚೇತರಿಕೆಯನ್ನು ಕಾಣುತ್ತದೆ. ಕೃಷಿಯಲ್ಲಿ ಅಭಿವೃದ್ಧಿ ಇರುತ್ತದೆ. ಕೃಷಿ ಭೂಮಿಯನ್ನು ಕೊಳ್ಳಲು ಪ್ರಯತ್ನಪಡುವಿರಿ. ರಾಜಕೀಯ ನಾಯಕರುಗಳಿಗೆ ಈಗ ಜನ ಬೆಂಬಲ ದೊರೆಯುತ್ತದೆ. ಹಳೆಯ ಚರ್ಮರೋಗಗಳು ಮರುಕಳಿಸಬಹುದು. ಸಂಗಾತಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ವೃತ್ತಿಯಲ್ಲಿ ಸ್ವಲ್ಪ ಏಳಿಗೆ ಇರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳುವಿರಿ. ಆದಾಯದ ಒಳಹರಿವು ಸ್ವಲ್ಪ ಸರಿದಾರಿಗೆ ಬರುತ್ತದೆ. ಬಂಧುಗಳ ವಿಶ್ವಾಸವು ಕಡಿಮೆಯಾಗಬಹುದು. ರಾಜಕೀಯ ನಾಯಕರಗಳು ಬಣ್ಣ ಬಣ್ಣದ ಮಾತನಾಡಿ ಜನರನ್ನು ಸೆಳೆಯಬಹುದು. ಕೃಷಿಯಲ್ಲಿ ಆದಾಯ ಹೆಚ್ಚುತ್ತದೆ. ಉದ್ಯೋಗದಲ್ಲಿ ಸಾಮಾನ್ಯ ಪ್ರಗತಿ ಇರುತ್ತದೆ. ಧರ್ಮ ವಿದ್ಯೆಯಿಂದ ಲಾಭವಿರುತ್ತದೆ. ಹಿರಿಯರ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಹಿರಿಯರ ಜತೆ ಆಲೋಚನೆ ಮಾಡುವುದು ಒಳ್ಳೆಯದು. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಸ್ವಪ್ರಯತ್ನಗಳಿಂದ ಆದಾಯ ವೃದ್ಧಿ ಮಾಡಿಕೊಳ್ಳಬಹುದು. ವಿದೇಶದಲ್ಲಿ ನೆಲೆಸಿರುವವರು ಆಸ್ತಿ ಖರೀದಿಸಬಹುದು. ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಧಾರ್ಮಿಕ ಮುಖಂಡರುಗಳಿಗೆ ಗೌರವ ದೊರೆಯುತ್ತದೆ. ವೃತ್ತಿ ಧರ್ಮ ನಿಮ್ಮನ್ನು ಕಾಪಾಡುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ತಾಳ್ಮೆಯಿಂದ ಇರುವುದನ್ನು ಕಲಿಯುವಿರಿ. ಆದಾಯವು ಕಡಿಮೆಯಿರುತ್ತದೆ. ನಿಮ್ಮ ಶ್ರಮದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳುವಿರಿ. ಕೃಷಿಯಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ವ್ಯತ್ಯಾಸವಾಗಿದ್ದ ಆರೋಗ್ಯವು ಈಗ ಸುಧಾರಿಸುತ್ತದೆ. ಸಂಗಾತಿಯಿಂದ ಸಹಕಾರ ನಿರೀಕ್ಷೆ ಮಾಡಬಹುದು. ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆ ಕಡಿಮೆಯಾಗುವ ಸಾಧ್ಯತೆಗಳಿವೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರ ಜ್ಞಾನವನ್ನು ಸಮಾಜ ಬಳಸಿಕೊಳ್ಳಲು ಮುಂದಾಗುತ್ತದೆ. ಆನ್‌ಲೈನ್ ಮೂಲಕ ಪಾಠ ಮಾಡುವವರ ಆದಾಯ ಹೆಚ್ಚುತ್ತದೆ. ನಿಮ್ಮ ಚಟುವಟಿಕೆಗಳಿಗೆ ಸಹೋದರರಿಂದ ಅಡ್ಡಿ ಬರಬಹುದು. ಭೂಮಾಪನ ಮಾಡುವವರ ಆದಾಯ ಹೆಚ್ಚುತ್ತದೆ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡು ವೃತ್ತಿಯಲ್ಲಿ ಮೇಲ್ದರ್ಜೆಗೆ ಏರಬಹುದು. ಹರಿತವಾದ ವಸ್ತುಗಳನ್ನು ಬಳಸುವಾಗ ಎಚ್ಚರದಿಂದ ಬಳಸಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ದ್ವಂದ್ವ ನಿರ್ಧಾರಗಳು ನಿಮಗೆ ಮುಜುಗರವನ್ನು ತರಬಹುದು. ಕೃಷಿಯಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಹರಿತವಾದ ಮಾತಿನಿಂದ ಕೆಲವು ಅವಕಾಶಗಳನ್ನು ಕಳೆದುಕೊಳ್ಳುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಮತ್ತು ಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಲಾಭವಿರುತ್ತದೆ.

ಪದಬಂಧ 2907



ಮೇಲಿನಿಂದ ಕೆಳಕ್ಕೆ

1.ಯಾವುದೋ ಪ್ರಾಚೀನ ಕಾಲದ ರಾಯ	4
2. ಶ್ರೇಷ್ಠ ಸುವರ್ಣ ಪರ್ವತ	3
3. ಹಗ್ಗ ಇದೆ ಬಿಂದಿಗೆ ಇದೆ, ಬಾವಿಯಿಂದ ನೀರೆಳೆಯಲು ಇದಿದ್ದರೆ ಸುಲಭ	2
4. ಆನೆಗೆ ಒಡೆಯನಾಗಿದ್ದ ಅರಸು	4
7. ಗೌರಿ ಹಬ್ಬಕ್ಕೆ ಸುಮಂಗಳೆಗೆ ನೀಡುವ ಮರದ ಜೋಡಿ	3
9. ಅಗಸ ಬಟ್ಟೆ ಬಡಿದು ಸ್ವಚ್ಛಗೊಳಿಸುವುದು	3
10. ರತಿಪತಿಯ ಸ್ವಭಾವ ಉಂಟುಮಾಡುವ ಪಿತ	5
11. ಊರ ಉತ್ಸವಕ್ಕೆ ಮಂದಿಯ ಒಗ್ಗೂಡಿಕೆ	4
12. ಪರದೆಯ ಹಿಂದೆ ನಡೆಯುವಂತದ್ದು	4
13. ಧರಣಿ ಆಳುವವನ ನಕ್ಷತ್ರ	3
15. ಕಲ್ಲಾಗಿ ನಿಂತ ಕನ್ನಡದ ಶಿವ	3
16. ರೀತಿ ಬದ್ಧ ಕೆಲಸ ಯೋಜಿತ ರೀತಿ ಅನುಸರಣೆ	4
17. ಹನ್ನೆರಡು ಇಂಚಿನ ಬುನಾದಿ	4
18. ಸವಿಯಾಗಿ ಬರುವ ಇಸಾಯಿಯ ವರ್ಷ	3
20. ಆಡು ಆನೆಯನ್ನು ಹೋಲಿಸದಾಗ ಗಜಕ್ಕೆ ಪ್ರಾಸವಾಗುವ ಪ್ರಾಣಿ	2

ಎಡದಿಂದ ಬಲಕ್ಕೆ

1. ಮೃದು ಮಧುರ ಮಾತಿನಿಂದ ಯಾರನ್ನಾದರೂ ನಿನ್ನ ಕಡೆ ಮಾಡಿಕೊ	3
3. ಆಡಳಿತದ ನಾಲ್ಕು ಭಾಗಗಳಲ್ಲಿ ಸರ್ಕಾರಿ ವ್ಯವಸ್ಥೆ	3
5. ಚೆಲುವನಾರಾಯಣನ ಊರನ್ನು ಸುತ್ತುವರಿದ ಅತ್ಯುತ್ತಮ ಬಲವಾದ ಗೋಡೆ	4
6. ಪ್ರಪಂಚದ ತಾಯಿಗೊಂದು ಸುಂದರ ಪದ	4
8. ಮಂತ್ರಾಲಯದ ಗುರುರಾಜರು	3
10. ಪವನ ಸುತನ ಹೆಸರಲ್ಲಿ ಓಡುವ ಕಾರು	3
11. ಮಂದಿ ಎಂದರೆ ಇವರೇ	2
12. ಕರಪಾವತಿಗೆ ನೂಲಿನಿಂದ ಬಂಧಿತನಾದವ	5
14. ಪಟ್ಟಣದಲ್ಲಿ ಪ್ರಯಾಣ ಪರ್ಯಟನೆ	5
15. ದೂರವಾಣಿಯ ಕೂಗು	2
16. ಕೈಲಾಸಕ್ಕೆ ದಾರಿ ಮಾಡಿಕೊಡುವ ಕೆಲಸ	3
18. ಎರಡರಡರಷ್ಟು; ಪುಲಕೇಶಿಯ ಹೆಸರಿನೊಂದಿಗೆ ಓದಿ	3
19. ನೂರು ಬಗೆ ಸೊಟ್ಟಗಿರುವ ಕುರೂಪಿ	4
20. ಮನೆಯ ಮೇಲಿಂದ ಹೊರಹಾಕುವ ದೊಡ್ಡ ನಗು	4
21.ಮನುಕುಲದಲ್ಲಿ ಹುಟ್ಟಿದವ	3
22. ಜೀವನಾಸಕ್ತಿಯ ವಸ್ತು	3

ಪದಬಂಧ ಉತ್ತರ -2906

ಮೇಲಿಂದ ಕೆಳಕ್ಕೆ

1.ಪ್ರೇಮಮಿಲನ 2.ವ್ಯರ್ಥಸಾಹಸ 3.ಸದಾರಮೆ 4.ಮಹಾದಂಗೆ 7.ವನಸುಮ 9. ರಸಾಸ್ವಾದ 10. ಭೆರಂ 12.ನೆಪ 14.ದುರುಳತನ 15.ಭರತಭೂಮಿ 16.ಜನಶಾಪ 17.ನತಶಿರ

ಎಡದಿಂದ ಬಲಕ್ಕೆ

1.ಪ್ರೇಮಕಾವ್ಯ 3.ಸಹಸ್ರನಾಮ 5.ಸಾಲಗಾರ 6.ಮೆರವಣಿಗೆ 8.ನಗರಸಭೆ 11.ರಂಜನೆ 13. ಪದುಮನಾಭ 16. ಜಲದರ್ಶನ 18.ತಳಮಳ 19.ಪದವೀಧರ 20. ನವಗಾಮಿ

ಕಟ್ಟುವ ಕನಸಿನ ಬುಕ್‌ಬ್ರಹ್ಮ ಲಿಟ್‌ಫೆಸ್ಟ್

• ರಶ್ಮಿ ಎಸ್

ಮೂರು ದಿನಗಳ ಸಾಹಿತ್ಯ ಸಂಭ್ರಮದಲ್ಲಿ ಎಂಟು ವೇದಿಕೆಗಳಲ್ಲಿ ಹಲವಾರು ಗೋಷ್ಠಿಗಳು, ಚರ್ಚೆಗಳು, ಮಾತುಕತೆಗಳು, ನಡೆದವು. ನೇರಪ್ರಸಾರದಲ್ಲಿಯೂ ಸಾಹಿತ್ಯಾಸಕ್ತರು ನೋಡುತ್ತ ಪಾಲ್ಗೊಂಡರು. ಇವೆಲ್ಲಕ್ಕೂ ಮುಖ್ಯವಾಗಿ ಆ ಮೂರು ದಿನಗಳೂ ವೇದಿಕೆಯಲ್ಲಿದ್ದಷ್ಟೇ ಚಟುವಟಿಕೆಗಳು ಅಂಗಳದಲ್ಲಿಯೂ ನಡೆದಿದ್ದವು.

ಸಣ್ಣಸಣ್ಣ ಗುಂಪುಗಳಲ್ಲಿ ಮಾತು, ಚರ್ಚೆ, ನಗು, ಸಾಹಿತ್ಯ, ಸಂಸ್ಕೃತಿ ಮತ್ತು ಬರೀ ಪ್ರೀತಿಯ ಗಾಳಿ ಅಲ್ಲಿ ಬೀಸುತಲಿತ್ತು.

ಬುಕ್‌ಬ್ರಹ್ಮ ಪ್ರತಿಷ್ಠಾನದ ಸಂಸ್ಥಾಪಕ ಸತೀಶ ಚಪ್ಪರಿಕೆ ‘ಭಾನುವಾರದ ಪುರವಣಿ’ಯೊಂದಿಗೆ ಪ್ರತಿಷ್ಠಾನದ ಕೆಲಸಗಳೊಂದಿಗೆ ಲಿಟ್‌ಫೆಸ್ಟ್‌ನ ಒಳಹೊರಗನ್ನೂ ತೆರೆದಿಟ್ಟರು.

ಸತೀಶ್ ಚಪ್ಪರಿಕೆ

• ಬುಕ್‌ಬ್ರಹ್ಮ ಲಿಟ್‌ಫೆಸ್ಟ್‌ನ ಉದ್ದೇಶ ಏನು?

ಸಾಹಿತ್ಯ ಮಾಡಬೇಕಾದ ಕೆಲಸವೇ ಕಟ್ಟುವುದು. ಮತ್ತು ಒಗ್ಗೂಡಿಸುವುದು. ಅದನ್ನೇ ಬುಕ್‌ಬ್ರಹ್ಮ ಪ್ರತಿಷ್ಠಾನದ ಬುಕ್‌ಬ್ರಹ್ಮ ಲಿಟ್‌ಫೆಸ್ಟ್ ಮಾಡುತ್ತಿದೆ. ಈ ಇಡೀ ಲಿಟ್‌ಫೆಸ್ಟ್‌ನ ಉದ್ದೇಶ ಸ್ಫಟಿಕಸ್ಪಷ್ಟ, ಭಾರತೀಯ ಭಾಷೆ ಮತ್ತು ಸಾಹಿತ್ಯಗಳ ರಾಜಧಾನಿಯಾಗಿ ಬೆಂಗಳೂರು ಹೊಮ್ಮಬೇಕು. ಬೆಂಗಳೂರಿನ ಮುಕುಟದಲ್ಲಿ ಈಗಾಗಲೇ ಹಲವಾರು ಗರಿಗಳಿವೆ. ಅವುಗಳಲ್ಲಿ ಇದೊಂದು ವಜ್ರದಂತೆ ವಿಜ್ರಂಭಿಸಬೇಕು. ಇದು ನಮ್ಮ ಕನಸೂ ಹೌದು. ಗುರಿಯೂ ಹೌದು. ಉದ್ದೇಶವೂ...

ಲಿಟ್‌ಫೆಸ್ಟ್ ಆರಂಭಿಸುವಾಗ ದಕ್ಷಿಣ ಭಾರತೀಯ ಭಾಷೆಗಳನ್ನು ಒಂದು ಅಂಗಳದಲ್ಲಿ ತರಬೇಕೆನ್ನುವ ಮಹತ್ವಾಕಾಂಕ್ಷೆ ಇತ್ತು. ಭಾರತೀಯ ಭಾಷೆಗಳ ನಡುವೆ ಕೊಡುಕೊಳ್ಳುವಿಕೆ ಆಗಬೇಕು. ಆಯಾ ಭಾಷೆಗಳಲ್ಲಿಯೇ ಸಂವಾದ ನಡೆಯಲಿ. ಭಾಷೆ ಮತ್ತು ಭಾವಗಳ ಸಂವಹನದಲ್ಲಿ ಹಲವಾರು ಭಾಷೆಗಳ ನಾಡಿಮಿಡಿತ ಓದುಗರಿಗೆ ದಕ್ಕತೊಡಗಿತು. ಅದೇ ಆಗಬೇಕಾಗಿತ್ತು.

ಗಮನಸೆಳೆದ ಚಿಣ್ಣರ ಅಂಗಳ

ಚಿಣ್ಣರಿಗಾಗಿ ಸಂವಾದ ಮತ್ತು ಸಂಭಾಷಣೆಯ ರೂಪದ ಇಂಟರ‍್ಯಾಕ್ಟಿವ್ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ. ಈ ವರ್ಷ ಕೊನೆಯ ಎರಡು ದಿನಗಳಲ್ಲಿ ಈ ಚಿಣ್ಣರ ಅಂಗಳವೂ ಭರ್ತಿಯಾಗಿತ್ತು. ಇಡೀ ದಿನ ಮಕ್ಕಳು ಅಲ್ಲಿ ಸಮಯ ಕಳೆದರು. ಕೆಲವು ಶಾಲೆಯ ವಿದ್ಯಾರ್ಥಿಗಳೂ ಭೇಟಿ ನೀಡಿದರು. ಪಾಲಕರೊಂದಿಗೆ ಬಂದರೆ ಮಕ್ಕಳು, ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಸವಿಯಬಹುದು. ಮುಂದಿನ ವರ್ಷ ಎಳೆಯ ಓದುಗರನ್ನು ಸೆಳೆಯಲು ಇನ್ನಷ್ಟು ಆಕರ್ಷಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

• ಬೇರೆ ಲಿಟ್‌ಫೆಸ್ಟ್‌ಗಳಿಗಿಂತ ಬುಕ್‌ಬ್ರಹ್ಮ ಲಿಟ್‌ಫೆಸ್ಟ್ ಹೇಗೆ ಭಿನ್ನ?

ಬೇರೆ ಲಿಟ್‌ಫೆಸ್ಟ್‌ಗಳಲ್ಲಿ ಇಂಗ್ಲಿಷ್ ಕೃತಿಗಳ ಚರ್ಚೆ ಹೆಚ್ಚು. ಕೇರಳದಲ್ಲಿ ಮಾತ್ರ ಮಲಯಾಳ ಭಾಷೆಗೆ ಸಿಂಹಪಾಲು ಸಿಗುತ್ತಿತ್ತು. ಬೇರೆ ಲಿಟ್‌ಫೆಸ್ಟ್‌ಗಳಲ್ಲಿ ಹಿಂದಿಗೆ ಒಂದೆರಡು ಸೆಷನ್‌ಗಳನ್ನು ನೀಡಲಾಗುತ್ತಿತ್ತು. ಭಾರತೀಯ ಭಾಷೆಗಳಲ್ಲಿ ನಡೆಯುತ್ತಿರುವ ಪ್ರಯೋಗಗಳೇನು? ಉಳಿದವರು ಅದನ್ನು ಹೇಗೆ ಸ್ವೀಕರಿಸುತ್ತಿದ್ದಾರೆ? ವಿನಿಮಯವೆಂದರೆ ಜನಪ್ರಿಯ ಸಾಹಿತ್ಯದ ಹಲವಾರು ಎಡಿಷನ್‌ಗಳ ಪ್ರಕಟಣೆಯೇ? ಕ್ಲಾಸಿಕ್‌ಗಳೂ ಅನುವಾದವಾಗಬೇಕಲ್ಲ, ಜನರಿಗೆ ತಲುಪಬೇಕಲ್ಲ, ಸಮಕಾಲೀನ ಸಾಹಿತ್ಯದ ಒಳ ಹೊರಗೆಲ್ಲವೂ ಓದುಗರೊಂದಿಗೆ ಮುಖಾಮುಖಿಯಾಗಿಸಬೇಕಾಗಿತ್ತು. ಇದೇ ಬುಕ್‌ಬ್ರಹ್ಮ ಲಿಟ್‌ಫೆಸ್ಟ್‌ನ ಸ್ವರೂಪವಾಯಿತು.

• ಅದೆಷ್ಟು ದಿನಗಳಿಗೆ ಮೊದಲು ತಯಾರಿ ಆರಂಭಿಸುತ್ತೀರಿ?

ಮೂರು ದಿನಗಳ ಸಂಭ್ರಮಕ್ಕೆ ಉಳಿದ ಮುನ್ನೂರ ಅರವತ್ತೆರಡು ದಿನಗಳ ತಯಾರಿ ಬೇಕಾಗುತ್ತದೆ. ಆ ತಯಾರಿಯಲ್ಲಿ ಎಂಬತ್ತು ಜನರ ತಂಡ ತೊಡಗಿಕೊಳ್ಳುತ್ತದೆ. ಇಪ್ಪತ್ತು ಜನರ ತಂಡ ನಿರಂತರವಾಗಿ ಇದೇ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತದೆ. ಅತಿಥಿಗಳು, ಅವರ ವಿಷಯಗಳು, ಅವರು ಲಭ್ಯವಿದ್ದಾರೆಯೇ ಕೇಳಿಕೊಳ್ಳುವುದು ನಡೆಯುತ್ತದೆ. ಒಂದೆರಡು ತಿಂಗಳು ಸಮಯವಿದ್ದಾಗಲೇ ಎಲ್ಲರೂ ಲಭ್ಯ ಇರುವರೆ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ.

ಲಿಟ್‌ಫೆಸ್ಟ್‌ಗೆ ಒಂದು ಮೆಂಟರ್ಸ್ ತಂಡ ಇದೆ. ಹಿರಿಯರಾದ ಹಂಪನಾ, ರಾಜೇಂದ್ರ ಚೆನ್ನಿ, ಆಶಾದೇವಿ ಮುಂತಾದವರು ಇದ್ದಾರೆ. ಜೊತೆಗೆ ಕ್ಯುರೇಟರ್ಸ್ ತಂಡವೂ ಇದೆ. ಒಂದಷ್ಟು ಜನ ಸಮಾನ ಮನಸ್ಕರು ಕೂಡಿ ಶ್ರಮಿಸುವುದರಿಂದ ಯೋಜನೆಯಂತೂ ಪಕ್ಕಾ ಆಗುತ್ತಿದೆ. ಸ್ವಯಂಸೇವಕರು ಉತ್ಸವದ ಮೊದಲ ಮೂರು ದಿನಗಳಿಂದ ನಮ್ಮೊಟ್ಟಿಗೆ ಕೈ ಜೋಡಿಸುತ್ತಾರೆ. ಒಂದೊಂದು ಗೋಷ್ಠಿಗೂ ನಾಲ್ಕಾರು ಜನರ ತಂಡ ಕಾರ್ಯಮುಖವಾಗುತ್ತದೆ. ಪ್ರತಿಗೋಷ್ಠಿ ಆರಂಭವಾಗುವ ಮೊದಲು ಬ್ಯಾಕ್‌ಸ್ಟೇಜ್ ಮ್ಯಾನೆಜರ್‌ಗಳು ಅತಿಥಿಗಳನ್ನು ಕರೆತಂದು, ಒಂದೆರಡು ಸಲ ಸಮಯದ ಬಳಕೆಯ ಕುರಿತು ತಿಳಿ ಹೇಳುತ್ತಾರೆ. ಮೂರು ದಿನಗಳ ಸಂಭ್ರಮದಲ್ಲಿ ಒಂದರೆಗಳಿಗೆಯೇ ತಡವಾಗದಂತೆ ಆಗಲು ಇವರೆಲ್ಲರ ಪರಿಶ್ರಮವೇ ಕಾರಣವಾಗಿದೆ.

• ಸಮಯಕ್ಕೆ ಸರಿಯಾಗಿ ಆರಂಭ ಮಾಡಿ, ಮುಗಿಸುವುದು ಕಷ್ಟವೆನಿಸಲಿಲ್ಲವೆ?

ಪ್ರತಿಗೋಷ್ಠಿಗೂ ಇಂತಿಷ್ಟೇ ಸಮಯ ಅಂತ ನಿರ್ಧಾರ ಮಾಡಿಕೊಳ್ಳಲಾಯಿತು. ಯಾವುದೇ ವಿಷಯವಾದರೂ 12–15 ನಿಮಿಷಗಳಲ್ಲಿ ಸ್ಪಷ್ಟವಾಗಿ ಮನದಟ್ಟು ಮಾಡಬಹುದು ಎಂಬುದೊಂದು ನಂಬಿಕೆ. ಒಂದುವೇಳೆ ಅಷ್ಟು ನಿಮಿಷಗಳಲ್ಲಿ ಸಾಧ್ಯವಾಗದಿದ್ದರೆ ದಿನವಿಡೀ ಸಮಯ ನೀಡಿದರೂ ಯಾವುದೇ ವಿಷಯವನ್ನು ಸ್ಪಷ್ಟಪಡಿಸಲಾರರು. ತಜ್ಞರಿಗೆಲ್ಲ 12–15 ನಿಮಿಷಯ ಕೊಡ್ತೀವಿ. ವಿಷಯ ದಾರಿ ತಪ್ಪದಂತೆ ನೋಡಿಕೊಳ್ಳಲು ಮಾಡರೇಟರ್‌ಗಳಿರ್ತಾರೆ. ಈ ಕಾರಣದಿಂದ ಒಂದು ವಿಷಯದ ಮೂರು ನಾಲ್ಕು ಆಯಾಮಗಳು 50–55 ನಿಮಿಷಗಳಲ್ಲಿ ಸ್ಪಷ್ಟ ಚಿತ್ರಣ ಸಿಗುವಂತಾಗುತ್ತದೆ.

ಪ್ರತಿಗೋಷ್ಠಿಯೂ ಕೇಳುಗರ ಮನಸಲ್ಲಿ ಗುಂಗಿಹುಳ ಬಿಡಬೇಕು. ಅದರ ಗುಂಗು ಇರಬೇಕು. ಈ ಕೆಲಸವನ್ನು ಪ್ರತಿಗೋಷ್ಠಿಗಳೂ ಮಾಡುತ್ತಿವೆ.

• ಲಿಟ್‌ಫೆಸ್ಟ್‌ಗೆ ಎಷ್ಟು ಜನ ಭೇಟಿ ನೀಡಿದ್ದರು?

ಕಳೆದ ವರ್ಷ ಬುಕ್‌ಬ್ರಹ್ಮ ಲಿಟ್‌ಫೆಸ್ಟ್ ಮೂರುದಿನಗಳಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಹೊರತುಪಡಿಸಿ, 45 ಸಾವಿರ ಜನರು ಭೇಟಿ ನೀಡಿದ್ದರು. ಆದರೆ ಎರಡು ತಿಂಗಳ ಅವಧಿಯಲ್ಲಿ ವಿವಿಧ ದೇಶಗಳಿಂದ ಐದು ವೇದಿಕೆಗಳ ಕಾರ್ಯಕ್ರಮವನ್ನು ಸುಮಾರು 20 ಲಕ್ಷ ಜನರು ವೀಕ್ಷಿಸಿದರು. ಈ ವರ್ಷ ಈ ತಲುಪುವಿಕೆ ಇನ್ನೂ ವಿಸ್ತಾರಗೊಳ್ಳುತ್ತಿದೆ.

• ಸಾಹಿತ್ಯದ ಕೊಡುಕೊಳ್ಳುವಿಕೆ ಅಂದ್ರಿ? ಅದನ್ನು ವಿವರಿಸಲು ಸಾಧ್ಯವೇ?

ಭಾರತೀಯ ಭಾಷೆಗಳ ಕೊಡುಕೊಳ್ಳುವಿಕೆ ಸಾರ್ಥಕ್ಯ ಕಾಣುತ್ತದೆಯೇ ಎಂಬ ಪ್ರಶ್ನೆ ನಮ್ಮಲ್ಲಿಯೂ ಇತ್ತು. ಕಳೆದ ವರ್ಷ 20–26 ಪ್ರಮುಖ ಕೃತಿಗಳು ಬೇರೆ ಭಾಷೆಯಿಂದ ಕನ್ನಡಕ್ಕೆ, ಕನ್ನಡದಿಂದ ಬೇರೆ ಭಾಷೆಗಳಿಗೆ ತರ್ಜುಮೆಗೊಳ್ಳುವ ಪ್ರಯತ್ನಗಳು ಆರಂಭವಾದವು. ಈ ವರ್ಷ ಈ ಸಂಖ್ಯೆ ಇನ್ನೂ ಹೆಚ್ಚಿದೆ. ಯಶವಂತ ಚಿತ್ತಾಲರ ಶಿಕಾರಿ ಈ ವರ್ಷ ತೆಲುಗು ಭಾಷೆಗೆ ಅನುವಾದವಾಗಲಿದೆ.

ಈ ವರ್ಷದಿಂದ ಆಹ್ವಾನಿತ ಭಾಷೆಯಾಗಿ ದಕ್ಷಿಣೇತರ ಭಾಷೆಗಳನ್ನು ಕರೆಯಬೇಕು ಎಂದುಕೊಂಡೆವು. ಮೊದಲಿಗೆ ಮರಾಠಿ ಭಾಷೆ ಬಂದಿದೆ. ಮುಂಬರುವ ವರ್ಷಗಳಲ್ಲಿ ಒರಿಯಾ, ಗುಜರಾತಿ, ಬಂಗಾಲಿ ಹೀಗೆ ವಿವಿಧ ಭಾಷೆಗಳು ಆಹ್ವಾನಿತ ಭಾಷೆಗಳಾಗಿ ಬರಲಿವೆ.

• ಬುಕ್‌ಬ್ರಹ್ಮ ಲಿಟ್‌ಫೆಸ್ಟ್‌ನ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಸಮಪ್ರಮಾಣದ ಮಹತ್ವ ನೀಡಿದ್ದು ಯಾಕೆ?

ಬುಕ್‌ಬ್ರಹ್ಮ ಲಿಟ್‌ಫೆಸ್ಟ್‌ನ ಆಕರ್ಷಣೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ಹೌದು. ಮುಖ್ಯವೇದಿಕೆಯೂ ಸೇರಿದಂತೆ, ಮೂರು ದಿನಗಳಲ್ಲಿ ಎಂಟು ಪ್ರದರ್ಶನಗಳಿರುತ್ತವೆ. ಸಂಗೀತ ಮತ್ತು ಪ್ರದರ್ಶನ ಕಲೆಗಳ ಸಂಯೋಜನೆ ಇಲ್ಲಿದೆ. ರಂಗಗೀತೆಗಳಿಗೂ, ಗಾನ ಕಥನಗಳಿಗೂ, ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳೂ ಇವುಗಳಲ್ಲಿ ಸೇರಿವೆ. ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೇರ್ಪಡಿಸಲು ಆಗುವುದಿಲ್ಲ. ಬೆಳಗ್ಗೆ ಸಂಗೀತದಿಂದ ದಿನ ಆರಂಭವಾದರೆ, ಸಂಜೆ ಪ್ರದರ್ಶನ ಕಲೆಗಳಿಂದ ಮುಕ್ತಾಯವಾಗುತ್ತದೆ. ಡಿಸೆಂಬರ್ ಹೊತ್ತಿಗೆ ಈ ಕಲಾವಿದರ ತಂಡಗಳಿಂದ ಡೇಟುಗಳನ್ನು ಖಚಿತಗೊಳಿಸಲಾಗುತ್ತದೆ.

• ಮುಂದಿನ ಲಿಟ್‌ಫೆಸ್ಟ್ ತಯಾರಿ ಯಾವಾಗಿನಿಂದ ಶುರುವಾಗುತ್ತದೆ?

ಮೂರು ದಿನಗಳ ಉತ್ಸವ ಮುಗಿದ ಕ್ಷಣದಿಂದಲೇ ಮುಂದಿನವರ್ಷದ ಲಿಟ್‌ಫೆಸ್ಟ್‌ನ ಕೆಲಸ ಆರಂಭವಾಗುತ್ತದೆ. ಬುಕ್‌ಬ್ರಹ್ಮ ಲಿಟ್‌ಫೆಸ್ಟ್ ಪ್ರತಿವರ್ಷವೂ ಹೆಚ್ಚು ಹೆಚ್ಚು ಜನರನ್ನು ಸೆಳೆಯುತ್ತಿದೆ. ಆಗಸ್ಟ್ ಎಂದರೆ ಬೆಂಗಳೂರು, ಬುಕ್‌ಬ್ರಹ್ಮ ಲಿಟ್‌ಫೆಸ್ಟ್ ಎಂಬಷ್ಟು ಜನಪ್ರಿಯ ಮತ್ತು ಜನಪರಗೊಳಿಸಬೇಕೆನ್ನುವುದು ಪ್ರತಿಷ್ಠಾನದ ಕನಸು. ಕನ್ನಡಿಗರ ಕಸುವು ನಮ್ಮೊಂದಿಗೆ ಜೊತೆಗೂಡುತ್ತಿದೆ.

ಜನರನ್ನು ಒಗ್ಗೂಡಿಸುವ ಕೆಲಸ ಧರ್ಮ ಮತ್ತು ಸಾಹಿತ್ಯ ಮಾಡುತ್ತದೆ. ಸಾಹಿತ್ಯವನ್ನೇ ಧರ್ಮದಂತೆ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಲಿಟ್‌ಫೆಸ್ಟ್‌ನಿಂದಾಗುತ್ತಿದೆ. ಕೂಡುವ, ಕಟ್ಟುವ ಮತ್ತು ಮುನ್ನಡೆಸುವ ಕೆಲಸ.

ಪ್ರಯೋಗಾತ್ಮಕತೆ ಪರಿಷ್ಕರಣೆಯ ಕಥನ ಪೂತನಿ

• ರುದ್ರೇಶ್ ಅದರಂಗಿ

ನಿರ್ಲಕ್ಷ್ಯಕ್ಕೊಳಗಾಗಿರುವ ಮೂಡಲಪಾಯ ಯಕ್ಷಗಾನಕ್ಕೆ ಮತ್ತೆ ಚೈತನ್ಯವನ್ನು ತುಂಬುವಂತೆ ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ ಮಹಾಮನೆಯವರು ‘ಪೂತನಿ’ಯನ್ನು ಪ್ರಯೋಗಿಸಿದ್ದಾರೆ. ಸಂಸ್ಕೃತಭೂಯಿಷ್ಠವಾದ ಸುದೀರ್ಘವಾದ ಸಂಭಾಷಣೆ ಮತ್ತು ಹಾಡುಗಳಿಗೆ ಕತ್ತರಿ ಪ್ರಯೋಗಿಸಿ, ದಟ್ಟವಾದ ಕುಣಿತವನ್ನು ಸರಳಗೊಳಿಸಿದ್ದಾರೆ. ಮೇಳದಲ್ಲಿ ಹಲಗೆಯ ಮೇಲೆ ಕುಣಿದು, ಹಲಗೆಯನ್ನು ಮುರಿದವನೇ ದೊಡ್ಡ ನಟನೆಂಬ ಭ್ರಮಾತ್ಮಕತೆಯನ್ನು ಇಲ್ಲವಾಗಿಸಿರುವ ಇವರು, ಕಥನಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದಾರೆ. ಪ್ರಸ್ತುತ ಪ್ರಯೋಗದ ಮೂಲಕ ಪ್ರಯೋಗಾತ್ಮಕತೆಯ ಜೊತೆಗೆ ಪರಿಷ್ಕರಣೆಯನ್ನು ಮಾಡಿದ್ದಾರೆ. ರಾತ್ರಿ ಪೂರ್ತಿ ಪ್ರದರ್ಶನಗೊಳ್ಳುವ ನಾಟಕವನ್ನು 90 ನಿಮಿಷಕ್ಕಿಳಿಸಿದ್ದಾರೆ. ಮೂಡಲಪಾಯದಲ್ಲಿ ಬಣ್ಣಬಣ್ಣಗಳಿಂದ ಕೂಡಿದ, ಮರದಿಂದ ಮಾಡಿದ ಕಿರೀಟ, ತೋಳಬಂದಿ, ಖಡ್ಗ ಮೊದಲಾದವುಗಳ ಭಾರದಿಂದ ಕಲಾವಿದರು ಬಳಲುವಂತಾಗುತ್ತದೆ. ಮಹೇಂದ್ರರವರು ವಸ್ತ್ರವಿನ್ಯಾಸದಲ್ಲಿ ಲಘುವಾದ ಕ್ಯಾನ್ವಾಸಿನಿಂದ ಮಾಡಿದ ಕಿರೀಟ, ವಸ್ತ್ರಾಲಂಕಾರಗಳು ಆಕರ್ಷಕವಾಗಿವೆಯಲ್ಲದೆ ನಟರಿಗೆ ಪೂರಕ ಮತ್ತು ಪ್ರೇರಕವಾಗಿರುವುದು ಸಕಾರಾತ್ಮಕ ಬದಲಾವಣೆಯೇ ಸರಿ.

ಆಶಾ ರಘು ಅವರು ಪುರಾಣದ ‘ಪೂತನಿ’ಯನ್ನು ಮಾತೃಹೃದಯಿಯನ್ನಾಗಿ ಚಿತ್ರಿಸಿದ್ದಾರೆ. ಕಂಸನ ಆಜ್ಞಾಸೇವಕಿಯಾದ ಪೂತನಿ ಮಕ್ಕಳನ್ನು ಕೊಲ್ಲುವ ರಕ್ಕಸಿಯಾದರೆ, ಇಲ್ಲಿ ಮಾತೃಹೃದಯಿ ಮಹಾಮಾತೆಯಾಗಿದ್ದಾಳೆ. ಪೂತನಿಯೆಂದರೆ ಕಪ್ಪು ಬಣ್ಣ ಮತ್ತು ದಢೂತಿಯೆಂಬ ಅಪಕಲ್ಪನೆಯನ್ನು ತೊಡೆದು ಸಹಜ ಹೆಣ್ಣಾಗಿಸಿದ್ದಾರೆ. ಕುವೆಂಪು ಅವರ ಮಮತೆಯಸುಳಿ ಮಂಥರೆಯಂತೆ ಪೂತನಿ ಮಾತೃಹೃದಯಿಯಾಗಿದ್ದಾಳೆ. ಕಂಸನ ಆಜ್ಞೆಯಂತೆ ಕೃಷ್ಣನನ್ನು ಕೊಲ್ಲಲು ಬಂದರೂ ಮುದ್ದು ಬಾಲಕೃಷ್ಣನನ್ನು ನೋಡಿ ಗತಿಸಿದ ತನ್ನ ಮಗನನ್ನು ಅವನಲ್ಲಿ ಕಾಣುತ್ತಾಳೆ. ಕೊಲ್ಲಲೆಂದು ಬಂದವಳು ಮಹಾಮಾತೆಯಾಗಿ ಮರಳಿ ಹೋಗುತ್ತಾಳೆ. ಪುರಾಣದ ವಸ್ತುವನ್ನು ಜನಪರಗೊಳಿಸಿರುವ ನಾಟಕಕಾರರ ಆಶಯ ಪ್ರಸ್ತುತ ಕಾಲದ ಅವಶ್ಯವೂ ಹೌದು.

ಏಕವ್ಯಕ್ತಿ ಪ್ರದರ್ಶನದಲ್ಲಿ ನಿರ್ಮಲ ನಾದನ್ ಅವರು ಪೂತನಿಯಾಗಿ ಅಭಿನಯದ ಮೂಲಕ ಪರಕಾಯಪ್ರವೇಶವನ್ನು ಪಡೆದಿದ್ದಾರೆ. ಮೂಡಲಪಾಯದ ಕುಣಿತದಲ್ಲಿ ತೋಂಗ, ಚೌಕ, ಪಕ್ಕ ಚೌಕ, ಗುಪ್ಪಡಗ, ಜರ್ಕುತಾಳ ಮೊದಲಾದವುಗಳ ಹೆಜ್ಜೆ ಹಾಕುವ ಮೂಲಕ ಪ್ರೇಕ್ಷಕರು ಬೆರಗಾಗುವಂತೆ ಮಾಡುತ್ತಾರೆ. ಮೂಡಲಪಾಯದಲ್ಲಿ ಹೆಜ್ಜೆ ಹಾಕುವ ಮತ್ತು ಕುಣಿಯುವಲ್ಲಿ ಗಂಡು ಕುಣಿತ ಎಂದು ಹೇಳಲಾಗುತ್ತದೆ. ನಿರ್ಮಲ ನಾದನ್ ಕುಣಿತದಲ್ಲಿನ ಗಡಸುತನವನ್ನು ಕಳೆದು ಸೊಬಗನ್ನು ತುಂಬಿದ್ದು ಕೂಡ ಪ್ರಯೋಗಾತ್ಮಕತೆಯೇ. ಸಂಭಾಷಣೆ, ಹಾಡು ಮತ್ತು ಕುಣಿತಗಳಲ್ಲಿ ಭಾವಾಭಿನಯವು ಕ್ಲುಪ್ತವಾಗಿರುತ್ತದೆ. ಆದರೆ ನಿರ್ಮಲ ನಾದನ್ ಇಡೀ ಪ್ರದರ್ಶನದಲ್ಲಿ ಭಾವಾಭಿನಯವನ್ನೇ ಪ್ರಧಾನವಾಗಿಸಿದ್ದಾರೆ. ಹೆಣ್ಣಿನ ಸಹಜ ಹೊನಪು, ವೈಯಾರ, ಲಾವಣ್ಯವನ್ನು ಭಾವಾಭಿನಯಗಳೊಂದಿಗೆ ವ್ಯಕ್ತಪಡಿಸಿರುವುದು ಚೆನ್ನಾಗಿದೆ. ಗಂಡನೊಂದಿಗಿನ ಹೊನಪು, ಪ್ರಭುವಿನೊಂದಿಗೆ ವಿನಯವನ್ನು ಪ್ರದರ್ಶಿಸುವ ಇವರು, ತಾಯಿಯಾಗಿ ವಾತ್ಸಲ್ಯ ಭಾವವನ್ನು ಪ್ರಕಾಶಿಸಿದ್ದಾರೆ. ಕೃಷ್ಣನನ್ನು ಕೊಲ್ಲಲು ಬಂದವಳಲ್ಲಿ ಮಾತೃಭಾವ ಜಾಗೃತಗೊಂಡು, ಮ್ಲಾನವದನಳಾಗುವಲ್ಲಿನ ಅಭಿನಯ ಮನೋಜ್ಞವಾದುದು. ಕುಣಿತದಲ್ಲಿ ಇನ್ನೂ ಹೆಚ್ಚಿನ ನಾವೀನ್ಯತೆಯನ್ನು ಮೈಗೂಡಿಸಿಕೊಂಡರೆ ಪ್ರಯೋಗ ಮತ್ತಷ್ಟು ಉತ್ತಮವಾಗುತ್ತದೆ.

ಭಾಗವತಿಕೆಯಲ್ಲಿ ಅರಳಗುಪ್ಪೆ ಪುಟ್ಟಸ್ವಾಮಿಯವರು ರಾಗಗಳನ್ನು ಹೆಚ್ಚು ಲಂಬಿಸದೆ ಅಡಕಗೊಳಿಸಿದ್ದಾರೆ. ಗಣೇಶ ಸ್ತುತಿ, ನಾಂದಿ ಪದ್ಯ, ಕಥಾಸಾರ, ಪಾತ್ರದ ಪ್ರವೇಶದೊಂದಿಗೆ ಪ್ರಾರಂಭವಾಗುವ ಭಾಗವತಿಕೆ ಪಾತ್ರದೊಂದಿಗೆ ಅನಗತ್ಯವಾಗಿ ಸಂಭಾಷಿಸದೆ, ಪಾತ್ರಕ್ಕೆ ಪ್ರಾಧಾನ್ಯತೆಯನ್ನು ನೀಡಿ ಭಾಗವತಿಕೆ ಹಿಮ್ಮೇಳವಾಗಿದೆ. ಮದ್ದಳೆಯಲ್ಲಿ ಯೋಗೇಶ ಮತ್ತು ಮುಖವೀಣೆಯಲ್ಲಿ ಮರೂರ್ ರಮೇಶ್ ಸಾಥ್ ನೀಡಿದ್ದಾರೆ.

ಇದು ಮೂಡಲಪಾಯದ ಸಂಪ್ರದಾಯದವರು ಆಕ್ಷೇಪಿಸಬಹುದಾದರೂ ಕಲಾಪ್ರಕಾರವನ್ನುಳಿಸುವ ನಿಟ್ಟಿನಲ್ಲಿ ಪರಿಷ್ಕರಣೆ ಮತ್ತು ಪ್ರಯೋಗಾತ್ಮಕತೆ ಸ್ವಾಗತಾರ್ಹವಾದುದು. ಪಡುವಲಪಾಯಕ್ಕೆ ವಿದ್ವಾಂಸರು ಮತ್ತು ಪಂಡಿತರು ಪರಿಷ್ಕರಣೆ ಮಾಡಿದರು. ಕೆ.ಶಿವರಾಮ ಕಾರಂತರ ಪ್ರಯೋಗಾತ್ಮಕತೆಯನ್ನು ಎಲ್ಲರೂ ಸ್ವಾಗತಿಸಿದರು. ಅಲ್ಲಿ ಪಾತ್ರಧಾರಿಗಳ ಸಂಭಾಷಣೆ ಸಮಕಾಲೀನಗೊಂಡು ಸ್ಪಷ್ಟತೆ ಮತ್ತು ಸ್ಫುಟತ್ವದಿಂದ ಕೂಡಿದೆ. ಆಶಾ ರಘು ಅವರ ನಾಟಕವನ್ನು ಸಂಪಿಗೆ ತೋಂಟದಾರ್ಯರವರು ಮೂಡಲಪಾಯದ ಸಂಭಾಷಣೆಗೆ ಒಗ್ಗಿಸಿದ್ದಾರೆ. ನರಸೇಗೌಡ ಅವರು ನಾಟಕಕ್ಕೆ ಬೇಕಾದ ಹಾಡುಗಳನ್ನು ಸಾಹಿತ್ಯ ಪ್ರಧಾನ ಮಾಡಿ ರಚಿಸಿದ್ದಾರೆ. ವಿಶ್ವನಾಥ ಅವರ ರಂಗಸಜ್ಜಿಕೆ, ರವಿಶಂಕರ ಅವರ ಬೆಳಕು ಎಲ್ಲವೂ ಕೂಡಿ ‘ಪೂತನಿ’ ಮೂಡಲಪಾಯ ಯಕ್ಷಗಾನದ ರಾಯಭಾರಿಯಂತೆ ನಾಡಿನೆಲ್ಲೆಡೆ ಸಂಚಾರಕ್ಕೆ ಸಿದ್ಧಗೊಂಡಿದೆ. ನಿರ್ಲಕ್ಷಿತ ಮೂಡಲಪಾಯ ಯಕ್ಷಗಾನಕ್ಕೆ ಮರುಚೈತನ್ಯವನ್ನು ನೀಡಿರುವ ರಂಗಮಂಡಲದ ಮಲ್ಲಿಕಾರ್ಜುನಸ್ವಾಮಿ ಮಹಾಮನೆಯವರ ಪ್ರಯೋಗಕ್ಕೆ ಪ್ರೇಕ್ಷಕರು ಮೊದಲ ಪ್ರದರ್ಶನದಲ್ಲಿಯೇ ಪ್ರೋತ್ಸಾಹಿಸಿ ಮೆಚ್ಚುಗೆ ಸೂಚಿಸಿದ್ದಾರೆ.

ಬಿದಿರು ಕಲಾಕೃತಿಗಳಿಗೆ ಮರುಜೀವ

• ಜಿ.ಎಂ.ಬೊಮ್ನಳ್ಳಿ

ಹುಟ್ಟಿನಿಂದ ಸಾಯುವವರೆಗೂ ಮನುಷ್ಯನ ಬದುಕಿನ ಒಂದು ಭಾಗವೇ ಆಗಿದ್ದ ಕಾಡಿನ ಬಿದಿರು ಉತ್ಪನ್ನಗಳು ಈಗ ಕೇವಲ ಕಲಾಕೃತಿಗೆ ಸೀಮಿತವಾಗುವಷ್ಟು ಅದರ ಅವಶ್ಯಗಳು ಕಡಿಮೆಯಾಗಿವೆ. ಇದಕ್ಕೆ ಕಾರಣ ಬಿದಿರು ಕೊರತೆ. ಇದರ ನಡುವೆಯೂ ಕಾಡಿನ ಜಿಲ್ಲೆ ಎಂದೇ ಪ್ರಸಿದ್ಧಿ ಪಡೆದ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿದಿರು ಉದ್ಯಮ ಮತ್ತೆ ಚಿಗುರುತ್ತಿದೆ.

ಉತ್ತರ ಕನ್ನಡದ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಮಹಿಳೆಯರಿಗೆ ಮತ್ತು ಆಸಕ್ತ ಯುವಕರಿಗೆ ಸ್ವ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಪ್ರತಿ ವರ್ಷ ಬಿದಿರು ಕಲಾಕೃತಿ ಸಿದ್ಧಪಡಿಸುವ ತರಬೇತಿ ನೀಡಲಾಗುತ್ತಿದ್ದು ಇದರ ಉಪಯೋಗವನ್ನು ಈಗಾಗಲೇ ಹಲವರು ಪಡೆದುಕೊಂಡಿದ್ದಾರೆ. ವಿಶೇಷವಾಗಿ ಈ ಭಾಗದ ಬುಡಕಟ್ಟು ಜನಾಂಗದ ಮಹಿಳೆಯರು, ಯುವಕರು ಬಿದಿರಿನಿಂದ ಆಕರ್ಷಕ ಕಲಾಕೃತಿಗಳನ್ನು ಮಾಡುವುದರಲ್ಲಿ ತರಬೇತಿ ಪಡೆದಿದ್ದು, ನೂರಾರು ಜನರು ಕೌಶಲ್ಯಾಭಿವೃದ್ಧಿ ಹೊಂದಿ ಸ್ವ ಉದ್ಯೋಗದಲ್ಲಿ ತೊಡಗಿದ್ದಾರೆ. ಈ ಮೂಲಕ ಬಿದಿರಿಗೂ ಬೇಡಿಕೆ ಬರಲು ಕಾರಣರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿದಿರು ನಾಲ್ಕೈದು ವರ್ಷಗಳಿಂದ ಕಟ್ಟೆ ರೋಗದಿಂದ ಸಂಪೂರ್ಣ ಎನ್ನುವಷ್ಟು ನಾಶವಾಗಿದ್ದು, ಅವು ಪುನಃ ಚಿಗುರಲು ಇನ್ನೂ ಹತ್ತಾರು ವರ್ಷಗಳೇ ಬೇಕು. ಉದ್ಯಮ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಮಹತ್ವ ಪಡೆದುಕೊಂಡಿದ್ದ ಬಿದಿರು ಕಲಾಕೃತಿಗಳಿಗೆ ಈಗಲೂ ಬೇಡಿಕೆ ಇದೆ. ಆದರೆ ಅಗತ್ಯಕ್ಕೆ ತಕ್ಕಂತೆ ಬಿದಿರು ಸಿಗುತ್ತಿಲ್ಲ.

ಶಿರಸಿ ತಾಲ್ಲೂಕಿನ ತಾರಗೋಡದ ಕೃಷಿಕ ಸೀತಾರಾಮ ಹೆಗಡೆ ಅವರು ಬಿದಿರಿನಿಂದ ಕಲಾಕೃತಿಗಳನ್ನು ತಯಾರಿಸುವುದರಲ್ಲಿ ಪಳಗಿದ್ದಾರೆ. ಕೃಷಿ ಕಾರ್ಯದ ಜೊತೆಯಲ್ಲೇ ಬಿಡುವಿನ ಸಮಯದಲ್ಲಿ ಬಿದಿರಿನಿಂದ ಹಲವಾರು ಬಗೆಯ ಕರಕುಶಲ ತಯಾರಿಕೆಯನ್ನು ಮಾಡುತ್ತಿದ್ದ ಇವರು ಈಗ ಬಿದಿರು ಕೊರತೆಯಿಂದಾಗಿ ಈ ಹವ್ಯಾಸವನ್ನು ಕೈಬಿಡುವ ಸಂದರ್ಭ ಎದುರಾಗಿದೆ. ಹೀಗೆ ಅನೇಕ ಕಲಾವಿದರು ಬಿದಿರಿಲ್ಲದೆ ಕೈಕಟ್ಟಿ ಕೂರುವಂತಾಗಿದೆ.

ಕಥೆ
ಮೂಲ: ಪಿನಾಕಿನ್ ದವೆ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ
ನಾಯಿಯ ಸಾವು
prajavani.net/short-story

ಕವನ
ಶ್ರೀನಿವಾಸ ಶೆಟ್ಟಿ
ಅವರ
ಮಾಂಗಟ್ಟೆ ಹಕ್ಕಿ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಅಳಲ್ವೆಂಕೆ

ಅಳಲ್ವೆಂಕೆ, ಅಳಲುರಿ (ನಾ). ದುಃಖದ ಬೇಗೆ; ಅಳಲ ಬೆಂಕಿ

ದುಃಖ ಬೆಂಕಿಗೆ ಸಮನಾದುದು ಎಂದು ಪಾಳಿ ಸಾಹಿತ್ಯದಲ್ಲಿದೆ. ಬುದ್ಧನ ಉಪದೇಶಗಳಲ್ಲಿಯೂ ಇದೆ.

ರಾಮನನ್ನು ಗಂಗೆಯ ಬಳಿ ಬೀಳ್ಕೊಟ್ಟು ಬಂದ ಸುಮಂತನ ನುಡಿಕೇಳಿ, ದಶರಥನು ಸಿಡಿಲ ಹೊಡೆತಕ್ಕೆ ಸಿಕ್ಕಂತೆ ಮೂರ್ಛೆ ಹೋಗುವನು. ಶೈತ್ಯೋಪಚಾರದಿಂದ ಮೂರ್ಛೆ ನಿವಾರಿಸಿ ಗುರುಗಳಾದ ವಾಸುದೇವ ವಸಿಷ್ಠಾದಿಗಳು ತಾವೇ ದುಃಖಿಸುತ್ತ ಸಮಾಧಾನ ಹೇಳುವರು. ಆಗಿನ ದೊರೆಯ ತೀವ್ರ ದುಃಖವನ್ನು ಕುವೆಂಪು ‘ಅಳಲ್ವೆಂಕೆ’ ಪದದಿಂದ ಹೀಗೆ ಬಣ್ಣಿಸಿದ್ದಾರೆ:

‘ಗುರುವರೇಣ್ಯರ ನುಡಿಗೆ ದೊರೆಯೆರ್ದೆಯ-
ಳಲ್ವೆಂಕೆ
ನೂರ್ಮಡಿಸುತುಕ್ಕಿದುದು.’

ನಿಲ್ನೀರು

ನಿಲ್ನೀರು (ನಾ). ನಿಂತನೀರು; ದಡದ ಬಳಿಯಿರುವ ನೀರು

ರಾಮ ಸೀತೆ ಲಕ್ಷ್ಮಣರು ಋಷಿ ಭರದ್ವಾಜರ ಆಶ್ರಮದಲ್ಲಿದ್ದು, ಅವರ ಸೂಚನೆಯಂತೆ ಚಿತ್ರಕೂಟಕ್ಕೆ ಹೋಗುವರು. ಕುವೆಂಪು ಅವರು ದಡದ ನೀರನ್ನು ‘ನಿಲ್ನೀರು’ ಎಂದು ಕರೆದು, ತೆಪ್ಪವನ್ನು ಹರಿನೀರಿಗೆ ನೂಕಿದ್ದನ್ನು ಹೀಗೆ ರೇಖಿಸಿದ್ದಾರೆ.

‘ಲಕ್ಷ್ಮಣನದಂ
ದಡದೆಡೆಯ ತೆಳ್ಳೆ ನಿಲ್‌ನೀರಿಂದೆ ಹರಿನೀರ್ಗೆ
ನೂಂಕಿದನ್ ನೀಳ್ಗಳುಗಳಿಂ.’

ತಲೆಮೆದೆ

ತಲೆಮೆದೆ (ನಾ). ತಲೆಯ ಬಣವೆ, ರಾಶಿ

ಯುದ್ಧದ ಎರಡನೆಯ ದಿನ ರಾವಣನಿಂದ ಮೃತ್ಯುನೇಮ (ಗೆಲ್ಲು ಅಥವಾ ಸಾಯಿ ಎಂಬ ನಿಯಮ) ಪಡೆದು ಬಂದ ವಜ್ರದಂಷ್ಟ್ರನು ನಡೆಸಿದ ಕ್ರೌರ್ಯದಿಂದ ಅಂಗದ ತತ್ತರಿಸಿ ಹೋಗುವನು. ಆ ರಾಕ್ಷಸನು ಹೊಲಕೊಯ್ಯುವ ದೊಡ್ಡ ಒಕ್ಕಲಿಗನಂತೆ ವಾನರರನ್ನು ತರಿದು ಹಾಕಿದ ಉಪಮಾನದಲ್ಲಿ ಕುವೆಂಪು ಅವರು ‘ತಲೆಮೆದೆ’ ಪದವನ್ನು ಹೀಗೆ ಪ್ರಯೋಗಿಸಿದ್ದಾರೆ.

‘ಕಿಡಿಗರೆವ ತನ್ನ ಕರಚಕ್ರಮಂ
ಗಿರ್ರನೆ ತಿರುಗಿಸುತ್ತಾ ಕರ್ಬುರಂ ಕೆಯ್‌ಗೊಯ್ವ
ಪೇರೊಕ್ಕಲಿಗನಂತೆ ತರಿದೊಟ್ಟಿದನು ಬಣಬೆಯಂ
ಹಗೆಯ ತಲೆಮೆದೆಗಳಿಂ’

ಮೊದಲ ಓದು

ನೂರಾರು ಅನುಭವಗಳ ನೆನಪಿನ ಸರಣಿ

ಜೀವರತಿ
ಲೇ: ಜ.ನಾ.ತೇಜಶ್ರೀ
ಪ್ರ: ಅಮೂಲ್ಯ ಪುಸ್ತಕ
ಸಂ: 944867677

ಕನ್ನಡದ ಮುಖ್ಯ ಕವಿ, ಅನುವಾದಕಿ ಜ.ನಾ. ತೇಜಶ್ರೀ ತಮ್ಮ ಚೊಚ್ಚಲ ಕಾದಂಬರಿ ‘ಜೀವರತಿ’ ಪ್ರಕಟಿಸಿದ್ದಾರೆ. ಕಾವ್ಯದಂತೆಯೇ ಗದ್ಯವನ್ನೂ ಗಾಢವಾದ ಅಭಿವ್ಯಕ್ತಿಗೆ ದಾರಿಯಾಗಿಸಿರುವರು. ಮೂರು ತಲೆಮಾರಿನ ಕಥಾ ಹಂದರದಲ್ಲಿ ನೂರಾರು ಅನುಭವಗಳ ನೆನಪಿನ ಸರಣಿ. ಟಿಪ್ಪುವಿನ ನೆನಪು, ಸೇನಾಧಿಪತಿ ಹೊಂಬಾಳೆಗೌಡನ ಸಾಹಸ, ಗಾಂಧೀಜಿಯ ಸ್ಮೃತಿಯ ಲೋಕವೂ ಇಲ್ಲಿದೆ. ಈ ನೆನಪುಗಳು ಮನುಷ್ಯರ ದೈನಿಕ ಮತ್ತು ದೈವಿಕ ಜೀವನವನ್ನು ತಳುಕು ಹಾಕಿಕೊಂಡಿವೆ. ಮನುಷ್ಯ ಸಂಬಂಧ, ಪ್ರೇಮ ಕಾಮ, ಹುಟ್ಟು ಸಾವುಗಳ ಆವರ್ತನದಲ್ಲಿ ಪಾತ್ರಗಳು ಹಿಂದೆ ಸರಿದು ಜೀವನದ ವಿಸ್ಮಯತೆ ಮಾತ್ರ ಕಣ್ಣಿಗೆ ಒಡೆದು ಕಾಣುತ್ತದೆ. ದೊಡ್ಡಯ್ಯನ ವಿಚಿತ್ರ ಲೋಕ, ಅವ್ವಕ್ಕನ ಆಂತರ್ಯ, ಕುಟ್ಟಪ್ಪನ ಅಸಹಾಯಕತೆ, ರತಿಯ ಸಾವು ಇನ್ನಿಲ್ಲದಂತೆ ಕಾಡುತ್ತವೆ. ಹಾಗಂತ ಇದು ಜೀವನ ಚರಿತ್ರೆಯ ಕಥನವಲ್ಲ. ಆದರೆ ಖಂಡಿತಾ ಜೀವನ ಚಾರಿತ್ರ್ಯದ ಕಥೆ. ಬದುಕಿನ ನೋವು, ಹತಾಷೆ, ಮತ್ತೆ ಕಟ್ಟಿಕೊಳ್ಳುವ ಆಸೆ, ಪ್ರೇಮಿಸುವ ಹಂಬಲ, ಜೀವನವನ್ನು ಕಂಡುಕೊಳ್ಳುವ ಅಭೀಪ್ಸೆ ಬಾಯ್ದೆರೆದು ನಿಂತಿದೆ. ಇಂಥ ಕನಸುಗಳಿಗೆ ಕೆಲ ಪಾತ್ರಗಳು ಆಸರೆಯಾದರೆ, ಮತ್ತೆ ಕೆಲ ಪಾತ್ರಗಳು ದಾಳಗಳಾಗಿವೆ. ಮನುಷ್ಯರ ನಡುವಿನ ಪ್ರೇಮ ಒಣಗುತ್ತಿರುವುದೆ ಇಲ್ಲಿನ ದುರಂತಗಳಿಗೆ ಕಾರಣ. ನಿಸರ್ಗದೊಂದಿಗೆ ಬೆಸೆದುಕೊಂಡಿರುವ ಇಲ್ಲಿಯ ಬದುಕು ನಿಸರ್ಗದ ಆವರ್ತನಗಳಂತೆಯೇ ಅನಿರೀಕ್ಷಿತ ಹಾಗೂ ನಿಗೂಢ. ಕುವೆಂಪು ಅವರ ‘ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಕಶ್ಚಿತವಲ್ಲ’ ಎಂಬ ಸೃಜನಶೀಲ ತತ್ವವನ್ನು ಆಳದಲ್ಲಿ ಸ್ವೀಕರಿಸಿದಂತೆ ಕಾದಂಬರಿಯ ರಚನೆಯಿದೆ. ಕನ್ನಡ ಕಾದಂಬರಿಗಳ ಅಭಿಜಾತ ಪರಂಪರೆಯನ್ನು ನೆನಪಿಸುವ ಈ ಕಾದಂಬರಿಯ ಭಾವಕೋಶ ಕನ್ನಡದಲ್ಲಿ ಈಗ ರಚನೆಗೊಳ್ಳುತ್ತಿರುವ ಕಾದಂಬರಿಗಳ ಒಂದು ಮುಖ್ಯ ಯಶಸ್ಸಿನಂತೆ ಕಂಡುಬರುತ್ತಿದೆ.

ಪುಟ: 396 ₹450

ರೋಮಾಂಚನಕಾರಿ ಕಥೆಗಳು

ಅನಿರೀಕ್ಷಿತ ಕಥೆಗಳು
ಲೇ: ರೊಆಲ್ಡ್‌ದಾಹ್ಲ್
ಕನ್ನಡಕ್ಕೆ: ಜೆ.ವಿ. ಕಾರ್ಲೊ
ಪ್ರ: ಸೃಷ್ಟಿ ಪಬ್ಲಿಕೇಷನ್ಸ್
ಸಂ: 9845096668

ಇಂಗ್ಲಿಷ್ ಓದುಗರನ್ನು ಬರಹದ ಮೂಲಕ ಚಕಿತಗೊಳಿಸಿದ ರೊಆಲ್ಡ್‌ದಾಹ್ಲ್ ಅವರ ಸಣ್ಣಕಥೆಗಳು ‘Tales of Unexpected’ ಕೃತಿ ಕನ್ನಡದಲ್ಲಿ ‘ಅನಿರೀಕ್ಷಿತ ಕಥೆಗಳು’ ಎಂದು ಪ್ರಕಟವಾಗಿದೆ. ಶೀರ್ಷಿಕೆಯೇ ಹೇಳುವಂತೆ ಇಲ್ಲಿನ ಕಥೆಗಳಲ್ಲಿ ಅನಿರೀಕ್ಷಿತ ತಿರುವುಗಳಿವೆ. ಓದುಗನನ್ನು ಕುತೂಹಲಕ್ಕೆ ಹಚ್ಚಿ, ಕಥೆ ಮುಗಿಯುವವರೆಗೂ ಉದ್ವೇಗ ಹೆಚ್ಚಿಸುತ್ತದೆ. ಕೊನೆಯಲ್ಲಿ ಹೀಗೆ ಇರಬಹುದು ಎಂದು ಊಹಿಸಿದರೆ ಅದನ್ನು ಇಲ್ಲಿನ ಕಥೆಗಳು ಸುಳ್ಳು ಮಾಡುತ್ತವೆ. ಓದಿದ ಬಳಿಕ ಉಂಟಾಗುವ ರೋಮಾಂಚನ ಭಾವ ವಿಶೇಷ ಬಗೆಯದು.

ಪತ್ತೆದಾರಿ ಕಾದಂಬರಿ ಓದುವಾಗ ಉಂಟಾಗುವ ಕುತೂಹಲ, ರೋಮಾಂಚನ, ಉದ್ವೇಗ ಪುಸ್ತಕದುದ್ದಕ್ಕೂ ಅನುಭವವಾಗುತ್ತದೆ. ಅದರೆ ಇಲ್ಲಿನ ಕಥೆಗಳಿಗೆ ಯಾವುದನ್ನೂ ಪತ್ತೆ ಮಾಡುವ ಉಮೇದು ಇಲ್ಲ. ದಾಹ್ಲ್ ಅವರ ನಿರೂಪಣಾ ಶೈಲಿ ನಿಮ್ಮ ಓದಿಗೆ ವಿಶಿಷ್ಟ ಅನುಭವ ನೀಡುತ್ತದೆ. ಜೆ.ವಿ ಕಾರ್ಲೊ ಅವರ ಸೊಗಸಾದ ಅನುವಾದ, ಮೂಲ ಕಥೆಗಳೇನೋ ಎಂದೆನಿಸಿಬಿಡುತ್ತದೆ. ಓದುಗರು ಮೆಚ್ಚಿಕೊಳ್ಳವಂತೆ ದಾಹ್ಲರನ್ನು ಕಾರ್ಲೊ ಕನ್ನಡಕ್ಕೆ ಪರಿಚಯಿಸಿದ್ದಾರೆ.

ಇಲ್ಲಿನ ಕಥೆಗಳಲ್ಲಿರುವ ಅನಿರೀಕ್ಷಿತ ತಿರುವುಗಳೇ ಓದುಗರ ಪಾಲಿಗೆ ರಸಪಾಕ. ಕಥಾವಸ್ತು, ಕಥೆ ಕಟ್ಟುವ ದಾಹ್ಲರ ಕಸುಬುದಾರಿಗೆ ಪುಸ್ತಕದ ಹೆಚ್ಚುಗಾರಿಕೆ. ವಿಶಿಷ್ಟ ಬಗೆಯ ಕಥೆ ನಿರೂಪಣಾ ಶೈಲಿ ಓದುಗರ ಭಾವವನ್ನು ಕ್ಷಣ ಕ್ಷಣಕ್ಕೆ ಬದಲಿಸುತ್ತದೆ. ಅಚ್ಚರಿಯ ಅಂತ್ಯ ಓದುಗನನ್ನು ಚಕಿತಗೊಳಿಸುತ್ತದೆ.

ಕಥೆಯ ಆರಂಭದಲ್ಲಿ ಬರುವ ಸನ್ನಿವೇಶಗಳು ಸಾಮಾನ್ಯ ಅನಿಸಿದರೂ, ಮಧ್ಯದಲ್ಲಿ ವಿಚಿತ್ರ ತಿರುವು ಪಡೆದುಕೊಂಡು ಕೊನೆಗೆ ಅಸಾಮಾನ್ಯ ಪರಿಸ್ಥಿತಿ ನಿರ್ಮಿಸುತ್ತದೆ. ನಮಗೆ ತಿಳಿದಿರುವ ಸನ್ನಿವೇಶಗಳನ್ನು ವಿಶಿಷ್ಟವಾಗಿ ಚಿತ್ರಿಸಿರುವುದೇ, ಇಲ್ಲಿನ ಕಥೆಗಳನ್ನು ಬೇರೆ ಕಥೆಗಳಿಗಿಂತ ಭಿನ್ನವಾಗಿಸಿದೆ. ಇಲ್ಲಿನ ಕಥೆಗಳ ಕಲಾತ್ಮಕತೆಯನ್ನು ಮೆಚ್ಚಬೇಕೇ ವಿನಃ ಇಲ್ಲಿ ತಾತ್ವಿಕತೆಯನ್ನು ಹುಡುಕಕೂಡದು. ಬದುಕಿನ ಬಗೆಗಿನ ಪಾಠಗಳನ್ನು ಓದುಗರು ಹೆಕ್ಕಬಹುದು. ಎಲ್ಲಾ ತೆರನಾದ ಓದುಗರಿಗೆ ಈ ಪುಸ್ತಕ ಪಥ್ಯವಾಗಬಲ್ಲದು.

ಪುಟ: 181 ₹230

ಶೂನ್ಯ ಇಂಗಾಲ ಸಾಧನೆ ಜಗತ್ತಿನ ಸುತ್ತ...

ಬರಲಿದೆ ನೆಟ್ ಝೀರೊ
ಲೇ: ಗುರುರಾಜ್ ಎಸ್. ದಾವಣಗೆರೆ
ಪ್ರ: ವಸಿಷ್ಠ ಬುಕ್ಸ್
ಸಂ: 99010 67738

ಫ್ಯಾಷನ್ ಲೋಕವು ಪರಿಸರಕ್ಕೆ ಮಾರಕ ಎಂದರೆ ನಂಬಬಹುದೇ? ಬ್ಯಾಟರಿ ಚಾಲಿತ ವಾಹನಗಳು ಪರಿಸರಕ್ಕೆ ಎಷ್ಟು ಪೂರಕ? ಸರ್ಕಾರ ಶಿಫಾರಸು ಮಾಡುವ ಹಸಿರು ಪಟಾಕಿ ಎಂದರೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ವೈಜ್ಞಾನಿಕ ತಳಹದಿಯಲ್ಲಿ ವಿವರಣೆ ಸಹಿತ ಉತ್ತರ ಮತ್ತು ಚರ್ಚೆಗೆ ವೇದಿಕೆಯನ್ನು ಲೇಖಕ ಗುರುರಾಜ್ ಎಸ್. ದಾವಣಗೆರೆ ಅವರು ‘ಬರಲಿದೆ ನೆಟ್ ಝೀರೊ: ಶೂನ್ಯ ಇಂಗಾಲದತ್ತ ನಮ್ಮ ನಡೆ’ ಕೃತಿಯಲ್ಲಿ ನೀಡಿದ್ದಾರೆ.

ವಾತಾವರಣ ಸೇರುತ್ತಿರುವ ಇಂಗಾಲ ಡೈಆಕ್ಸೈಡ್ ಅನ್ನು ಶೂನ್ಯಕ್ಕೆ ಇಳಿಸುತ್ತೇವೆ ಎಂದು ಮುಂದುವರಿದ ರಾಷ್ಟ್ರಗಳು ಈಗಾಗಲೇ ಘೋಷಿಸಿಕೊಂಡಿವೆ. ಭಾರತವು 2070ರ ಹೊತ್ತಿಗೆ ಇಂಗಾಲ ಉತ್ಪಾದನೆಯನ್ನು ಶೂನ್ಯಕ್ಕೆ ಇಳಿಸುವ ಗುರಿ ಹಾಕಿಕೊಂಡಿದೆ. ಹಾಗಿದ್ದರೆ ಇದನ್ನು ಸಾಧಿಸುವ ಬಗೆ ಹೇಗೆ, ಇರುವ ಸವಾಲುಗಳೇನು ಹಾಗೂ ಇಂಧನ ಮೂಲದ ಹೊಸ ಸಾಧ್ಯತೆಗಳೇನು ಎಂಬುದನ್ನು ಲೇಖಕ ಇಲ್ಲಿ ಚರ್ಚಿಸಿದ್ದಾರೆ.

ನವೀಕರಿಸಲಾಗದ ಇಂಧನಗಳು ಖಾಲಿಯಾದರೆ ಮುಂದೇನು ಎಂಬ ಪ್ರಶ್ನೆಯ ಸುತ್ತಲಿನ ಚರ್ಚೆ, ಜಲಜನಕವಾಗಲಿದೆಯೇ ಭೂಮಿಯ ಹೊಸ ಗೆಳೆಯ ಎಂಬ ಸಾಧ್ಯತೆಯ ಒಳನೋಟ, ಸೌರ ಶಕ್ತಿ ನಿಜಕ್ಕೂ ಹಸಿರು ಇಂಧನವೇ ಎಂಬ ಪ್ರಶ್ನೆಗಳಿಗೆ ಉತ್ತರದ ಜತೆಗೆ ಮಾಲಿನ್ಯ ಸೃಷ್ಟಿಸಿರುವ ಕರಾಳ ನೆರಳಿನ ಕಥನಗಳು ಈ ಕೃತಿಯಲ್ಲಿವೆ.

ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವುದು ಅಪಾಯಕಾರಿ ಎಂದಾಗ, ಅಣು ವಿದ್ಯುತ್ ಸ್ಥಾವರಗಳ ಸ್ಥಾಪನೆ ಆರಂಭಗೊಂಡವು. ಇದೀಗ ಜಿಯೊಥರ್ಮಲ್ ವಿದ್ಯುತ್ ಉತ್ಪಾದನೆಯತ್ತ ಅಭಿವೃದ್ಧಿ ರಾಷ್ಟ್ರಗಳ ಚಿತ್ತ ನೆಟ್ಟಿದೆ. ಭೂಮಿ ಆಳದ ಶಾಖವನ್ನೇ ವಿದ್ಯುತ್ ಉತ್ಪಾದನೆಗೆ ಬಳಸುವ ಈ ಯೋಜನೆ ಕೆಲಸ ಮಾಡುವುದು ಹೇಗೆ ಎಂಬ ಕುತೂಹಲಕರ ವಿವರಗಳೂ ಈ ಕೃತಿಯಲ್ಲಿವೆ. ಜತೆಗೆ ಇಂದಿನ ಅಧ್ವಾನ ಹಾಗೂ ಅವಾಂತರಗಳನ್ನೂ ಲೇಖಕ ಬಿಚ್ಚಿಟ್ಟಿದ್ದಾರೆ.

ಪುಟ: 142 ₹160

ಎವರೆಸ್ಟ್ ಏರುವವರಿಗೆ ಶೆರ್ಪಾಗಳ ಸಹಾಯ, ಮಾರ್ಗದರ್ಶನ ಅವಶ್ಯ. ಒಂದು ವೇಳೆ ಶೆರ್ಪಾಗಳು ಇಲ್ಲದೇ ಹೋದರೆ ಜಗತ್ತಿನ ತುತ್ತತುದಿಯ ಮೇಲೆ ನಿಂತು ತಮ್ಮ ದೇಶದ ಬಾವುಟ ಹಾರಿಸುವ ಅವಕಾಶವೇ ಇಲ್ಲದಂತಾಗುತ್ತದೆ. ಶೆರ್ಪಾಗಳು ಮತ್ತು ಚಾರಣಿಗರ ಸಹಾಯಕ್ಕಾಗಿ ಇದೀಗ ಡ್ರೋನ್‌ಗಳು ಸಜ್ಜಾಗಿವೆ.



ಎವರೆಸ್ಟ್ ಏರಲು ಡ್ರೋನ್‌ಗಳ ಸಾಥ್

• ಎಂ.ವೆಂಕಟಸ್ವಾಮಿ

ಡ್ರೋನ್ ಪೈಲಟ್ ಪಾಂಡೆ, ಮತ್ತವರ ತಂಡ ಎವರೆಸ್ಟ್ ಮೇಲೆ ಶಾಶ್ವತ ಬದಲಾವಣೆಯನ್ನು ತರುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಬೇಸ್‌ಕ್ಯಾಂಪ್ ಮತ್ತು ಒಂದನೇ ಕ್ಯಾಂಪ್ ನಡುವೆ ಇರುವ ಐಸ್‌ಪಾಲ್‌ನಲ್ಲಿರುವ ಶೆರ್ಪಾಗಳಿಗೆ ಸಹಾಯ ಮಾಡಲು ಪಾಂಡೆ ಡ್ರೋನ್ ಮೂಲಕ ಏಣಿಗಳು, ಹಗ್ಗಗಳು ಮತ್ತು ಆಮ್ಲಜನಕ ಸಿಲಿಂಡರ್‌ಗಳನ್ನು ಕಳುಹಿಸಿಕೊಡುತ್ತಾರೆ. ಇದು ಮುಂದೆ ಎವರೆಸ್ಟ್ ಏರುವ ಪರ್ವತಾರೋಹಿಗಳು ಮತ್ತು ಶೆರ್ಪಾಗಳನ್ನು ಉಳಿಸುವ ಮುನ್ನೆಚ್ಚರಿಕೆಯ ಕೆಲಸವಾಗಿದೆ.

ಎವರೆಸ್ಟ್ ಏರುವುದರಲ್ಲಿ ಶೆರ್ಪಾಗಳು ಪರಿಣತರು. ಏಳು ದಶಕಗಳಿಂದ ಎವರೆಸ್ಟ್ ಏರುವ ಪರ್ವತಾರೋಹಿಗಳಿಗೆ ಇವರು ಗೈಡ್‌ಗಳಾಗಿ ಸಹಾಯ ಮಾಡುತ್ತಾ ಬಂದಿದ್ದಾರೆ. ಈ ಪ್ರಕ್ರಿಯೆಯಲ್ಲಿ ನೂರಾರು ಪರ್ವತಾರೋಹಿಗಳು ಮತ್ತು ಶೆರ್ಪಾಗಳು ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳೀಯ ಡ್ರೋನ್ ಮ್ಯಾಪಿಂಗ್‌ನೊಂದಿಗೆ ಏರ್‌ಲಿಫ್ಟ್ ತಂತ್ರಜ್ಞಾನದ ಜೊತೆಗೆ ಶೆರ್ಪಾಗಳ ದಶಕಗಳ ಪರಿಣತಿಯನ್ನು ಬಳಸಿಕೊಂಡರೆ ವಿಶ್ವದ ಛಾವಣಿಯ ಮೇಲೆ ಸುರಕ್ಷಿತವಾಗಿರಲು ಸಾಧ್ಯವಾಗುತ್ತದೆ ಎಂಬುದಾಗಿ ಪಾಂಡೆ ಆಲೋಚನೆ.

ಬೇಸ್‌ಕ್ಯಾಂಪ್ ಸಮುದ್ರ ಮಟ್ಟದಿಂದ 17,598 ಅಡಿಗಳ ಎತ್ತರದಲ್ಲಿದ್ದರೆ, ಒಂದನೇ ಕ್ಯಾಂಪ್ 19,900 ಅಡಿಗಳ ಎತ್ತರದಲ್ಲಿದೆ. ಇವುಗಳ ನಡುವಿನ ಅಂತರ 1.80 ಮೈಲಿಗಳು. ಇದರ ನಡುವೆ ಪ್ರಯಾಣ ಮಾಡಲು ಶೆರ್ಪಾಗಳು 7-8 ಗಂಟೆಗಳನ್ನು ತೆಗೆದುಕೊಂಡರೆ, ಡ್ರೋನ್ ಕೇವಲ ಏಳು ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ಬೇಸ್‌ಕ್ಯಾಂಪ್‌ನಿಂದ ಎವರೆಸ್ಟ್ ಶಿಖರ 20.5 ಕಿಲೋಮೀಟರ್‌ಗಳ (29,031 ಅಡಿಗಳು) ದೂರದಲ್ಲಿದೆ.

ಕಳೆದ ಹತ್ತು ವರ್ಷಗಳಿಂದ ಪರ್ವತಾರೋಹಿಗಳಿಗೆ ಮಾರ್ಗದರ್ಶನ ನೀಡುತ್ತಿರುವ ನೇಪಾಳದ ಮಿಂಗ್ಮಾ ಜಿ ಶೆರ್ಪಾ 2023ರಲ್ಲಿ ಹಿಮಪಾತದಲ್ಲಿ ತನ್ನ ಮೂವರು ಸ್ನೇಹಿತರು ಮತ್ತು ಮಾರ್ಗದರ್ಶಕರನ್ನು ಕಳೆದುಕೊಂಡಾಗ ಡ್ರೋನ್ ಬಳಕೆ ಬಗ್ಗೆ ಆಲೋಚಿಸಿದರು. ಮೊದಲು ಎವರೆಸ್ಟ್ ಮಾರ್ಗವನ್ನು ಕಂಡುಹಿಡಿಯಲು (ಹಿಮ ಬೀಳುತ್ತಲೇ ಇದ್ದು ದಾರಿ ಮುಚ್ಚಿಕೊಳ್ಳುತ್ತಲೇ ಇರುತ್ತದೆ) ಅವರು 20 ಬಾರಿ ಪರ್ವತವನ್ನು ಹತ್ತಿ ಇಳಿಯಬೇಕಾಯಿತು ಮತ್ತು ಉಪಕರಣಗಳನ್ನು ತರಲು ಹಿಂದಕ್ಕೆ ಬಂದು ಹೋಗಬೇಕಾಯಿತು. ಚೀನಾದವರು ಇದೇ ಕೆಲಸಕ್ಕೆ ಡ್ರೋನ್‌ಗಳನ್ನು ಬಳಸುತ್ತಾರೆ ಎಂದು ತಿಳಿದ ಮೇಲೆ ನೇಪಾಳದಲ್ಲಿಯೂ ಡ್ರೋನ್‌ಗಳನ್ನು ಯಾಕೆ ಬಳಸಿಕೊಳ್ಳಬಾರದು ಎಂಬುದಾಗಿ ಮಿಂಗ್ಮಾ ಯೋಚಿಸಿದರು. ನೇಪಾಳದಿಂದ ಎವರೆಸ್ಟ್ ಏರುವ ದಾರಿ ಇರುವಂತೆ ಚೀನಾದಿಂದಲೂ ದಾರಿಯಿದೆ.

ಶೆರ್ಪಾಗಳು ಪಾಂಡೆಗೆ ಮೊದಲಿಗೆ ತಾವು ಯಾವ ದಿಕ್ಕಿನಲ್ಲಿ ಹೋಗುತ್ತೇವೆ ಎಂದು ತಿಳಿಸುತ್ತಾರೆ. ಪಾಂಡೆ ಡ್ರೋನ್ ಹಾರಿಸಿ ಹಾದಿಯನ್ನು ಮುನ್ನಡೆಸುತ್ತಾರೆ. ನಂತರ ಶೆರ್ಪಾಗಳು ತಮ್ಮ ಕೆಲಸವನ್ನು ಮಾಡುತ್ತಾರೆ. ಅನಿಶ್ಚಿತ ಹಿಮ ಬಂಡೆಗಳಿಗೆ ಅಥವಾ ನ್ಯಾವಿಗೇಟ್ ಮಾಡಲು ಕಷ್ಟಕರವಾದ ಹಿಮ ನದಿಯ ಭಾಗಗಳಿಗೆ ಏರುತ್ತಾರೆ. ಅವರು ಏಣಿಗಳು ಮತ್ತು ಹಗ್ಗಗಳು ಎಲ್ಲಿಗೆ ಬೇಕೆಂದು ವಾಕಿಟಾಕಿ ಮೂಲಕ ತಿಳಿಸುತ್ತಾರೆ. ನಂತರ ಉಪಕರಣಗಳನ್ನು ಡ್ರೋನ್‌ಗಳ ಮೂಲಕ ಹಾರಿಸಲಾಗುತ್ತದೆ. ಇದು ಮುಂದಿನ ಪ್ರತಿವರ್ಷವೂ ಮೇ-ಜೂನ್‌ನಲ್ಲಿ ಎವರೆಸ್ಟ್ ಏರುವ ವಿದೇಶಿ ಪರ್ವತಾರೋಹಿಗಳಿಗೆ ತಯಾರಿ ನಡೆಸುವ ಕೆಲಸವಾಗಿರುತ್ತದೆ. ಇದರ ಜೊತೆಗೆ ಆಮ್ಲಜನಕ ಸಿಲಿಂಡರ್‌ಗಳು ಮತ್ತು ಔಷಧಿಗಳಂತಹ ಜೀವ ಉಳಿಸುವ ಸಾಧನಗಳೂ ಸೇರಿರುತ್ತವೆ. ನೇಪಾಳ ಪ್ರಸ್ತುತ ಕೇವಲ ಎರಡು ಡಿ.ಜೆ.ಐ. ಡ್ರೋನ್‌ಗಳನ್ನು ಹೊಂದಿದ್ದು, ಅವುಗಳಲ್ಲಿ ಒಂದು ಮಾತ್ರ ಕಾರ್ಯನಿರ್ವಹಿಸುತ್ತದೆ. ಎರಡನೆಯದು ಬ್ಯಾಕಪ್‌ಗಾಗಿ ಉಳಿಸಿಕೊಳ್ಳಲಾಗುತ್ತದೆ. ಕೆಲವೊಮ್ಮೆ ಎರಡನ್ನೂ ಬಳಸಿಕೊಳ್ಳಲಾಗುತ್ತದೆ. ಸವಾಲೆಂದರೆ ಒಂದು ಡ್ರೋನ್ ಬೆಲೆ ಸುಮಾರು ₹62 ಲಕ್ಷ. ಉಪಕರಣಗಳನ್ನು ಒದಗಿಸುವುದರ ಜೊತೆಗೆ ರಕ್ಷಣೆಯೂ ಪ್ರಮುಖವಾಗುತ್ತದೆ.

ಬೇಸ್‌ಕ್ಯಾಂಪ್‌ನಲ್ಲಿ ಎಲ್ಲವೂ ದುಬಾರಿ ಎಂಬುದಾಗಿ ಬಿಕ್ರಂ ಹೇಳುತ್ತಾರೆ. ವಿದ್ಯುತ್ ಇಲ್ಲದ ಕಾರಣ ಬ್ಯಾಟರಿಗಳನ್ನು ಚಾರ್ಜ್ ಮಾಡಲು ಬಹಳಷ್ಟು ಇಂಧನ ಬೇಕಾಗುತ್ತದೆ. ಮೊದಲಿಗೆ ಶಿಬಿರಕ್ಕೆ ಹೋಗಲು ಸಾಕಷ್ಟು ಮಾನವಶಕ್ತಿ, ಗುಡಾರಗಳು, ಆಹಾರ ಇನ್ನೂ ಸಾಕಷ್ಟು ಸಲಕರಣೆಗಳು ಬೇಕಾಗುತ್ತವೆ.

ಬಿಕ್ರಂ ಡ್ರೋನ್‌ಗಳ ಬಗ್ಗೆ ಅತೀವ ಪ್ರೀತಿ ಹೊಂದಿದ್ದು, 2015 ರಲ್ಲಿಯೇ ಡಿ.ಐ.ವೈ. ಡ್ರೋನ್ ಅನ್ನು ತಯಾರಿಸಿ ಅದೇ ವರ್ಷ ನೇಪಾಳದಲ್ಲಿ ಸಂಭವಿಸಿದ ಭೂಕಂಪದ ಸಂದರ್ಭದಲ್ಲಿ ನೆರವು ನೀಡುವಲ್ಲಿ ಮುಖ್ಯ ಪಾತ್ರವಹಿಸಿದ್ದರು. ಇತ್ತೀಚೆಗೆ ಶೆರ್ಪಾಗಳು ಈ ಅಪಾಯಕಾರಿ ಕೆಲಸ ಬಿಟ್ಟು ವಿದೇಶಗಳಿಗೆ ತೆರಳುತ್ತಿದ್ದಾರೆ. ಶೆರ್ಪಾಗಳ ಪರಿಣತಿ ಸಹಾಯವಿಲ್ಲದೆ ಎವರೆಸ್ಟ್ ಏರಲು ಸಾಧ್ಯವಿಲ್ಲ. ಅನೇಕ ಶೆರ್ಪಾಗಳ ಆದಾಯ ಎವರೆಸ್ಟ್ ಏರುವುದರಿಂದಲೇ ಬರುತ್ತದೆ. ಅದು ಕೂಡ ಕೇವಲ ಒಂದೆರಡು ತಿಂಗಳು ಮಾತ್ರ. ಕ್ಯಾಂಪ್‌ಗಳ ಮಧ್ಯದ ದಾರಿಗಳನ್ನು ಬೇಗನೆ ಸರಿಪಡಿಸದಿದ್ದರೆ ಚಾರಣ ಸುಗಮವಾಗಿ ನಡೆಯುವುದಿಲ್ಲ. ಡ್ರೋನ್‌ಗಳು ಉಪಕರಣಗಳನ್ನು ಮೇಲಕ್ಕೆ ತರುವುದರಿಂದ ಏಣಿಗಳನ್ನು ತರಲು ಹಿಂದಕ್ಕೆ ಹೋಗಬೇಕಾಗಿಲ್ಲ. ಈಗ ಎವರೆಸ್ಟ್ ಏರುವವರಿಗೆ ಡ್ರೋನ್‌ಗಳು ಹೆಚ್ಚಿನ ಸಹಾಯ ಮಾಡುತ್ತಿವೆ.

ತ್ಯಾಜ್ಯ ತರಲು ಪ್ರಯೋಗ

2024ರಲ್ಲಿ ಚೀನಾ ನೇಪಾಳಕ್ಕೆ ಉಡುಗೊರೆ ನೀಡಿದ ಎರಡು ಡ್ರೋನ್‌ಗಳ ಸಹಾಯದಿಂದ ಎವರೆಸ್ಟ್‌ನ ಐದು ಕ್ಯಾಂಪ್‌ಗಳ ಸುತ್ತಮುತ್ತಲೂ ಮತ್ತು ದಾರಿಯಲ್ಲಿ ಬಿದ್ದಿರುವ ತ್ಯಾಜ್ಯವನ್ನು ಏರ್‌ಲಿಫ್ಟ್ ಮೂಲಕ ಕೆಳಕ್ಕೆ ತರಲು ಪ್ರಯೋಗವನ್ನು ಪ್ರಾರಂಭಿಸಲಾಯಿತು. ಬೇಸ್‌ಕ್ಯಾಂಪ್‌ನಿಂದ ಮುಂದಕ್ಕೆ, ಎತ್ತರ ಮತ್ತು ಹೆಪ್ಪುಗಟ್ಟುವ ವಾತಾವರಣದಲ್ಲಿ ಡ್ರೋನ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ಮೊದಲಿಗೆ ಖಚಿತಪಡಿಸಿಕೊಳ್ಳಬೇಕಾಗಿತ್ತು. ಇದರಿಂದ ವೈಮಾನಿಕ ಎಂಜಿನಿಯರ್ ಬಿಕ್ರಂ, ಡ್ರೋನ್‌ಗಳ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಹಿಮ ಬೀಳುವಾಗಿನ ಗೋಚರತೆ ಮತ್ತು ಗಾಳಿಯ ವೇಗವು ಮುಖ್ಯ ಸವಾಲುಗಳು. ನೇಪಾಳ ಮೊದಲ ಏರ್‌ಲಿಫ್ಟ್ ಕ್ಲೀನ್-ಅಪ್ ಡ್ರೈವ್ ಡ್ರೋನ್ ಅನ್ನು ಬಳಸಿಕೊಂಡು ಬೇಸ್‌ಕ್ಯಾಂಪ್‌ಗೆ 498 ಕೆ.ಜಿ. ಕಸವನ್ನು ತರಲಾಯಿತು. ಇದಕ್ಕೆ 40 ಹಾರಾಟಗಳನ್ನು ನಡೆಸಲಾಯಿತು. ಡ್ರೋನ್ ಸುಮಾರು 30 ಕೆ.ಜಿ. ತೂಕವನ್ನು ಹೊತ್ತೊಯ್ಯಬಲ್ಲದು. ಆದರೆ ಸುರಕ್ಷತೆಯಿಂದ 20 ಕೆ.ಜಿ. ಮಾತ್ರ ತರಲಾಗುತ್ತಿತ್ತು.

ನೆಮ್ಮದಿಯ ತಾಣ ಶಾಂತಿ ಸ್ತೂಪ

• ಪ್ರಕಾಶ್ ಕೆ. ನಾಡಿಗ್

ಭುವನೇಶ್ವರದಿಂದ ಎಂಟು ಕಿಲೋಮೀಟರ್ ದೂರದಲ್ಲಿ ಧವಳಗಿರಿ ಎಂಬ ಸಣ್ಣ ಗುಡ್ಡದಲ್ಲಿ ಶಾಂತಿ ಸ್ತೂಪವಿದೆ. ದಯಾ ನದಿಯ ದಂಡೆಯ ಮೇಲಿದೆ ಈ ಧವಳಗಿರಿ ಬೆಟ್ಟ. ಇದು ಭಾರತದ ಚರಿತ್ರೆಯಲ್ಲಿ ಬಹಳ ಮಹತ್ವವನ್ನು ಪಡೆದಿದೆ. ಜಗತ್ತಿನ ಅತ್ಯಂತ ಭಯಂಕರ ಯುದ್ಧಗಳಲ್ಲಿ ಒಂದಾದ ಕಳಿಂಗ ಯುದ್ಧ ಇದೇ ಪ್ರದೇಶದಲ್ಲಿ ನಡೆದು ಸುಮಾರು ಎರಡು ಲಕ್ಷ ಸೈನಿಕರು ಪ್ರಾಣ ಕಳೆದುಕೊಂಡಿದ್ದರ ಪರಿಣಾಮ ಇಲ್ಲಿರುವ ದಯಾ ನದಿ ರಕ್ತಸಿಕ್ತವಾಗಿತ್ತು. ಈ ಯುದ್ಧದ ನೋಟವೇ ಅಶೋಕನನ್ನು ಮಮ್ಮಲ ಮರುಗುವಂತೆ ಮಾಡಿತ್ತು. ತನ್ನ ತಪ್ಪಿನ ಅರಿವಾಗಿ ಶಾಶ್ವತವಾಗಿ ಶಾಂತಿಯ ಮಾರ್ಗದಲ್ಲಿ ನಡೆಯುವ ಪ್ರತಿಜ್ಞೆಯನ್ನು ಅಶೋಕ ಇಲ್ಲಿಯೇ ಮಾಡಿದ್ದು.

ಬೌದ್ಧ ಧರ್ಮದ ಅನುಯಾಯಿಯಾದ ರಾಜ ಅಶೋಕನಿಗೆ ಶಾಂತಿ ಮಂತ್ರವೇ ಬುನಾದಿಯಾಗಿತ್ತು. ಕಳಿಂಗ ಯುದ್ಧದ ಕೊನೆಯ ಭಾಗದಲ್ಲಿ ಧವಳಗಿರಿಯಲ್ಲಿ ಅಶೋಕ ಈ ಶಾಂತಿ ಸ್ತೂಪದ ನಿರ್ಮಾಣಕ್ಕೆ ಅಡಿಗಲ್ಲನ್ನು ಹಾಕಿದ್ದನು. ಇಲ್ಲಿರುವ ಒಂದು ಶಾಸನ ಇಲ್ಲಿಗೆ ಸಹಸ್ರಾರು ಸಂಖ್ಯೆಯಲ್ಲಿ ಬೌದ್ಧ ಬಿಕ್ಕುಗಳು ಭೇಟಿ ನೀಡಿದ್ದಾರೆಂದು ತಿಳಿಸುತ್ತದೆ. ಇಲ್ಲಿರುವ ಹಲವಾರು ಶಾಸನಗಳು ಅಶೋಕನ ಸಂತೋಷ, ಶಾಂತಿ ಮತ್ತು ತೃಪ್ತಿಯನ್ನು ಜಗತ್ತಿಗೆ ಸಾರುವ ಉದ್ದೇಶವನ್ನು ತಿಳಿಸುತ್ತದೆ.

ಧವಳಗಿರಿ ಬೆಟ್ಟದಲ್ಲಿರುವ ಶಾಂತಿ ಸ್ತೂಪ

ಸ್ತೂಪದೊಳಗಿರುವ ಬುದ್ಧನ ಮೂರ್ತಿ

ಧವಳಗಿರಿ ಸ್ತೂಪದ ಕೆಳಗೆ ಅಶೋಕನ ಅನೇಕ ಶಿಲಾಶಾಸನಗಳು ಇವೆ. ಶಿಲೆಗಳ ಮೇಲೆ, ಕಂಬ ಗುಹೆಗಳ ಗೋಡೆಗಳ ಮೇಲೆ ಕೆತ್ತಲಾದ ಅಶೋಕನ ಶಾಂತಿ ಮಂತ್ರಗಳು/ನುಡಿಗಳು ಮತ್ತು ಬೌದ್ಧ ಮತದ ಬೋಧನೆಗಳನ್ನು ನೋಡಬಹುದು. ಇಲ್ಲಿರುವ ಆಕರ್ಷಣೀಯ ಶಿಲೆಗಳಲ್ಲಿ ಕೆತ್ತಿರುವ ಕಲ್ಲಿನಿಂದ ಹೊರಬರುತ್ತಿರುವಂತೆ ಇರುವ ಆನೆಯ ಶಿಲ್ಪ ಗಮನ ಸೆಳೆಯುತ್ತದೆ.

ಪ್ರವಾಸ

ಈ ಸ್ತೂಪದ ಹಿಂದೆಯೇ ಧವಳೇಶ್ವರ ದೇವಸ್ಥಾನವಿದೆ. ಇದು ಕೂಡ ಹಿಂದೂ ಧರ್ಮೀಯರು ಹೆಚ್ಚಾಗಿ ಭೇಟಿ ಕೊಡುವ ಸ್ಥಳವಾಗಿದೆ. 1972ರಲ್ಲಿ ಈ ದೇವಸ್ಥಾನವನ್ನು ನವೀಕರಣ ಮಾಡಿದ್ದಾರೆ. ಧವಳಗಿರಿಯ ಎಡಭಾಗದಲ್ಲಿ ಪ್ರಶಾಂತವಾಗಿ ಹರಿಯುವ ದಯಾ ನದಿಯ ಸುಂದರ ನೋಟವನ್ನು ಕಣ್ತುಂಬಿಕೊಳ್ಳಬಹುದು. ಬೆಳಗ್ಗೆ 6 ರಿಂದ ಸಂಜೆ 6ರ ವರೆಗೂ ತೆರೆದಿರುವ ಈ ಪ್ರವಾಸಿ ತಾಣವನ್ನು ನೋಡಲು ಯಾವುದೇ ಶುಲ್ಕ ಕೊಡಬೇಕಾಗಿಲ್ಲ. ಬೆಳಗಿನ 11 ಗಂಟೆಯ ಒಳಗೆ ಇಲ್ಲಿಗೆ ಭೇಟಿ ನೀಡುವುದು ಉತ್ತಮ. ಏಕೆಂದರೆ ಆಮೇಲೆ ತುಂಬಾ ಸೆಖೆ ಹಾಗೂ ಬರಿಗಾಲಿನಲ್ಲಿ ನಡೆಯುವುದು ಕಷ್ಟವಾಗುತ್ತದೆ. ಗುಡ್ಡದ ಮೇಲಿರುವ ಸ್ತೂಪ ಹಾಗೂ ದೇವಸ್ಥಾನದ ಸುಂದರ ಪರಿಸರ ಮನಸ್ಸಿಗೆ ನೆಮ್ಮದಿಯನ್ನು ಕೊಡುವ ಸ್ಥಳವಾಗಿದ್ದು ಒಡಿಶಾ ಪ್ರವಾಸದಲ್ಲಿ ಪ್ರವಾಸಿಗರು ನೋಡಲೇ ಬೇಕಾದ ಸ್ಥಳವಾಗಿದೆ. ಗುಡ್ಡದ ಮೇಲಿಂದ ಭುವನೇಶ್ವರ ನಗರದ ಸುಂದರ ನೋಟವನ್ನು ಕಣ್ತುಂಬಿಕೊಳ್ಳಬಹುದು.

ಇಲ್ಲಿ ಪ್ರತಿವರ್ಷ ಫೆಬ್ರುವರಿಯಲ್ಲಿ ಕಳಿಂಗ ದೌಳಿ ಮಹೋತ್ಸವ ಎಂಬ ಹಬ್ಬವನ್ನು ಆಚರಿಸಲಾಗುತ್ತದೆ. ಶಾಸ್ತ್ರೀಯ ನೃತ್ಯ, ಹಾಡು ಸಂಗೀತ ಮತ್ತು ಸಮರ ಕಲೆಗಳ ಅನಾವರಣಕ್ಕೆ ಈ ಹಬ್ಬ ಪ್ರಸಿದ್ಧವಾಗಿದೆ. ಒಡಿಶಾ ಪ್ರವಾಸೋದ್ಯಮ ಇಲಾಖೆ ಏರ್ಪಡಿಸುವ ಈ ಹಬ್ಬದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಬಂದ ಸುಮಾರು ಐನೂರಕ್ಕೂ ಹೆಚ್ಚು ಕಲಾವಿದರು ಪಾಲ್ಗೊಳ್ಳುತ್ತಾರೆ.

ಮನಸೆಳೆಯುವ ಸ್ತೂಪ

ಇಲ್ಲಿರುವ ಸ್ತೂಪ ನೋಡಲು ಆಕರ್ಷಣೀಯವಾಗಿದ್ದು ಮೇಲೆ ಗೊಮ್ಮಟಾಕಾರದಲ್ಲಿದೆ. ಇಲ್ಲಿರುವ ಕಲ್ಲಿನಲ್ಲಿ ಬೋಧಿವೃಕ್ಷ ಹಾಗೂ ಬುದ್ಧನ ಹೆಜ್ಜೆ ಗುರುತುಗಳನ್ನು ಕೆತ್ತಲಾಗಿದೆ. ಬುದ್ಧನ ಮುಂದೆ ತನ್ನ ಕತ್ತಿಯನ್ನು ಇರಿಸಿ ಯುದ್ಧದಿಂದ ಸಂಪೂರ್ಣ ವಿಮುಖನಾಗುತ್ತಿರುವುದಾಗಿ ಹೇಳುತ್ತಿರುವ ಶಿಲ್ಪವು ನೋಡುಗರ ಮನಸೆಳೆಯುತ್ತದೆ. ಈ ಸ್ತೂಪದ ಆವರಣದಲ್ಲಿಯೇ ಬೌದ್ಧರ ಸದ್ಧರ್ಮ ವಿಹಾರ ಮಠವಿದೆ. ಇದು ಬೌದ್ಧ ಅನುಯಾಯಿಗಳು ಹೆಚ್ಚಿಗೆ ಭೇಟಿಕೊಡುವ ಸ್ಥಳವಾಗಿದೆ. ಈ ಸ್ತೂಪವನ್ನು 1970 ರಲ್ಲಿ ಜಪಾನ್ ಬುದ್ಧ ಸಂಘ ಹಾಗೂ ಕಳಿಂಗ ನಿಪ್ಪೋನ್ ಬುದ್ಧ ಸಂಘದವರು ಸೇರಿ ನಿರ್ಮಿಸಿದ್ದಾರೆ. ಬಿಳಿಯ ಬಣ್ಣದ ತನ್ನ ವಿಶೇಷ ವಾಸ್ತುಶಿಲ್ಪ ಹಾಗೂ ದೊಡ್ಡ ಗುಮ್ಮಟದಿಂದ ಇದು ಪ್ರವಾಸಿಗರನ್ನು ಆಕರ್ಷಿಸುತ್ತದೆ. ದೊಡ್ಡ ಗೊಮ್ಮಟದ ಮೇಲಿರುವ ಐದು ಛತ್ರಿಯಾಗಳು ಬೌದ್ಧ ಧರ್ಮದ ಸಿದ್ಧಾಂತಗಳನ್ನು ಎತ್ತಿ ಹಿಡಿಯುತ್ತದೆ. ಬುದ್ಧನ ಹಲವು ಭಂಗಿಯ ಮೂರ್ತಿಗಳು ಈ ಸ್ತೂಪದ ಗೋಡೆಗಳ ಮೇಲೆ ಕೆತ್ತಲಾಗಿದೆ. ಕಲ್ಲಿನಲ್ಲಿ ಬುದ್ಧನ ಜೀವನ ಚರಿತೆಯನ್ನು ಬಿಂಬಿಸುವ ಕಲಾಕೃತಿಗಳಿವೆ.

ಧವಳೇಶ್ವರ ದೇವಸ್ಥಾನ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಮಂಗನ ಕಾಟ!

ಡಶ್ಗ ಚಕ್ಕು
ಕೀಶ್ರುಷ್ಟ ಕಥೆಯ
ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಒಂದು ದಿನ ಸ್ಕೈಡೈವಿಂಗ್‌ಗೆ ತೆರಳಿದ್ದ. ಹೆಲಿಕಾಪ್ಟರ್ ನಿಗದಿತ ಎತ್ತರಕ್ಕೆ ತಲುಪಿದ ಕೂಡಲೇ ಜಿಗಿಯಲು ಹೆಲಿಕಾಪ್ಟರ್ ಪೈಲಟ್ ಗ್ರೀನ್ ಸಿಗ್ನಲ್ ನೀಡಿದ. ಪ್ಯಾರಚೂಟ್ ಕಟ್ಟಿಕೊಂಡಿದ್ದ ಗುಂಡ ಕೆಳಕ್ಕೆ ಧುಮುಕಿದ. ಇನ್ನೇನು ಭೂಮಿ ತಲುಪಿತು ಎನ್ನುವಾಗ ಕೆಳಗಡೆ ನೋಡಿದ. ಅಲ್ಲಿ ಮಂಗಗಳು ಭೂಮಿಗೆ ಏನೋ ಬರುತ್ತಿದೆ ಎಂದು ಅದನ್ನು ಹಿಡಿಯಲು ಸಜ್ಜಾಗಿ ನಿಂತಿದ್ದವು. ಇದನ್ನು ಕಂಡ ಗುಂಡ ಗಾಬರಿಯಲ್ಲಿ ಕಿರುಚಿದ.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಬಾಗು	+	ನರಿ	+	ಳಿ	=	
2	ನರಿ	+	ನೀರು	+	ಚಿ	=	
3	ಕಾರ	+	ಕಡಿ	+	ಲು	=	
4	ಸುಡು	+	ಮಾಲಿ	+	ಗೆ	=	
5	ಮಡಿ	+	ನೆಗೆ	+	ಬಾ	=	

ಮೋಡಿ ಮಾಯಾಚೌಕ

ಮಕ್ಕಳೇ ನೀವು 'ಮೋಡಿ' ಎಂಬ ಆಟವನ್ನು ನೋಡಿರಲಿಕ್ಕಿಲ್ಲ. ಆದರೆ ಅದೊಂದು ರಂಗಹೊಯ್ದ ಮಾಯಾ ಆಟ. ಅದೇ ಮಾದರಿಯಲ್ಲಿ ಇಲ್ಲಿ ಪ್ರತಿ ಚೌಕದೊಳಗೆ ಒಂದು ಸಂಖ್ಯೆ ತುಂಬಬೇಕಿದೆ. ಹಾಗೆ ತುಂಬಲು ನಿಮಗೆ ಕೆಲವು ಸುಳಿವು ನೀಡಲಾಗಿದೆ. ಸುಳಿವು ಆಧರಿಸಿ ಸಂಖ್ಯೆ ತುಂಬಿದ್ದೇ ಆದರೆ ಅದೊಂದು ಮಾಯಾಚೌಕವಾಗುತ್ತದೆ. ಅಂದರೆ ಉದ್ದ–ಅಗಲ–ಕರ್ಣ-ರೇಖೆಗಳಲ್ಲಿ ಹೇಗೆ ಕೂಡಿದರೂ ಮೊತ್ತ 34 ಆಗುತ್ತದೆ. ಆ ಸಂಖ್ಯೆಗಳನ್ನು ತುಂಬಲು ಪ್ರಯತ್ನಿಸಿ. ಅಪ್ಪ–ಅಮ್ಮನ ಸಹಾಯ ಪಡೆಯಿರಿ.

A = ನಮ್ಮ ನೋಟ ಇವುಗಳಿಂದಲೇ ಅಸಂಖ್ಯೆ
B = ಅಮೆರಿಕದಲ್ಲಿ ಅನಿಷ್ಟ ಸಂಖ್ಯೆ ಇದು
C = ದಿಕ್ಪಾಲಕರ ಸಂಖ್ಯೆ
D = 7ರೊಂದಿಗೆ ಸೇರಿಕೊಂಡು ಅಸಾಧ್ಯ ಎಂಬುದಕ್ಕೆ ಸೂಚಿಸುವ ಸಂಖ್ಯೆ
E = ಸೋಮವಾರ ವ್ರತಮಾಡುವವರಿಗೆ ಗೊತ್ತು ಈ ಸಂಖ್ಯೆ
F = ಕಾಲಗಳ ಸಂಖ್ಯೆ
G = ರಾವಣನಿಗೆ ತಲೆ ಇಷ್ಟಂತೆ
H = ಪಾಂಡವರ ಸಂಖ್ಯೆ
I = ಭಾರತೀಯರಿಗೆ ಪ್ರಿಯವಾದ ದೈವಿಕ ಸಂಖ್ಯೆ
J = ರಸಗಳ ಸಂಖ್ಯೆ (ಆಹಾರದಲ್ಲಿ)
K = ಪಕ್ಷ ಎಂದರೆ ಇಷ್ಟು ದಿನಗಳು
L = ವೇದಗಳ ಸಂಖ್ಯೆ
M = ಜಗತ್ತಿನ ಅದ್ಭುತಗಳ ಸಂಖ್ಯೆ
N = ಒಂದು ಡಜನ್ ಎಂದರೆ
O = ಪೃಥ್ವಿಗೆ ಉಪಗ್ರಹ ಸಂಖ್ಯೆ
P = ಸೀತಾದೇವಿ ಅನುಭವಿಸಿದ ವನವಾಸದ ವರ್ಷಗಳ ಸಂಖ್ಯೆ

ಮಾಯಾಚೌಕ

A	B	C	D
E	F	G	H
I	J	K	L
M	N	O	P

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳ ಹಿಂದೆ ಇನ್ನೆರಡಕ್ಷರ ತುಂಬಿ ನಾಲ್ಕಕ್ಷರದ ಪದ ಮಾಡಿ. ಆದರೆ ನೀವು ತುಂಬುವ ಎರಡೂ ಅಕ್ಷರಗಳು ಒಂದೇಯಾಗಿರಬೇಕು.

1			ಕಾ	ರ
2			ಜಿ	ಸು
3			ಬ	ಗೆ
4			ಕಾ	ರ
5			ಪ	ದ
6			ಬಿ	ರ್ಲಾ
7			ಕೋ	ಲ
8			ರ	ಪ
9			ಭಾ	ಯಿ
10			ಪ	ಕ್ಷಿ

ಪದ ಹುಡುಕಾಟ

ಇಲ್ಲಿ ಕೊಟ್ಟಿರುವ ಶಬ್ದಗಳಿಂದ ಒಂದೊಂದು ಅಕ್ಷರ ಆಯ್ದುಕೊಂಡು ಒಂದು ತರಕಾರಿಯ ಹೆಸರು ಹುಡುಕಿ..

1. ಸಬೂಬು ಹೇಳು
2. ಬದುಕುವಾಸೆ
3. ಆಗುಂಬೆ ಘಾಟಿ
4. ಸಂಬಳ ಕೊಡು
5. ಜಳಕ ಮಾಡು
6. ಅಕಾಲಮೃತ್ಯು
7. ತಾಯಿಭಾರತಿ

ಉತ್ತರ:______________

ಶಬ್ದಾಟ

ಎಲ್ಲಾ ಪದ ಸೇರಿಸಿ ಒಂದೇ ಪದ ಮಾಡಿ.

ಕರ + ಪಕ್ಷಿ + ಲವ + ಗಳ
= ___________

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕನ್ನಡಕಂದ 2.ಸಾರಿನರುಚಿ 3.ಕರತಾಡನ 4.ಗಗನಯಾನ 5.ವಿಮಾನದರ(ಮಾವಿನದರ)
ಪದಹುಡುಕಾಟ: ಪೂರ್ಣಚಂದ್ರ ತೇಜಸ್ವಿ
ಜಾಣಪದ ಆಟ: 1.ಆನೆ 2.ಎಮ್ಮೆ 3.ಆಕಳು 4.ನಾಯಿ 5.ಆಡು 6.ಹೋತು 7.ಕತ್ತೆ 8.ನರಿ 9.ಕರಡಿ 10.ಮಂಗ
ಮೋಜಿನ ಇಂಗ್ಲಿಷ್: 1.Fuel 2.feel 3.Heel 4.Reel 5.Seel

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅವ್ಯಕ್ತ ಪಿ. ಪಾಟಣಕರ್
ಬೆಂಗಳೂರು

ಮೊಹಮದ್ ಅಯಾನ್ ಜಿ.
ಹರಪನಹಳ್ಳಿ

ಸಮನ್ವಿತ ಎಸ್.
ಮಂಡ್ಯ

ಸಮೃದ್ಧಿ ಡಿ.
ಬೆಂಗಳೂರು

ಪ್ರವೀಣ್ ಅರವಳ್ಳಿ
ಹೂವಿನಹಡಗಲಿ

ಅರ್ಪಿತಾ
ಹೊಸಪೇಟೆ

ಕಾಲ್ತುಳಿತ: ಮೃತರ ಕುಟುಂಬಕ್ಕೆ ಆರ್‌ಸಿಬಿ ₹25 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಳೆದ ಜೂನ್ 4ರಂದು ನಡೆದಿದ್ದ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹ 25 ಲಕ್ಷ ಪರಿಹಾರ ನೀಡುವುದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಶನಿವಾರ ಘೋಷಿಸಿದೆ.

ನೂತನ ಉಪಕ್ರಮವಾದ ‘ಆರ್‌ಸಿಬಿ ಕೇರ್ಸ್’ ನಲ್ಲಿ ಈ ಪರಿಹಾರವನ್ನು ನೀಡಲಾಗುತ್ತಿದೆ ಎಂದು ಫ್ರಾಂಚೈಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದಿದ್ದ ಆರ್‌ಸಿಬಿ ತಂಡವು ಜೂನ್ 4ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಿತ್ತು. ಈ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಅದರಲ್ಲಿ 11 ಜನರು ಮೃತಪಟ್ಟಿದ್ದರು. ಆ ಸಮಯದಲ್ಲಿ ಆರ್‌ಸಿಬಿಯು ಮೃತಪಟ್ಟವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಘೋಷಿಸಿತ್ತು.

ದುರ್ಘಟನೆ ನಡೆದ ನಂತರ ಇದೇ ಮೊದಲ ಬಾರಿಗೆ ಭಾವನಾತ್ಮಕ ವಾದ ಸಂದೇಶವನ್ನು ಹಾಕಿರುವ ಆರ್‌ಸಿಬಿಯು ಪರಿಹಾರ ಘೋಷಣೆ ಮಾಡಿದೆ.

‘2025ರ ಜೂನ್ 4ರಂದು ನಮ್ಮ ಹೃದಯಗಳು ಒಡೆದುಹೋದವು. ಆರ್‌ಸಿಬಿ ಕುಟುಂಬದ 11 ಸದಸ್ಯರನ್ನು ಕಳೆದುಕೊಂಡೆವು. ಅವರೆಲ್ಲರ ಗೈರುಹಾಜರಿಯು ನಮ್ಮೆಲ್ಲರನ್ನೂ ಸದಾಕಾಲ ಕಾಡಲಿದೆ’ ಎಂದಿದೆ.

ಯುಪಿ ಯೋಧಾಸ್ ಶುಭಾರಂಭ

ಪ್ರೊ ಕಬಡ್ಡಿ : ಗಗನ್ ಗೌಡ ಮಿಂಚು, ಟೈಟನ್ಸ್‌ಗೆ ನಿರಾಶೆ

ವಿಶಾಖಪಟ್ಟಣ (ಪಿಟಿಐ): ಕನ್ನಡಿಗ ಗಗನ್ ಗೌಡ ಅವರ ಅಮೋಘ ಆಟದ ಬಲದಿಂದ ಯುಪಿ ಯೋಧಾಸ್ ತಂಡವು 12ನೇ ಆವೃತ್ತಿಯ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಯುಪಿ ಯೋಧಾಸ್ ತಂಡದ ಪರ 14 ಅಂಕ ಸಂಪಾದಿಸಿದ ಗಗನ್ ಗೌಡ

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಯೋಧಾಸ್ ತಂಡವು 40–35ರಿಂದ ತೆಲುಗು ಟೈಟನ್ಸ್ ಎದುರು ಗೆಲುವು ಸಾಧಿಸಿತು.

ಯೋಧಾಸ್ ತಂಡದ ಗಗನ್ ಗೌಡ ಅವರು 14 ಅಂಕಗಳನ್ನು ಗಳಿಸಿದರು. ಅದರಲ್ಲಿ 4 ಬೋನಸ್ ಅಂಕಗಳೂ ಇದ್ದವು. ಅವರ ಅಮೋಘ ಆಟದ ಮುಂದೆ ಆತಿಥೇಯ ಟೈಟನ್ಸ್ ಬಸವಳಿಯಿತು.

ಗಗನ್ ಅವರಿಗೆ ತಂಡದ ನಾಯಕ ಸುಮಿತ್ ಸಂಗ್ವಾನ್ ಮತ್ತು ಗುಮಾನ್ ಸಿಂಗ್ ಅವರೂ ಉತ್ತಮ ಬೆಂಬಲ ನೀಡಿದರು. ಅವರಿಬ್ಬರೂ ಕ್ರಮವಾಗಿ 8 ಮತ್ತು 7 ಅಂಕಗಳನ್ನು ಗಳಿಸಿದರು. ಇದರಿಂದಾಗಿ ತಂಡದ ಗೆಲುವಿನ ಹಾದಿ ಸುಲಭವಾಯಿತು.

ಸುಮಿತ್ ಅವರ ರಕ್ಷಣಾತ್ಮಕ ತಂತ್ರಗಾರಿಕೆಯು ಈ ಜಯದಲ್ಲಿ ಪ್ರಮುಖ ಪಾತ್ರ ವಹಿಸಿತು. ಅವರಿಗೆ ಉಪನಾಯಕ ಅಶು ಸಿಂಗ್ ಕೂಡ ಉತ್ತಮ ಬೆಂಬಲವಾಗಿ ನಿಂತರು ಸಿಂಗ್ ಅವರು 9 ಅಂಕಗಳನ್ನು ಗಳಿಸಿದರು. ಟ್ಯಾಕ್ಲಿಂಗ್‌ನಲ್ಲಿ ಸಾಮರ್ಥ್ಯ ಮೆರೆದರು.

ಟೈಟನ್ಸ್ ತಂಡದ ವಿಜಯ್ ಮಲೀಕ್ ಅವರು ಒಂದು ಹಂತದಲ್ಲಿ ಯೋಧಾಸ್‌ಗೆ ತಿರುಗೇಟು ನೀಡುವ ಪ್ರಯತ್ನ ಮಾಡಿದರು. ರೇಡಿಂಗ್‌ನಲ್ಲಿ 10, ಟ್ಯಾಕಲ್‌ನಲ್ಲಿ 1 ಮತ್ತು ಮೂರು ಬೋನಸ್ ಅಂಕಗಳನ್ನು ವಿಜಯ್ ಸೂರೆ ಮಾಡಿದರು. ಒಟ್ಟು 14 ಅಂಕಗಳನ್ನು ತಂಡಕ್ಕೆ ನೀಡಿದರು. ಆದರೆ ಅವರಿಗೆ ತಂಡದ ಉಳಿದ ಆಟಗಾರರಿಂದ ತಕ್ಕ ಬೆಂಬಲ ಸಿಗಲಿಲ್ಲ. ಇದರಿಂದಾಗಿ ಎದುರಾಳಿಗಳ ಮೇಲೆ ಒತ್ತಡ ಹೇರಲು ಅವರಿಗೆ ಸಾಧ್ಯವಾಗಲಿಲ್ಲ.

ಇಂದಿನ ಪಂದ್ಯಗಳು

ತಮಿಳ್ ತಲೈವಾಸ್ Vs ಯು ಮುಂಬಾ	ರಾತ್ರಿ 8ರಿಂದ
ಬೆಂಗಾಲ್ ವಾರಿಯರ್ಸ್ Vs ಹರಿಯಾಣ ಸ್ಟೀಲರ್ಸ್	ರಾತ್ರಿ 9ರಿಂದ

ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್

ಟೈಬ್ರೇಕರ್‌ನಲ್ಲಿ ಯು ಮುಂಬಾಗೆ ರೋಚಕ ಜಯ

ರೋಚಕ ಅಂತ್ಯಕಂಡ ದಿನದ ಎರಡನೇ ಪಂದ್ಯದಲ್ಲಿ ಯು ಮುಂಬಾ ತಂಡವು ಟೈಬ್ರೇಕರ್‌ನಲ್ಲಿ 7–6 ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿತು.


ರೋಹಿತ್

ಈ ಪಂದ್ಯದಲ್ಲಿ ನಿಗದಿ ಅವಧಿಯ ಆಟ ಮುಗಿದಾಗ ಉಭಯ ತಂಡಗಳು ತಲಾ 29 ಪಾಯಿಂಟ್ಸ್ ಗಳಿಸಿದ್ದವು.

ಇದು ಈ ಬಾರಿಯ ಲೀಗ್‌ನಲ್ಲಿ ಎರಡನೇ ಟೈಬ್ರೇಕರ್. ಪಂದ್ಯ ಸಮನಾದಲ್ಲಿ ಗೋಲ್ಡನ್ ರೈಡ್ (ಟೈಬ್ರೇಕರ್) ನಿಯಮವನ್ನು ಈ ಬಾರಿ ಲೀಗ್ ಹಂತದಿಂದಲೇ ಜಾರಿಗೊಳಿಸಲಾಗಿದೆ.

ಮುಂಬಾ ಪರ ರೋಹಿತ್ ರೇಡಿಂಗ್‌ನಲ್ಲಿ 7 ಪಾಯಿಂಟ್ಸ್ ಗಳಿಸಿದರೆ, ಅಜಿತ್ ಚೌಹಾನ್ 6 ಪಾಯಿಂಟ್ಸ್ ಸಂಪಾದಿಸಿದರು. ಲೋಕೇಶ್ ಘೋಸ್ಲಿಯಾ ನಾಲ್ಕು ಹಾಗೂ ಸಂದೀಪ್‌ಕುಮಾರ್ ಮತ್ತು ಅನಿಲ್ ಮೋಹನ್ ಸಿಂಗ್ ತಲಾ ಮೂರು ಟ್ಯಾಕಲ್ ಪಾಯಿಂಟ್ಸ್ ಕಲೆಹಾಕಿದರು.

ಗುಜರಾತ್ ಪರ ಹಿಮಾಂಶು ರೇಡಿಂಗ್‌ನಲ್ಲಿ 7 ಪಾಯಿಂಟ್ಸ್ ಮತ್ತು ರಾಕೇಶ್ ಸಂಗ್ರೋಯಾ 5 ಪಾಯಿಂಟ್ಸ್ ಗಳಿಸಿದರು. ಮೊಹಮ್ಮದ್ ರೆಝಾ ಹಾಗೂ ಹರೀಶ್ ಕಾಮಾಚಿ ತಲಾ ನಾಲ್ಕು ಪಾಯಿಂಟ್ಸ್ ಕಲೆಹಾಕಿದರು.

ವಿಶ್ವ ಬ್ಯಾಡ್ಮಿಂಟನ್: ಭಾರತದ ಜೋಡಿಗೆ ಪದಕ ಖಚಿತ

ಸೆಮಿಫೈನಲ್‌ಗೆ ಸಾತ್ವಿಕ್– ಚಿರಾಗ್

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ಗೆದ್ದ ನಂತರ ಸಂಭ್ರಮಿಸಿದ್ದು ಹೀಗೆ ಎಎಫ್‌ಪಿ ಚಿತ್ರ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್‌ಗೆ ದಾಪುಗಾಲಿಡುವ ಮೂಲಕ ಪದಕ ಖಚಿತಪಡಿಸಿಕೊಂಡರು. ಭಾರತದ ಆಟಗಾರರು ನೇರ ಗೇಮ್‌ಗಳಿಂದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತರಾದ ಆರನ್ ಚಿಯಾ ಮತ್ತು ಸೊ ವೂಡಿ ಯಿಕ್ ಅವರನ್ನು ಸೋಲಿಸಿದರು.

ಒಂಬತ್ತನೇ ಶ್ರೇಯಾಂಕದ ಸಾತ್ವಿಕ್–ಚಿರಾಗ್ ಜೋಡಿ ಶುಕ್ರವಾರ ತಡರಾತ್ರಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಧಿಕಾರಯುತ ಆಟವಾಡಿ 21–12, 21–19 ರಿಂದ ಮಲೇಷ್ಯಾದ ಆಟಗಾರರನ್ನು ಸೋಲಿಸಿತು. ಆ ಮೂಲಕ ವರ್ಷದ ಹಿಂದೆ ಇದೇ ನಗರದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಚಿಯಾ ಮತ್ತು ಸೊ ಕೈಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು.

‘ಸಂತಸದ ಭಾವನೆ ಮೂಡಿದೆ. ಕೊನೆಗೂ ನಾವು ಉತ್ತಮ ಆಟ ಕಂಡುಕೊಂಡೆವು. ಈ ಪಂದ್ಯ ಒಲಿಂಪಿಕ್ಸ್‌ನ ರೀ ಮ್ಯಾಚ್‌ನಂತೆ ಇತ್ತು. ಅದೇ ಕ್ರೀಡಾಂಗಣ. ಅದೇ ಅಂಕಣ. ಸರಿಯಾಗಿ ವರ್ಷದ ಹಿಂದೆ ಅಂದು ಆಡಿದ್ದೆವು. ಆಗ ಒಲಿಂಪಿಕ್ಸ್. ಈಗ ವಿಶ್ವ ಚಾಂಪಿಯನ್‌ಷಿಪ್’ ಎಂದು ಪಂದ್ಯದ ನಂತರ ಚಿರಾಗ್ ನೆನಪಿಸಿಕೊಂಡರು.

ಇದು ಸಾತ್ವಿಕ್–ಚಿರಾಗ್ ಜೋಡಿಗೆ ಎರಡನೇ ಪದಕವಾಗಲಿದೆ. 2022ರಲ್ಲಿ ಈ ಜೋಡಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು. 2011 ರಲ್ಲಿ ಜ್ವಾಲಾ ಗುಟ್ಟಾ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ ಪದಕ ಗೆದ್ದ ನಂತರ ಭಾರತ ಪ್ರತಿಯೊಂದು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆಲ್ಲುತ್ತಾ ಬಂದಿದೆ.

ಏಷ್ಯನ್ ಗೇಮ್ಸ್ ಚಾಂಪಿಯನ್ನರು ಸೆಮಿಫೈನಲ್ ಪಂದ್ಯದಲ್ಲಿ 11ನೇ ಶ್ರೇಯಾಂಕ ಪಡೆದಿರುವ ಚೀನಾದ ಚೆನ್ ಬೊ ಯಂಗ್– ಲಿಯು ಯಿ ಜೋಡಿಯನ್ನು ಎದುರಿಸಲಿದೆ.

ಕೊರಿಯಾಕ್ಕೆ ಆಘಾತ ನೀಡಿದ ಮಲೇಷ್ಯಾ

ರಾಜಗೀರ್ (ಪಿಟಿಐ): ಏಷ್ಯಾ ಕಪ್ ಪ್ರಶಸ್ತಿ ಉಳಿಸಿಕೊಳ್ಳುವ ಯತ್ನದಲ್ಲಿರುವ ದಕ್ಷಿಣ ಕೊರಿಯಾ ತಂಡಕ್ಕೆ ಶನಿವಾರ ಆಘಾತಕಾರಿ ಸೋಲು ಎದುರಾಯಿತು. ‘ಬಿ’ ಗುಂಪಿನ ಪಂದ್ಯದಲ್ಲಿ ಮಲೇಷ್ಯಾ ತಂಡವು 4–1 ಗೋಲುಗಳಿಂದ ಕೊರಿಯಾ ತಂಡವನ್ನು ಸೋಲಿಸಿ ಅಚ್ಚರಿಯ ಫಲಿತಾಂಶಕ್ಕೆ ಕಾರಣವಾಯಿತು.

Hero ASIA CUP RAJGIR, BIHAR 2025

ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶ 8–3 ಗೋಲುಗಳಿಂದ ಚೀನಾ ತೈಪೆ ತಂಡವನ್ನು ಸುಲಭವಾಗಿ ಮಣಿಸಿತು.

ಕೊರಿಯಾ ದಿನದ ಎರಡನೇ ಪಂದ್ಯದಲ್ಲಿ ಜಿಯಾನ್‌ಹ್ಯೊ ಜಿನ್ ಎರಡನೇ ನಿಮಿಷವೇ ಗಳಿಸಿದ ರಿವರ್ಸ್ ಸ್ಟಿಕ್ ಫೀಲ್ಡ್ ಗೋಲಿನ ಮುಖಾಂತರ ಮುನ್ನಡೆ ಪಡೆಯಿತು. ಆದರೆ ಮಲೇಷ್ಯಾ ಅಮೋಘವಾಗಿ ಪುನರಾಗಮನ ಮಾಡಿತು. ಅಖಿಮುಲ್ಲಾ ಅನೌರ್ (29, 34 ಮತ್ತು 58ನೇ ನಿಮಿಷ) ಅವರ ಹ್ಯಾಟ್ರಿಕ್ ಮತ್ತು ಅಷ್ರನ್ ಹಮ್ಸಾನಿ ಅವರ ಗೋಲಿನ ನೆರವಿನಿಂದ ಪ್ರಬಲ ಎದುರಾಳಿ, ಐದು ಬಾರಿಯ ಚಾಂಪಿಯನ್ನರಾದ ಕೊರಿಯಾಕ್ಕೆ ಸೋಲಿನ ಪ್ರಹಾರ ನೀಡಿತು.

ಬಾಂಗ್ಲಾದೇಶ ದಿನದ ಮೊದಲ ಪಂದ್ಯದಲ್ಲಿ ಚೀನಾ ತೈಪೆ ವಿರುದ್ಧ ಪೂರ್ಣ ಪ್ರಾಬಲ್ಯ ಸಾಧಿಸಿತು. ವಿರಾಮಕ್ಕೆ ಮೊದಲೇ ಐದು ಗೋಲುಗಳನ್ನು ಗಳಿಸಿತು.

ಶುಕ್ರವಾರ ನಡೆದ ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ 1–4 ರಿಂದ ಮಲೇಷ್ಯಾಕ್ಕೆ ಮಣಿದಿತ್ತು. ಕೊರಿಯಾ 7–0 ಯಿಂದ ಚೀನಾ ತೈಪಿ ವಿರುದ್ಧ ನಿರಾಯಾಸ ಗೆಲುವು ಪಡೆದಿತ್ತು.

ಬಾಂಗ್ಲಾದೇಶ ತನ್ನ ಮುಂದಿನ ಪಂದ್ಯವನ್ನು ಸೆ. 1ರಂದು ಕೊರಿಯಾ ವಿರುದ್ಧ ಆಡಲಿದೆ. ಮಲೇಷ್ಯಾ ತಂಡ ಅದೇ ದಿನ ಮತ್ತೊಂದು ಪಂದ್ಯದಲ್ಲಿ ಚೀನಾ ತೈಪಿ ತಂಡವನ್ನು ಎದುರಿಸಲಿದೆ.

ಚಿಟಿಕೆ ಸುದ್ದಿ

ರಾಜಸ್ಥಾನ ರಾಯಲ್ಸ್ ಮುಖ್ಯ ಕೋಚ್ ಸ್ಥಾನ ತೊರೆದ ದ್ರಾವಿಡ್

ನವದೆಹಲಿ (ಪಿಟಿಐ): ರಾಹುಲ್ ದ್ರಾವಿಡ್ ಅವರು 2026ನೇ ಸಾಲಿನ ಐಪಿಎಲ್ ಋತುವಿಗಿಂತ ಮುನ್ನವೇ ರಾಜಸ್ಥಾನ ರಾಯಲ್ಸ್ ತಂಡದ ಹೆಡ್ ಕೋಚ್ ಸ್ಥಾನ ತೊರೆಯಲಿದ್ದಾರೆ ಎಂದು ಫ್ರಾಂಚೈಸಿಯು ಶನಿವಾರ ಪ್ರಕಟಿಸಿದೆ.

ದ್ರಾವಿಡ್ ಅವರನ್ನು 2024ರಲ್ಲಿ ಮುಖ್ಯ ತರಬೇತುದಾರರಾಗಿ ನೇಮಕ ಮಾಡಲಾಗಿತ್ತು.

ನಾಯಕ ಸಂಜು ಸ್ಯಾಮ್ಸನ್ ಅವರೂ ರಾಯಲ್ಸ್ ತಂಡದಿಂದ ಹೊರನಡೆಯಲಿದ್ದಾರೆ ಎಂಬ ಮಾತುಗಳ ನಡುವೆಯೇ ಫ್ರಾಂಚೈಸಿಯು ಈ ಪ್ರಕಟಣೆ ನೀಡಿದೆ.

‘ರಾಹುಲ್ ಹಲವು ವರ್ಷ ರಾಯಲ್ಸ್ ಪಯಣದ ಕೇಂದ್ರವಾಗಿದ್ದರು. ಅವರ ನೇತೃತ್ವವು ತಲೆಮಾರುಗಳ ಆಟಗಾರರನ್ನು ಪ್ರಭಾವಿಸಿದೆ. ತಂಡದೊಳಗೆ ಮೌಲ್ಯವನ್ನು ಬಿತ್ತಿದೆ’ ಎಂದು ರಾಯಲ್ಸ್ ‘ಎಕ್ಸ್’ನಲ್ಲಿ ಹಾಕಿದ ಪೋಸ್ಟ್‌ನಲ್ಲಿ ತಿಳಿಸಿದೆ.

ಶಾರ್ವಿಲ್, ಸಾಕ್ಷ್ಯಾ ಚಾಂಪಿಯನ್

ಸಾಕ್ಷ್ಯಾ ಸಂತೋಷ್ ಮತ್ತು ಶಾರ್ವಿಲ್

ಬೆಳಗಾವಿ: ಶಾರ್ವಿಲ್ ಕರಂಬೆಳಕರ್ ಮತ್ತು ಸಾಕ್ಷ್ಯಾ ಸಂತೋಷ್ ಅವರು ವಿನಯಾ ಕೋಟ್ಯಾನ್ ಸ್ಮರಣಾರ್ಥ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಹೋಪ್ಸ್ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಬೆಳಗಾವಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಟಿಳಕವಾಡಿ ಕ್ಲಬ್‌ನಲ್ಲಿ ಶನಿವಾರ ಆರಂಭವಾದ ನಾಲ್ಕು ದಿನಗಳ ಈ ಟೂರ್ನಿಯ ಹೋಪ್ಸ್ ಬಾಲಕರ ಫೈನಲ್‌ನಲ್ಲಿ ಶಾರ್ವಿಲ್ 9–11, 11–3, 12–10, 9–11, 11–4 ರಿಂದ ಆರ್ಯನ್ ಮೆನನ್ ಅವರನ್ನು ಸೋಲಿಸಿದನು.

ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯಾ 11–9, 11–9, 11–8ರಲ್ಲಿ ನೇರ ಸೆಟ್‌ಗಳಿಂದ ನಂದನಾ ಬಂಡಿ ವಿರುದ್ಧ ಜಯಗಳಿಸಿದಳು.

ಪಂದ್ಯಗಳು ಅರ್ಧಗಂಟೆ ತಡವಾಗಿ ಆರಂಭ

ದುಬೈ (ಪಿಟಿಐ): ಯುಎಇಯಲ್ಲಿ ವಿಪರೀತ ಉಷ್ಣಾಂಶದ ಕಾರಣ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ 19 ಪಂದ್ಯಗಳಲ್ಲಿ 18 ಪಂದ್ಯಗಳು ನಿಗದಿಗಿಂತ ಅರ್ಧ ಗಂಟೆ ತಡವಾಗಿ ಆರಂಭವಾಗಲಿವೆ ಎಂದು ಎಮಿರೇಟ್ಸ್ ಕ್ರಿಕೆಟ್ ಮಂಡಳಿ ಶನಿವಾರ ತಿಳಿಸಿದೆ.

ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಪಂದ್ಯಗಳು ಸ್ಥಳೀಯ ಕಾಲಮಾನ 6.30ಕ್ಕೆ (ಭಾರತೀಯ ಕಾಲಮಾನ ರಾತ್ರಿ 8.00) ಆರಂಭವಾಗಲಿವೆ. ಟೂರ್ನಿಯು ಸೆ. 9 ರಿಂದ 28ವರೆಗೆ ದುಬೈ ಮತ್ತು ಅಬುಧಾಬಿಯಲ್ಲಿ ನಡೆಯಲಿದೆ. ಈ ಬಾರಿ ಟಿ20 ಮಾದರಿಯಲ್ಲಿ ಏಷ್ಯಾ ಕಪ್ ನಡೆಯಲಿದೆ.

ಅಮೆರಿಕ ಓಪನ್: ಟೇಲರ್ ಫ್ರಿಟ್ಜ್, ಸಬಲೆಂಕಾ ಮುನ್ನಡೆ

ನಾಲ್ಕನೇ ಸುತ್ತಿಗೆ ಜೊಕೊವಿಚ್

ನೊವಾಕ್ ಜೊಕೊವಿಚ್, ಮೂರನೇ ಸುತ್ತಿನ ಪಂದ್ಯದಲ್ಲಿ ಚೆಂಡನ್ನು ಮರಳಿ ಎದುರಾಳಿ ಕ್ಯಾಮೆರಾನ್ ನೋರಿ ಅವರ ಅಂಕಣದತ್ತ ಹಿಂತಿರುಗಿಸಿದರು ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಎಫ್‌ಪಿ): ಬೆನ್ನು ನೋವನ್ನು ಮೀರಿನಿಂತ ಅನುಭವಿ ನೊವಾಕ್ ಜೊಕೊವಿಚ್ ಅವರು ನಾಲ್ಕು ಸೆಟ್‌ಗಳ ಸೆಣಸಾಟದಲ್ಲಿ ಬ್ರಿಟನ್‌ನ ಕ್ಯಾಮ್ ನೋರಿ ಅವರನ್ನು ಮಣಿಸಿ 1991ರ ನಂತರ ಅಮೆರಿಕ ಓಪನ್ 16ರ ಸುತ್ತನ್ನು ತಲುಪಿದ ಅತಿ ಹಿರಿಯ ಆಟಗಾರ ಎನಿಸಿದರು.

ಆ ವರ್ಷ ಅಮೆರಿಕದ ಜಿಮ್ಮಿ ಕಾನರ್ಸ್ ಅವರೂ 38ನೇ ವಯಸ್ಸಿನಲ್ಲಿ ಪುರುಷರ ಸಿಂಗಲ್ಸ್ ನಾಲ್ಕನೇ ಸುತ್ತಿಗೆ ತಲುಪಿದ್ದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಸರ್ಬಿಯಾದ ಆಟಗಾರ ಶುಕ್ರವಾರ 6–4, 6–7 (4–7), 6–2, 6–3 ರಿಂದ ನೋರಿ ಅವರನ್ನು ಹಿಮ್ಮೆಟ್ಟಿಸಿದರು.

ಆದರೆ ಎರಡು ವಾರಗಳ ಗ್ರ್ಯಾನ್ ಸ್ಲಾಮ್ ಟೂರ್ನಿಯ ತೀವ್ರ ಒತ್ತಡವನ್ನು ದೇಹ ತಾಳಿಕೊಳ್ಳುತ್ತದೆಯೇ ಎಂಬುದು ತಮ್ಮ ನಿಯಂತ್ರಣದಲ್ಲಿಲ್ಲ ಎಂದು ಸರ್ಬಿಯಾದ ಆಟಗಾರ ಹೇಳಿದರು.

ಜೊಕೊವಿಚ್ ಅವರು 16ನೇ ಬಾರಿ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಸುತ್ತನ್ನು ದಾಟಿದ್ದಾರೆ. ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಈ ಹಂತ ತಲುಪಿರುವುದು 69ನೇ ಸಲ! ಅವರು ಈ ವಿಷಯದಲ್ಲಿ ರೋಜರ್ ಫೆಡರರ್ ದಾಖಲೆ ಸರಿಗಟ್ಟಿದರು.

ಜರ್ಮನಿಯ ಸ್ಟ್ರುಫ್ ಮೂರನೇ ಸುತ್ತಿನಲ್ಲಿ 17ನೇ ಶ್ರೇಯಾಂಕದ ಫ್ರಾನ್ಸಿಸ್ ಟಿಯಾಫೊ ಅವರನ್ನು 6–4, 6–3, 7–6 (9–7) ರಿಂದ ಸೋಲಿಸಿದ್ದರು.

ಆರನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರೂ ಹೊರಬಿದ್ದರು. ಫ್ರಾನ್ಸ್‌ನ 37 ವರ್ಷ ವಯಸ್ಸಿನ ಆಟಗಾರ ಅಡ್ರಿಯಾನ್ ಮನ್ನಾರಿನೊ 3–6, 6–3, 4–6, 6–4 ರಿಂದ ಮುಂದಿದ್ದಾಗ ಶೆಲ್ಟನ್ ಅವರು ಭುಜದ ನೋವಿನಿಂದಾಗಿ ಪಂದ್ಯ ಬಿಟ್ಟುಕೊಟ್ಟರು.

ವಿಶ್ವ ಕ್ರಮಾಂಕದಲ್ಲಿ 82ನೇ ಸ್ಥಾನದಲ್ಲಿರುವ ಆರ್ಥರ್ ರಿಂಡರ್‌ನೆಕ್ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ನಾಲ್ಕನೇ ಸುತ್ತನ್ನು ತಲುಪಿದರು. ಫ್ರಾನ್ಸ್‌ನ ಆಟಗಾರ 4–6, 6–3, 6–3, 6–2 ರಿಂದ ಸ್ವದೇಶದ ಬೆಂಜಮಿನ್ ಬೊಂಜಿ ಅವರನ್ನು ಮಣಿಸಿದರು.

ನಾಲ್ಕನೇ ಶ್ರೇಯಾಂಕದ ಅಮೆರಿಕದ ಆಟಗಾರ ಟೇಲರ್ ಫ್ರಿಟ್ಜ್ ಕೂಡ ನಾಲ್ಕನೇ ಸುತ್ತಿಗೆ ಮುನ್ನಡೆದರು.

ಮೆಡ್ವೆಡೇವ್‌ಗೆ ಭಾರಿ ದಂಡ: ಮೊದಲ ಸುತ್ತಿನಲ್ಲಿ ಬೊಂಜಿ, 2021ರ ಚಾಂಪಿಯನ್, ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಐದು ಸೆಟ್‌ಗಳ ಪಂದ್ಯದಲ್ಲಿ ಸೋಲಿಸಿದ್ದರು. ಆ ಪಂದ್ಯದಲ್ಲಿ ಚೇರ್ ಅಂಪೈರ್ ವಿರುದ್ಧ ರೇಗಾಡಿ ಅನುಚಿತವಾಗಿ ವರ್ತಿಸಿದ ಮತ್ತು ರ‍್ಯಾಕೆಟನ್ನು ಕುರ್ಚಿಗೆ ಬಡಿದು ಮುರಿದು ಅಶಿಸ್ತು ತೋರಿದ್ದಕ್ಕೆ ಮೆಡ್ವೆಡೇವ್ ಅವರಿಗೆ ಆಯೋಜಕರು ₹37.42 ಲಕ್ಷ ($42500) ದಂಡ ವಿಧಿಸಿದರು. ಆ ಪಂದ್ಯದ ವೇಳೆ ಛಾಯಾಗ್ರಾಹಕರೊಬ್ಬರು ಅಂಕಣದೊಳಕ್ಕೆ ಬಂದಿದ್ದರು. ಅವರನ್ನು ಹೊರಕಳಿಸಿದ ಮೇಲೆ ಬೊಂಜಿ ಅವರಿಗೆ ಎರಡನೇ ಸರ್ವ್‌ಗೆ ಅವಕಾಶ ಕೊಟ್ಟಿದ್ದು ರಷ್ಯಾ ಆಟಗಾರನಿಗೆ ಹಿಡಿಸಲಿಲ್ಲ. ಮೆಡ್ವೆಡೇವ್ ಅನುಚಿತ ವರ್ತನೆಯಿಂದ ಪಂದ್ಯ ಕೆಲನಿಮಿಷ ಸ್ಥಗಿತಗೊಂಡಿತ್ತು.

ಸಬಲೆಂಕಾ ಮುನ್ನಡೆ: ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ 6–3, 7–6 (7–2) ರಿಂದ ಕೆನಡಾದ ಲೇಲಾ ಫೆರ್ನಾಂಡಿಸ್ ಅವರನ್ನು ಹಿಮ್ಮೆಟ್ಟಿಸಿದರು.

ಚಂದ್ರಶೇಖರ್–ಪ್ರಶಾಂತ್ ಮುನ್ನಡೆ

ನ್ಯೂಯಾರ್ಕ್ (ಪಿಟಿಐ): ಭಾರತದ ಡಬಲ್ಸ್ ಆಟಗಾರರಾದ ಅನಿರುದ್ಧ ಚಂದ್ರಶೇಖರ್– ವಿಜಯ್ ಪ್ರಶಾಂತ್ ಅವರು ಸ್ಥಳೀಯ ಫೇವರಿಟ್ ಹಾಗೂ ಎಂಟನೇ ಶ್ರೇಯಾಂಕದ ಕ್ರಿಸ್ಟಿಯನ್ ಹ್ಯಾರಿಸನ್– ಇವಾನ್ ಕಿಂಗ್ ಜೋಡಿಯನ್ನು ಸೋಲಿಸಿ ಎರಡನೇ ಸುತ್ತಿಗೆ ತಲುಪಿದರು.

ಭಾರತದ ಆಟಗಾರರು ಮೊದಲ ಸುತ್ತಿನ ಪಂದ್ಯವನ್ನು 3–6, 6–4, 6–4 ರಲ್ಲಿ ಗೆದ್ದುಕೊಂಡರು. ಭಾರತದ ಇನ್ನೊಂದು ಜೋಡಿಯಾದ ರಿತ್ವಿಕ್ ಬೊಲ್ಲಿಪಳ್ಳಿ– ಎನ್.ಬಾಲಾಜಿ ಅವರ ಸವಾಲು ಮೊದಲ ಸುತ್ತಿನಲ್ಲೇ ಅಂತ್ಯಗೊಂಡಿತು.

ಬೆಂಗಳೂರಿನಲ್ಲಿ ಶುಭ್‌ಮನ್ ಗಿಲ್‌ಗೆ ಫಿಟ್‌ನೆಸ್ ಟೆಸ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಶುಭಮನ್ ಗಿಲ್

ಬೆಂಗಳೂರು: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರು ಫಿಟ್‌ನೆಸ್ ಪರೀಕ್ಷೆ ನೀಡಲು ಇಲ್ಲಿಯ ಬಿಸಿಸಿಐ ಶ್ರೇಷ್ಠತಾ ಕೇಂದ್ರ (ಸಿಒಇ)ಕ್ಕೆ ಆಗಮಿಸಿದ್ದಾರೆ. ಮುಂಬರುವ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಅವರು ಭಾರತ ತಂಡದ ಉಪನಾಯಕರಾಗಿದ್ದಾರೆ.

ಭಾರತ ತಂಡದ ಎಲ್ಲ ಆಟಗಾರರೂ ಸೆಪ್ಟೆಂಬರ್ 4ರಂದು ದುಬೈನಲ್ಲಿ ಸೇರಲಿದ್ದಾರೆ. ಸೆ. 9ರಿಂದ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಆಡಲಿದೆ. ಯುಎಇಯನ್ನು ಎದುರಿಸಲಿದೆ.

ಫ್ಲೂ ಆಗಿದ್ದರಿಂದ ಗಿಲ್ ಅವರು ದುಲೀಪ್ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಆಡಲಿಲ್ಲ. ಅವರು ಈಸ್ಟ್ ಜೋನ್ ಎದುರಿನ ಪಂದ್ಯದಲ್ಲಿ ನಾರ್ತ್ ಜೋನ್ ತಂಡದ ನಾಯಕತ್ವ ವಹಿಸಬೇಕಿತ್ತು. ಗಿಲ್ ಅವರು ಇನ್ನೂ ತಮ್ಮ ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಚಂಡೀಗಡದ ತಮ್ಮ ಮನೆಯಲ್ಲಿಯೇ ಅವರು ವಿಶ್ರಾಂತಿ ಪಡೆದಿದ್ದರು. ಇದೀಗ ಬೆಂಗಳೂರಿಗೆ ಆಗಮಿಸಿದ್ದು, ಇಲ್ಲಿಂದಲೇ ಅವರು ದುಬೈಗೆ ತೆರಳುವರು ಎಂದೂ ಹೇಳಲಾಗಿದೆ.

ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಕೂಡ ಸಿಒಇಗೆ ಬಂದಿದ್ದಾರೆ. ವೇಗಿ ಜಸ್‌ಪ್ರೀತ್ ಬೂಮ್ರಾ, ವಾಷಿಂಗ್ಟನ್ ಸುಂದರ್, ಯಶಸ್ವಿ ಜೈಸ್ವಾಲ್, ಮೊಹಮ್ಮದ್ ಸಿರಾಜ್ ಮತ್ತು ಶಾರ್ದೂಲ್ ಠಾಕೂರ್ ಅವರೂ ಇಲ್ಲಿ ಫಿಟ್‌ನೆಸ್ ಪರೀಕ್ಷೆ ನೀಡಲಿದ್ದಾರೆ.

ಉತ್ತರ, ಕೇಂದ್ರ ವಲಯ ತಂಡಗಳಿಗೆ ಬೃಹತ್ ಮುನ್ನಡೆ

ದುಲೀಪ್ ಟ್ರೋಫಿ: ಅಂಕಿತ್, ಯಶ್ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಶನಿವಾರ ಶತಕ ಗಳಿಸಿದ ಉತ್ತರ ವಲಯ ತಂಡದ ಅಂಕಿತ್ ಕುಮಾರ್ ಮತ್ತು ಯಶ್ ಧುಳ್ ಪಿಟಿಐ ಚಿತ್ರ

ಬೆಂಗಳೂರು: ಅಂಕಿತ್ ಕುಮಾರ್ ಮತ್ತು ಯಶ್ ಧುಳ್ ಅವರ ಶತಕಗಳ ಬಲದಿಂದ ಉತ್ತರ ವಲಯ ತಂಡವು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮುನ್ನಡೆ ಸಾಧಿಸಿದೆ.

ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರ (ಸಿಒಇ) ದಲ್ಲಿರುವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಶನಿವಾರದ ಮುಕ್ತಾಯಕ್ಕೆ ಉತ್ತರ ವಲಯವು 563 ರನ್‌ಗಳ ಮುನ್ನಡೆ ಸಾಧಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಉತ್ತರ ವಲಯ ತಂಡವು 405 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಪೂರ್ವ ವಲಯವು 56.1 ಓವರ್‌ಗಳಲ್ಲಿ 230 ರನ್ ಮಾತ್ರ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಎರಡನೇ ಇನಿಂಗ್ಸ್‌ನಲ್ಲಿ ಅಂಕಿತ್ ಕುಮಾರ್ (ಬ್ಯಾಟಿಂಗ್ 168, 264ಎ, 4X16, 6X1) ಮತ್ತು ಯಶ್ (133; 157ಎ, 4X14, 6X3) ಶತಕದ ಬಲದಿಂದ ಉತ್ತರ ವಲಯವು 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 388 ರನ್ ಗಳಿಸಿತು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಕೇಂದ್ರ ವಲಯ ತಂಡವು ಈಶಾನ್ಯ ವಲಯದ ವಿರುದ್ಧ 678 ರನ್‌ಗಳ ಬೃಹತ್ ಮುನ್ನಡೆ ಗಳಿಸಿತು. ಕೇಂದ್ರ ವಲಯವು ಮೂರನೇ ದಿನದಾಟದ ಮುಕ್ತಾಯಕ್ಕೆ 80.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 331 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಶುಭಂ ಶರ್ಮಾ ಶತಕ (122; 215ಎ, 4X17) ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 93.2 ಓವರ್‌ಗಳಲ್ಲಿ 405. ಪೂರ್ವ ವಲಯ: 56.1 ಓವರ್‌ಗಳಲ್ಲಿ 230. ಎರಡನೇ ಇನಿಂಗ್ಸ್: ಉತ್ತರ ವಲಯ: 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 388 (ಶುಭಂ ಖಜುರಿಯಾ 21, ಅಂಕಿತ್ ಕುಮಾರ್ ಬ್ಯಾಟಿಂಗ್ 168, ಯಶ್ ಧುಳ್ 133, ಆಯುಷ್ ಬಡೋನಿ ಬ್ಯಾಟಿಂಗ್ 56, ಸೂರಜ್ ಸಿಂಧು ಜೈಸ್ವಾಲ್ 37ಕ್ಕೆ1, ರಿಯಾನ್ ಪರಾಗ್ 63ಕ್ಕೆ1)

ಮೊದಲ ಇನಿಂಗ್ಸ್: ಕೇಂದ್ರ ವಲಯ: 102 ಓವರ್‌ಗಳಲ್ಲಿ 4ಕ್ಕೆ532 ಡಿಕ್ಲೇರ್ಡ್. ಈಶಾನ್ಯ ವಲಯ: 69.3 ಓವರ್‌ಗಳಲ್ಲಿ 185. ಎರಡನೇ ಇನಿಂಗ್ಸ್: ಕೇಂದ್ರ ವಲಯ: 80.3 ಓವರ್‌ಗಳಲ್ಲಿ 7ಕ್ಕೆ331 ಡಿಕ್ಲೇರ್ಡ್ (ಶುಭಂ ಶರ್ಮಾ 122, ರಜತ್ ಪಾಟೀದಾರ್ 66, ಯಶ್ ರಾಥೋಡ್ 78, ದೀಪಕ್ ಚಾಹರ್ ಬ್ಯಾಟಿಂಗ್ 21, ಆಕಾಶ್ ಚೌಧರಿ 44ಕ್ಕೆ2, ಬಿಶ್ವೋಜೀತ್ ಕೊಂಥಾವುಜಮ್ 67ಕ್ಕೆ2)

ಶೂಟಿಂಗ್: ಭಾರತಕ್ಕೆ 103 ಪದಕ

ಶಿಮ್ಕೆಂಟ್ (ಕಜಕಸ್ತಾನ) (ಪಿಟಿಐ): ಭಾರತದ ರಾಜಕನ್ವರ್ ಸಿಂಗ್ ಸಂಧು 25 ಮೀ. ಸೆಂಟರ್ ಫೈರ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರೆ, ಮಾಜಿ ವಿಶ್ವ ಚಾಂಪಿಯನ್ ಅಂಕುರ್ ಮಿತ್ತಲ್ ಡಬಲ್ ಟ್ರ್ಯಾಪ್‌ನಲ್ಲಿ ಸ್ವರ್ಣ ವಿಜೇತರಾದರು. ಇದರೊಂದಿಗೆ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಒಲಿಂಪಿಕ್‌ಯೇತರ ಸ್ಪರ್ಧೆಗಳಲ್ಲೂ ಭಾರತ ಪ್ರಾಬಲ್ಯ ಮೆರೆಯಿತು.

ಭಾರತ ಶನಿವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟಾರೆ 52 ಚಿನ್ನ, 26 ಬೆಳ್ಳಿ, 25 ಕಂಚು ಸೇರಿದಂತೆ 103 ಪದಕಗಳನ್ನು ಗೆದ್ದುಕೊಂಡಿತು.

ಕ್ರಿಕೆಟ್ ಅಂಪೈರಿಂಗ್‌ನಲ್ಲಿ ಕರ್ನಾಟಕ ಮಾದರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ‘ಅಂಪೈರ್ ನಿರ್ಣಯವೇ ಅಂತಿಮ’ ಎಂಬ ಕಾಲಘಟ್ಟದಿಂದ ‘ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ’ಗೆ ಕ್ರಿಕೆಟ್ ಕ್ಷೇತ್ರ ಈಗ ತಲುಪಿದೆ.

ಈ ದೀರ್ಘ ಪಯಣದಲ್ಲಿ ಆಗಿರುವ ಹಲವಾರು ಬದಲಾವಣೆಗಳಿಗೆ ತೆರೆದುಕೊಳ್ಳುತ್ತ ಕಾಲಕ್ಕೆ ತಕ್ಕಂತೆ ಅಂಪೈರ್‌ಗಳನ್ನು ಸಜ್ಜುಗೊಳಿಸುವ ಕಾರ್ಯದಲ್ಲಿ ನಿರತವಾಗಿರುವ ಕರ್ನಾಟಕ ಅಂಪೈರ್ಸ್ ಕ್ರಿಕೆಟ್ ಸಂಸ್ಥೆ (ಎಸಿಯುಕೆ) ಭಾನುವಾರ ಸುವರ್ಣ ಸಂಭ್ರಮ ಆಚರಿಸುತ್ತಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಭಾರತದ ಕ್ರಿಕೆಟ್ ಕ್ಷೇತ್ರಕ್ಕೆ ದಿಗ್ಗಜ ಆಟಗಾರರು ಮತ್ತು ಆಡಳಿತಗಾರರನ್ನು ನೀಡಿರುವ ಕರ್ನಾಟಕವು ಅಂಪೈರಿಂಗ್ ಕ್ಷೇತ್ರಕ್ಕೂ ಮಹನೀಯರನ್ನು ಕಾಣಿಕೆ ನೀಡಿದೆ.

ಎಸಿಯುಕೆಗೆ ಸುವರ್ಣ ಸಂಭ್ರಮ

ಕರ್ನಾಟಕ ಕ್ರಿಕೆಟ್ ಅಂಪೈರ್‌ಗಳ ಸಂಸ್ಥೆ (ಎಸಿಯುಕೆ)ಯ ಬೆಳ್ಳಿ ಮಹೋತ್ಸವ ಸಮಾರಂಭದ ಚಿತ್ರ (ಎಡದಿಂದ) ಆಗ ಜಂಟಿ ಕಾರ್ಯದರ್ಶಿಯಾಗಿದ್ದ ವಿ.ಎನ್. ಕುಲಕರ್ಣಿ, ಬಿಸಿಸಿಐ ಕಾರ್ಯದರ್ಶಿ ಜೆ.ವೈ. ಲೆಲೆ, ಅಧ್ಯಕ್ಷ ಎ.ಎಲ್. ನರಸಿಂಹನ್, ಕೆಎಸ್‌ಸಿಎ ಕಾರ್ಯದರ್ಶಿ ಬ್ರಿಜೇಶ್ ಪಟೇಲ್ ಇದ್ದಾರೆ

1974ರಲ್ಲಿ ಕರ್ನಾಟಕ ತಂಡವು ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿದ್ದು ಐತಿಹಾಸಿಕ ಸಾಧನೆ. ಆ ವಿಜಯವು ರಾಜ್ಯದ ಕ್ರಿಕೆಟ್ ಮಗ್ಗುಲು ಬದಲಿಸಿತು. ಹಲವಾರು ಮಹತ್ವದ ಬದಲಾವಣೆಗಳಿಗೆ, ಕ್ರಿಕೆಟ್ ಜನಪ್ರಿಯತೆಯ ಹೆಚ್ಚಳಕ್ಕೆ ಕಾರಣವಾಯಿತು. ದೇಶಿ ಕ್ರಿಕೆಟ್‌ನಲ್ಲಿ ‘ಅನಭಿಷಿಕ್ತ ದೊರೆ’ಯಂತೆ ಇದ್ದ ಮುಂಬೈ ತಂಡದ ಮೆರೆದಾಟಕ್ಕೆ ಕಡಿವಾಣ ಹಾಕಿದ ಕೀರ್ತಿ ಕರ್ನಾಟಕದ್ದಾಯಿತು. ಈ ವಿಜಯವು ಎಸಿಯುಕೆ ಉದಯಕ್ಕೂ ಕಾರಣವಾಯಿತು.

‘ಕರ್ನಾಟಕ ತಂಡವು ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತ್ತು. ಯರಪಳ್ಳಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ಬ್ರಿಜೇಶ್ ಪಟೇಲ್, ಸುಧಾಕರ್ ರಾವ್, ಬಿ. ರಘುನಾಥ್, ಬಿ.ಎಸ್. ಚಂದ್ರಶೇಖರ್ ಅವರಿದ್ದ ತಂಡ ಅದು. ತಂಡವನ್ನು ಗೌರವಿಸಬೇಕು ಎಂದು ಆಗ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಕೆಲವರು ನಿರ್ಧರಿಸಿದರು. ಒಂದು ಚಹಾಕೂಟ ಏರ್ಪಡಿಸಿ ಆಟಗಾರರನ್ನು ಗೌರವಿಸಿದರು. ಈ ಸಂದರ್ಭದಲ್ಲಿಯೇ ಅಂಪೈರ್ ಸಂಘಟನೆಯನ್ನು ಏಕೆ ಆರಂಭಿಸಬಾರದು ಎಂಬ ಚರ್ಚೆ ನಡೆಯಿತು. ವಿಕ್ರಂ ರಾಜು, ಸತ್ಯಾಜಿರಾವ್, ಎ.ಎಲ್. ನರಸಿಂಹಯ್ಯ, ಎಚ್.ಆರ್. ಗೋಪಾಲಕೃಷ್ಣ, ಎ.ಆರ್. ಪ್ರಹ್ಲಾದ್ ರಾವ್, ಹನುಮಂತ ರಾವ್ ಮತ್ತು ರಘುನಾಥ್ ರಾವ್ ಅವರ ಆಸಕ್ತಿಯಿಂದ ಸಂಘಟನೆ ಆರಂಭವಾಯಿತು. ಅವರು ಹಾಕಿದ ಅಡಿಪಾಯದ ಮೇಲೆ ಇವತ್ತು ಸಂಸ್ಥೆಯು ಬೆಳೆದುನಿಂತಿದೆ. ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಅಂಪೈರ್‌ಗಳನ್ನು ಸಿದ್ಧಗೊಳಿಸಿದ ಕೀರ್ತಿ ಈ ಸಂಸ್ಥೆಯದ್ದು. ಇದೀಗ ಸುವರ್ಣ ಸಂಭ್ರಮ ಆಚರಿಸುತ್ತಿದ್ದೇವೆ’ ಎಂದು ಎಸಿಯುಕೆ ಅಧ್ಯಕ್ಷ ಆರ್. ವಿ. ಪ್ರಧಾನಕುಮಾರ್ ಅರಸ್ ಹೆಮ್ಮೆ ವ್ಯಕ್ತಪಡಿಸುತ್ತಾರೆ.

ಅಂಪೈರಿಂಗ್ ದಿಗ್ಗಜರು: ಕರ್ನಾಟಕದ ಹಲವು ಅಂಪೈರ್‌ಗಳು ಕ್ರಿಕೆಟ್‌ನ ಕೆಲವು ಪ್ರಮುಖ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟೈ ಟೆಸ್ಟ್‌ನಲ್ಲಿ ಕಾರ್ಯನಿರ್ವಹಿಸಿದ್ದ ವಿಕ್ರಂರಾಜು, 1999ರಲ್ಲಿ ದೆಹಲಿಯ ಫಿರೋಜ್ ಶಾ ಕೋಟ್ಲಾ ಅಂಗಳದಲ್ಲಿ ಪಾಕಿಸ್ತಾನ ಎದುರಿನ ಟೆಸ್ಟ್ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಅನಿಲ್ ಕುಂಬ್ಳೆ ಎಲ್ಲ 10 ವಿಕೆಟ್ ಗಳಿಸಿದ ದಾಖಲೆ ಮಾಡಿದ್ದ ಸಂದರ್ಭದಲ್ಲಿ ಅಂಪೈರ್ ಆಗಿದ್ದವರು ಕರ್ನಾಟಕದ ಎ.ವಿ. ಜಯಪ್ರಕಾಶ್. 2010ರಲ್ಲಿ ಗ್ವಾಲಿಯರ್‌ನಲ್ಲಿ ಸಚಿನ್ ತೆಂಡೂಲ್ಕರ್ ಏಕದಿನ ಕ್ರಿಕೆಟ್‌ನ ಮೊಟ್ಟಮೊದಲ ದ್ವಿಶತಕ ಹೊಡೆದು ವಿಶ್ವದಾಖಲೆ ಬರೆದರು. ಆ ಐತಿಹಾಸಿಕ ಪಂದ್ಯದಲ್ಲಿ ಶಾವೀರ್ ತಾರಾಪುರ್ ಅವರು ಕಾರ್ಯನಿರ್ವಹಿಸಿದ್ದರು. ಕ್ರಿಕೆಟ್ ಕಸ್ಟೋಡಿಯನ್ ಎಂದೇ ಕರೆಯಲಾಗುವ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ನಿಯಮಾವಳಿಗಳನ್ನು ಕನ್ನಡದಲ್ಲಿ ಬರೆದವರು ವಿನಾಯಕ ಕುಲಕರ್ಣಿ.

> 1991ರಲ್ಲಿ ಶಿವಮೊಗ್ಗ, 2006ರಲ್ಲಿ ಮೈಸೂರು ಮತ್ತು 2011ರಲ್ಲಿ ಮಂಗಳೂರಿನಲ್ಲಿ ಎಸಿಯುಕೆ ಘಟಕಗಳನ್ನು ಆರಂಭಿಸಲಾಯಿತು. ಗ್ರಾಮಾಂತರ ಭಾಗದಲ್ಲಿ ಅಂಪೈರ್‌ಗಳ ತರಬೇತಿಗಾಗಿ ಈ ಘಟಕಗಳು ಕಾರ್ಯನಿರ್ವಹಿಸುತ್ತಿವೆ
> **ಆರ್. ವಿ. ಪ್ರಧಾನಕುಮಾರ್ ಅರಸ್**

ಇವು ಕೆಲವು ನಿದರ್ಶನಗಳಷ್ಟೇ. ಇತಿಹಾಸದ ಪುಟಗಳಲ್ಲಿ ಕರ್ನಾಟಕದ ಅಂಪೈರ್‌ಗಳ ಇಂತಹ ಹಲವು ಸಾಧನೆಗಳು ಅಚ್ಚಾಗಿವೆ. ಪ್ರಸ್ತುತ ಈ ಸಂಘದಲ್ಲಿ 550ಕ್ಕೂ ಹೆಚ್ಚು ಅಂಪೈರ್‌ಗಳಿದ್ದಾರೆ. ಕಳೆದ ಐವತ್ತು ವರ್ಷಗಳಲ್ಲಿ ಕ್ರಿಕೆಟ್‌ನಲ್ಲಿ ಅಗಾಧ ಬದಲಾವಣೆಗಳಾಗಿವೆ. ಹಳೆ ನಿಯಮಗಳೂ ಪರಿಷ್ಕೃತಗೊಂಡಿವೆ. ಹೊಸ ನಿಯಮಗಳು ಜಾರಿಯಾಗಿವೆ. ತಂತ್ರಜ್ಞಾನ ಬಳಕೆ ಹೆಚ್ಚುತ್ತಿದೆ. ಇವೆಲ್ಲದರ ಕುರಿತು ಶಿಕ್ಷಣ ನೀಡುವುದೇ ಈ ಸಂಘಟನೆ ಮಾಡುತ್ತಿರುವ ಪ್ರಮುಖ ಕಾರ್ಯ.

‘1988ರಲ್ಲಿ ನಾನು ಅಂಪೈರಿಂಗ್ ಆರಂಭಿಸಿದೆ. ಆಗ ಇದ್ದ ಅನುಭವಿಗಳು ನಮಗೆ ಶಿಸ್ತು, ಸಮಯಪಾಲನೆ ಮತ್ತು ಕ್ರಿಕೆಟ್ ನಿಯಮಗಳನ್ನು ಕೂಲಂಕಷವಾಗಿ ತಿಳಿದುಕೊಳ್ಳುವ ತರಬೇತಿ ನೀಡಿದರು. ಪಂದ್ಯಗಳಲ್ಲಿ ತಂತ್ರಜ್ಞಾನದ ಸಹಾಯವಿಲ್ಲದೇ ನಿಷ್ಪಕ್ಷಪಾತವಾಗಿ ತೀರ್ಪು ನೀಡುವುದು ಸುಲಭದ ಕೆಲಸವಾಗಿರಲಿಲ್ಲ. ಆದರೆ ಆ ಸವಾಲನ್ನು ಸ್ವೀಕರಿಸಿ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಿದ್ದೇವೆ. ಆಗಿನಿಂದ ಈವರೆಗೆ ಈ ಸಂಸ್ಥೆಯ ಸದಸ್ಯನಾಗಿರುವೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಈ ಸಂಘಟನೆಗೆ ಬಹಳ ಬೆಂಬಲ ನೀಡಿದೆ’ ಎಂದು ಅಂಪೈರ್ ಎಸ್. ಮುರಳೀಧರ್ ‘ಪ್ರಜಾವಾಣಿ’ಗೆ ವಿವರಿಸಿದರು.

ಪ್ರತಿವರ್ಷವೂ ವಿವಿಧ ವಯೋಮಿತಿ, ಶಾಲಾ ಟೂರ್ನಿಗಳು ಸೇರಿದಂತೆ ಸುಮಾರು ಎರಡು ಸಾವಿರ ಪಂದ್ಯಗಳು ರಾಜ್ಯದಲ್ಲಿ ನಡೆಯುತ್ತವೆ. ಅಂಪೈರ್‌ಗಳಿಗೆ ಕಾರ್ಯನಿರ್ವಹಿಸಲು ಈ ಪಂದ್ಯಗಳು ಅವಕಾಶ ನೀಡುತ್ತವೆ. ಈಗ ವಿಡಿಯೊ ರೆಕಾರ್ಡಿಂಗ್ ಸೌಲಭ್ಯ ಇರುವುದರಿಂದ ಪಂದ್ಯದ ನಂತರ ತಮ್ಮ ಕಾರ್ಯನಿರ್ವಹಣೆಯನ್ನು ಅವಲೋಕಿಸಲು ಮತ್ತು ಲೋಪಗಳನ್ನು ಸುಧಾರಿಸಿಕೊಳ್ಳಲು ಅಂಪೈರ್‌ಗಳಿಗೆ ಅವಕಾಶಗಳಿವೆ. ಆದರೂ ಅಂಪೈರಿಂಗ್ ಮಾಡುವವರಿಗೆ ಕ್ರಿಕೆಟ್ ಪ್ಲೇಯಿಂಗ್ ಕಂಡಿಷನ್ ಕುರಿತು ತರಗತಿಗಳು ಮತ್ತು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ತಂತ್ರಜ್ಞಾನ ಮೂಲಕವೂ ತರಬೇತಿ ನೀಡಿ ಸಿದ್ಧಗೊಳಿಸಲಾಗುತ್ತದೆ.

ಆದರೆ ಕ್ರಿಕೆಟ್ ಕೋಚಿಂಗ್, ವೀಕ್ಷಕ ವಿವರಣೆ, ನೆರವು ಸಿಬ್ಬಂದಿಗಳ ಕಾರ್ಯಗಳಿಗೆ ಮಾಜಿ ಆಟಗಾರರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಆದರೆ ಈ ಕೆಲಸಗಳಿಗೆ ಹೋಲಿಸಿದರೆ, ಅಂಪೈರಿಂಗ್‌ನಲ್ಲಿ ಹಣ ಮತ್ತು ಹೆಸರು ಅಷ್ಟು ಸುಲಭವಾಗಿ ಸಿಗುವುದಿಲ್ಲ. ಕಠಿಣ ಶ್ರಮ ಅಗತ್ಯ ಹಾಗೂ ಒತ್ತಡವೂ ಹೆಚ್ಚು. ಆದ್ದರಿಂದ ಅಂಪೈರಿಂಗ್‌ಗೆ ಬರುತ್ತಿರುವವರು ಕಡಿಮೆಯಾಗುತ್ತಿದ್ದಾರೆ. ಆದರೆ ‘ಆಸಕ್ತಿಯಿಂದ ಬಂದವರನ್ನು ಉತ್ತಮ ಅಂಪೈರ್‌ಗಳಾಗುವಂತೆ ಸಿದ್ಧಗೊಳಿಸುವುದೇ ತನ್ನ ಪರಮ ಗುರಿ’ ಎಂಬ ಉದ್ದೇಶದೊಂದಿಗೆ ಎಸಿಯುಕೆ ಭವಿಷ್ಯದತ್ತ ಚಿತ್ತ ನೆಟ್ಟಿದೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

MANAGER - CIRCULATION

Work Location : Across Karnataka
No. Of Position : 4
Experience : 4-12 years of experience in sales and possess excellent interpersonal skills.
Skills : Sales or Circulation of newspapers.
Qualification : Any Graduate
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in